# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಜನವರಿ, ಫೆಬ್ರವರಿ ಮತ್ತು ಮಾರ್ಚ್ –2025**

**ಸಂಪುಟ–VII ಸಂಖ್ಯೆ – 1**

**ಪ್ರಕಟಣೆ:**

**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**

**ಕರ್ನಾಟಕ ವಿಧಾನ ಸಭೆ ಸಚಿವಾಲಯ,**

**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**

**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ

**http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – VII ರ ಒಂದನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2025ನೇ ಸಾಲಿನ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ:13.10.2025

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀ ಬಿ.ಎ.ಸತೀಶ್ : ಸಹಾಯಕ ನಿರ್ದೇಶಕರು

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಕಾರ್ಯದರ್ಶಿ–2

# ಕರ್ನಾಟಕ ಶಾಸಕಾಂಗ ಪತ್ರಿಕೆ

## (ತ್ರೈಮಾಸಿಕ ಪತ್ರಿಕೆ)

**ಜನವರಿ, ಫೆಬ್ರವರಿ ಮತ್ತು ಮಾರ್ಚ್ – 2025**

**ಸಂಪುಟ–VII ಸಂಖ್ಯೆ– 1**

## ಪರಿವಿಡಿ

## ಭಾಗ–1

## ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು


| ಕ್ರ ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | **ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು** | 3–55 |
| 2 | ಪಂಚನಾಮೆ ಪ್ರಕ್ರಿಯೆ ಮೊದಲು ತಿಳಿಸಲಿ ಆ ಬಳಿಕ ಅನುಮತಿ ನಿರ್ಧಾರ: ಹೊರಟ್ಟಿ | 55–66 |
| 3 | 9ನೇ ಕ್ಲಾಸ್‌ವರೆಗೆ ಎಲ್ಲರನ್ನು ಪಾಸ್ ಮಾಡೋದು ದಡ್ಡತನ: ಹೊರಟ್ಟಿ | 56 |
| 4 | ತುಳುವಿಗೆ ರಾಜ್ಯಭಾಷೆ ಗೌರವ ಪರಿಗಣನೆ: ಸಿಎಂ | 56–57 |
| 5 | ದೇಶೀಯ ಸ್ಟಾರ್ಟ್‌ಅಪ್ ಪ್ರೋತ್ಸಾಹಿಸಿ: ಉಪರಾಷ್ಟ್ರಪತಿ | 57 |
| 6 | ಸಂಸ್ಕೃತಿ ಅರಿತಾಗ ಬಲಿಷ್ಠ ಭಾರತ: ಸ್ಪೀಕರ್ ಖಾದರ್ | 57 |
| 7 | ಪಟನಾದಲ್ಲಿ ಸ್ಪೀಕರ್‌ಗಳ ಸಮ್ಮೇಳನ: ಖಾದರ್ ಭಾಗಿ | 58 |
| 8 | ಕುಂಭಮೇಳದಲ್ಲಿ ಸ್ಪೀಕರ್ ಖಾದರ್ | 58 |
| 9 | ಪೊಲೀಸರಿಗೆ ರಜೆ; ಯು.ಟಿ.ಖಾದರ್ ಪತ್ರ | 58 |
| 10 | ಅಪದ್ಧ ಪದ ಬಳಕೆ ಪ್ರಕರಣ, ವರದಿ ಪರಿಗಣಿಸಿ ಕ್ರಮ: ಸಭಾಪತಿ ಹೊರಟ್ಟಿ | 59 |
| 11 | ಸಂಸ್ಕೃತಿ ವಿನಿಮಯ ಆಗಲಿ: ಖಾದರ್ | 59 |
| 12 | ಗಂಗಾಸ್ನಾನದ ವಿಶೇಷ ಅನುಭವ | 59 |
| 13 | ವಿಧಾನಸೌಧದ ಆವರಣದಲ್ಲೇ 54 ಬೀದಿನಾಯಿಗಳಿಗೆ ಶೆಲ್ಟರ್ | 60 |
| 14 | ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೆ ಸ್ಪೀಕರ್ ಶ್ಲಾಘನೆ | 60 |
| 15 | 4 ಜಿಪಂ, 8ತಾಪಂ, 31 ಗ್ರಾಪಂಗೆ 'ನರೇಗಾ ಪುರಸ್ಕಾರ' ಪ್ರದಾನ | 61 |
| 16 | ಕಮ್ಮಿ ಅಂಕ ಬಂದ್ರೆ ಶಿಕ್ಷಕರನ್ನೇ ಹೊಣೆ ಮಾಡವ ಕಾಯ್ದೆ ತನ್ನಿ– ಹೊರಟ್ಟಿ | 61–62 |
| 17 | ನೆಲದ ಕಲಾವಿದರ ಗುರುತಿಸಿ ಬೆಳೆಸಬೇಕು | 62 |
| 18 | ಭೋಜನ ಬಳಿಕ ಶಾಸಕರು ವಿಶ್ರಾಂತಿ ಪಡೆಯಲು ರಿಕ್ಲೈನರಿ ಕುರ್ಚಿ: ಖಾದರ್ | 62 |
| 19 | ವಿಧಾನಸೌಧ ಆವರಣದಲ್ಲಿ ಪುಸ್ತಕ ಮೇಳ – ಸಾರ್ವಜನಿಕರಿಗೆ ಮುಕ್ತ ಪ್ರವೇಶ | 63 |
| 20 | ಪುಸ್ತಕಮೇಳ: ಶಾಸಕರಿಗೆ ಅವಕಾಶ | 63–64 |
| 21 | ಅಧಿವೇಶನ ವೇಳೆಗೆ ಸಿ.ಟಿ.ರವಿ, ಲಕ್ಷ್ಮೀಹೆಬ್ಬಾಳ್ಕರ್ ವಿವಾದಕ್ಕೆ ತೆರೆ | 64 |

| | | |
|---|---|---|
| 22 | ವಿಧಾನಸೌಧದ 3 ದಿನಗಳ ಪುಸ್ತಕ ಜಾತ್ರೆಗೆ 2 ಲಕ್ಷ ಜನ | 64–65 |
| 23 | ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕರಾಗಿ ರವಿಕುಮಾರ್ | 65 |
| 24 | ಶಿಕ್ಷಕರಿಗೆ ಅನ್ಯ ಕಾರ್ಯಬೇಡ: ಸಚಿವರಿಗೆ ಸಭಾಪತಿ ಸೂಚನೆ | 65 |
| 25 | ಕಲಾಪಕ್ಕೆ ಬಾರದ ಸಚಿವರು: ಸ್ಪೀಕರ್ ಗರಂ | 66 |
| 26 | ಸ್ಪೀಕರ್ ಯು.ಟಿ.ಖಾದರ್‌ಗೆ 'ಕೆಂಗಲ್ ಹನುಮಂತಯ್ಯ ಪ್ರಶಸ್ತಿ' | 66 |
| 27 | ಅಧಿವೇಶನ ಕಲಾಪದ ಮೇಲೆ ಎಐ ನಿಗಾ | 66–67 |
| 28 | ಪೀಠದ ಗೌರವ ಉಳಿಸಲು ಅಮಾನತು | 67 |
| 29 | Horatti issues summons to horti dept secy, VC, registar | 67–68 |
| 30 | ಮೇಲ್ಮನೆಯಲ್ಲಿ ಭೂಕಬಳಿಕೆ ನಿಷೇಧ ಸೇರಿ 6 ವಿಧೇಯಕಗಳು ಅಂಗೀಕಾರ | 68 |
| 31 | ಅಧಿವೇಶನದಲ್ಲಿ 99 ಗಂಟೆ ಕಲಾಪ: ಸ್ಪೀಕರ್ | 69 |
| 32 | ಬೆಳಗಾವಿಯಲ್ಲಿ 400 ಕೊಠಡಿಗಳ ಶಾಸಕರ ಭವನ | 69 |
| 33 | ಕೃಷಿ ವಿಜ್ಞಾನ ವಿವಿ ಸೇರಿ ಅನೇಕ ಮಸೂದೆ ಪಾಸ್ | 70 |


**ಭಾಗ–2**

**ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು**


| | | |
|---|---|---|
| 1 | **ವಿಧಾನ ಪರಿಷತ್ತಿನ 155ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ** | 73–74 |
| 2 | ಕರ್ನಾಟಕ ವಿಧಾನ ಪರಿಷತ್ತಿನ ನೀತಿ ನಿರೂಪಣಾ ಸಮಿತಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಿರುವ ಬಗ್ಗೆ–ಲಘು ಪ್ರಕಟಣೆ | 75 |
| 3 | ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ | 76 |
| 4 | **ಹದಿನಾರನೇ ವಿಧಾನಸಭೆಯ 6ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ** | 77–79 |
| 5 | ಗ್ರೇಟರ್ ಬೆಂಗಳೂರು ವಿಧೇಯಕ ಪರಿಶೀಲನಾ ಸಮಿತಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ | 80 |
| 6 | Panel of Chairmen: ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ | 81 |
| 7 | ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರವನ್ನು ಒದಗಿಸದೇ ಇರುವ ಇಲಾಖಾಧಿಕಾರಿಗಳನ್ನು ಕರೆಯಿಸಿ ಪರಿಶೀಲಿಸುವ ಕಾರ್ಯವನ್ನು ವಿಧಾನ ಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ವಹಿಸುವ ಬಗ್ಗೆ. | 82 |
| 8. | ವಿಧಾನಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತು ಹಾಗೂ ಅಗೌರವದಿಂದ ವರ್ತಿಸಿದ ಮಾನ್ಯ ಸದಸ್ಯರುಗಳನ್ನು ಅಮಾನತುಗೊಳಿಸಿದ ಬಗ್ಗೆ | 83–84 |

| ಭಾಗ-3<br>ಸಂಸತ್ ಸುದ್ದಿಗಳು | | |
|---|---|---|
| 1 | House nod to 16 bills in 24: Govt | 87-88 |
| 2 | Only Parliament can constitutionally remove HC judge : Jagdeep Dhankhar | 88 |
| 3 | ಹೊಸ ಐಟಿ ಮಸೂದೆ ಮಂಡನೆ | 89 |
| 4 | Lok Sabha to discuss President's Rule in Manipur, approve Budget | 89 |
| 5 | Union Minister, DMK MPs spar in Lok Sabha | 89-90 |
| 6 | Parliamentary panel asks govt. to conduct Census at the earliest | 91 |
| 7 | Don't stand in the way of aspirations of students, Pradhan tells T.N. govt. | 92-93 |
| 8 | Lok Sabha passes Bill to boost investments in oil and gas sector | 93 |
| 9 | ಅಕ್ರಮ ವಲಸೆ ತಡೆ ಮಸೂದೆಗೆ ಲೋಕ ಅಂಗೀಕಾರ | 94 |

| | ಭಾಗ-4<br>ಕೇಂದ್ರ ಸರ್ಕಾರ ಸುದ್ದಿಗಳು | |
|---|---|---|
| 1 | 2023ನೇ ಸಾಲಿನಲ್ಲಿ ಕರ್ನಾಟಕ ಆರ್ಥಿಕತೆ ಆರೋಗ್ಯಕರ: ಕೇಂದ್ರ | 97 |
| 2 | ಸುವರ್ಣ ಭಾರತದ ಅಭಿವೃದ್ಧಿ ಅನಾವರಣ | 97 |
| 3 | Kharge seeks Rs5,000 cr.in Budget for development of KK region | 98 |
| 4 | ವಕ್ಫ್ ವಿಧೇಯಕ: ಸ್ಪೀಕರ್ ವರದಿ | 98 |
| 5 | Budget a force multiplier that will boost consumption, investment and growth: PM | 98-99 |
| 6 | India is 2nd largest AI market: Altman | 99-100 |
| 7 | ಕರ್ನಾಟಕವೇ ನಂ.1 | 100 |
| 8 | ಜ್ಞಾನೇಶ್‌ಕುಮಾರ್ ನೂತನ ಮುಖ್ಯ ಚುನಾವಣಾ ಆಯುಕ್ತ | 101 |
| 9 | PM’s team to fight obesity includes Murty & Nilekani | 101-102 |
| 10 | ಹೊಸ ಆದಾಯ ತೆರಿಗೆ ಮಸೂದೆ ಮಂಡನೆ | 102-103 |
| 11 | Five rich states contribute about 72% of direct taxes | 103-104 |
| 12 | ಕರ್ನಾಟಕ ಜತೆ ಕನ್ನಡದಲ್ಲೇ ಪತ್ರ ವ್ಯವಹಾರ: ಅಮಿತ್ ಶಾ | 104 |

| | ಭಾಗ–5<br>ರಾಜ್ಯ ಸರ್ಕಾರದ ಸುದ್ದಿಗಳು | |
|---|---|---|
| 1 | ಕೆಎಸ್‌ಆರ್‌ಟಿಸಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ | 107 |
| 2 | ಆರೋಗ್ಯವಂತ ಮನಸ್ಸಿನಿಂದ ಸ್ವಸ್ಥ ಸಮಾಜ | 107 |
| 3 | ಕೊಡವ ಕೌಟುಂಬಿಕ ಹಾಕಿಗೆ ಸರ್ಕಾರದಿಂದ ರೂ.ಒಂದು ಕೋಟಿ ಅನುದಾನ | 108 |
| 4 | ಪ್ರಾಥಮಿಕ ಶಿಕ್ಷಣ ದಾಖಲಾತಿಯಲ್ಲಿ ಕರ್ನಾಟಕ ದ್ವಿತೀಯ | 108 |
| 5 | ಆರೋಗ್ಯ ವಿವಿ ಮಂಗಳೂರು ಪ್ರಾದೇಶಿಕ ಕೇಂದ್ರಕ್ಕೆ ಶಿಲಾನ್ಯಾಸ | 109 |
| 6 | ಶಾಸಕರ ನಿಧಿ ಬಳಕೆಗೆ ಮಾನದಂಡ ಪ್ರಕಟ | 109 |
| 7 | ಎಲ್ಲ ಪಿಯು ಉಪನ್ಯಾಸಕರಿಗೂ ತರಬೇತಿ ನೀಡಿ: ಹೊರಟ್ಟಿ ಸಲಹೆ | 109–110 |
| 8 | ‘ಅನರ್ಹತೆ’ಯಿಂದ ರಕ್ಷಣೆ, ಮಸೂದೆಗೆ ಅಸ್ತು | 110 |
| 9 | ಕಾಗೋಡು ತಿಮ್ಮಪ್ಪಗೆ ಗೌ.ಡಾ. ಪ್ರದಾನ | 110 |
| 10 | ಎಲ್ಲಾ ಶಾಸಕರಿಗೆ ಶೂನ್ಯ ಫಾಸ್ಟ್ ಟ್ಯಾಗ್ | 111 |
| 11 | ವಿಶೇಷ ಪ್ರಕರಣಗಳಲ್ಲಿ ಅಂತಿಮ ಇ–ಖಾತಾ ಇಸಿ ಅಗತ್ಯವಿಲ್ಲ | 111 |
| 12 | ಪ್ರಸಾದ್ ಮುಖ್ಯ ಮಾಹಿತಿ ಆಯುಕ್ತ | 111–112 |
| 13 | ಮಂಡ್ಯ ಸಮ್ಮೇಳನ: ಖಾದರ್ ಪ್ರಶಂಸೆಗೆ ಜೋಶಿ ಧನ್ಯವಾದ | 112 |
| 14 | ನರೇಂದ್ರಸ್ವಾಮಿ ಕೆಎಸ್‌ಪಿಸಿಬಿ ಅಧ್ಯಕ್ಷ | 112 |
| 15 | ಮಹಾನಗರಗಳಲ್ಲಿ ಸಂವಿಧಾನ ಪೀಠಿಕೆ ಪ್ರತಿಮೆ | 112–113 |
| 16 | ಆನ್‌ಲೈನ್ ಮೂಲಕ ಕೃಷಿ ಉತ್ಪನ್ನ ಮಾರಾಟಕ್ಕೂ ಲೈಸೆನ್ಸ್ ಕಡ್ಡಾಯ | 113 |
| 17 | ಕ್ರೀಡಾಂಗಣ ದುರ್ಬಳಕೆ ತಡೆಯಲು ನೀತಿ ಜಾರಿ | 113–114 |
| 18 | ಕರ್ನಾಟಕ ಆರ್ಥಿಕ ಸಮೀಕ್ಷೆ 2024–25 | 114 |
| 19 | Used fee for waste collection gets government approval | 114–116 |
| 20 | ಸರ್ಕಾರಿ, ಖಾಸಗಿ ಸ್ವತ್ತುಗಳಿಗೆ ಡಿಜಿಟಲ್ ರಕ್ಷಣೆ | 116 |

| | ಭಾಗ – 6<br>ನ್ಯಾಯಾಲಯ ಸುದ್ದಿಗಳು | |
|---|---|---|
| 1 | ಸಿಬಿಐಗೆ ರಾಜ್ಯಗಳ ಅನುಮತಿ ಬೇಕಿಲ್ಲ: ಸುಪ್ರೀಂ | 119 |
| 2 | Legislature should examine efficacy of laws periodically: SC | 119–120 |
| 3 | ಶಾಲೆಗಳಲ್ಲಿ ಅಗ್ನಿ ಸುರಕ್ಷತೆ ಕಡ್ಡಾಯ | 120 |
| 4 | ಮೀಸಲಾತಿ ನಿರಾಕರಣೆ: ಶಾಸಕಾಂಗ, ಕಾರ್ಯಾಂಗ ನಿರ್ಧರಿಸಲಿ– ‘ಸುಪ್ರೀಂ’ | 120–121 |
| 5 | K’taka courts settle 17.9 lakh cases in 24; dists do better | 121–122 |
| 6 | ರಾಜೀನಾಮೆ ಸಲ್ಲಿಸಿದ ಹತ್ತು ದಿನಗಳ ಬಳಿಕ ಅಂಗೀಕರಿಸಬೇಕು | 122 |
| 7 | ಕಾಯ್ದೆ ಎತ್ತಿ ಹಿಡಿದ ‘ಸುಪ್ರೀಂ’ | 123 |

| | | |
|---|---|---|
| 8 | ಮಸೂದೆಗೆ ಅಂಕಿತ ಹಾಕದಿದ್ದಾಗ ರಾಜ್ಯಗಳಿಗೆ ತಿಳಿಸಬೇಕು | 124 |
| 9 | ಜನನ ಮರಣ ನೋಂದಣಿ ತಿದ್ದುಪಡಿಗೆ 'ಹೈ' ನಿರ್ದೇಶನ | 124–125 |
| 10 | ಶಾಸಕರ ಸದನದೊಳಗಿನ ಮಾತಿಗೆ ಇದೆ ರಕ್ಷಣೆ | 125 |
| 11 | Free speech is an integral part of healthy society: SC | 125–126 |

| | | |
|---|---|---|
| | **ಭಾಗ – 7**<br>**ಹೊರರಾಜ್ಯಗಳ ಸುದ್ದಿಗಳು** | |
| 1 | ಕರ್ನಾಟಕ ಅಭಿವೃದ್ಧಿ ಬಗ್ಗೆ ಅಸ್ಸಾಂ ಸಿಎಂ ಫಿದಾ | 129 |
| 2 | ಉ.ಪ್ರದೇಶದ ಮಹಾಕುಂಭ ಸ್ತಬ್ಧಚಿತ್ರಕ್ಕೆ 1ನೇ ಬಹುಮಾನ | 129 |
| 3 | ವಾಟ್ಸ್‌ಆ್ಯಪ್‌ನಲ್ಲೇ ಆಂಧ್ರ ಸರ್ಕಾರಿ ಸೇವೆ: ಇದು ದೇಶದಲ್ಲೇ ಮೊದಲು | 129–130 |
| 4 | Survey: Telangana first in own tax revenue, K'taka, Haryana second | 130–131 |
| 5 | ಕೇಂದ್ರಕ್ಕೆ ಸಡ್ಡು: ಜನೌಷಧಿ ರೀತಿ ತ.ನಾಡಲ್ಲಿ 1000 ಔಷಧ ಅಂಗಡಿ | 131 |
| 6 | ಮಹಾಕುಂಭಕ್ಕೆ ಗಿನ್ನಿಸ್ ದಾಖಲೆಗಳ ಸರಮಾಲೆ | 131–132 |
| 7 | Over 2,500 crore financial liabilities to be transferred to Ladakh, says J&K CM Omar | 132 |
| 8 | T.N.Opts for Tamil letter 'ரூ' Instead of '₹'in Budget logo | 132–133 |

| | | |
|---|---|---|
| | **ಭಾಗ – 8**<br>**ಅಂತರರಾಷ್ಟ್ರೀಯ ಸುದ್ದಿಗಳು** | |
| 1 | ಕರ್ನಾಟಕ ಪಂಚ ಗ್ಯಾರಂಟಿ ಸ್ಕೀಂಗಳಿಗೆ ವಿಶ್ವಸಂಸ್ಥೆ ಮೆಚ್ಚುಗೆ | 137 |
| 2 | ಸಿಂಗಾಪುರ ಪಾಸ್ ಪೋರ್ಟ್ ನಂ.1 | 137–138 |
| 3 | ಚಂದ್ರನಂಗಳಕ್ಕೆ ಮೊದಲ ಖಾಸಗಿ ನೌಕೆ ಲಗ್ಗೆ | 138 |
| 4 | ಮೋದಿಗೆ ಮಾರಿಷಸ್ ಶ್ರೇಷ್ಠ ಗೌರವ | 139 |
| 5 | ಮಹಾಸಾಗರ ಯೋಜನೆಗೆ ಪ್ರಧಾನಿ ಮೋದಿ ಚಾಲನೆ | 139–140 |
| 6 | ಭೂಮಿಗೆ ಮರಳಿದ ಸುನಿತಾ, ವಿಲ್ಮೋರ್ | 141 |

| | | |
|---|---|---|
| | **ಭಾಗ – 09**<br>**ಪ್ರಮುಖ ಲೇಖನಗಳು** | |
| 1 | ಸಭಾಪತಿ, ಸಭಾಧ್ಯಕ್ಷರಿಗೆ ಇದೆ ಸರ್ವೋಚ್ಚ ಅಧಿಕಾರ | 145–147 |
| 2 | ಭಾರತೀಯ ಸಂವಿಧಾನ 75 ವರ್ಷಗಳ ಮಹಾಯಾನ | 147–159 |

| | | |
|---|---|---|
| 3 | Navigating the AI career landscape | 159–162 |
| 4 | ಜನಪ್ರತಿನಿಧಿಗಳೆಂದರೆ ಹೀಗಿರಬೇಕು | 163–164 |
| 5 | ಪಂಚಾಯತ್ ವ್ಯವಸ್ಥೆಗೆ ಶಕ್ತಿ ತುಂಬಿದ ಹಣಕಾಸು ಆಯೋಗ | 164–167 |


| | **ಭಾಗ – 10**<br>**ಶ್ರದ್ಧಾಂಜಲಿ** | |
|---|---|---|


| | | |
|---|---|---|
| 1 | ಎಂ.ಶ್ರೀನಿವಾಸ್, ವಿಧಾನಸಭೆಯ ಮಾಜಿ ಸದಸ್ಯರು | 171 |
| 2 | ಜಯವಾಣಿ ಮಂಚೇಗೌಡ, ವಿಧಾನಸಭೆಯ ಮಾಜಿ ಸದಸ್ಯರು | 172 |
| 3 | ಪಟೇಲ್ ಶಿವರಾಂ, ವಿಧಾನಪರಿಷತ್ತಿನ ಮಾಜಿ ಸದಸ್ಯರು | 173 |
| 4 | ಎ.ಎಂ.ಮರಿಯಪ್ಪ, ವಿಧಾನಸಭೆಯ ಮಾಜಿ ಸದಸ್ಯರು | 174 |
| 5 | ಖಾಜಿ ಅರಶದ್ ಅಲಿ, ವಿಧಾನಪರಿಷತ್ತಿನ ಮಾಜಿ ಸದಸ್ಯರು | 174 |
| 6 | ಪ್ರೊ.ಎಂ.ಆರ್.ದೊರೆಸ್ವಾಮಿ, ವಿಧಾನಪರಿಷತ್ತಿನ ಮಾಜಿ ಸದಸ್ಯರು | 175 |
| 7 | ಬಿ.ಸುಬ್ಬಯ್ಯ ಶೆಟ್ಟಿ, ವಿಧಾನಸಭೆಯ ಮಾಜಿ ಸದಸ್ಯರು | 176 |


**ಸೂಚನೆ:–** ಇಲ್ಲಿ ಆಯ್ಕೆ ಮಾಡಿರುವ ಸುದ್ದಿಗಳು/ಲೇಖನಗಳನ್ನು ಪ್ರಮುಖ ದಿನಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# 1. ವಿಧಾನ ಮಂಡಲದ ಸುದ್ದಿಗಳು

# 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## i. 3ನೇ ಅವೃತಿಯ ಅಂತರರಾಷ್ಟ್ರೀಯ ಪುಸ್ತಕ ಮೇಳ

ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್ ಫರೀದ್ ಅವರು ದಿನಾಂಕ:07.01.2025ರಂದು ಕೇರಳ ವಿಧಾನಸಭೆ ಸಚಿವಾಲಯದ ವತಿಯಿಂದ ತಿರುವನಂತಪುರದಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಪುಸ್ತಕ ಮೇಳ–3ನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಕೇರಳ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ಎ.ಎನ್. ಶಮೀರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ಕೇರಳ ರಾಜ್ಯದ ಮುಖ್ಯಮಂತ್ರಿಯವರಾದ ಶ್ರೀ ಪಿಣರಾಯಿ ವಿಜಯನ್ ಅವರು ಪುಸ್ತಕ ಮೇಳವನ್ನು ಉದ್ಘಾಟಿಸಿದರು. ಈ ಸಮಾರಂಭವು ಕೇರಳ ವಿಧಾನಸಭೆಯ ಉಪ ಸಭಾಧ್ಯಕ್ಷರಾದ ಶ್ರೀ ಚಿತ್ತಯ್ಯಂ ಗೋಪಕುಮಾರ್ ಅವರು ಸ್ವಾಗತಿಸುವ ಮೂಲಕ ಪ್ರಾರಂಭವಾಗಿ ಸದರಿ ಸಮಾರಂಭದಲ್ಲಿ ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ವಿ.ಡಿ. ಸತೀಶನ್, ಕೇರಳ ರಾಜ್ಯದ ಸಚಿವ ಸಂಪುಟದ ಸದಸ್ಯರಾದ ವಿ.ಶಿವನ ಕುಟ್ಟಿ, ಶ್ರೀ ಸಾಜಿ ಚೆರಿಯನ್, ಜಿ.ಆರ್. ಅನಿಲ್ ಭಾಗವಹಿಸಿದರು.

ಈ ಸಂದರ್ಭದಲ್ಲಿ ಲೇಖಕರಾದ ಶ್ರೀ ಎಂ.ಮುಕುಂದನ್ ಅವರನ್ನು ಸನ್ಮಾನಿಸಲಾಯಿತು. ಲೇಖಕರಾದ ಶ್ರೀ ದೇವದತ್ ಪಟ್ಟನಾಯಕ್ ಅವರು ಉಪಸ್ಥಿತರಿದ್ದರು.




ಈ ಸಂದರ್ಭದಲ್ಲಿ ಶುಭ ಹಾರೈಸುತ್ತಾ ಪುಸ್ತಕೋತ್ಸವ ಪ್ರಜ್ಞಾವಂತ, ಸೌಹಾರ್ದತೆ ಹಾಗೂ ಸಾಂಸ್ಕೃತಿಕ ಏಕತೆಯ ಸಮಾಜಕ್ಕೆ ಪ್ರೇರಣೆಯಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಕೂಡ ಪುಸ್ತಕೋತ್ಸವ ನಡೆಸುವ ಚಿಂತನೆ ನಡೆಸಲಾಗುವುದು ಎಂದು ಸನ್ಮಾನ್ಯ ಸಭಾಧ್ಯಕ್ಷರು ತಿಳಿಸಿದರು.

**Speech by Hon’ble Speaker**:-



Respected Dignitaries on the dais, Honourable Speaker of Kerala Legislative Assembly Shri A.N. Shamseer, Honourable Chief Minister of Kerala Shri Pinarayi Vijayan Sir, Leader of the Opposition Shri V. D. Satheesan, Esteemed Ministers, Shri P A Mohamed Riyas, Shri P Rajeeve, renowned writer Shri Devdutt Pattanaik, Members of Kerala Legislature, Distinguished leaders, Beloved Bibilophiles (ಬಿಬಿಲೋಫೈಲ್ಸ್) Acclaimed publishers, renowned writers, invitees and dear friends, A warm and wonderful morning to each and every one of you.

“Books give a soul to the universe, Wings to the mind, Flight to the imagination and Life to everything.” These words by great philosopher Plato resonate profoundly as we gather to celebrate the boundless magic of books at this grand “International Kerala Legislature Book Festival - Third edition under the inspiring theme” Reading is an addiction.

It is indeed a moment of immense pride and honor to stand before you today, in this sacred land of Kerla, a state rightly called as God’s Own Country. Renowned for its culture, wisdom, and rich literary heritage, Kerala has always been a land of enlightenment and learning. Like Karnataka, Kerala is a land deeply rooted in unity in diversity and timeless values. From the profound teachings of Brahmashree Narayana Guru, who championed education as a means of liberation, to the inspiring visit of Swami Vivekananda, who hailed the state as a place of spiritual and intellectual brilliance, Kerala continues to shine as a beacon of knowledge and progress , making it famous on a global scale.

The wisdom of Basavanna, whose ideals transcend borders, reflects Kerala’s spirit of equality and inclusivity. The visionary leadership of Marthanda Varma in unifying Travancore parallels the foresight of Kempegowda, the founder of Bangalore, while Swathi Thirunal Rama Varma, the enlightened ruler of Travancore, elevated Kerala’s artistic and intellectual legacy, much like the Wodeyar dynasty in Karnataka. These extraordinary leaders

have shaped our regions into vibrant and intellectually rich landscapes, inspiring us with their timeless contributions to unity, progress, and shared values.

This Book festival is a testament to the visionary initiative of the Kerala State Assembly. By organizing such an enriching program, the Assembly has transcended its conventional policy making role to champion culture, knowledge, and literature. This initiative serves as a inspiring model for the entire nation, showcasing how promoting education and literature can elevate society. As Victor Hugo (ವಿಕ್ಟರ್ ಹ್ಯೂಗೋ) beautifully said, “To learn to read is to light a fire; every syllable that is spelled out is a spark.” Kerala’s efforts have ignited a fire of learning and inspiration that can illuminate minds and foster cultural prosperity across the country.

These Book festivals are not just gathering they are transformative events. As the Books are the silent architects of progress, shaping minds and nurturing dreams. By uniting progressive thinkers from around the world, this event embodies (ಎಂಬೊಡೀಸ್) the courage to embrace transformation and new ideas for a better society. It stands as a beacon of knowledge, promoting equality, collaboration, and shared learning. For students, they serve as treasure of knowledge, offering exposure to diverse genres, authors, and ideas. These programmes foster creativity and lifelong learning, the interactive sessions and author meet-and-greets inspire young minds to embrace reading and writing passionately. As Francis Bacon (ಫ್ರಾನ್ಸಿಸ್ ಬೇಕಾನ್) aptly said, “Some books are to be tasted, others to be swallowed, and some few to be chewed and digested.” Events like these encourage students to explore, internalize, and grow through the wisdom books offer.

Beyond students, book fairs unite communities. They bring together readers, writers, publishers and thinkers, fostering dialogue, cultural exchange, and social unity. They are platforms for local authors and publishers to showcase their talents, contributing to regional heritage and economic growth. As Dr. Seuss (ಡಾ:ಸ್ಯೂಸ್) wisely remarked, “The more that you read, the more things you will know. The more that you learn, the more places you’ll go.” Hence, I urge everyone to not only explore but to truly immerse themselves in this ocean of wisdom.

Despite revenue borders, Karnataka and Kerala share an unparalleled cultural synergy. From Yakshagana to Kathakali, from the rhythmic beats of folk music to the coastal delicacies that grace our kitchens, both states celebrate a rich tapestry of traditions and harmony. Books, too, transcend these borders, connecting the people of Karnataka and Kerala through shared stories and dreams. This festival symbolizes that connection, a bridge not defined by geography but by a shared passion for knowledge and culture.

Kerala and Karnataka have immense potential to collaborate across various sectors Education, Tourism and Environmental conservation. Together, we can achieve remarkable

milestones and set a national example of regional harmony and progress. Joint educational programs, student exchange initiatives can foster mutual learning and cultural understanding, Collaborative tourism campaigns can highlight the natural beauty, heritage sites, and cultural richness of both states, attracting more visitors, Joint efforts in environmental preservation and sustainable practices can benefit the ecological well-being of the region. As Mahatma Gandhi once said, “You may never know what results come of your actions, but if you do nothing, there will be no result.” This is the urgent call for action to work hand in hand to create a better harmonious future that benefits not just our states but the nation as a whole.

I am, truly delighted to witness this celebration of literature and to learn that over 350 books covering diverse topics such as politics, literature, the environment and social issues will be launched, accompanied by 60 engaging discussions featuring eminent personalities from political, cultural and social spheres with participation from over 150 national and international publishers. I would like to extend my heartfelt congratulations to the distinguished writer M. Mukundan on receiving the Kerala Legislative Assembly. Award for his outstanding contributions to literature, art, and culture.

On this occasion, I would like to honor the late Shri M T Vasudevan Nair, an esteemed writer and recipient of the Padma Bhushan and Jnanpith Award. His demise is a great loss to us all. His remarkable contributions to Malayalam literature and cinema, through his acclaimed novels, short stories, and screenplays have profoundly enriched our cultural heritage and left an everlasting legacy. His works continue to inspire and illuminate minds across generations. Shri Nair, who actively participated and delivered the keynote address in the first edition of this book is no longer with us. May his soul rest in eternal peace. Let this book festival inspire the creation of many more M T Vasudevan Nairs in the future, contributing to the field of literature and the nation’s intellectual wealth.

I take this opportunity to thank Honourable Speaker of Kerala Legislative Assembly Shri A.N. Shamseer, Honourable Chief Minister of Kerala Shri Pinarayi Vijayan Sir, Leader of the Opposition Shri V. D. Satheesan and Members of Kerala Legislature for continuing the esteemed tradition of the Book Festival, further strengthening its legacy. It is also heartening to know that we have the privilege of purchasing books worth Rs. 3.00 lakh from the MLA Development Fund, which will be donated to schools and public libraries in our constituency. These books will open new worlds of knowledge for our children, ensuring that the light of learning continues to shine brightly in every corner of our county.

As Neil Gaiman said, “A book is a dream that you hold in your hands.” This festival is not just a celebration; it is a movement, a reaffirmation of our shared commitment to knowledge and its transformative power. Together, let us celebrate the unity in diversity and embrace the boundless opportunities that lie ahead for a brighter, more enlightened future.

Let me conclude with a quote by our peoples President and Scientist Dr. A.P.J. Abdul Kalam:

"**Learning gives creativity, creativity leads to thinking, thinking provides knowledge, and knowledge makes you great**."

May this book festival Kindle Creativity, Ignite Ideas, Inspire deep reflection and enrich lives.

Thank you.

ಈ ಪುಸ್ತಕೋತ್ಸವಗಳು ಕೇವಲ ಉತ್ಸವಗಳಲ್ಲ, ಅವು ಪರಿವರ್ತನೆಯ ಘಟ್ಟಗಳು. ಪುಸ್ತಕಗಳು ಪ್ರಗತಿಯ ನಿಗೂಢ ವಾಸ್ತುಶಿಲ್ಪಿಗಳಂತೆ, ಮನಸ್ಸುಗಳನ್ನು ಪರಿವರ್ತನೆ ಮಾಡಿ, ಕನಸುಗಳ ಸಾಕ್ಷಾತ್ಕರಿಸುವ ಶಕ್ತಿಗಳಾಗಿವೆ. ಪ್ರಪಂಚದಾದ್ಯಂಥ ಇರುವ ಪ್ರಗತಿಪರ ಚಿಂತಕರನ್ನು ಒಟ್ಟುಗೂಡಿಸಿದ ಈ ಉತ್ಸವವು ಉತ್ತಮ ಸಾಮರಸ್ಯದ ಸಮಾಜ ಸೃಷ್ಟಿಸುವ, ನವಯೋಜನೆಗಳ ಪ್ರೇರೇಪಿಸುವ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ. ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ವಿಧಾನಸಭೆಯು ತನ್ನ ಸಾಂಪ್ರದಾಯಿಕ ನೀತಿ, ನಿರೂಪಣೆಯ ಪಾತ್ರವನ್ನು ಮೀರಿ, ಹೇಗೆ ಸಂಸ್ಕೃತಿ ಜ್ಞಾನ ಮತ್ತು ಸಾಹಿತ್ಯದ ಉನ್ನತೀಕರಣಕ್ಕೆ ಸ್ಫೂರ್ತಿದಾಯಕ ಕೊಡುಗೆ ನೀಡಬಹುದೆಂದು ತೋರಿಸಿಕೊಟ್ಟು ಇಡೀ ದೇಶಕ್ಕೆ ಮಾದರಿಯಾಗಿದೆ" ಎಂದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಅವರು ಹೇಳಿದ್ದಾರೆ. ಅವರು ಇಂದು ಕೇರಳ ವಿಧಾನಸಭೆಯ ಅಂತರರಾಷ್ಟ್ರೀಯ ಪುಸ್ತಕೋತ್ಸವದ ಮೂರನೇ ಆವೃತ್ತಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

"ದೇವರ ಸ್ವಂತ ನಾಡು" ಎಂದು ಕರೆಯಲ್ಪಡುವ ಕೇರಳದ ಪವಿತ್ರ ಭೂಮಿಯಲ್ಲಿ "ಅಂತರರಾಷ್ಟ್ರೀಯ ಕೇರಳ ವಿಧಾನಸಭೆಯ ಪುಸ್ತಕೋತ್ಸವ" ಕಾರ್ಯಕ್ರಮದಲ್ಲಿ ಭಾಗವಹಿಸುವ ಈ ಕ್ಷಣ ನನಗೆ ಅಪಾರ ಹೆಮ್ಮೆ ಮತ್ತು ಗೌರವದ ಅಮೃತಗಳಿಗೆಯಾಗಿದೆ. ಈ ನೆಲದ ಶ್ರೀಮಂತ ಸಂಸ್ಕೃತಿ, ಬೌದ್ಧಿಕ ಆಳ ಮತ್ತು ಸಾಹಿತ್ಯದ ಪರಂಪರೆ ಕೇರಳವನ್ನು ಭಾರತದಲ್ಲಿ ಮಾತ್ರವಲ್ಲದೆ ವಿಶ್ವದಲ್ಲೇ ಅನನ್ಯವಾಗಿ ಗುರುತಿಸುವಂತೆ ಮಾಡಿದೆ. ಸಂಸ್ಕೃತಿ ಮತ್ತು ಶ್ರೀಮಂತ ಸಾಹಿತ್ಯ ಪರಂಪರೆಗೆ ಹೆಸರಾದ ಕೇರಳವು, ಕರ್ನಾಟಕದಂತೆಯೇ ಹಲವು ಸಾಂಸ್ಕೃತಿಕ ವೈಶಿಷ್ಟತೆಗಳನ್ನೊಳಗೊಂಡ ರಾಜ್ಯವಾಗಿದ್ದು, ವೈವಿಧ್ಯತೆಯಲ್ಲಿ ಏಕತೆ ಮತ್ತು ಸರ್ವಕಾಲಿಕ ಮೌಲ್ಯಗಳು ಇಲ್ಲಿನ ಜನ ಜೀವನದಲ್ಲಿ ಆಳವಾಗಿ ಬೇರೂರಿವೆ, ಎಂದು ಅವರು ಹೇಳಿದರು.

"ಶಿಕ್ಷಣವನ್ನು ವಿಮೋಚನೆಯ ಮಾರ್ಗವೆಂದು ಪ್ರತಿಪಾದಿಸಿದ ಬ್ರಹ್ಮಶ್ರೀ ನಾರಾಯಣ ಗುರುಗಳ ಆಳವಾದ, ಅರ್ಥಪೂರ್ಣವಾದ ಬೋಧನೆಗಳು ಕೇರಳವನ್ನು ಆಧ್ಯಾತ್ಮಿಕ ಮತ್ತು ಬೌದ್ಧಿಕ ವೈಭವದ ಪ್ರಮುಖ ಕೇಂದ್ರವನ್ನಾಗಿ ರೂಪಿಸಿವೆ. ಮಾತ್ರವಲ್ಲದೆ, ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ಭೇಟಿಯು ಕೇರಳವನ್ನು ಜ್ಞಾನೋದಯದ ಪೀಠಸ್ಥಾನವಾಗಿ ಮತ್ತಷ್ಟು ಪ್ರಖ್ಯಾತಿಗೊಳಿಸಿತು. ಬಸವಣ್ಣನವರ ತತ್ವ ಮತ್ತು ಆದರ್ಶಗಳು ಕೇರಳದಲ್ಲಿಯೂ ಸಮಾನತೆ ಮತ್ತು ಸಾಮರಸ್ಯದ ಮನೋಭಾವವನ್ನು ಪ್ರತಿಬಿಂಬಿಸಿತು. ತಿರುವಾಂಕೂರನ್ನು ಏಕೀಕರಿಸಿದ ರಾಜ ಮಾರ್ತಾಂಡ ವರ್ಮ ಅವರ ದೂರದರ್ಶಿತ್ವದ ನಾಯಕತ್ವವು, ಆಧುನಿಕ ದೃಷ್ಟಿಕೋನ ಮತ್ತು ಚಿಂತನೆಗಳೊಂದಿಗೆ ಬೆಂಗಳೂರು ನಗರವನ್ನು ಸ್ಥಾಪಿಸಿದ ಕೆಂಪೇಗೌಡರ ಸಾಧನೆಗೆ ಸಮಾನವಾಗಿದೆ. ಸ್ವಾತಿ ತಿರುನಾಳ್ ರಾಮವರ್ಮರವರ ಪ್ರಬುದ್ಧ ಆಳ್ವಿಕೆಯು ತಿರುವಾಂಕೂರಿನ

ಕಲಾತ್ಮಕ ಮತ್ತು ಬೌದ್ಧಿಕ ಪರಂಪರೆಯನ್ನು ಮತ್ತಷ್ಟು ಉತ್ತುಂಗಕ್ಕೆ ತಲುಪಿಸಿದಂತೆ, ಕರ್ನಾಟಕದಲ್ಲಿ ಒಡೆಯರ ರಾಜವಂಶ ನಾಡಿಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ. ಈ ಅಸಾಧಾರಣ ನಾಯಕರು ತಮ್ಮ ದೀರ್ಘಕಾಲಿಕ ದೃಷ್ಟಿ ಮತ್ತು ಚಿಂತನೆಯ ಮೂಲಕ ದೇಶವನ್ನು ಸಮೃದ್ಧಿ, ಸಾಮರಸ್ಯ ಮತ್ತು ಸಾಂಸ್ಕೃತಿಕ ವೈಭವದಿಂದ ನಾಡನ್ನು ಶ್ರೀಮಂತಗೊಳಿಸಿದ್ದಾರೆ", ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

"ಈ ಪುಸ್ತಕೋತ್ಸವವು ಕೇರಳ ರಾಜ್ಯ ವಿಧಾನಸಭೆಯ ದೂರದೃಷ್ಟಿಯ ಸಂಕೇತವಾಗಿದೆ. ಶಿಕ್ಷಣ ಮತ್ತು ಸಾಹಿತ್ಯವನ್ನು ಉತ್ತೇಜಿಸುವ ಮೂಲಕ ಸಮಾಜವನ್ನು ಹೇಗೆ ಉನ್ನತೀಕರಿಸಬಹುದು ಎಂಬುದನ್ನು ಜಗತ್ತಿಗೆ ಸಾರಿದೆ. ವಿಕ್ಟರ್ ಹ್ಯೂಗೋ ಅವರು ಹೇಳಿದಂತೆ, "ಓದಲು ಕಲಿಯುವುದು ಬೆಂಕಿಯನ್ನು ಉರಿಸಿದಂತೆ, ಉಚ್ಚರಿಸುವ ಪ್ರತಿಯೊಂದು ಅಕ್ಷರವೂ ಒಂದೊಂದು ಕಿಡಿ." ಕೇರಳ ವಿಧಾನಸಭೆಯ ಈ ಪ್ರಯತ್ನ ಕಲಿಕೆ ಮತ್ತು ಸ್ಫೂರ್ತಿಯ ಕಿಡಿಯನ್ನು ಜನಮಾನಸದಲ್ಲಿ ಪ್ರಜ್ವಲಿಸಿದ್ದು, ಅದು ಅವರ ಮನಸ್ಸುಗಳನ್ನು ಬೆಳಗಿಸುವುದಲ್ಲದೆ ದೇಶದಾದ್ಯಂತ ಸಾಂಸ್ಕೃತಿಕ ಸಮೃದ್ಧಿಯನ್ನು ಉತ್ತೇಜಿಸುವ ಹಾದಿಯನ್ನು ರೂಪಿಸಿದೆ". ಯುವ ಜನಾಂಗಕ್ಕೆ ಜ್ಞಾನದ ಭಂಡಾರವಾಗಿ ಕಾರ್ಯನಿರ್ವಹಿಸುವ ಇಂತಹ ಮಹತ್ವಪೂರ್ಣ ಕಾರ್ಯಕ್ರಮಗಳು ಅವರಲ್ಲಿ ರಚನಾತ್ಮಕ, ಕ್ರಿಯಾತ್ಮಕ ಹಾಗೂ ಸಕಾರಾತ್ಮಕತೆಯನ್ನು ಚಿಂತನೆಗಳನ್ನು ಪ್ರೋತ್ಸಾಹಿಸುತ್ತದೆ ಮಾತ್ರವಲ್ಲ ಜೀವನಪೂರ್ತಿ ಕಲಿಕೆಯನ್ನು ಉತ್ತೇಜಿಸುವ ಮೂಲಕ ಪ್ರಜ್ಞಾವಂತ ಸಮಾಜದ ನವನಿರ್ಮಾಣಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

"ಪುಸ್ತಕ ಮೇಳಗಳು ಸಮುದಾಯಗಳನ್ನು ಏಕೀಕರಿಸುವ ಮಹತ್ತರ ಅವಕಾಶಗಳನ್ನು ಸೃಷ್ಟಿಸುತ್ತವೆ. ಓದುಗರು, ಬರಹಗಾರರು, ಪ್ರಕಾಶಕರು ಮತ್ತು ಚಿಂತಕರನ್ನು ಒಟ್ಟುಗೂಡಿಸುವ ಮೂಲಕ ಉತ್ತಮ ಆರೋಗ್ಯಕರ ಸಂವಾದ, ಸಾಂಸ್ಕೃತಿಕ ವಿನಿಮಯ ಮತ್ತು ಸಾಮಾಜಿಕ ಒಗ್ಗಟ್ಟಿಗೆ ಒಂದು ವೇದಿಕೆಯನ್ನು ಒದಗಿಸುತ್ತದೆ. ಸ್ಥಳೀಯ ಲೇಖಕರು ಮತ್ತು ಪ್ರಕಾಶಕರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ಪ್ರಾದೇಶಿಕ ಪರಂಪರೆ ಮತ್ತು ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಲು ಈ ಉತ್ಸವವು ಒಂದು ಮಾಧ್ಯಮವಾಗಿದೆ. ಡಾ.ಸ್ಯೂಸ್ ಅವರ  ಬುದ್ಧಿವಂತಿಕೆಯ ಹೇಳಿಕೆಯಂತೆ ನೀವು ಹೆಚ್ಚು ಓದುವುದರಿಂದ, ನಿಮಗೆ ಹೆಚ್ಚು ಜ್ಞಾನವು ದೊರೆಯುತ್ತದೆ. ಇದರಿಂದ ನೀವು ಇನ್ನಷ್ಟು ಹೆಚ್ಚು ಕಲಿಯುವಿರಿ ಮತ್ತು ನೀವು ಹೆಚ್ಚು ಸ್ಥಳಗಳಿಗೆ ಹೋಗುವಿರಿ, ಆ ಮೂಲಕ ಪ್ರಜ್ಞಾವಂತರಾಗುವಿರಿ". ಆದ್ದರಿಂದ, ಎಲ್ಲರೂ ಈ ಬುದ್ಧಿವಂತಿಕೆಯ ಸಾಗರವನ್ನು ಕೇವಲ ಅನ್ವೇಷಿಸುವುದು ಮಾತ್ರವಲ್ಲ ಇದರಲ್ಲಿ ಮನಸ್ಪೂರ್ತಿ ಮುಳುಗೇಳಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ ಎಂದು ನುಡಿದರು.

"ಭೌಗೋಳಿಕ ಗಡಿಗಳ ಹೊರತಾಗಿಯೂ, ಕರ್ನಾಟಕ ಮತ್ತು ಕೇರಳ ರಾಜ್ಯಗಳು ಅತಿಯಾದ ಸಾಂಸ್ಕೃತಿಕ ಸಾಮ್ಯತೆಗಳನ್ನು ಪ್ರದರ್ಶಿಸುತ್ತವೆ. ಯಕ್ಷಗಾನದಿಂದ ಕಥಕ್ಕಳಿಯವರೆಗೆ, ಜಾನಪದ ಸಂಗೀತದ ಲಯಬದ್ಧವಾದ ತಾಳದಿಂದ, ಅಡಿಗೆಮನೆಗಳನ್ನು ಅಲಂಕರಿಸುವ ಕರಾವಳಿಯ ವಿಭಿನ್ನ ಭಕ್ಷ್ಯಗಳವರೆಗೆ, ಎರಡೂ ರಾಜ್ಯಗಳು ಸಂಪ್ರದಾಯ ಮತ್ತು ಸಾಮರಸ್ಯದ ಶ್ರೀಮಂತ ಸಾಮ್ಯತೆಯನ್ನು ಪ್ರದರ್ಶಿಸುತ್ತವೆ. ಪುಸ್ತಕಗಳು ಕೂಡ ಈ ಭೌತಿಕ ಗಡಿಗಳನ್ನು ಮೀರಿ, ಕರ್ನಾಟಕ ಮತ್ತು ಕೇರಳದ ಜನರನ್ನು ಸಾಹಿತ್ಯದ ಸೇತುವೆಯ ಮೂಲಕ ಬೆಸೆದಿವೆ.  ಇಂತಹ ಕಾರ್ಯಕ್ರಮಗಳು ಆ ಬೆಸುಗೆಯನ್ನು ಇನ್ನಷ್ಟು ಬಲಪಡಿಸುತ್ತವೆ," ಎಂದು ತಮ್ಮ ಆಶಯ ವ್ಯಕ್ತಪಡಿಸಿದರು.

"ಕೇರಳ ಮತ್ತು ಕರ್ನಾಟಕವು ವಿವಿಧ ಕ್ಷೇತ್ರಗಳಲ್ಲಿ ಅಪಾರ ಸಹಯೋಗ ಸಾಮರ್ಥ್ಯವನ್ನು ಹೊಂದಿವೆ ಶಿಕ್ಷಣ, ಪ್ರವಾಸೋದ್ಯಮ ಮತ್ತು ಪರಿಸರ ಸಂರಕ್ಷಣೆ ಸಂಬಂಧಿಸಿದ ಯೋಜನೆಗಳನ್ನು ಜಂಟಿಯಾಗಿ ಅನುಷ್ಠಾನಗೊಳಿಸುವುದರಿಂದ ನಾವು ಮಹತ್ವದ ಮೈಲಿಗಲ್ಲುಗಳನ್ನು ಸಾಧಿಸಬಹುದು ಮಾತ್ರವಲ್ಲ, ಪ್ರಾದೇಶಿಕ ಸಾಮರಸ್ಯ ಹಾಗೂ ಪ್ರಗತಿಯ ಮೂಲಕ ಇಡೀ ರಾಷ್ಟ್ರಕ್ಕೆ ಆದರ್ಶಪ್ರಾಯವಾಗಬಹುದು. ಜಂಟಿ ಶೈಕ್ಷಣಿಕ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ವಿನಿಮಯ

ಯೋಜನೆಗಳು, ಪರಸ್ಪರ ಕಲಿಕೆ, ಸಾಮರಸ್ಯ ಮತ್ತು ಸಾಂಸ್ಕೃತಿಕ ತಿಳುವಳಿಕೆಯನ್ನು ಉತ್ತೇಜಿಸಬಹುದು. ಸಹಕಾರಿ ಪ್ರವಾಸೋದ್ಯಮ ಅಭಿಯಾನಗಳು ಎರಡೂ ರಾಜ್ಯಗಳ ನೈಸರ್ಗಿಕ ಸೌಂದರ್ಯ, ಪಾರಂಪರಿಕ ತಾಣಗಳು ಮತ್ತು ಸಾಂಸ್ಕೃತಿಕ ವೈಭವವನ್ನು ಇನ್ನಷ್ಟು ಪ್ರಚಾರ ಮಾಡಿ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಬಹುದು. ಪರಿಸರ ಸಂರಕ್ಷಣೆಯಲ್ಲಿ ಜಂಟಿ ಪ್ರಯತ್ನಗಳು ಈ ಪ್ರದೇಶದ ಪರಿಸರ ಯೋಗಕ್ಷೇಮವನ್ನು ಉತ್ತೇಜಿಸಿ ದೀರ್ಘಕಾಲಿಕ ಪರಿಸರ ರಕ್ಷಣಾ ಯೋಜನೆಗಳಿಗೆ ಮುನ್ನುಡಿ ಬರೆಯಬಹುದು" ಎನ್ನುವ ವಿಚಾರಧಾರೆಯನ್ನು ಮುಂದಿಟ್ಟರು.

ಈ ಸಂದರ್ಭದಲ್ಲಿ, ಪದ್ಮಭೂಷಣ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಗೌರವಾನ್ವಿತ ಲೇಖಕರಾದ ದಿವಂಗತ ಶ್ರೀ ಎಂ.ಟಿ. ವಾಸುದೇವನ್ ನಾಯರ್ ಅವರಿಗೆ ನಾನು ನನ್ನ ಅನಂತ ಗೌರವವನ್ನು ಸಲ್ಲಿಸಲು ಇಚ್ಛಿಸುತ್ತೇನೆ. ಅವರ ನಿಧನದಿಂದ ನಮಗೆಲ್ಲಾ ಭಾರಿ ನಷ್ಟವಾಗಿದೆ. ಮಲಯಾಳಂ ಸಾಹಿತ್ಯ ಮತ್ತು ಸಿನಿಮಾಕ್ಕೆ ಅವರು ನೀಡಿದ ಗಮನಾರ್ಹ ಕೊಡುಗೆಗಳು, ಅಪಾರ ಜನಪ್ರಿಯತೆಯನ್ನು ಗಳಿಸಿದ ಅವರ ಕಾದಂಬರಿಗಳು, ಸಣ್ಣ ಕಥೆಗಳು ಮತ್ತು ಚಿತ್ರಕಥೆಗಳು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸಮೃದ್ಧಗೊಳಿಸಿದೆ. ಅವರ ಕೃತಿಗಳು ಸಾರ್ವಕಾಲಿಕ ಮತ್ತು ಎಲ್ಲಾ ವಯೋಮಾನದವರಿಗೆ ಪ್ರೇರಣೆ ನೀಡುವಂತಹದಾಗಿವೆ.

ಈ ಪುಸ್ತಕೋತ್ಸವದ ಮೊದಲ ಆವೃತ್ತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ದಿಕ್ಸೂಚಿ ಭಾಷಣ ಮಾಡಿದ ಶ್ರೀ ಎಂ.ಟಿ. ವಾಸುದೇವನ್ ನಾಯರ್ ಅವರು ಈಗ ನಮ್ಮ ಜೊತೆಗೆ ಭೌತಿಕವಾಗಿ ಇಲ್ಲದಿದ್ದರೂ, ಅವರ ಆಲೋಚನೆಗಳು ಮತ್ತು ಕೃತಿಗಳು ನಮ್ಮೆಲ್ಲರ ಮನದಲ್ಲಿ ಶಾಶ್ವತವಾಗಿ ನೆನಪಾಗಿ ಉಳಿದಿವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಈ ಪುಸ್ತಕೋತ್ಸವವು ಭವಿಷ್ಯದಲ್ಲಿ ಇನ್ನಷ್ಟು ಶ್ರೀ ಎಂ.ಟಿ. ವಾಸುದೇವನ್ ನಾಯರ್‌ಗಳ ಸೃಷ್ಟಿಗೆ ಮುನ್ನುಡಿ ಬರೆದು, ಸಾಹಿತ್ಯ ಕ್ಷೇತ್ರಕ್ಕೆ ಮತ್ತು ನಾಡಿನ ಬೌದ್ಧಿಕ ಸಂಪತ್ತಿಗೆ ಅಮೂಲ್ಯ ಕೊಡುಗೆ ನೀಡಲಿ ಎಂದು ನಾನು ಹಾರೈಸುತ್ತೇನೆ ಎಂದು ತಮ್ಮ ಮನದಾಳದ ಮಾತುಗಳನ್ನಾಡಿದರು.

ಶಾಸಕರ ಅಭಿವೃದ್ಧಿ ನಿಧಿಯಿಂದ ರೂ.3.00ಲಕ್ಷ ಮೌಲ್ಯದ ಪುಸ್ತಕಗಳನ್ನು ಖರೀದಿಸುವ ಅವಕಾಶವನ್ನು ಎಲ್ಲಾ ಶಾಸಕರಿಗೆ ನೀಡಿರುವ ಪುಸ್ತಕೋತ್ಸವದ ಆಯೋಜಕರಿಗೆ ವಂದನೆಗಳನ್ನು ಸಲ್ಲಿಸುತ್ತಾ, ಈ ಪುಸ್ತಕಗಳನ್ನು ನಮ್ಮ ಕ್ಷೇತ್ರದ ಎಲ್ಲಾ ಶಾಲೆ ಹಾಗೂ ಸಾರ್ವಜನಿಕ ಗ್ರಂಥಾಲಯಗಳಿಗೆ ನೀಡುವ ಮೂಲಕ ಈ ಪುಸ್ತಕೋತ್ಸವ ದೇಶದಾದ್ಯಂತ ಎಲ್ಲರಿಗೂ ಜ್ಞಾನದ ಹೊಸ ಪ್ರಪಂಚದ ಪರಿಚಯ ಮಾಡಿಕೊಡುವಲ್ಲಿ ತನ್ನ ಕೊಡುಗೆ ನೀಡಲಿದೆ" ಎಂದು ಮೆಚ್ಚುಗೆ ಸೂಚಿಸಿದರು.

ನೀಲ್ ಗೈಮನ್ ಹೇಳಿದಂತೆ, "ಪುಸ್ತಕವು ನಿಮ್ಮ ಕೈಯಲ್ಲಿ ನೀವು ಹಿಡಿದಿಟ್ಟುಕೊಳ್ಳುವ ಮಹತ್ತರ ಕನಸು." ಈ ಹಬ್ಬವು ಕೇವಲ ಒಂದು ಆಚರಣೆ ಮಾತ್ರವಲ್ಲ, ಇದು ಒಂದು ಬಲಿಷ್ಠ ಅಭಿಯಾನವಾಗಿದೆ. ಪ್ರಜ್ಞಾವಂತ ಹಾಗೂ ಸೌಹಾರ್ದತೆಯ ನವೀಕೃತ ಸಮಾಜದ ಉದಯಕ್ಕೆ ಇದು ಒಂದು ಜ್ಞಾಪನೆಯ ತುರ್ತುಕರೆಯಾಗಿದೆ.. ನಾವೆಲ್ಲಾ ಒಗ್ಗಟ್ಟಾಗಿ, ಮಾನವೀಯತೆಯನ್ನು ಮೈಗೂಡಿಸಿಕೊಂಡು ವೈವಿಧ್ಯತೆಯಲ್ಲಿ ಏಕತೆಯ ಮೂಲಕ, ಉಜ್ವಲ ಮತ್ತು ಹೆಚ್ಚು ಪ್ರಬುದ್ಧ ಭವಿಷ್ಯಕ್ಕಾಗಿ ಸಜ್ಜಾಗೋಣ. ಮಾಜಿ ರಾಷ್ಟ್ರಪತಿ ಮತ್ತು ಪ್ರಸಿದ್ಧ ವಿಜ್ಞಾನಿ ಡಾ. ಎ.ಪಿ.ಜೆ. ಅವರ "ಕಲಿಕೆಯು ಸೃಜನಶೀಲತೆಯನ್ನು ನೀಡುತ್ತದೆ, ಸೃಜನಶೀಲತೆಯು ಚಿಂತನೆಗೆ ಕಾರಣವಾಗುತ್ತದೆ, ಚಿಂತನೆಯು ಜ್ಞಾನವನ್ನು ನೀಡುತ್ತದೆ, ಮತ್ತು ಜ್ಞಾನವು ನಿಮ್ಮನ್ನು ಶ್ರೇಷ್ಠರನ್ನಾಗಿ ಮಾಡುತ್ತದೆ." ಎನ್ನುವ ಉಲ್ಲೇಖದೊಂದಿಗೆ ಅವರು ಕಾರ್ಯಕ್ರಮಕ್ಕೆ ಶುಭ ಕೋರಿದರು.

ಎಲ್ಲಾ ಸಚಿವರು, ಶಾಸಕರು, ಮತ್ತು ಕೇರಳದ ಪ್ರಜೆಗಳನ್ನು ಕರ್ನಾಟಕಕ್ಕೆ ಆಹ್ವಾನಿಸಿ, ತಮ್ಮ ಜ್ಞಾನ ಮತ್ತು ಸಂಸ್ಕೃತಿಯನ್ನು ಹಂಚಿಕೊಳ್ಳಲು ಕರೆ ನೀಡುತ್ತಾ, ಉತ್ತಮ ಮತ್ತು ಉಜ್ವಲ ಭಾರತವನ್ನು ನಿರ್ಮಿಸಲು ಎಲ್ಲರ ಸಹಯೋಗದ ಅಗತ್ಯವಿದೆ ಎಂಬ ಸಂದೇಶ ನೀಡಿದರು.

**ಕೇರಳ ವಿಧಾನಸಭೆ ಪುಸ್ತಕೋತ್ಸವದಲ್ಲಿ ಲೇಖಕರ ಸನ್ಮಾನ**









**ಕೇರಳ ವಿಧಾನ ಸಭಾಧ್ಯಕ್ಷರೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು ಚರ್ಚಿಸುತ್ತಿರುವ ಸಂದರ್ಭ**





## ii. ದಕ್ಷಿಣ ಕನ್ನಡ ಜಿಲ್ಲೆಯ ಜೆಡ್.ಆರ್ (ZONAL REGULATION) ವಿಷಯಗಳ ಸಭೆ

ದಿನಾಂಕ:13.01.2025ರಂದು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರ ಉಪಸ್ಥಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜೆಡ್.ಆರ್(ZONAL REGULATION) ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ನಡೆದ ಸಭೆ. ಈ ಸಭೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಮಂಗಳೂರು ನಗರ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.





### iii. ಪುಸ್ತಕ ಪ್ರಕಾಶಕರುಗಳೊಂದಿಗೆ ಸಭೆ

ಸನ್ಮಾನ್ಯ ಸಭಾಧ್ಯಕ್ಷರ ಸೂಚನೆಯಂತೆ ಮಾರ್ಚ್ 2025ರ ಮಾಹೆಯಲ್ಲಿ ವಿಧಾನಸೌಧದ ಆವರಣದಲ್ಲಿ ಕರ್ನಾಟಕ ವಿಧಾನಸಭೆ ಸಚಿವಾಲಯದ ವತಿಯಿಂದ ಪುಸ್ತಕ ಮೇಳವನ್ನು ಕ್ರಮಬದ್ಧವಾಗಿ ಆಯೋಜಿಸುವ ಕುರಿತು ದಿನಾಂಕ:17.01.2025ರಂದು ವಿವಿಧ ಪುಸ್ತಕ ಪ್ರಕಾಶಕರು ಹಾಗೂ ಇತರೆ ಪ್ರತಿನಿಧಿಗಳೊಂದಿಗೆ ವಿಧಾನಸಭೆ ಕಾರ್ಯದರ್ಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ.



## iv. ಮಾನ್ಯ ಸಭಾಪತಿಗಳು ಆಸ್ಪತ್ರೆಯಲ್ಲಿ ಮಹಿಳಾ ಮತ್ತು ಮಕ್ಕಳ ಸಚಿವರ ಭೇಟಿ


ಕಾರು ಅಪಘಾತದಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾನ್ಯ ಮಹಿಳಾ ಮತ್ತು ಮಕ್ಕಳ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್‌ರವರನ್ನು ದಿನಾಂಕ:21.01.2025ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.





## v. ಬೆಳಗಾವಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪುತ್ಥಳಿ ಅನಾವರಣ ಸಮಾರಂಭ

ದಿನಾಂಕ:21.01.2025ರಂದು ಮಹಾತ್ಮ ಗಾಂಧೀಜಿಯವರು 1924ನೇ ಸಾಲಿನ ಸ್ವಾತಂತ್ರ್ಯ ಸಂಗ್ರಾಮದ ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆ ವಹಿಸಿರುವ ಶತಮಾನೋತ್ಸವದ ಅಂಗವಾಗಿ ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾಡಳಿತ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಲೋಕಸಭೆಯ ವಿರೋಧಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ್ ಖರ್ಗೆರವರು, ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯರವರು, ವಿಧಾನಪರಿಷತ್ತಿನ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು, ಸನ್ಮಾನ್ಯ ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್, ಮಾನ್ಯ ಕಾನೂನು ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು, ಲೋಕಸಭಾ ಸದಸ್ಯೆಯಾಗಿರುವ ಶ್ರೀಮತಿ ಪ್ರಿಯಾಂಕಾ ಗಾಂಧಿ ಹಾಗೂ ಇತರೆ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.














ದಿನಾಂಕ:21.01.2025ರಂದು 1924ರಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಸ್ಥಳದಲ್ಲಿಯೇ ನೂರು ವರ್ಷದ ಬಳಿಕ ಪಕ್ಷದ ಕಾರ್ಯಕಾರಿಣಿ ಸಭೆ ನಡೆಸಿ, ಬೆಳಗಾವಿಯ ಸುವರ್ಣಸೌಧದ ಉತ್ತರ ಪ್ರವೇಶ ದ್ವಾರದಲ್ಲಿ 25 ಅಡಿ ಗಾಂಧೀಜಿ ಕಂಚಿನ ಪ್ರತಿಮೆಯನ್ನು ಚರಕ ತಿರುಗಿಸುವ ಮೂಲಕ ಎಐಸಿಸಿ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಖರ್ಗೆ ಲೋಕಾರ್ಪಣೆಗೊಳಿಸಿದರು. ಪ್ರತಿಮೆ ಉದ್ಘಾಟನೆ ಆಗುತ್ತಿದ್ದಂತೆ ಸೌಧದ ಮುಂಭಾಗದಲ್ಲಿ ಬಣ್ಣ ಬಣ್ಣದ ಸಿಡಿಮದ್ದುಗಳನ್ನು ಸಿಡಿಸಿ ಸಂಭ್ರಮಿಸಲಾಯಿತು. ಇದೇ ವೇಳೆ ಗದಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಲಾಂಛನ ಬಿಡುಗಡೆಗೊಳಿಸಿದರು.



ಈ ಸಮಾರಂಭಕ್ಕೆ ಕಾಂಗ್ರೆಸ್ ನಾಯಕಿ ಹಾಗೂ ಸಂಸದರಾದ ಪ್ರಿಯಾಂಕಾ ಗಾಂಧಿ, ಎಐಸಿಸಿ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಖರ್ಗೆ, ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ಹಾಗೂ ಸಚಿವರುಗಳು, ಶಾಸಕರು, ಕಾರ್ಯಕರ್ತರು ಅಭೂತಪೂರ್ವ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.



## vi. ಪ್ರಯಾಗ್‌ರಾಜ್ ಕುಂಭಮೇಳದಲ್ಲಿ ಮಾನ್ಯ ಸಭಾಧ್ಯಕ್ಷರು

ಉತ್ತರಪ್ರದೇಶ ವಿಧಾನ ಸಭಾಧ್ಯಕ್ಷರಾದ ಶ್ರೀ ಸತೀಶ್ ಮಹಾನಾ ಇವರ ಆಹ್ವಾನದ ಮೇರೆಗೆ ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ 22 ಮತ್ತು 23ನೇ ಜನವರಿ 2025ರ ದಿನಗಳಂದು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಭಾಗವಹಿಸಿದ ಸಂದರ್ಭ. ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಯವರಾದ ಶ್ರಿ ಮಹೇಶ್ ಕರ್ಜಗಿ ಹಾಗೂ ಇತರರು ಸನ್ಮಾನ್ಯ ಸಭಾಧ್ಯಕ್ಷರೊಂದಿಗೆ ಇದ್ದರು.







## vii. ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳ ಆಯೋಜಿಸುವ ಬಗ್ಗೆ ಚರ್ಚೆ

ದಿನಾಂಕ:28ನೇ ಫೆಬ್ರವರಿ, 01, 02 ಮತ್ತು 03ನೇ ಮಾರ್ಚ್ 2025ರ ವಿಧಾನಸೌಧದ ಆವರಣದಲ್ಲಿ ಪುಸ್ತಕ/ಸಾಹಿತ್ಯ ಮೇಳವನ್ನು ಆಯೋಜಿಸುವ ಕುರಿತು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:24.01.2025ರಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ, ವಿಧಾನಸಭೆ ಕಾರ್ಯದರ್ಶಿ, ಸಂಬಂಧಪಟ್ಟ ಇತರೆ ಅಧಿಕಾರಿಗಳು, ಪುಸ್ತಕಗಳ ಪ್ರಕಾಶಕರು ಹಾಗೂ ವಿತರಕರೊಂದಿಗೆ ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ ವಿಧಾನಸಭೆಯ ಸನ್ಮಾನ್ಯ ಉಪ ಸಭಾಧ್ಯಕ್ಷರು ಉಪಸ್ಥಿತರಿದ್ದರು.




## viii. ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಅನಾವರಣ

ದಿನಾಂಕ:27.01.2025ರಂದು ವಿಧಾನಸೌಧದ ಆವರಣದಲ್ಲಿ ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಧ್ಯಕ್ಷರವರು, ಸನ್ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ಹಾಗೂ ಇತರೆ ಗಣ್ಯರು ಭಾಗವಹಿಸಿದರು.





## ix. ತಮಿಳುನಾಡಿನ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಪಾರ್ಲಿಮೆಂಟರಿ ಫೋರಮ್‌ನ ಉದ್ಘಾಟನಾ ಸಮಾರಂಭ

ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:28.01.2025ರಂದು ತಮಿಳುನಾಡಿನ ತಿರುಚುನಾಪಳ್ಳಿಯಲ್ಲಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಪಾರ್ಲಿಮೆಂಟರಿ ಫೋರಮ್‌ನ ಮೊದಲನೇ ಕೂಟ (First NSPA gathering, Thiruchy) ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಡಿ.ಕೆ.ಶಿವಕುಮಾರ್, ಕರ್ನಾಟಕ ರಾಜ್ಯದ ಸನ್ಮಾನ್ಯ ಉಪ ಮುಖ್ಯಮಂತ್ರಿಯವರು, ಡಾ: ಅನಿಲ್ ಜೈನ್, ನ್ಯಾಷನಲ್ ಪ್ರೆಸಿಡೆಂಟ್, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಡಾ॥ ಕೆ.ಕೆ.ಖಂಡೇಲ್‌ವಾಲ್, ಚೀಫ್ ಕಮೀಷನರ್, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಶ್ರೀ ಪಿ.ಜಿ.ಆರ್.ಸಿಂಧ್ಯ ಕರ್ನಾಟಕ ಸ್ಟೇಟ್ ಚೀಫ್ ಕಮೀಷನರ್, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ಇತರರು ಉಪಸ್ಥಿತರಿದ್ದರು.









## x. ಕೆ.ಎ.ಎಲ್.ಎಸ್ ಶಿಕ್ಷಣ ಸಂಸ್ಥೆಯ 17ನೇ ಪದವಿ ಪ್ರದಾನ ಸಮಾರಂಭ

ದಿನಾಂಕ:01.02.2025ರಂದು ಅಂತರರಾಷ್ಟ್ರೀಯ ಮಟ್ಟದ ಅಥ್ಲೇಟ್ ಕನ್ನಡತಿ ಶ್ರೀಮತಿ ಅಶ್ವಿನಿ ನಾಚಪ್ಪರವರ ಕೆ.ಎ.ಎಲ್.ಎಸ್ ಶಿಕ್ಷಣ ಸಂಸ್ಥೆಯ ಆವರಣ, ಗೋಣಿಕೊಪ್ಪಲ್, ಕೊಡಗು ಇಲ್ಲಿಯ 17ನೇ ಪದವಿ ಪ್ರದಾನ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಭಾಗವಹಿಸಿ ಶಾಲೆಯ ವಾತಾವರಣ, ಪಠ್ಯೇತರ ಚಟುವಟಿಕೆಗಳು, ಕ್ರೀಡಾ ಸೌಲಭ್ಯಗಳು ಹಾಗೂ ಕ್ಯಾಂಪಸ್‌ನ ಶಿಸ್ತು ನೋಡಿ ಹರ್ಷ ವ್ಯಕ್ತಪಡಿಸಿದರು.







## xi. ಪುಸ್ತಕ ಮೇಳದ ಪೂರ್ವಭಾವಿ ಸಭೆ

ದಿನಾಂಕ:04.02.2025ರಂದು ವಿಧಾನಸೌಧದ ಆವರಣದಲ್ಲಿ ಸಾಹಿತ್ಯ ಉತ್ಸವ, ಸಾಂಸ್ಕೃತಿಕ ಉತ್ಸವ, ಪುಸ್ತಕ ಮೇಳ, ಆಹಾರ ಮೇಳಗಳನ್ನು ದಿನಾಂಕ:27.02.2025 ರಿಂದ 03.03.2025 ರವರೆಗೆ ವಿಧಾನಸೌಧದ ಆವರಣದಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಿದ ಹಿನ್ನೆಲೆಯಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಹಾಗೂ ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್‌ರವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿತ್ತು.

ವಿಧಾನಸೌಧ ಆವರಣವನ್ನು ಸಾರ್ವಜನಿಕವಾಗಿ ಮುಕ್ತವಾಗಿಟ್ಟು ಸಮಾಜಮುಖಿ ಉತ್ಸವಗಳನ್ನು ಆಚರಿಸುವ ಮೂಲಕ ವಿಧಾನಸೌಧವನ್ನು ಎಲ್ಲಾ ವರ್ಗದ ಜನರಿಗೂ ಹತ್ತಿರವಾಗಿಸುವ ಉದ್ದೇಶದ ಜೊತೆಗೆ ಸಾಹಿತ್ಯ ಕಲೆ, ಸಾಂಸ್ಕೃತಿಕ ವಿಷಯಗಳಿಗೆ ಮಹತ್ವ ನೀಡುವ ಪ್ರಮುಖ ಕಾರ್ಯಗಳನ್ನು ಆಯೋಜಿಸುವ ಮಹತ್ವದ ಕಾರ್ಯಕ್ರಮ ಇದಾಗಿದೆ ಎಂದು ಮಾನ್ಯ ಸಭಾಪತಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಣ ತಜ್ಞರು, ಸಾಹಿತಿಗಳು ಹಾಗೂ ಉಭಯ ಸದನಗಳ ಕಾರ್ಯದರ್ಶಿಗಳಾದ ಶ್ರೀಮತಿ ಕೆ.ಆರ್.ಮಹಾಲಕ್ಷ್ಮೀ ಹಾಗೂ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ ಸೇರಿದಂತೆ ಎರಡು ಸದನಗಳ ಹಿರಿಯ ಅಧಿಕಾರಿಗಳು ಚಿಂತಕರು ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.



## xii. "ನರೇಗಾ ಹಬ್ಬ" –2025

ದಿನಾಂಕ:05.02.2025ರಂದು ಡಾ.ಅಂಬೇಡ್ಕರ್ ಭವನ, ಬೆಂಗಳೂರಿನಲ್ಲಿ ನಡೆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ವತಿಯಿಂದ ಆಯೋಜಿಸಿದ್ದ "ನರೇಗಾ ಹಬ್ಬ–2025"ರ 2023–24ನೇ ಸಾಲಿನ ನರೇಗಾ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಭಾಗವಹಿಸಿದ್ದರು.



## xiii. ಸನ್ಮಾನ್ಯ ಸಭಾಪತಿಯವರ ಮದುವೆ ಸಮಾರಂಭದಲ್ಲಿ ಭಾಗಿ

ದಿನಾಂಕ:08.02.2025ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಶ್ರೀಮತಿ ಜಯಮಾಲಾ ಮಾಜಿ ಶಾಸಕಿ ಇವರ ಸುಪುತ್ರಿಯ ಮದುವೆ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಭಾಗವಹಿಸಿದರು. ಈ ಸಂದರ್ಭದಲ್ಲಿ ಅನೇಕ ಚಲನಚಿತ್ರ ತಾರೆಯರನ್ನು ಭೇಟಿ ಮಾಡಿ ಮಾನ್ಯ ಸಭಾಪತಿಗಳು ಕುಶಲೋಪರಿ ವಿಚಾರಿಸಿದರು.





## xiv. Florian Siekmann ಅವರ ನೇತೃತ್ವದ ನಿಯೋಗವು ರಾಜ್ಯಕ್ಕೆ ಭೇಟಿ

ದಿನಾಂಕ:13.02.2025ರಂದು ಜರ್ಮನಿಯ ಬವೇರಿಯಾ ರಾಜ್ಯದ ಸಂಸತ್ತಿನ “Committee on Municipal Affairs, Internal Security and Sport”ನ ಉಪಾಧ್ಯಕ್ಷರಾದ Florian Siekmann ಅವರ ನೇತೃತ್ವದ ನಿಯೋಗವನ್ನು ಸನ್ಮಾನ್ಯ ಸಭಾಧ್ಯಕ್ಷರು ವಿಧಾನ ಸೌಧದ ಮುಂದೆ ಸ್ವಾಗತಿಸಿದರು.



ಸದರಿ ನಿಯೋಗದೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ವಿಧಾನ ಮಂಡಲದ ಸ್ಥಾಯಿ ಸಮಿತಿಗಳೊಂದಿಗೆ ಸಭೆ ನಡೆಸಿ ಬವೇರಿಯಾ ಸಂಸತ್ತಿನ ಮತ್ತು ಕರ್ನಾಟಕ ವಿಧಾನ ಸಭೆಯ ಸದನದ ಕಾರ್ಯವೈಖರಿ, ನಡವಳಿಗಳು, ನಿಯಮಾವಳಿಗಳ ಕುರಿತು ವಿಚಾರ ವಿನಿಮಯ ನಡೆಸಿದರು.



ಸಭೆಯ ನಂತರ ನಿಯೋಗವು ವಿಧಾನ ಪರಿಷತ್ತಿನ ಸಭಾಂಗಣ, ಸನ್ಮಾನ್ಯ ಸಭಾಧ್ಯಕ್ಷರ ಕಛೇರಿ ಮತ್ತು ವಿಧಾನ ಸಭೆ ಸಭಾಂಗಣಕ್ಕೆ ಭೇಟಿ ನೀಡಿದರು.







## xv. ಬಹರೇನ್ ದೇಶದ ನಿಯೋಗವು ರಾಜ್ಯಕ್ಕೆ ಭೇಟಿ

ದಿನಾಂಕ:13.02.2025ರಂದು ಬಹರೇನ್ ದೇಶದ ಚೇಂಬರ್ಸ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರೀ ಸಮಿತಿಯ ಉಪಾಧ್ಯಕ್ಷರಾದ Mohammed Alkoehji ಅವರ ನೇತೃತ್ವದಲ್ಲಿ 21 ಸದಸ್ಯರುಗಳನ್ನೊಳಗೊಂಡ ನಿಯೋಗವನ್ನು ಸನ್ಮಾನ್ಯ ಸಭಾಧ್ಯಕ್ಷರು ಸ್ವಾಗತಿಸಿ ತದನಂತರ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತಿರುವುದು.





ಬಹರೇನ್ ನಿಯೋಗದೊಂದಿಗೆ ಸಭೆ ನಡೆಸಿದ ನಂತರ ನಿಯೋಗದ ಸದಸ್ಯರುಗಳನ್ನು ಸನ್ಮಾನ್ಯ ಸಭಾಧ್ಯಕ್ಷರು ಸನ್ಮಾನಿಸುತ್ತಿರುವುದು ಹಾಗೂ ಅವರುಗಳು ಸನ್ಮಾನ್ಯ ಸಭಾಧ್ಯಕ್ಷರ ಕಛೇರಿಗೆ ಭೇಟಿ ನೀಡಿದರು.





## xvi. ಗೋವಾದಲ್ಲಿ ರಾಷ್ಟ್ರೀಯ ಸಮ್ಮೇಳನ

ಸನ್ಮಾನ್ಯ ಸಭಾಧ್ಯಕ್ಷರು, ದಿನಾಂಕ:14.02.2025ರಂದು ಗೋವಾದ ಕೊಲ್ಮಾರ್ ಬೀಚ್‌ನಲ್ಲಿ ನಡೆದ ಭಾರತದ ಪತ್ರಕರ್ತರ ಸಂಘ ಮತ್ತು ಕರ್ನಾಟಕ ಪತ್ರಕರ್ತರ ಸಂಘ ಹಾಗೂ ಗೋವಾ ಪತ್ರಕರ್ತರ ಸಂಘಗಳು ಸೇರಿದಂತೆ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದರು.



"ಸಂಪೂರ್ಣವಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡ ಕ್ಷೇತ್ರ ಯಾವುದಾದರು ಇದ್ದಲ್ಲಿ ಅದು ಪತ್ರಿಕಾರಂಗ ಮತ್ತು ರಾಜಕಾರಣ"– ಯು.ಟಿ.ಖಾದರ್ ಫರೀದ್, ಸಭಾಧ್ಯಕ್ಷರು









**ಸಮ್ಮೇಳನದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಮಾಡಿದ ಭಾಷಣ:–**

Pujya Allamaprabhu Mahaswamiji, Pujya Gurmahant Mahaswamiji, Pujya Mahantprabhu Mahaswamiji, Hon’ble CM of Goa Sri. Pramad Sawantji, Hon’ble Ministers, Hon’ble MPs & Hon’ble Legislators present here from both Goa & Karnataka , Indian Journalists Union (IJU) President, Sri. Pandit, Dignitaries on the Dias and Off the Dias, Members of the Media & Media Organisations from all over India, Ladies and Gentlemen.

I, deem it a great privilege to be part of this National Conference of the IJU being co-hosted by Goa & Karnataka Patrakartara Sangh & Goa Union of Journalists in this most popular tourist destination of the country which is GOA.

At the outset congratulate and also thank all those individuals, organisations & Govt functionaries for organising this National Conference of the Media. In view at present we have Three Maha Kumbhas going on in this country, namely:-

a) The Religious Maha Kumbh on Land at Prayagraj

b) The Maha Kumbh of Aero Show in Air at Bengaluru

c) This Media Maha Kumbh in the Lap of the Scenic Beauty of the Nature at Goa

As you all are very well aware that in furtherance of the Three Organs of the Govt namely - “The Legislature, Executive & Judiciary”, “PRESS/MEDIA is popularly known as the Fourth Organ or the Fourth Estate”. Media in general is also popularly known as “The Mirror of Public Opinion”. The subject matter of this conference being “ Print & Digital Media”, I am of the personal view that new entrants who are entering the Information & Media Landscape have to first understand the difference between the Print Media and Digital Media and their Impact on the society as regards consumption of information/ misinformation/ disinformation. Today the conventional culture of “Reading Newspaper while sipping Coffee/ Tea in the morning everyday” has faded into a minority sect of newsreaders. Though Print Media has a long history of being the primary source of information for centuries, today social media/digital media has over taken the print media by leaps and bounds in the media landscape. Further with the advent of Artificial Intelligence in the media arena has been both constructive & destructive and also confusing in shaping the future of information consumption by the human society. As technology advances, digital media offers more higher level of interactivity and engagement in comparison with the print media.

My suggestion to members and participants of both Print and Digital Media at this National Conference to do a Critical Analysis of the performance of various forms of media platforms. Participants and Media Houses should question themselves as to

whether they are able to fulfil the aspirations of the consumers of information by recognising the strength of both Print and Digital Media for a more comprehensive and informed consumption of information by the public.

Further in this Media Maha Kumbh you all have to examine and combat the following issues/challenges in both Print & Digital Media Landscape:

1. Overloading of information on digital media
2. Decrease in Attention Span on digital media
3. Spread of Fake information /misinformation / disinformation
4. Media Overreach & Media Trial
5. Manipulation of digital information
6. Inaccuracy/ Credibility/ Trustworthiness of Information
7. Whether Print Media can Co-exist and Compliment Digital Media?
8. Endure of Print Media in the Digital Revolution/Information saturated world.
9. With Democratisation of Information whether Media has the resilience to compete

   audience attention and sustain/improve attention of span consumers of information?

I conclude with hope that this Media Maha Kumbh will bear testimony to Constructive Vichaar Dhara Sangam coupled with VIMARSH AND MANTHAN thus resulting in a more Refined Information Landscape filled with Credibility, Reliability and Trustworthiness thereby effectively combating manipulation of information leading to misinformation & disinformation online.

**JAI HIND**

JAI KARNATAKA.

## xvii. ದೆಹಲಿಯಲ್ಲಿ ನಡೆದ ಕರ್ನಾಟಕ ನಾಟಕೋತ್ಸವ

ದಿನಾಂಕ:15.02.2025ರಂದು ಕನ್ನಡ ಸಂಘದ ವತಿಯಿಂದ ಚಾಣುಕ್ಯ ಪುರಿ, ದೆಹಲಿಯಲ್ಲಿ ನಡೆದ ಕರ್ನಾಟಕ ನಾಟಕೋತ್ಸವ ಸಮಾರಂಭದಲ್ಲಿ ದೀಪ ಬೆಳಗುವ ಮೂಲಕ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಉದ್ಘಾಟಿಸಿದರು.





## xviii. ಸನ್ಮಾನ್ಯ ಸಭಾಪತಿಗಳು– ಗದಗ ನಗರದ ಮಾಳಸ ಜ್ಯೂವೆಲರಿನ ಮಾಲೀಕರಾದ ಸುನಿಲ್‌ಕುಮಾರ್‌ರವರ ಮನೆಗೆ ಭೇಟಿ

ಗೌರವಾನ್ವಿತ ಸಭಾಪತಿಗಳಾದ ಬಸವರಾಜ್ ಎಸ್. ಹೊರಟ್ಟಿ ದಂಪತಿಗಳು ಗದಗ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಸರ್ಕಾರಿ ಪ್ರೌಢಶಾಲೆ ಸಿದ್ದಲಿಂಗ ನಗರ ಹಾಗೂ ಮಾಳಸ ಜ್ಯೂವೆಲರಿನ ಮಾಲೀಕರಾದ ಸುನಿಲ್‌ಕುಮಾರ್ ಮನೆಯಲ್ಲಿ ನಡೆದ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸ್ಮರಣೀಯ ಕ್ಷಣಗಳು.



## xix. ಸನ್ಮಾನ್ಯ ಸಭಾಪತಿಗಳು ಗದಗಿನ ಸರ್ಕಾರಿ ಪ್ರೌಢಶಾಲೆ ವೀಕ್ಷಣೆ

ದಿನಾಂಕ:22.02.2025ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಗದಗದಲ್ಲಿ ತಾವು ದತ್ತು ಪಡೆದ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಆರಂಭಗೊಂಡ ವಿವಿಧ ಕಾಮಗಾರಿಗಳನ್ನು ವೀಕ್ಷಣೆ ಮಾಡಿದ ನಂತರ ಸಿಬ್ಬಂದಿಯವರು ನೀಡಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಅವರು ಇತ್ತೀಚೆಗೆ ಸರ್ಕಾರಿ ಶಾಲೆಗಳು ಮಕ್ಕಳ ಸಂಖ್ಯೆಯ ಕೊರತೆಯಿಂದ ಮುಚ್ಚುವ ಸ್ಥಿತಿಯನ್ನು ತಲುಪಿದೆ. ಆದರೆ ಅದಕ್ಕೆ ಅಪವಾದವೆನ್ನುವಂತೆ ನಾನು ದತ್ತು ಪಡೆದ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ 450ಕ್ಕೂ ಹೆಚ್ಚು ಮಕ್ಕಳು ಅಧ್ಯಯನ ಮಾಡುತ್ತಿರುವ ಸಂಗತಿ ಖುಷಿಯಾಗಿದೆ. ನಮ್ಮ ಶ್ರಮ ಸಾರ್ಥಕವಾಗಿದೆ ಎಂದು ತಿಳಿಸಿದರು.








## xx. ಸನ್ಮಾನ್ಯ ಸಭಾಧ್ಯಕ್ಷರವರಿಂದ – ಪತ್ರಿಕಾಗೋಷ್ಠಿ

ಸನ್ಮಾನ್ಯ ಸಭಾಧ್ಯಕ್ಷರು, ದಿನಾಂಕ:24.02.2025ರಂದು ಕರ್ನಾಟಕ ವಿಧಾನಸಭೆ ವತಿಯಿಂದ ದಿನಾಂಕ:27.02.2025 ರಿಂದ 03.03.2025 ರವರೆಗೆ ವಿಧಾನಸೌಧದ ಆವರಣದಲ್ಲಿ ನಡೆಯಲಿರುವ ಪುಸ್ತಕ ಮೇಳ–2025ನ್ನು ಆಯೋಜಿಸುತ್ತಿರುವ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದ ಸಂದರ್ಭ ಹಾಗೂ ಈ ಸಂದರ್ಭದಲ್ಲಿ ದಿನಾಂಕ:03.03.2025 ರಿಂದ 21.03.2025ರವರೆಗೆ ನಡೆಯಲಿರುವ ವಿಧಾನಸಭೆಯ ಅಧಿವೇಶನದ ಬಗ್ಗೆ ಸಹ ಮಾಹಿತಿಯನ್ನು ನೀಡಿದರು.





## xxi. ಪುಸ್ತಕಮೇಳ ಕಾರ್ಯಕ್ರಮದ ಪೂರ್ವ ಸಿದ್ಧತೆ ವೀಕ್ಷಣೆ

ದಿನಾಂಕ:26.02.2025ರಂದು ಬೆಂಗಳೂರಿನ ವಿಧಾನಸೌಧ ಆವರಣದಲ್ಲಿ ದಿನಾಂಕ:27.02.2025 ರಿಂದ 03.03.2025ರವರೆಗೆ ನಡೆದ ಪುಸ್ತಕಮೇಳ ಕಾರ್ಯಕ್ರಮದ ಪೂರ್ವ ಸಿದ್ಧತೆಯನ್ನು ಗೌರವಾನ್ವಿತ ಸಭಾಪತಿಗಳಾದ ಮಾನ್ಯ ಬಸವರಾಜ್ ಎಸ್.ಹೊರಟ್ಟಿ ಅವರು ಹಾಗೂ ವಿಧಾನಸಭೆಯ ಅಧ್ಯಕ್ಷರಾದ ಗೌರವಾನ್ವಿತ ಯು.ಟಿ.ಖಾದರ್‌ರವರು ವೀಕ್ಷಿಸಿ ಆಯೋಜಕರಿಗೆ ಕೆಲವು ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಯವರಾದ ಎಂ.ಕೆ.ವಿಶಾಲಾಕ್ಷಿ ಸೇರಿದಂತೆ

ವಿಧಾನಪರಿಷತ್ತಿನ ಹಾಗೂ ವಿಧಾನಸಭೆಯ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.





## xxii. ಅಧಿವೇಶನ ಹಾಗೂ ಪುಸ್ತಕ ಮೇಳಕ್ಕೆ ಸನ್ಮಾನ್ಯ ರಾಜ್ಯಪಾಲರ ಆಹ್ವಾನ

ದಿನಾಂಕ:28.02.2025ರಂದು ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಸನ್ಮಾನ್ಯ ಸಭಾಪತಿಯವರು ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರನ್ನು ರಾಜಭವನದಲ್ಲಿ ಭೇಟಿ ಮಾಡಿ ದಿನಾಂಕ:03.03.2025ರಂದು ಬೆಳಗ್ಗೆ 11.00 ಗಂಟೆಗೆ ವಿಧಾನಸಭೆ ಸಭಾಂಗಣದಲ್ಲಿ ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಲಿರುವ ಭಾಷಣದ ಕುರಿತು ಸನ್ಮಾನ್ಯ ರಾಜ್ಯಪಾಲರವರನ್ನು





ಆಹ್ವಾನಿಸುತ್ತಿರುವ ಸಂದರ್ಭ. ಈ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಸಭಾಪತಿಯವರು ಸನ್ಮಾನ್ಯ ರಾಜ್ಯಪಾಲರನ್ನು ವಿಧಾನಸೌಧದ ಆವರಣದಲ್ಲಿ ನಡೆಯುತ್ತಿರುವ ಪುಸ್ತಕ ಮೇಳಕ್ಕೆ ಭೇಟಿ ನೀಡಲು ಆಹ್ವಾನಿಸಿದರು.



## xxiii. ಕರ್ನಾಟಕ ವಿಧಾನಸಭೆ ಪುಸ್ತಕ ಮೇಳ–2025

ದಿನಾಂಕ:27.02.2025ರಂದು ಮೊದಲ ಬಾರಿಗೆ ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳವೊಂದನ್ನು ಆಯೋಜಿಸಲಾಗಿದ್ದು, ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯರವರು ಉದ್ಘಾಟಿಸಿದರು. ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಸರ್ಕಾರಿ ಮುಖ್ಯ ಸಚೇತಕರು ಆದ ಶ್ರೀ ಸಲೀಂ ಅಹಮದ್ ಹಾಗೂ ಹಲವು ಶಾಸಕರು ಭಾಗವಹಿಸಿ ಪುಸ್ತಕಗಳನ್ನು ವೀಕ್ಷಿಸಿದರು. ಲೇಖಕರನ್ನು ತತ್ವಸತ್ವದ ಸಂಗಮ ಅಂತ ಉಲ್ಲೇಖಿಸಲಾಗಿದ್ದು, 5 ದಿನಗಳು ನಡೆದ ಪುಸ್ತಕ ಮೇಳದಲ್ಲಿ ಕವಿಗೋಷ್ಠಿ, ಸಂವಾದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ಸನ್ಮಾನ್ಯ ಸಭಾಧ್ಯಕ್ಷರ ಅಪೇಕ್ಷೆಯಂತೆ ಪ್ರಪ್ರಥಮ ಬಾರಿಗೆ ವಿಧಾನಸೌಧ ಆವರಣದಲ್ಲಿ ಕರ್ನಾಟಕ ವಿಧಾನಸಭೆ ವತಿಯಿಂದ ದಿನಾಂಕ:27.02.2025 ರಿಂದ 03.03.2025 ರವರೆಗೆ ಆಯೋಜಿಸಲಾಗಿರುವ

**"ಕರ್ನಾಟಕ ವಿಧಾನಸಭೆ ಪುಸ್ತಕ ಮೇಳ–2025"**ರ ಉದ್ಘಾಟನಾ ಸಮಾರಂಭವು ದಿನಾಂಕ:27.02.2025ರ ಸಂಜೆ 5.00 ಗಂಟೆಗೆ ವಿಧಾನಸೌಧದ ಆವರಣದಲ್ಲಿ ನೆರವೇರಿದ್ದು, ಈ ಸಮಾರಂಭದಲ್ಲಿ ಕರ್ನಾಟಕ ವಿಧಾನಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಫರೀದ್‌ರವರು ಹಾಗೂ ಕರ್ನಾಟಕ ವಿಧಾನಪರಿಷತ್ತಿನ ಸನ್ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿರವರು ಅಧ್ಯಕ್ಷತೆ ವಹಿಸಿದ್ದು, ಸನ್ಮಾನ್ಯ ಮುಖ್ಯಮಂತ್ರಿಯವರು ಪುಸ್ತಕ ಮೇಳವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸನ್ಮಾನ್ಯ ಉಪಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ನೆರವೇರಿಸಿದರು, ಈ ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಸಾಹಿತಿಗಳು ಹಾಗೂ ಜ್ಞಾನಪೀಠ ಪುರಸ್ಕೃತರಾದ ಡಾ॥ಚಂದ್ರಶೇಖರ್ ಕಂಬಾರ ಹಾಗೂ ಗೋವಾ ರಾಜ್ಯದ ಸಾಹಿತಿಗಳು ಹಾಗೂ ಜ್ಞಾನಪೀಠ ಪುರಸ್ಕೃತರಾದ ಶ್ರೀ ದಾಮೋದರ್ ಮೌಜೋರವರು ಮುಖ್ಯ ಅತಿಥಿಗಳಾಗಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಶ್ರೀ ಎಸ್.ಮಧುಬಂಗಾರಪ್ಪ, ಸ್ಥಳೀಯ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಿಜ್ವನ್ ಹರ್ಷದ್ ಅವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ನವದೆಹಲಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪ್ರತಿನಿಧಿ ಹಾಗೂ ಮಾನ್ಯ ಶಾಸಕರಾದ ಶ್ರೀ ಟಿ.ಬಿ.ಜಯಚಂದ್ರ, ಸನ್ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಶ್ರೀ ಗೋವಿಂದರಾಜುರವರು ಉಪಸ್ಥಿತರಿದ್ದರು.








ಶ್ರೀ ಸಿದ್ದರಾಮಯ್ಯ
ಶ್ರೀ ಡಿ.ಕೆ. ಶಿವಕುಮಾರ್
ಕರ್ನಾಟಕ ವಿಧಾನಸಭೆ
ಪ್ರಪ್ರಥಮ ಬಾರಿಗೆ! ವಿಧಾನಸೌಧದಲ್ಲಿ



## ದೃಶ್ಯ ಮತ್ತು ಮುದ್ರಣ ಮಾಧ್ಯಮಗಳ ಜವಾಬ್ದಾರಿ

ದಿನಾಂಕ:28.02.2025ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ವಿಧಾನಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ದೃಶ್ಯ ಮತ್ತು ಮುದ್ರಣ ಮಾಧ್ಯಮಗಳ ಜವಾಬ್ದಾರಿ"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸಂವಹನ ಮಾಧ್ಯಮಗಳಲ್ಲಿ ಛಾಪು ಮೂಡಿಸಿರುವ ಗಣ್ಯರುಗಳಾದ **ಶ್ರೀ ರವೀಂದ್ರ ಭಟ್ ಹಾಗೂ ಶ್ರೀ ಪ್ರಮೋದ್ ಶಾಸ್ತ್ರಿ** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.




## ಸಮಕಾಲೀನ ಪ್ರಕಾಶನ ಕ್ಷೇತ್ರದ ಸವಾಲುಗಳು

ದಿನಾಂಕ:28.02.2025ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ವಿಧಾನಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಸಮಕಾಲೀನ ಪ್ರಕಾಶನ ಕ್ಷೇತ್ರದ ಸವಾಲುಗಳು"** ವೇದಿಕೆ ಸಂಖ್ಯೆ–2ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಶ್ರೀ ವಿಶ್ವೇಶ್ವರ ಭಟ್, ಶ್ರೀ ಜಮೀಲ್ ಸಾವಣ್ಣ ಮತ್ತು ಶ್ರೀ ಡಿ.ಎನ್. ಗುರುಪ್ರಸಾದ್** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.





## ನಾಯಕತ್ವ–ಇಂದು ಮತ್ತು ನಾಳೆ

ದಿನಾಂಕ:28.02.2025ರಂದು ಮಧ್ಯಾಹ್ನ 3.00 ಗಂಟೆಗೆ ಕರ್ನಾಟಕ ವಿಧಾನಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ನಾಯಕತ್ವ–ಇಂದು ಮತ್ತು ನಾಳೆ"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಶ್ರೀ ಕ್ಯಾಪ್ಟನ್ ಗೋಪಿನಾಥ್, ಶ್ರೀ ಬಡಗಲಪುರ ನಾಗೇಂದ್ರ ಮತ್ತು ಶ್ರೀ ಚಿದಾನಂದ ಪಟೇಲ್** ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.




## ನೆಲಮೂಲದಿಂದ ಅಂತರಿಕ್ಷದವರೆಗೆ

ದಿನಾಂಕ:28.02.2025ರಂದು ಮಧ್ಯಾಹ್ನ 3.00 ಗಂಟೆಗೆ ಕರ್ನಾಟಕ ವಿಧಾನಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ನೆಲಮೂಲದಿಂದ ಅಂತರಿಕ್ಷದವರೆಗೆ"** ವೇದಿಕೆ







ಸಂಖ್ಯೆ–2ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಶ್ರೀ ಕೆ.ಎನ್.ಗಣೇಶಯ್ಯ, ಶ್ರೀಮತಿ ಹರಿಪ್ರಸಾದ್ ಮತ್ತು ಶ್ರೀ ಕಿರಣ್ ಕುಮಾರ್** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಕವಿ ಗೋಷ್ಠಿ

ದಿನಾಂಕ:28.02.2025ರಂದು ಸಂಜೆ 5.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **ಕವಿಗೋಷ್ಠಿಯನ್ನು ವೇದಿಕೆ ಸಂಖ್ಯೆ–1**ರಲ್ಲಿ ಗಣ್ಯರುಗಳಾದ **ಶ್ರೀ ಎಲ್.ಹನುಮಂತಯ್ಯ, ಶ್ರೀಮತಿ ಬಾ.ಹ.ರಮಾಕುಮಾರಿ, ಶ್ರೀ ನಾಗತಿಹಳ್ಳಿ ಚಂದ್ರಶೇಖರ್, ಶ್ರೀಮತಿ ದೀಪಾ ಹಿರೇಗುತ್ತಿ, ಶ್ರೀಮತಿ ಪ್ರತಿಭಾ ನಂದಕುಮಾರ್, ಶ್ರೀ ಟಿ.ಎಸ್.ಗೊರವರ, ಶ್ರೀ ಪೀರ್ ಬಾಷ, ಶ್ರೀ ಆಲೂರು ದೊಡ್ಡನಿಂಗಪ್ಪ** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.

ದಿನಾಂಕ:28.02.2025ರಂದು ಸಂಜೆ 5.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **ಕವಿಗೋಷ್ಠಿಯನ್ನು ವೇದಿಕೆ ಸಂಖ್ಯೆ–2**ರಲ್ಲಿ ಗಣ್ಯರುಗಳಾದ **ಶ್ರೀಮತಿ ವಸುಂದರಾ ಕದಲೂರು, ಶ್ರೀ ಪ್ರಕಾಶ್ ಮಂಟೇದ್, ಶ್ರೀ ಎಸ್.ಮಂಜುನಾಥ್, ಶ್ರೀ ವಿಲ್ಸನ್ ಕಟೀಲ್, ಶ್ರೀ ಮುದಿಗೆರೆ ರಮೇಶ್ ಕುಮಾರ್, ಶ್ರೀಮತಿ ಮಂಜುಳಾ ಹುಲಿಕುಂಟೆ ಹಾಗೂ ಶ್ರೀ ಶ್ರೀಹರ್ಷ ಸಾಲಿಮಠ**ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಪರಿಸರ ಅಳಿವು–ಉಳಿವು

ದಿನಾಂಕ:01.03.2025 ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಪರಿಸರ ಅಳಿವು–ಉಳಿವು"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಶ್ರೀ ಅ.ನಾ.ಯಲ್ಲಪ್ಪ ರೆಡ್ಡಿ, ಶ್ರೀ ಸುರೇಶ್ ಹೆಬ್ಳೀಕರ್ ಹಾಗೂ ಶ್ರೀ ಶಿವಾನಂದ ಕಳವೆ** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.







## ಸಂವಿಧಾನದ ಹಿರಿಮೆ ಗರಿಮೆ ಹಾಗೂ ಅರಿವು

ದಿನಾಂಕ:01.03.2025ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಸಂವಿಧಾನದ ಹಿರಿಮೆ ಗರಿಮೆ ಹಾಗೂ ಅರಿವು"** ವೇದಿಕೆ ಸಂಖ್ಯೆ–2ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಡಾ॥ ಜಸ್ಟೀಸ್ ಹೆಚ್.ಎನ್.ನಾಗಮೋಹನ್ ದಾಸ್, ಶ್ರೀಮತಿ ಶಶಿಕಲಾ ಗುರುಪುರ್ ಹಾಗೂ ಶ್ರೀ ಕೆ.ಪಿ.ಬಾಲಸುಬ್ರಮಣ್ಯ ಕಂಜರ್ಪಣೆ** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.






## ಕ್ರೀಡೆ ಮತ್ತು ಸಾಹಿತ್ಯ

ದಿನಾಂಕ:01.03.2025ರಂದು ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಕ್ರೀಡೆ ಮತ್ತು ಸಾಹಿತ್ಯ"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ ಶ್ರೀ ಜೋಸೆಫ್ ಹೂವರ್, ಶ್ರೀ ಪೊನ್ನಪ್ಪ, ಶ್ರೀಮತಿ ಮಾಲತಿ ಹೊಳ್ಳ, ಹಾಗೂ ಶ್ರೀ ಚಂದ್ರಮೌಳಿ ಕಣವಿ ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.






## ಕೃತಕ ಬುದ್ದಿಮತ್ತೆ/ಸೈಬರ್ ಸೆಕ್ಯುರಿಟಿ

ದಿನಾಂಕ:01.03.2025ರಂದು ಮಧ್ಯಾಹ್ನ 03.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಕೃತಕ ಬುದ್ದಿಮತ್ತೆ/ಸೈಬರ್ ಸೆಕ್ಯುರಿಟಿ"** ವೇದಿಕೆ ಸಂಖ್ಯೆ–2ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಡಾ॥ ಪ್ರಣವ ಮಹಾಂತಿ, ಡಾ॥ ರಮೇಶ್ ನಿಂಬೆಮರದಳ್ಳಿ, ಹಾಗೂ ಡಾ॥ ಅನಂತಪ್ರಭು ಭಾಗವಹಿಸಿದ್ದರು.** ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.




## ಕನ್ನಡ ಸಾಹಿತ್ಯದಲ್ಲಿ ಸರ್ವ ಸಮಭಾವದ ಚಿಂತನೆಗಳು

ದಿನಾಂಕ:02.03.2025ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಕನ್ನಡ ಸಾಹಿತ್ಯದಲ್ಲಿ ಸರ್ವ ಸಮಭಾವದ ಚಿಂತನೆಗಳು"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ ಶ್ರೀಮತಿ ಭಾನು ಮುಷ್ತಾಕ್, ಡಾ॥ ಮಹೇಶ್ ಜೋಷಿ, ಹಾಗೂ ಡಾ॥ ಡಿ.ಡೊಮಿನಿಕ್ ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.












**ಮಕ್ಕಳ ಸಾಹಿತ್ಯ**

ದಿನಾಂಕ:02.03.2025ರಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಮಕ್ಕಳ ಸಾಹಿತ್ಯ"** ವೇದಿಕೆ ಸಂಖ್ಯೆ–2ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ ಶ್ರೀ ಉದಯ್ ಗಾಂವ್‌ಕರ್, ಪ್ರೋ.ಬಿಳಿಗೆರೆ ಕೃಷ್ಣಮೂರ್ತಿ ಹಾಗೂ ಶ್ರೀಮತಿ ಲಲಿತಾ ಹೊಸಪೇಟೆ ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.










**ಅಂಗಾಂಗ ದಾನದ ಅರಿವು**

ದಿನಾಂಕ:02.03.2025ರಂದು ಮಧ್ಯಾಹ್ನ 1.00 ರಿಂದ 2.30ರವರೆಗೆ ಕರ್ನಾಟಕ ವಿಧಾನಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಅಂಗಾಂಗ ದಾನದ ಅರಿವು"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಡಾ॥ ಮಹಾಂತೇಶ್ ರಾಮಣ್ಣವರ್, ಡಾ॥ ಆಶಿಶ್ ಸೀತಾನಾಡಿ ಮತ್ತು ಡಾ॥ ಸುನೀತಾ ರಾವ್** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.







**ಸಾಹಿತ್ಯ ಮತ್ತು ಚಲನಚಿತ್ರ**

ದಿನಾಂಕ:02.03.2025ರಂದು ಮಧ್ಯಾಹ್ನ 3.00 ಗಂಟೆಯಿಂದ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಸಾಹಿತ್ಯ ಮತ್ತು ಚಲನಚಿತ್ರ"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಪ್ರೊ.ದೊಡ್ಡರಂಗೇಗೌಡ, ಪ್ರೊ..ಎನ್.ಎಸ್. ಶ್ರೀಧರಮೂರ್ತಿ, ಶ್ರೀ ಟಿ.ಎನ್. ಸೀತಾರಾಮ ಹಾಗೂ ಶ್ರೀ ಪಿ.ಶೇಷಾದ್ರಿ** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.











**ಓದಿನ ಸುಖ**

ದಿನಾಂಕ:02.03.2025ರಂದು ಮಧ್ಯಾಹ್ನ 3.00 ಗಂಟೆಯಿಂದ ಕರ್ನಾಟಕ ವಿಧಾನ ಸಭೆಯ ವತಿಯಿಂದ ನಡೆದ ಪುಸ್ತಕ ಮೇಳ 2025ರ ಸಂದರ್ಭದಲ್ಲಿ **"ಓದಿನ ಸುಖ"** ವೇದಿಕೆ ಸಂಖ್ಯೆ–1ರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗಣ್ಯರುಗಳಾದ **ಶ್ರೀ ನರಹಳ್ಳಿ ಬಾಲಸುಬ್ರಮಣ್ಯಂ, ಡಾ॥ ಸಿದ್ಧನಗೌಡ ಪಾಟೀಲ್ ಹಾಗೂ ಶ್ರೀಮತಿ ಹೆಚ್.ಎಲ್. ಪುಷ್ಪ** ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಪುಸ್ತಕ ಮೇಳಕ್ಕೆ ಆಗಮಿಸಿದ ಸಾರ್ವಜನಿಕರು ಪಾಲ್ಗೊಂಡಿದ್ದರು.






## xxiv. "ಯು.ಆರ್. ರಾವ್ ಭವನ" ಉದ್ಘಾಟನಾ ಸಮಾರಂಭ

ದಿನಾಂಕ:28.02.2025ರಂದು ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಆಯೋಜಿಸಿದ್ದ ಕರ್ನಾಟಕ ಸರ್ಕಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನೂತನವಾಗಿ ನಿರ್ಮಿಸಿರುವ "ಯು.ಆರ್.ರಾವ್ ಭವನ"ವನ್ನು ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಸಭಾಧ್ಯಕ್ಷರಾದ

ಶ್ರೀ ಯು.ಟಿ.ಖಾದರ್ ಹಾಗೂ ಮಾನ್ಯ ಉಪಮುಖ್ಯಮಂತ್ರಿ ಶ್ರೀ ಡಿ.ಕೆ ಶಿವಕುಮಾರ್ ರವರು ಉದ್ಘಾಟನೆ ಮಾಡಿದರು.







## XXV. ಸನ್ಮಾನ್ಯ ಸಭಾಪತಿಯವರಿಗೆ ಆಹ್ವಾನ

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ಸಾಧು ಕೋಕಿಲ ಅವರು ದಿನಾಂಕ:01.03.2025 ರಂದು ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮೇಲೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರ ಕಛೇರಿಗೆ ಆಗಮಿಸಿ ಅವರನ್ನು ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಜೊತೆಯಲ್ಲಿದ್ದರು.



## xxvi. ಅಧಿವೇಶನ ಪೂರ್ವದಲ್ಲಿ ಪ್ರಾಂಗಣ ಪರಿಶೀಲನೆ

ದಿನಾಂಕ:01.03.2025ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರು ದಿನಾಂಕ: 03.03.2025ರಂದು ಕರ್ನಾಟಕ ವಿಧಾನಪರಿಷತ್ತಿನ ನೂರ ಐವತ್ತೈದನೆಯ ಅಧಿವೇಶನ ಪ್ರಾರಂಭವಾಗುವುದರಿಂದ ಮುಂಚಿತವಾಗಿ ಅಧಿವೇಶನದ ಪ್ರಾಂಗಣವನ್ನು ಪರಿಶೀಲಿಸಿ, ಅಧಿವೇಶನವು ಸುಗಮವಾಗಿ ನಡೆಯಲು ಕೈಗೊಂಡ ಕ್ರಮದ ಬಗ್ಗೆ ವಿಧಾನಪರಿಷತ್ತಿನ ಕಾರ್ಯದರ್ಶಿಗಳ ಜೊತೆ ಮಾತನಾಡಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಜೊತೆಯಲ್ಲಿದ್ದರು.





## xxvii. 16ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ


ದಿನಾಂಕ:01.03.2025ರಂದು ವಿಧಾನಸೌಧದ ಗ್ರಾಂಡ್ ಸ್ಟೆಪ್ಸ್‌ನ ಸಂಭ್ರಮದ ಕಾರ್ಯಕ್ರಮದಲ್ಲಿ 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಉದ್ಘಾಟನೆ ಮಾಡಿದರು. ಸಿನಿಮಾ ಹಬ್ಬದ ಉದ್ಘಾಟನೆ ಕಾರ್ಯಕ್ರಮದಲ್ಲಿ ನಾಡಗೀತೆ ಹಾಡುವ ಮೂಲಕ ದೀಪ ಬೆಳಗಿಸಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಮಾನ್ಯ ಉಪಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಚಾಲನೆ ಮಾಡಿ, ಚಲನಚಿತ್ರೋತ್ಸವದ ಕೈಪಿಡಿಯನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಇಂಧನ ಸಚಿವ ಕೆ.ಜೆ.ಜಾರ್ಜ್, ಚಿತ್ರನಟ ಶಿವರಾಜ ಕುಮಾರ್, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಉಮಾಶ್ರೀ ಮತ್ತಿತರರು ಹಾಜರಿದ್ದರು.



## xxviii. ರಾಜ್ಯಪಾಲರ ಸ್ವಾಗತ

ದಿನಾಂಕ:03.03.2025ರಂದು ನೂರ ಐವತ್ತೈದನೆಯ ವಿಧಾನಮಂಡಲದ ಜಂಟಿ ಅಧಿವೇಶನ ಆರಂಭಕ್ಕೂ ಮುನ್ನ ವಿಧಾನಸೌಧದ ಮುಂಭಾಗ ಘನತೆವೆತ್ತ ರಾಜ್ಯಪಾಲ ಶ್ರೀ ಥಾವರಚಂದ್ ಗೆಹ್ಲೋಟ್ ಅವರನ್ನು ವಿಧಾನಸೌಧದ ಮೆಟ್ಟಿಲು ಬಳಿ ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ, ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಹೂಗುಚ್ಛ ನೀಡಿ ಸರ್ಕಾರಿ ಗೌರವದೊಂದಿಗೆ ಸ್ವಾಗತಿಸಿದರು.






**xxix. ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರ ಭಾಷಣ**

ದಿನಾಂಕ:03.03.2025ರಂದು ಆರಂಭವಾದ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲ ಶ್ರೀ ಥಾವರಚಂದ್ ಗೆಹ್ಲೋಟ್ ಅವರು ಕರ್ನಾಟಕದ ಮಾದರಿ ಅಭಿವೃದ್ಧಿ ಎಂದರೆ ಜನಕೇಂದ್ರಿತ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಡಳಿತವಾಗಿದೆ. ಹಸಿರು ಇಂಧನ, ಮಹಿಳಾ ಸಬಲೀಕರಣವೂ ಇದರಲ್ಲಿ ಸೇರಿದೆ.



## XXX. ಪ್ರಜಾಪ್ರಭುತ್ವ ಸಂಸ್ಥೆಗಳ ಅಧಿವೇಶನಗಳು ಸಮಾವೇಶಗೊಂಡ ಮಾಹಿತಿಯನ್ನು ಒಳಗೊಂಡ ಛಾಯಾಚಿತ್ರಗಳ ಅನಾವರಣ

ದಿನಾಂಕ:25ನೇ ಆಗಸ್ಟ್ 1881ರಲ್ಲಿ ಪ್ರಜಾಪ್ರತಿನಿಧಿ ಸಭೆ(ಕೆಳಮನೆ)ಯನ್ನು ಸ್ಥಾಪಿಸಿ, ಸಭೆಯ ರಚನೆ ಮತ್ತು ಪ್ರಕಾರ್ಯಗಳನ್ನು ನಿರೂಪಿಸಿ ಆದೇಶವನ್ನು ಹೊರಡಿಸುವ ಮೂಲಕ ಕರ್ನಾಟಕವು ಪ್ರಜಾಪ್ರಭುತ್ವ ಸಂಸ್ಥೆಯನ್ನು ರಚಿಸಿರುವ ದೇಶದ ಮೊದಲ ರಾಜ್ಯ ಎನಿಸಿಕೊಂಡಿದೆ. ಈ ಪ್ರಜಾಪ್ರಭುತ್ವ ಸಂಸ್ಥೆಗಳ ಅಧಿವೇಶನಗಳು ಸಮಾವೇಶಗೊಂಡ ಮಾಹಿತಿಯನ್ನು ಒಳಗೊಂಡ ಛಾಯಾಚಿತ್ರಗಳನ್ನು ದಿನಾಂಕ: 04.03.2025ರಂದು ಸನ್ಮಾನ್ಯ ಸಭಾಧ್ಯಕ್ಷರ ಉಪಸ್ಥಿತಿಯಲ್ಲಿ ರಾಜ್ಯದ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಅನಾವರಣಗೊಳಿಸಿದರು. ಛಾಯಾಚಿತ್ರಗಳ ವಿವರಗಳು ಈ ಕೆಳಕಂಡಂತಿವೆ.



























## xxxi. ಸನ್ಮಾನ್ಯ ಸಭಾಪತಿಗಳು ಮದುವೆ ಸಮಾರಂಭದಲ್ಲಿ ಭಾಗಿ

ದಿನಾಂಕ:06.03.25ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಶ್ರೀ ಎಸ್. ಟಿ. ಸೋಮಶೇಖರ್ ಮಾಜಿ ಸಚಿವರು ಹಾಗೂ ಹಾಲಿ ಶಾಸಕರು ಇವರ ಮಗನ ಮದುವೆ ಕಾರ್ಯಕ್ರಮ ಹಾಗೂ ಡಾ.ಟಿ.ಹೆಚ್. ವಿಶ್ವನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ ಇವರ ಮಗಳ ಮದುವೆ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಭಾಗವಹಿಸಿ ಮದುಮಕ್ಕಳಿಗೆ ಆಶೀರ್ವದಿಸಿದರು.



## xxxii. ಸದನವನ್ನು ಮುಂದೂಡಿದ ಅವಧಿಯಲ್ಲಿ ಚರ್ಚೆ

ದಿನಾಂಕ:11.03.2025ರಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರ ಕಾಲ ಸಮಯದಲ್ಲಿ ಕಲಾಪದ ಸಂದರ್ಭದಲ್ಲಿ ಉಂಟಾದ ಗೊಂದಲದಿಂದ ಸನ್ಮಾನ್ಯ ಸಭಾಧ್ಯಕ್ಷರು ಸದನವನ್ನು ಸ್ವಲ್ಪ ಕಾಲ ಮುಂದೂಡಿ ಪರಿಸ್ಥಿತಿ ಕುರಿತು ಸನ್ಮಾನ್ಯ ಉಪಮುಖ್ಯಮಂತ್ರಿಯವರು, ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಪಕ್ಷದ ನಾಯಕರೊಂದಿಗೆ ಚರ್ಚಿಸುತ್ತಿರುವ ಸಂದರ್ಭ.



## xxxiii. ಸದನದ ಕಾರ್ಯಕಲಾಪಗಳ ಬಗ್ಗೆ ಚರ್ಚೆ

ದಿನಾಂಕ:11.03.2025ರಂದು ಮಧ್ಯಾಹ್ನ ಭೋಜನ ವಿರಾಮದ ನಂತರ ಸದನ ಸಮಾವೇಶಗೊಂಡ ನಂತರದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿರುವುದರಿಂದ, ಸದನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಸನ್ಮಾನ್ಯ ಸಭಾಧ್ಯಕ್ಷರು ಸದನದ ನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರು, ವಿರೋಧ ಪಕ್ಷದ ನಾಯಕರು, ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಇತರರೊಂದಿಗೆ ಚರ್ಚಿಸುತ್ತಿರುವ ಸಂದರ್ಭ.





## xxxiv. ಕೆ.ಹೆಚ್. ಪಾಟೀಲ ಜನ್ಮಶತಮಾನೋತ್ಸವ

ದಿನಾಂಕ:13.03.2025ರಂದು ವಿಧಾನಸೌಧದ ಬ್ಯಾಕ್ವೆಂಟ್ ಹಾಲ್‌ನಲ್ಲಿ ಸಹಕಾರ ಭೀಷ್ಮ ಕೆ. ಹೆಚ್. ಪಾಟೀಲ ಜನ್ಮಶತಮಾನೋತ್ಸವ ಆಚರಣೆ ಮತ್ತು ಕೆ.ಹೆಚ್. ಪಾಟೀಲ ಸ್ಕೂಲ್ ಆಫ್ ಲಾ ಉದ್ಘಾಟನೆಯನ್ನು ಸುಪ್ರೀಂಕೋರ್ಟ್ ವಿಶ್ರಾಂತ ಮುಖ್ಯ ನ್ಯಾ. ಎಂ.ಎನ್. ವೆಂಕಟಾಚಲಯ್ಯ ನೆರವೇರಿಸಿದರು. ಮಾನ್ಯ ವಿಧಾನಪರಿಷತ್ತು ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಈ ಸಂದರ್ಭದಲ್ಲಿ ನನ್ನೆಲ್ಲ ಬೆಳವಣಿಗೆಗೆ ಸ್ಫೂರ್ತಿ ಹಾಗೂ ಪ್ರೇರಣೆ, ಕೆ.ಹೆಚ್.ಪಾಟೀಲರು ಎಂದು ಮನತುಂಬಿ ತಮ್ಮ ಅಂತರಾಳದ ಮಾತುಗಳನ್ನು ಹಂಚಿಕೊಂಡರು.





ನಾಡುಕಂಡ ಜನಪರ ನಾಯಕ ರೈತರ ಬದುಕು ಹಸನ ಮಾಡುವ ಸಲುವಾಗಿ ತಮ್ಮ ಬದುಕಿನ ಬಹುಪಾಲು ದಿನಗಳನ್ನು ಕಳೆದು "**ನಾನು ಬಡ ರೈತನ ಜೀತದಾಳು**" ಎಂದು ಸದಾ ಹೇಳುತ್ತಿದ್ದ ಕೆ.ಎಚ್.ಪಾಟೀಲರು ಸಹಕಾರ, ಕೃಷಿ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ ಹಾಗೂ ಅಧ್ಯಾತ್ಮದಲ್ಲಿ ಸಾಕಷ್ಟು ಒಲವನ್ನು ಇಟ್ಟುಕೊಂಡು ಆ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ತಮ್ಮದೇ ಆದ ಛಾಪನ್ನು ಆಕ್ಷೇತ್ರಗಳಲ್ಲಿ ಹಾಗೂ ನಾಡಿನಲ್ಲಿ ಮೂಡಿಸಿದವರು. ಇಂತಹ ನಾಡುಕಂಡ ಎಂದೂ ಮರೆಯದ ಸಾರ್ಥಕ ಸೇವೆ ಮಾಡಿದ ಅಪರೂಪದ ಜನಪರ ನಾಯಕನ ಜನ್ಮಶತಮಾನೋತ್ಸವಕ್ಕೆ ನಾಡಿನ ಸಮಸ್ತ ಶಿಕ್ಷಕ ಸಮೂಹ ವಿಶೇಷ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## xxxv. ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ಪತ್ರಗಳ ಪ್ರದಾನ ಸಮಾರಂಭ

ಸನ್ಮಾನ್ಯ ಸಭಾಧ್ಯಕ್ಷರು, ದಿನಾಂಕ:17.03.2025ರಂದು ಸಂಜೆ 4.00 ಗಂಟೆಗೆ ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕದ ಚೀಫ್ ಕಮಿಷನರ್ ರವರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರ ಆಹ್ವಾನದ ಮೇರೆಗೆ ರಾಜ ಭವನದ ಗಾಜಿನ ಮನೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು 2023–24ನೇ ಸಾಲಿನ ಚತುರ್ಥಚರಣ ಮತ್ತು ಹೀರಕ್ ಫಂಕ್ ಪ್ರಶಸ್ತಿ ಪತ್ರಗಳನ್ನು ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳಿಗೆ ಹಾಗೂ ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ಪತ್ರಗಳ ಪ್ರದಾನ ಸಮಾರಂಭದಲ್ಲಿ ಸನ್ಮಾನ್ಯ ರಾಜ್ಯಪಾಲರೊಂದಿಗೆ ಭಾಗವಹಿಸಿದರು.













## xxxvi. ಸನ್ಮಾನ್ಯ ಸಭಾಧ್ಯಕ್ಷರು – ಪತ್ರಿಕಾಗೋಷ್ಠಿ

ದಿನಾಂಕ:21.03.2025ರಂದು ವಿಧಾನಸಭೆ ಅಧಿವೇಶನ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟ ಹಿನ್ನೆಲೆಯಲ್ಲಿ ದಿನಾಂಕ:03.03.2025 ರಿಂದ 21.03.2025 ರವರೆಗೆ ನಡೆದ ಅಧಿವೇಶನ ಕುರಿತು ಮಾಹಿತಿಯನ್ನು ನೀಡಲು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:22.03.2025ರಂದು ಪತ್ರಿಕಾಗೋಷ್ಠಿ ನಡೆಸಿದರು.



## xxxvii.ಸನ್ಮಾನ್ಯ ಸಭಾಧ್ಯಕ್ಷರವರಿಂದ ಅಭಿನಂದನಾ ಕೂಟ

ದಿನಾಂಕ:27.02.2025 ರಿಂದ 03.03.2025ರವರೆಗೆ ವಿಧಾನಸೌಧದ ಆವರಣದಲ್ಲಿ ಕರ್ನಾಟಕ ವಿಧಾನಸಭೆ ವತಿಯಿಂದ ನಡೆದ ಪುಸ್ತಕ ಮೇಳ 2025ರ ಯಶಸ್ವಿಯ ಹಿನ್ನೆಲೆಯಲ್ಲಿ, ಈ ಯಶಸ್ಸಿಗೆ ಕಾರಣಕರ್ತರಾದ ಕರ್ನಾಟಕ ಸಾಹಿತ್ಯಪರಿಷತ್ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಇತರೆ ಗಣ್ಯರುಗಳನ್ನೊಳಗೊಂಡ ಸಮಿತಿಯ ಸದಸ್ಯರನ್ನು, ಪುಸ್ತಕದ ಪ್ರಕಾಶಕರು ಹಾಗೂ

ವಿತರಕರು, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು, ಸ್ಕೌಟ್ಸ್ ಅಂಡ್ ಗೈಡ್ಸ್‌ನ ಮುಖ್ಯಸ್ಥರು,

ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:28.03.2025ರಂದು ಬೆಳಗಿನ ಉಪಹಾರದೊಂದಿಗೆ ಅಭಿನಂದನಾ ಕೂಟವನ್ನು ಹಮ್ಮಿಕೊಂಡಿದ್ದರು.







ಸದರಿ ಸಂದರ್ಭದಲ್ಲಿ ಪ್ರಕಾಶಕರು ಮತ್ತು ಪ್ರಾಧಿಕಾರದ ಅಧ್ಯಕ್ಷರು ಸೇರಿ ಪುಸ್ತಕ ಮೇಳವನ್ನು ಯಶಸ್ವಿಯಾಗಿ ಆಯೋಜಿಸಿದ ಕುರಿತು ಸನ್ಮಾನ್ಯ ಸಭಾಧ್ಯಕ್ಷರನ್ನು ಅಭಿನಂದಿಸಿದರು.



## xxxviii. ಸನ್ಮಾನ್ಯ ಸಭಾಪತಿಗಳು – ಕುಕ್ಕೆ ಸುಬ್ರಹ್ಮಣ್ಯಕ್ಕೆ ಭೇಟಿ

ದಿನಾಂಕ:28.03.25ರಂದು ನಾಡಿನ ಪ್ರಸಿದ್ಧ ಹಾಗೂ ಜಾಗೃತ ದೇವಾಲಯವಾದ ಕುಕ್ಕೆ ಸುಬ್ರಹ್ಮಣ್ಯ ದೇಗುಲಕ್ಕೆ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಕುಟುಂಬಸ್ಥರು ಭೇಟಿ ನೀಡಿ ಸ್ವಾಮಿಯ ದರ್ಶನ ಪಡೆದರು. ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಎಲ್ಲ ಸರ್ಪಗಳ ಅಧಿಪತಿಯಾದ ಕಾರ್ತಿಕೇಯನನ್ನು ಇಲ್ಲಿ ಸುಬ್ರಹ್ಮಣ್ಯಂ ಎಂದು ಪೂಜಿಸಲಾಗುತ್ತದೆ ಮತ್ತು ಈ ದೇವಸ್ಥಾನ ಶಾಂತಿ ನೆಮ್ಮದಿ ನೀಡುವಲ್ಲಿ ಹೆಸರುವಾಸಿಯಾಗಿದೆ.





ದೇಗುಲಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದೇವಸ್ಥಾನದ ಕಾರ್ಯನಿರ್ವಹಣಾ ಅಧಿಕಾರಿ ಅರವಿಂದ್ ಅಯ್ಯಪ್ಪ ಸುತಗುಂಡಿಯವರು ಸಂಪ್ರದಾಯದಂತೆ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಕುಟುಂಬಸ್ತರನ್ನ ಗೌರವಾಧಾರಗಳೊಂದಿಗೆ ಬರಮಾಡಿಕೊಂಡರು. ನಂತರ ವಿಧಿ ವಿಧಾನಗಳೊಂದಿಗೆ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಸವರಾಜ್ ಎಸ್. ಹೊರಟ್ಟಿ ಅವರು ಅಲ್ಲಿ ನಡೆಯುವ ಎಲ್ಲಾ ಪೂಜಾ ಕಾರ್ಯಕ್ರಮದಲ್ಲಿ ಜನಸಾಮಾನ್ಯರಂತೆ ಸಾಕಷ್ಟು ಸಮಯ ಕುಳಿತುಕೊಂಡು ಪೂಜೆಯನ್ನು ನೆರವೇರಿಸಿದರು. ನಂತರ ಸಾಯಂಕಾಲ ರಥ ಬೀದಿಯಲ್ಲಿ ಜನಸಾಮಾನ್ಯರಂತೆ ಸುತ್ತಾಡಿ ಕೆಲ ಸಮಯ ಅಲ್ಲಿಯೇ ಕುಳಿತು ದೇವಸ್ಥಾನದ ಚಟುವಟಿಕೆಗಳನ್ನು ವೀಕ್ಷಿಸಿ ಸಂತೋಷಪಟ್ಟರು. ಮೂಲತ: ಪ್ರಾಣಿ ಪಶು ಪಕ್ಷಿಗಳ ಪ್ರಿಯರಾದ ಹೊರಟ್ಟಿಯವರು ಅಲ್ಲಿರುವ ಗೋಶಾಲೆಗೆ ಭೇಟಿ ನೀಡಿ ಹಸುಗಳಿಗೆ ಹುಲ್ಲು ಹಾಕಿ ಅವುಗಳೊಂದಿಗೆ ಕೆಲ ಸಮಯ ಕಳೆದರು. ಅಲ್ಲಿರುವ ವಿವಿಧ ಜಾತಿಯ ಹಸುಗಳ ಕುರಿತು ಮಾಹಿತಿ ಹಂಚಿಕೊಂಡರು. ಇದೇ ಸಂದರ್ಭದಲ್ಲಿ ನಾಡಿನ ಜನತೆಗೆ ನಾಡಿಗೆ ಒಳ್ಳೆಯದಾಗಲಿ ಎಂದು ಸುಬ್ರಹ್ಮಣ್ಯಂ ಸ್ವಾಮಿಯಲ್ಲಿ ಸಭಾಪತಿ ಬಸವರಾಜ್ ಅವರು ಪ್ರಾರ್ಥಿಸಿದ್ದಾರೆ. ಈ ಬಾರಿಯ ಯುಗಾದಿ ಸರ್ವರಿಗೂ ಶಾಂತಿ ಸಮೃದ್ಧಿಯನ್ನು ನೀಡಲಿ ಎಂದು ನಾಡಿನ ಸಮಸ್ತ ಜನತೆಗೆ ಹಾಗೂ ಶಿಕ್ಷಕ ಬಂಧುಗಳಿಗೆ ಶುಭಾಶಯಗಳನ್ನು ಹೇಳಿದ್ದಾರೆ.

## 2. ಪಂಚನಾಮೆ ಪ್ರಕ್ರಿಯೆ ಮೊದಲು ತಿಳಿಸಲಿ ಆ ಬಳಿಕ ಅನುಮತಿ ನಿರ್ಧಾರ: ಹೊರಟ್ಟಿ

ಸಿ.ಟಿ.ರವಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಧಾನ ಪರಿಷತ್‌ನಲ್ಲಿ ಪಂಚನಾಮೆ ಹೇಗೆ ಮಾಡುತ್ತೇವೆ ಎಂದು ಸಿಐಡಿ ತಿಳಿಸಿದರೆ ಅದಕ್ಕೆ ಅನುಮತಿಸುವ ಬಗ್ಗೆ ಮುಂದೆ ತೀರ್ಮಾನ ಮಾಡುತ್ತೇವೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಹೇಳಿದ್ದಾರೆ. ನಗರದಲ್ಲಿ ದಿನಾಂಕ:06.01.2025ರಂದು ಮಾಧ್ಯಮದೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್‌ನಲ್ಲಿ ಸ್ಥಳ ಮಹಜರು ಮಾಡಲು ನಾವು ಇನ್ನೂ ಅನುಮತಿ ಕೊಟ್ಟಿಲ್ಲ. ಪರಿಷತ್‌ನಲ್ಲಿ ಈ ಹಿಂದೆ ಯಾವತ್ತೂ ಹೀಗೆ ಆಗಿಲ್ಲ, ಈಗ ಆಗಿದೆ. ಏನು ಮಾಡಲು ಆಗುವುದಿಲ್ಲ, ಆಗಿದ್ದನ್ನು ಎದುರಿಸುತ್ತಿದ್ದೇವೆ

ಎಂದರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮನವಿ ಬಗ್ಗೆ ಮಾತನಾಡಿದ ಅವರು, ಈ ಸಂಬಂಧ ಸೆಕ್ರೆಟರಿ ಹಂತದಲ್ಲಿ ಸಭೆ ಮಾಡಿ ಬಳಿಕ ತೀರ್ಮಾನ ಕೈಗೊಳ್ಳುತ್ತೇವೆ. ಪ್ರಕರಣವನ್ನು ಸರ್ಕಾರ ಸಿಐಡಿಗೆ ತನಿಖೆಗೆ ಕೊಟ್ಟಿದೆ. ನಮ್ಮನ್ನು ಕೇಳಿ ಸರಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ಕೊಟ್ಟಿಲ್ಲ. ಸಿಐಡಿ ತನಿಖೆಗೂ ನಮಗೂ ಸಂಬಂಧ ಇಲ್ಲ. ಸಿ.ಟಿ.ರವಿ ಬಂಧನಕ್ಕೂ ಮುಂಚೆ ಬಂಧಿಸುತ್ತಿರುವುದಾಗಿ ತಿಳಿಸಬೇಕಿತ್ತು ಎಂದು ಹೇಳಿದರು. ಸಿಐಡಿ, ಪರಿಷತ್‌ನ ಒಳಗೆ ಹೇಗೆ ಪಂಚನಾಮೆ ಮಾಡುತ್ತದೆ ಎಂಬ ಬಗ್ಗೆ ಮಾಹಿತಿ ಬೇಕಿದೆ. ಅವರು ಹೇಗೆ ಪಂಚನಾಮೆ ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಯಾವುದೇ ರೆಕಾರ್ಡ್ ಇಲ್ಲ. ಹೇಗೆ ಪಂಚನಾಮೆ ಮಾಡುತ್ತೇವೆ ಎಂದು ಸಿಐಡಿ ತಿಳಿಸಿದ ಮೇಲೆ ಅವಶ್ಯಕತೆ ಇದೆಯೋ, ಇಲ್ಲವೋ ಎಂದು ನೋಡಿಕೊಂಡು ಅನುಮತಿಸುವ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಸಭಾಪತಿ ಬಸವರಾಜ ಎಸ್. ಹೊರಟ್ಟಿ ತಿಳಿಸಿದರು.

**ಆಧಾರ:**ವಿಶ್ವವಾಣಿ, ದಿನಾಂಕ:07.01.2025

## 1. 9ನೇ ಕ್ಲಾಸ್‌ವರೆಗೆ ಎಲ್ಲರನ್ನು ಪಾಸ್ ಮಾಡೋದು ದಡ್ಡತನ: ಹೊರಟ್ಟಿ

1–9ನೇ ತರಗತಿಯವರೆಗೆ ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ಉತ್ತೀರ್ಣಗೊಳಿಸುವುದು ಮೂರ್ಖತನದ ನಿರ್ಧಾರ. ಸರ್ಕಾರದ ಇಂಥ ಕ್ರಮ ಬೇರೆಲ್ಲೂ ಅಲ್ಲ. ಅದೇ ರೀತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿಯೂ ಕಾಪಿ ಹೊಡೆಸಿ ಪಾಸು ಮಾಡಲಾಗುತ್ತದೆಯೇ ಎಂದು ವಿಧಾನ ಪರಿಷತ್ ಸ್ಪೀಕರ್ ಬಸವರಾಜ ಹೊರಟ್ಟಿ ಪ್ರಶ್ನಿಸಿದರು. ಶಿರಸಿ ಜಿಲ್ಲಾಮಟ್ಟದ ಪ್ರೌಢಶಾಲಾ ಶಿಕ್ಷಕರ ಶೈಕ್ಷಣಿಕ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆ ಕಾಣಬೇಕಿದೆ. ಶಿಕ್ಷಕರಿಗೆ ಪಾಠ ಮಾಡಲು ಮಾನಸಿಕ ನೆಮ್ಮದಿ ಬೇಕು. ಇಲ್ಲ ಸಲ್ಲದ ಕೆಲಸ ಹೆಚ್ಚುವಂತಾಗಬಾರದು. ಮಕ್ಕಳೆಂದರೆ ದೇವರು ಎನ್ನುತ್ತೇವೆ. ಆದರೆ, ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ, ಖಾಸಗಿ ಮಕ್ಕಳೆಂದು ತಾರತಮ್ಯ ಮಾಡುತ್ತಿದ್ದೇವೆ ಎಂದು ಅಭಿಪ್ರಾಯಪಟ್ಟರು.

**ಆಧಾರ:**ಕನ್ನಡ ಪ್ರಭ, ದಿನಾಂಕ:07.01.2025

## 2. ತುಳುವಿಗೆ ರಾಜ್ಯಭಾಷೆ ಗೌರವ ಪರಿಗಣನೆ: ಸಿಎಂ

ತುಳುನಾಡಿನಲ್ಲಿ ಕಂಬಳ ಅತ್ಯಂತ ಪುರಾತನ ಹಾಗೂ ಬಹಳ ಜನಪ್ರಿಯ ಕ್ರೀಡೆಯಾಗಿ ಜನಮಾನಸದಲ್ಲಿ ನಲೆಯೂರಿದೆ. ಇದಕ್ಕೆ ಪೂರಕವಾಗಿ ತುಳುಭಾಷೆಯನ್ನು 2ನೇ ರಾಜ್ಯ ಭಾಷೆಯನ್ನಾಗಿ ಪರಿಗಣಿಸುವ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ನೇತೃತ್ವದಲ್ಲಿ ಅಯೋಜಿಸಲಾದ ಲವ–ಕುಶ ಜೋಡುಕರೆ ನರಿಂಗಾನ ಕಂಬಳೋತ್ಸವದಲ್ಲಿ ದಿನಾಂಕ:11.01.2025ರಂದು ಭಾಗವಹಿಸಿ ಅವರು ಮಾತನಾಡಿದರು. ಕಂಬಳಕ್ಕೆ ಸುಪ್ರಿಂಕೋರ್ಟ್ ನಿಷೇಧ ಹೇರಿದ ಕಾಲದಲ್ಲಿ ರಾಜ್ಯದಲ್ಲಿ ನಮ್ಮ ಸರ್ಕಾರ ಆ ನಿಷೇಧ ತೆರವು ಮಾಡಿದೆ. ಬೆಂಗಳೂರು ಕಂಬಳಕ್ಕೆ ರಾಜ್ಯ ಸರ್ಕಾರ ರೂ.1.50 ಕೋಟಿ ನೀಡಿತ್ತು. ಜತೆಗೆ ತುಳುನಾಡಿನ ಎಲ್ಲ 24 ಕಂಬಳಗಳಿಗೂ ತಲಾ ರೂ.5 ಲಕ್ಷ ನೀಡಿದೆ ಎಂದರು.

ಯು.ಟಿ.ಖಾದರ್ ವಿಧಾನಸಭಾಧ್ಯಕ್ಷರಾದ ಬಳಿಕ ರೂ.1 ಸಾವಿರ ಕೋಟಿ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯ ಆಗಿದೆ ಎಂದು ಖಾದರ್ ಅವರೇ ತಿಳಿಸಿದ್ದಾರೆ. ಅವರು ವಿಧಾನಸಭೆಯ ಅಧ್ಯಕ್ಷರಾಗಲು ಮೊದಲು ಒಪ್ಪಿರಲಿಲ್ಲ. ಅವರು ಅಧ್ಯಕ್ಷರಾಗಬೇಕೆಂಬುದು ಹೈಕಮಾಂಡ್ ತೀರ್ಮಾನವಾಗಿತ್ತು. ನಾನು ಕರೆದು ಮನವೊಲಿಸಿದ್ದೆ. ಶಿಷ್ಟಾಚಾರ ಪ್ರಕಾರ ಅವರು ನನಗಿಂತ ಎತ್ತರ ಸ್ಥಾನದಲ್ಲಿದ್ದಾರೆ, ರಾಜಕೀಯದಲ್ಲಿ ಯಾವುದೂ ಶಾಶ್ವತ ಅಲ್ಲ. ಜನರ ಆಶೀರ್ವಾದ ಇದ್ದರೆ ಮಾತ್ರ ಕುರ್ಚಿಯಲ್ಲಿ ಇರಲು ಸಾಧ್ಯ.

ಯು.ಟಿ.ಖಾದರ್ ಉತ್ತಮ ರಾಜಕಾರಣಿ. ತಮಗೆ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಅವರು ಇನ್ನೂ ಎತ್ತರಕ್ಕೆ ಹೋಗಲಿ ಎಂದು ಸಿದ್ದರಾಮಯ್ಯ ಹೇಳಿದರು. ಮುಖ್ಯಮಂತ್ರಿಗಳು ಮಂಜೊಟ್ಟಿಗೆ ಆಗಮಿಸಿ ಕೋಣಗಳ ಮೈ ಸವರಿ ಪುಳಕಿತಗೊಂಡರು. ಖಾದರ್ ಅವರು ಮುಖ್ಯಮಂತ್ರಿಗೆ ಕಂಬಳದ ಬೆಳ್ಳಿನೊಗ ಹಾಗೂ ಬೆಳ್ಳಿಯ ಕಂಬಳ ಬೆತ್ತ ನೀಡಿ ಗೌರವಿಸಿದರು.

**ಆಧಾರ:**ಉದಯವಾಣಿ, ದಿನಾಂಕ:12.01.2025

## 3. ದೇಶೀಯ ಸ್ಟಾರ್ಟ್‌ಅಪ್ ಪ್ರೋತ್ಸಾಹಿಸಿ: ಉಪರಾಷ್ಟ್ರಪತಿ

ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಹೊಸ ವಿನ್ಯಾಸದೊಂದಿಗೆ ದೇಶೀಯ ಸ್ಟಾರ್ಟ್‌ಆಪ್ ಮತ್ತು ಸ್ಥಳೀಯ ಘಟಕಗಳ ಅಭಿವೃದ್ಧಿಯನ್ನು ಪ್ರೋತ್ಸಾಹಿಸಬೇಕು ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಸಲಹೆ ನೀಡಿದರು. ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ/ಇಎಲ್) ಆರ್‌ಡಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದ ಅವರು ಜಾಗತಿಕ ದೃಷ್ಟಿಕೋನದಲ್ಲಿ ನಮ್ಮ ಪೇಟೆಂಟ್ ಕೊಡುಗೆ ಮುಖ್ಯವಾಗಿದೆ. ಅದರ ಭಾಗವಾಗಿ ಕೈಗೊಳ್ಳುವ ಯಾವುದೇ ಸಂಶೋಧನೆಗಳು ಅತ್ಯಾಧುನಿಕ, ಪ್ರಾಯೋಗಿಕ ಹಾಗೂ ನೆಲದ ವಾಸ್ತವತೆಯ ಸ್ಥಿತಿಗತಿಯನ್ನು ಬದಲಾಯಿಸುವಂತಿರಬೇಕು. ಕೆಲವು ಸಂಶೋಧನೆಗಳು ಆರ್ಥಿಕವಾಗಿ ಲಾಭದಾಯಕ ಕ್ಷಣಿಕ ಪ್ರಾಮುಖ್ಯತೆ ಹೊಂದಿವೆ. ಅಂತವುಗಳನ್ನು ದೂರವಿಡಬೇಕು ಎಂದು ಅಭಿಪ್ರಾಯಿಸಿದರು.

ಕೇವಲ ಹಿಂದಿನ ಸಾಧನೆಗಳನ್ನು ನೆನೆದು ವಿರಮಿಸಲು ಸಾಧ್ಯವಿಲ್ಲ. ಬಿಇಎಲ್ ಸೆಮಿಕಂಡಕ್ಟರ್ ಕ್ರಾಂತಿ ಮತ್ತು ಹ್ಯಾಂಡ್ ಹೆಲ್ಡ್ ಸ್ಟಾರ್ಟ್‌ಅಪ್‌ಗಳನ್ನು ಮುನ್ನೆಡಸಲು ಸಾಮರ್ಥ್ಯ ್ಲ ವೃದ್ಧಿಸಿಕೊಳ್ಳಬೇಕು ಎಂದು ತಿಳಿಸಿದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕಳೆದ ಹಣಕಾಸು ವರ್ಷದಲ್ಲಿ 69 ಸಾವಿರ ಕೋಟಿ ರೂ.ಮೌಲ್ಯದ ಕಾರ್ಯಾದೇಶಗಳನ್ನು ಬಿಎಚ್‌ಇಎಲ್ ಪಡೆದುಕೊಂಡಿದೆ. ಈ ವರ್ಷ ಕಾರ್ಯಾದೇಶಗಳ ಮೊತ್ತವು 1.7 ಲಕ್ಷ ಕೋಟಿ ರೂ.ದಾಟಿದೆ. ಪ್ರಧಾನಿಗಳ ದೂರದೃಷ್ಟಿ ನಾಯಕತ್ವ, ಆತ್ಮನಿರ್ಭರ, ವಿಕಸಿತ ಭಾರತ ಗುರಿಯನ್ನು ಸಾಧಿಸುವಲ್ಲಿ ಕಂಪನಿ ಬಹುದೊಡ್ಡ ಪಾತ್ರ ವಹಿಸಲಿದೆ ಎಂಬ ವಿಶ್ವಾಸವಿದೆ. ನಿಮ್ಮ ಭೇಟಿಯು ಹುಮ್ಮಸ್ಸು ಹೆಚ್ಚಿಸಿದ್ದು, ಆನೆಬಲ ತಂದು ಕೊಟ್ಟಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿದರು.

**ಆಧಾರ:**ಉದಯವಾಣಿ, ದಿನಾಂಕ:12.01.2025

## 4. ಸಂಸ್ಕೃತಿ ಅರಿತಾಗ ಬಲಿಷ್ಠ ಭಾರತ: ಸ್ಪೀಕರ್ ಖಾದರ್

ಸಮಾಜದಲ್ಲಿ ಪ್ರೀತಿ, ವಿಶ್ವಾಸದ ವಾತಾವರಣ ಕಡಿಮೆಯಾಗಿ ಪರಸ್ಪರರನ್ನು ಸಂಶಯದಿಂದ ನೋಡುವ ಈಗಿನ ಕಾಲಘಟ್ಟದಲ್ಲಿ ನಾನಾ ಸಂಸ್ಕೃತಿಗಳನ್ನು ಪರಿಚಯಿಸುವ ಈ ಕಾರ್ಯಕ್ರಮಗಳ ಮೂಲಕ ಬಲಿಷ್ಠ ಭಾರತ ನಿರ್ಮಾಣ ಸಾಧ್ಯವಾಗಲಿದೆ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ದಿನಾಂಕ:17.01.2025ರಂದು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಲಾದ ಬಹುಸಂಸ್ಕೃತಿ ಉತ್ಸವದಲ್ಲಿ ಮಾತನಾಡಿದರು. "ಇದೇ ಮೊದಲ ಬಾರಿಗೆ ಆರು ಅಕಾಡೆಮಿಗಳು ಜತೆಯಾಗಿ ಬಹು ಸಂಸ್ಕೃತಿ ಉತ್ಸವದ ಮೂಲಕ ಸಾಂಸ್ಕೃತಿಕ ವೈವಿಧ್ಯತೆ ಪ್ರದರ್ಶಿಸಿವೆ ಎಂದರು. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್, ಬ್ಯಾರಿ ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್. ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎ.ಸಿ.ಮಹೇಶ್ ನಾಚಯ್ಯ, ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ.ತಲ್ಲೂರು ಶಿವರಾಮ ಶೆಟ್ಟಿ, ಉಡುಪಿ ಎಸ್ಪಿ ಡಾ.ಅರುಣ್ ಉಪಸ್ಥಿತರಿದ್ದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:18.01.2025

## 5. ಪಟನಾದಲ್ಲಿ ಸ್ಪೀಕರ್‌ಗಳ ಸಮ್ಮೇಳನ: ಖಾದರ್ ಭಾಗಿ

ಬಿಹಾರದ ಪಟನಾದಲ್ಲಿ ಜನವರಿ 20, 21 2025ರಂದು ನಡೆಯಲಿರುವ 85ನೇ ಅಖಿಲ ಭಾರತ ಪೀಠಾಸಿನಾಧಿಕಾರಿಗಳ ಸಮ್ಮೇಳನದಲ್ಲಿ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಭಾಗಿಯಾಗಿ ವಿಷಯ ಮಂಡನೆ ಮಾಡಲಿದ್ದಾರೆ. 43 ವರ್ಷಗಳ ಬಳಿಕ ಬಿಹಾರದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಸಮ್ಮೇಳನದಲ್ಲಿ ರಾಜ್ಯದಿಂದ ಭಾಗವಹಿಸುತ್ತಿರುವ ಯು.ಟಿ.ಖಾದರ್ ಅವರು 'ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸುವಲ್ಲಿ ಸಂಸತ್ತು ಮತ್ತು ರಾಜ್ಯ ಶಾಸಕಾಂಗ ಸಂಸ್ಥೆಗಳ ಕೊಡುಗೆ' ಎಂಬ ವಿಷಯದ ಕುರಿತು ವಿಷಯ ಮಂಡನೆ ಮಾಡಲಿದ್ದಾರೆ ಎಂದು ವಿಧಾನಸಭೆ ಸಚಿವಾಲಯ ತಿಳಿಸಿದೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:19.01.2025

## 6. ಕುಂಭಮೇಳದಲ್ಲಿ ಸ್ಪೀಕರ್ ಖಾದರ್

ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ಅವರು ದಿನಾಂಕ:24.01.2025ರಂದು ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳಕ್ಕೆ ಭೇಟಿ ನೀಡಿದ್ದಾರೆ. ತಮ್ಮ ಸ್ನೇಹಿತರೊಂದಿಗೆ ಪ್ರಯಾಗ್‌ರಾಜ್ ಕುಂಭಮೇಳಕ್ಕೆ ಹೋಗಿರುವ ಯು.ಟಿ.ಖಾದರ್ ಸಂಗಮಕ್ಷೇತ್ರದಲ್ಲಿ ತೀರ್ಥಸ್ನಾನ ಮಾಡಿರುವ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಅದರೊಂದಿಗೆ ಪ್ರಯಾಗ್‌ರಾಜ್‌ನಲ್ಲಿ ವಿವಿಧ ನಾಗಾಸಾಧುಗಳು ಹಾಗೂ ಅಘೋರಿಗಳನ್ನು ಭೇಟಿ ಮಾಡಿದ ಚಿತ್ರಗಳನ್ನು ಕೂಡ ಹಂಚಿಕೊಂಡಿದ್ದಾರೆ.

ಮಹಾಕುಂಭಮೇಳಕ್ಕೆ ಭೇಟಿ ನೀಡಿರುವ ಬಗ್ಗೆ ಮಾತನಾಡಿರುವ ಮಂಗಳೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕರೂ ಆಗಿರುವ ಖಾದರ್ ಮಾತನಾಡಿ, 'ಕುಂಭಮೇಳದಲ್ಲಿ ಭಾರತದ ಸಂಸ್ಕೃತಿಯನ್ನು ಕಾಣಬಹದು' ಎಂದು ಹೇಳಿದ್ದಾರೆ. 'ಒಬ್ಬ ಮನುಷ್ಯನಾಗಿ ನಾನು ದೇಶದ ಎಲ್ಲಾ ಸ್ಥಳಗಳಿಗೆ ಹೋಗಲು ಸಾಧ್ಯವಿಲ್ಲ. ಆದರೆ, ಅವರೆಲ್ಲರ ಸಂಸ್ಕೃತಿಯನ್ನು ನಾನು ಕುಂಭಮೇಳದಂತಹ ಕಾರ್ಯಕ್ರಮದಲ್ಲಿ ಒಂದೇ ಸ್ಥಳದಲ್ಲಿ ನೋಡಲು ಸಾಧ್ಯವಾಗುತ್ತಿದೆ. ಸಾಧು, ನಾಗಾ ಸಾಧುಗಳು, ಅಘೋರಿ ಹೀಗೆ ನನಗೆ ಎಲ್ಲಾ ರೀತಿಯ ಜನರನ್ನು ಭೇಟಿ ಮಾಡುವ ಅವಕಾಶ ಸಿಕ್ಕಿತು' ಎಂದು ಹೇಳಿದ್ದಾರೆ.

**ಆಧಾರ:**ವಿಶ್ವವಾಣಿ, ದಿನಾಂಕ:25.01.2025

## 7. ಪೊಲೀಸರಿಗೆ ರಜೆ; ಯು.ಟಿ.ಖಾದರ್ ಪತ್ರ

ಕರ್ನಾಟಕ ಸರ್ಕಾರಿ ನೌಕರರಿಗೆ ವಿವಿಧ ಮಾದರಿಯ ರಜೆಗಳಿವೆ, ಆದರೆ ಪೊಲೀಸ್ ಇಲಾಖೆಯ ರಜೆಯ ನಿಯಮಗಳು ಬೇರೆಯದ್ದಾಗಿದ್ದು, ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸದಾ ಕಾರ್ಯ ನಿರ್ವಹಣೆ ಮಾಡುವ ಸಿಬ್ಬಂದಿ ರಜೆಯ ಕುರಿತು ವಿಧಾನಸಭೆ ಯು.ಟಿ.ಖಾದರ್ ಗೃಹ ಸಚಿವರಿಗೆ ಪತ್ರವನ್ನು ಬರೆದಿದ್ದಾರೆ.

ಸ್ಪೀಕರ್ ತಮ್ಮ ಪತ್ರದಲ್ಲಿ ಪೊಲೀಸ್ ಇಲಾಖೆಯಲ್ಲಿ ಈ ಮೊದಲು ಪಿಸಿ ಹುದ್ದೆಯಿಂದ ಎಸ್‌ಐ ಹುದ್ದೆವರೆಗಿನ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪ್ರತಿ ವರ್ಷ ಪತ್ರಾಂಕಿತ ರಜೆಗಳ ಬದಲಾಗಿ, ಕ್ಯಾಲೆಂಡರ್ ವರ್ಷದಲ್ಲಿ ಸಾರ್ವತ್ರಿಕ ರಜಾ ದಿನಗಳಂದು ಕರ್ತವ್ಯ ನಿರ್ವಹಿಸಿದ ಅವಧಿಯ ಮುಕ್ತಾಯದ ನಂತರದಲ್ಲಿ, ಸಾರ್ವಜನಿಕ ರಜಾ ದಿನಗಳಲ್ಲಿ ಕಾರ್ಯನಿರ್ವಹಿಸಿರುವುದಕ್ಕಾಗಿ ಗರಿಷ್ಠ 30 ದಿನಗಳಿಗೆ ಒಳಪಟ್ಟು ಮುಕ್ತಾಯದ ದಿನದಂತೆ ಪಡೆಯುತ್ತಿದ್ದ ಸಂಬಳಕ್ಕೆ ಸಮಾನವಾದ ರಜೆಯ  ಸಂಬಳವನ್ನು ನಗದು ರೂಪದಲ್ಲಿ ನೀಡಲಾಗುತ್ತಿತ್ತು. ಅಲ್ಲದೇ 30 ದಿನಗಳ ವೇತನವನ್ನು ಹಾಗೂ ಎಎಸ್‌ಐ ಮತ್ತು ಎಸ್‌ಐ ದರ್ಜೆಯ ಅಧಿಕಾರಿಗಳಿಗೆ 15  ದಿನಗಳ ವೇತನವನ್ನು ನೀಡಲಾಗುತ್ತಿದೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:26.01.2025

## 8. ಅಪದ್ಧ ಪದ ಬಳಕೆ ಪ್ರಕರಣ, ವರದಿ ಪರಿಗಣಿಸಿ ಕ್ರಮ: ಸಭಾಪತಿ ಹೊರಟ್ಟಿ

ಸಿ.ಟಿ.ರವಿ ಮತ್ತು ಲಕ್ಷ್ಮಿ ಹೆಬ್ಬಾಳ್ಕರ್ ಅವರ ಅಪದ್ಧ ಬಳಕೆ ವಿಚಾರದಲ್ಲಿ ಎರಡು ಕಡೆಯ ದೂರನ್ನು ಪರಿಶೀಲಿಸಿ ವರದಿ ನೀಡಲು ನೀತಿ ನಿರೂಪಣಾ ಸಮಿತಿಗೆ ವಹಿಸಲಾಗಿದ್ದು, ಎಫ್‌ಎಸ್‌ಎಲ್ ಮಾಹಿತಿ ಸಹಿತ ನೀಡುವ ಸಮಿತಿ ವರದಿ ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಫ್‌ಎಸ್‌ಎಲ್ ವರದಿ ನಮಗೆ ಅಧಿಕೃತವಾಗಿ ಬರಬೇಕು. ದೂರು ಸಲ್ಲಿಸಿದವರು ನೀಡಿದ್ದನ್ನು ನಾವು ಪರಿಗಣಿಸಲು ಬರುವುದಿಲ್ಲ ಎಂದರು. ವಿಧಾನಪರಿಷತ್ ಸಭಾಪತಿ ಸ್ಥಾನ ಸಾಂವಿಧಾನಿಕ ಹುದ್ದೆ ಆಗಿದ್ದು ಸರಕಾರ ಬದಲಾದಾಗ ಬದಲು ಮಾಡುವಂಥದಲ್ಲ. ಆದರೂ ನಮ್ಮ ರಾಜ್ಯದಲ್ಲಿ ಆ ಕೆಟ್ಟ ಪರಂಪರೆ ಇದ್ದು ಬದಲಾವಣೆ ಮಾಡಿದ ನಿದರ್ಶನಗಳು ಇವೆ. ಯಾರಿಗೂ ಯಾವ ಹುದ್ದೆಯೂ ಶಾಶ್ವತ ಅಲ್ಲ, ಯಾವುದಕ್ಕೂ ಸಿದ್ಧನಿದ್ದೇನೆ, ಎಂದ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:29.01.2025

## 9. ಸಂಸ್ಕೃತಿ ವಿನಿಮಯ ಆಗಲಿ: ಖಾದರ್

ಕುಂಭಮೇಳಕ್ಕೆ ಭೇಟಿ ನೀಡಿದ್ದರಿಂದ ನಮ್ಮ ದೇಶದ ಸಂಸ್ಕೃತಿಯ ಬಗ್ಗೆ ಹಲವು ಹೊಸ ವಿಚಾರ ಗೊತ್ತಾದವು. ಸಂಸ್ಕೃತಿಯ ವಿನಿಮಯ ಆಗುವುದರಿಂದ ದೇಶಕ್ಕೆ ಒಳ್ಳೆಯದು' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು. ಉತ್ತರ ಪ್ರದೇಶ ವಿಧಾನಸಭಾಧ್ಯಕ್ಷ ಸತೀಶ್ ಮಹಾನ್ ಅವರ ಆಹ್ವಾನದ ಮೇರೆಗೆ ಖಾದರ್ ಅವರು ಈಚೆಗೆ ಕುಂಭಮೇಳಕ್ಕೆ ಭೇಟಿ ನೀಡಿದ್ದರು. ಇದೊಂದು ರೀತಿಯಲ್ಲಿ ಸಂಸ್ಕೃತಿ ವಿನಿಮಯ. ನಾನು ಸಹ ಇಲ್ಲಿನ ಉರುಸ್‌ಗೆ ಬರುವಂತೆ ಸತೀಶ್ ಮಹಾನ್ ಅವರಿಗೆ ಆಹ್ವಾನ ನೀಡಿದ್ದೇನೆ. ಬರುತ್ತೇನೆ ಎಂದು ಅವರು ಒಪ್ಪಿಕೊಂಡಿದ್ದಾರೆ.

ಅಧಿಕೃತ ಆಹ್ವಾನದ ಮೇರೆಗೆ ಭೇಟಿ ನೀಡಿದ್ದರಿಂದ ಎಲ್ಲ ವ್ಯವಸ್ಥೆ ಉತ್ತಮವಾಗಿತ್ತು. ಯಾವುದೇ ತೊಂದರೆ ಆಗಲಿಲ್ಲ. ಅಲ್ಲಿ ಸಾಧು ಸಂತರು, ನಾಗಾ ಸಾಧುಗಳನ್ನು ಭೇಟಿ ಮಾಡುವ ಅವಕಾಶ ದೊರೆಯಿತು. ಸಂಸ್ಕೃತಿ–ವಿಚಾರಗಳ ಬಗ್ಗೆ ಹಲವರಿಂದ ಮಾಹಿತಿ ದೊರೆಯಿತು. ಕುಂಭಮೇಳಕ್ಕೆ ಹೋಗಿದ್ದರಿಂದ ಇದು ಸಾಧ್ಯವಾಯಿತು ಎಂದರು.

**ಆಧಾರ:**ಪ್ರಜಾವಾಣಿ, ದಿನಾಂಕ:30.01.2025

## 10.ಗಂಗಾಸ್ನಾನದ ವಿಶೇಷ ಅನುಭವ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಂಸ್ಕೃತಿ ಬೇರೆ, ಧರ್ಮಗಳು ಬೇರೆ, ಇವುಗಳನ್ನು ಸಕಾರಾತ್ಮಕವಾಗಿ ಸರ್ವರಿಗೂ ಗೌರವಿಸಬೇಕು. ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಇತ್ತೀಚಿಗೆ ಭಾಗವಹಿಸಿ, ಗಂಗಾ ನದಿಯಲ್ಲಿ ಸ್ನಾನಮಾಡಿ ಬಂದಿದ್ದು ವಿಶೇಷ ಅನುಭವ. ಇದರಿಂದ ಭಾರತದ ವೈವಿಧ್ಯ ಸಂಸ್ಕೃತಿಯನ್ನು, ಪರಂಪರೆಯನ್ನು ಪ್ರತ್ಯೇಕವಾಗಿ ಅರಿತುಕೊಳ್ಳುವುದು ನನಗೆ ಸಾಧ್ಯವಾಯಿತು ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

**ಆಧಾರ:**ವಿಶ್ವವಾಣಿ, ದಿನಾಂಕ:03.02.2025

## 11. ವಿಧಾನಸೌಧದ ಆವರಣದಲ್ಲೇ 54 ಬೀದಿನಾಯಿಗಳಿಗೆ ಶೆಲ್ಟರ್

ವಿಧಾನಸೌಧದ ಆವರಣದಲ್ಲಿರುವ 54 ಬೀದಿ ನಾಯಿಗಳ ನಿಯಂತ್ರಣ ಹಾಗೂ ಅವುಗಳ ಸುರಕ್ಷತೆ ದೃಷ್ಟಿಯಿಂದ ಶಕ್ತಿಸೌಧದ ಆವರಣದಲ್ಲೇ ಅವುಗಳಿಗೆ ಆಶ್ರಯ ವ್ಯವಸ್ಥೆ ಕಲ್ಪಿಸಲು ಸ್ಪೀಕರ್ ಯು.ಟಿ.ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ವಿಧಾನಸೌಧದ ಆವರಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿದ್ದು, ಅವುಗಳನ್ನು ನಿಯಂತ್ರಿಸಲು ಕ್ರಮವಹಿಸಬೇಕೆಂದು ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಸ್ಪೀಕರ್ ಹಾಗೂ ಸಭಾಪತಿ ಸಚಿವಾಲಯದ ಅಧಿಕಾರಿಗಳೊಂದಿಗೆ ದಿನಾಂಕ:04.02.2025ರಂದು ಸಭೆ ನಡೆಸಿದರು. ಸಭೆಯಲ್ಲಿ ವಿಧಾನಸೌಧದಲ್ಲಿರುವ ನಾಯಿಗಳಿಗೆ ಅಲ್ಲೇ ಪ್ರತ್ಯೇಕ ಆಶ್ರಯ ವ್ಯವಸ್ಥೆ ಕಲ್ಪಿಸಿ, ಅವುಗಳಿಗೆ ನಿತ್ಯ ಆಹಾರ, ನೀರು ಒದಗಿಸುವುದು ಸೇರಿ ಅವುಗಳ ಪೋಷಣೆ, ನಿರ್ವಹಣೆ ಹೊಣೆಯನ್ನು ಪ್ರಾಣಿ ದಯಾ ಸಂಘಗಳಿಗೆ ವಹಿಸಲು ತೀರ್ಮಾನ ಕೈಗೊಳ್ಳಲಾಗಿದೆ.

ಸಭೆ ಬಳಿಕ ಸದ್ದಿಗಾರರೊಂದಿಗೆ ಮಾತನಾಡಿದ ಸ್ಪೀಕರ್ ಯು.ಟಿ.ಖಾದರ್ ವಿಧಾನಸೌಧದ ಆವರಣದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಅವುಗಳನ್ನು ನಿಯಂತ್ರಣ ಮಾಡಲು ಕ್ರಮ ವಹಿಸುವಂತೆ ಒತ್ತಡಗಳು ಕೇಳಿ ಬಂದಿದ್ದವು. ಆದರೆ, ದಿಢೀರ್ ಆಗಿ ಅವುಗಳನ್ನು ಹೊರ ಹಾಕಲು ಆಗುವುದಿಲ್ಲ. ಪ್ರಾಣಿಗಳಿಗ ಬದುಕುವ ಹಕ್ಕಿದೆ. ಅದನ್ನು ಅವು ಮಾತಿನ ಮೂಲಕ ತಮ್ಮ ಭಾವನೆ ವ್ಯಕ್ತಪಡಿಸಲು ಆಗುವುದಿಲ್ಲ. ಹಾಗಾಗಿ ನಾವೇ ಅವುಗಳಿಗೆ ಬದುಕಲು ಅಗತ್ಯ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:05.02.2025

## 12. ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೆ ಸ್ಪೀಕರ್ ಶ್ಲಾಘನೆ

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ:ಮಹೇಶ್ ಜೋಷಿ ಅವರನ್ನು ಅಭಿನಂದಿಸಿರುವ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ನುಡಿಜಾತ್ರೆಯ ಸಾಫಲ್ಯದಲ್ಲಿ ನಿಮ್ಮ ಕರ್ತವ್ಯ ಶಕ್ತಿಯು ಪ್ರಧಾನ ಪಾತ್ರವಹಿಸಿದೆ ಎಂದು ಶ್ಲಾಘಿಸಿದ್ದಾರೆ. ಈ ಕುರಿತು ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಷಿ ಅವರಿಗೆ ಅಭಿನಂದನಾ ಪತ್ರ ಕಳುಹಿಸಿರುವ ಯು.ಟಿ.ಖಾದರ್, ಮಂಡ್ಯದ ಸಮ್ಮೇಳನ ಅಭೂತಪೂರ್ವ ದಾಖಲೆಯನ್ನು ಸೃಷ್ಟಿ ಮಾಡಿತು. ಅದರಲ್ಲಿ ನಿಮ್ಮ ಕರ್ತವ್ಯ ಶಕ್ತಿ ಪ್ರಧಾನ ಪಾತ್ರ ವಹಿಸಿದೆ ಎನ್ನುವುದು ನಿಸ್ಸಂಶಯ. ಸಮ್ಮೇಳನ ಆಯೋಜನೆಗೊಂಡ ದಿನದಿಂದಲೂ ತಾವು ನಿರ್ವಹಿಸಿದ ಪಾತ್ರ ನಿಜಕ್ಕೂ ಸ್ಮರಣೀವಾಗಿ ಉಳಿಯುವಂತಹುದು. ಈ ಕನ್ನಡ ಪ್ರೀತಿ ಮತ್ತು ನಾಯಕತ್ವದ ಗುಣ ಎರಡೂ ಸಮ್ಮೇಳನದಲ್ಲಿ ವ್ಯಕ್ತವಾಗಿದ್ದು ನಿಜಕ್ಕೂ ಶ್ಲಾಘನೀಯ ಎಂದು ಪ್ರಶಂಸಿಸಿದ್ದಾರೆ. ಅನಾರೋಗ್ಯದ ನಡುವೆಯೂ ವೈದ್ಯರ ಸಲಹೆಯನ್ನು ಬದಿಗಿಟ್ಟು ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ದುಡಿದಿದ್ದೀರೆಂದು ತಿಳಿದು ನಿಮ್ಮ ಮೇಲಿನ ಗೌರವ ಮತ್ತಷ್ಟು ಹೆಚ್ಚಾಯಿತು. ಈ ಮಹತ್ತರ ಹೊಣೆಗಾರಿಕೆ ಮುಗಿದ ನಂತರವೂ ವಿಶ್ರಾಂತಿ ಪಡೆಯದೇ ದುಡಿಯುತ್ತಿರುವ ನಿಮ್ಮ ಕ್ರಿಯಾಶೀಲತೆ ಎಲ್ಲರಿಗೂ ಮಾದರಿಯಾಗಿದೆ. ಅದಕ್ಕಾಗಿ ನಿಮಗೂ ಮತ್ತು ಪರಿಷತ್ತಿನ ಕಾರ್ಯತತ್ಪರ ತಂಡಕ್ಕೆ ಅಭಿನಂದನೆಗಳು ಎಂದು ಸಭಾಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತಮ್ಮ ಕಾಯಕಕ್ಕೆ ಸ್ಪೀಕರ್ ಮೆಚ್ಚುಗೆ ವ್ಯಕ್ತಪಡಿಸಿದ್ದಕ್ಕೆ ಮಹೇಶ್ ಜೋಷಿ ಅವರು ಖಾದರ್ ಅವರಿಗೆ ಧನ್ಯವಾದ ಹೇಳಿದ್ದಾರೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:06.02.2025

## 13.4 ಜಿಪಂ, 8ತಾಪಂ, 31 ಗ್ರಾಪಂಗೆ 'ನರೇಗಾ ಪುರಸ್ಕಾರ' ಪ್ರದಾನ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಗರದ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿದ್ದ 'ನರೇಗಾ ಹಬ್ಬ–2025' ಕಾರ್ಯಕ್ರಮದಲ್ಲಿ ಅತ್ಯುತ್ತಮವಾಗಿ ನರೇಗಾ ಯೋಜನೆ ಅನುಷ್ಠಾನಗೊಳಿಸಿದ ದಾವಣಗೆರೆ, ಬಾಗಲಕೋಟೆ, ಬಳ್ಳಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಗೆ ಅತ್ಯುತ್ತಮ ಜಿಲ್ಲಾ ಪಂಚಾಯಿತಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ಅಮೃತ ಸರೋವರ ಜಿಲ್ಲಾ ಪುರಸ್ಕಾರ: ಬೆಳಗಾವಿ, ಉದ್ಯೋಗ ಸೃಜನೆ ಅತ್ಯುತ್ತಮ ಪುರಸ್ಕಾರ ತುಮಕೂರು. ಅತ್ಯುತ್ತಮ ಒಗ್ಗೂಡಿಸುವಿಕೆ ಪುರಸ್ಕಾರ: ವಿವಿಧ ವಿಭಾಗಗಳಲ್ಲಿ ಹಾವೇರಿ, ದಾವಣಗೆರೆ, ಬೆಳಗಾವಿ, ರಾಮನಗರ, ಬಾಗಲಕೋಟೆ, ಚಿಕ್ಕಮಗಳೂರು, ಕೋಲಾರ ಸೇರಿದಂತೆ 20 ಜಿಲ್ಲೆಗಳಿಗೆ ಪುರಸ್ಕಾರ.

ಅತ್ಯುತ್ತಮ ತಾ.ಪಂ.ಪ್ರಶಸ್ತಿ: ದಾವಣಗೆರೆ, ತೀರ್ಥಹಳ್ಳಿ, ಕಡಬ, ತರೀಕೆರೆ, ಗುಳೇದಗುಡ್ಡ ನಿಡಗುಂದ, ಸಂಡೂರು ಸೇರಿದಂತೆ 8 ತಾಲ್ಲೂಕು ಪುರಸ್ಕಾರ. 31 ಅತ್ಯುತ್ತಮ ಗ್ರಾ.ಪಂ.ಪ್ರಶಸ್ತಿ ಬಾಗಲಕೋಟೆ ಮುಗಳೋಳ್ಳಿ, ಬೆಂಗಳೂರು ನಗರದ ದೊಡ್ಡಜಾಲ, ಕಲಬುರಗಿ ಲಾಡಲಾಪೂರ, ಕೋಲಾರದ ಮದನಹಳ್ಳಿ ಯಾದಗಿರಿಯ ದೋರನಹಳ್ಳಿ, ಚಿಕ್ಕಮಗಳೂರಿನ ಬರಗೇನಹಳ್ಳಿ ಸೇರಿದಂತೆ ಒಟ್ಟು 31 ಗ್ರಾ.ಪಂ.ಗಳಿಗೆ ಪ್ರಶಸ್ತಿ. ಜತೆಗೆ ಗ್ರಾಮೀಣ ಕೂಲಿಕಾರರ ಸಂಘಟನೆ ಕಾಯಕ ಬಂಧು ಸಂಘಟನೆ ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಪ್ರಶಂಸಾ ಪತ್ರ.

ನರೇಗಾ ಗ್ರಾಮೀಣರ ಜೀವನಾಡಿ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಗ್ರಾಮೀಣ ಜನರ ಜೀವನಾಡಿಯಾಗಿದ್ದು, ಕುಟುಂಬದ ಆರ್ಥಿಕ ಸ್ಥಿರತೆ ಹಾಗೂ ಮಹಿಳಾ ಸಬಲೀಕರಣಕ್ಕೂ ಸಹಕಾರಿಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಅತ್ಯುತ್ತಮವಾಗಿ ನರೇಗಾ ಯೋಜನೆ ಅನುಷ್ಠಾನಗೊಳಿಸಿದ ಪಂಚಾಯಿತಿ ಹಾಗೂ ಅನುಷ್ಠಾನ ಸಮಿತಿಗಳಿಗೆ ನರೇಗಾ ಪ್ರಶಸ್ತಿ ವಿತರಿಸಿ ಮಾತನಾಡಿ, ಮಹಿಳೆ–ಪುರುಷ ಎಂಬ ತಾರತಮ್ಯವಿಲ್ಲದೆ ಸಮಾನ ವೇತನದ ಮೂಲಕ ಬಸವಣ್ಣನವರ ಸರ್ವರಿಗೂ ಸಮಪಾಲು ಸಮಬಾಳು ಆಶಯ ಸಾಕಾರಗೊಳ್ಳುತ್ತಿದೆ. ರಾಜ್ಯದಲ್ಲಿ ಶೇ.54ರಷ್ಟು ಮಹಿಳೆಯರು ಉದ್ಯೋಗ ಖಾತ್ರಿ ಯೋಜನೆಗಳಲ್ಲಿ ತೊಡಗಿಕೊಂಡಿದ್ದಾರೆ ಎಂದರು.

ನರೇಗಾ ಯೋಜನೆಗೆ ಹೆಚ್ಚು ಬಲ ತುಂಬಬೇಕು ಎಂಬ ನಿಟ್ಟಿನಲ್ಲಿ 100 ಮಾನವ ದಿನಗಳನ್ನು 150 ದಿನಗಳಿಗೆ ಹೆಚ್ಚಿಸಲು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿತ್ತು. ಈ ಬಗ್ಗೆ ಯಾವುದೇ ಕ್ರಮವಹಿಸಿಲ್ಲ ಅಲ್ಲದೆ, ಕೇಂದ್ರ ಬಜೆಟ್‌ನಲ್ಲಿಯೂ 86 ಸಾವಿರ ಕೋಟಿ ರೂ.ಗೆ ರಾಜ್ಯದ ನರೇಗಾ ಅನುದಾನ ಇಳಿಕೆ ಮಾಡಲಾಗಿದೆ. ಇದು ವಿಕಸಿತ ಭಾರತ ಕನಸಿಗೆ ಧಕ್ಕೆಯಾಗಲಿದೆ ಎಂದು ಹೇಳಿದರು. ಶಾಕರಾದ ರಿಜ್ವಾನ್ ಅರ್ಷದ್, ಶರತ್ ಬಚ್ಚೇಗೌಡ, ಪಂಚಯತ್‌ರಾಜ್ ಇಲಾಖೆ ಅಭಿವೃದ್ಧಿ ಆಯುಕ್ತೆ ಉಮಾಮಹದೇವನ್ ಇತರರಿದ್ದರು.

**ಆಧಾರ**:ಉದಯವಾಣಿ, ದಿನಾಂಕ:06.02.2025

## 14. ಕಮ್ಮಿ ಅಂಕ ಬಂದ್ರೆ ಶಿಕ್ಷಕರನ್ನೇ ಹೊಣೆ ಮಾಡುವ ಕಾಯ್ದೆ ತನ್ನಿ: ಹೊರಟ್ಟಿ

ಎಸ್‌ಎಸ್‌ಎಲ್‌ಸಿಯಲ್ಲಿ ಕಡಿಮೆ ಫಲಿತಾಂಶ ಬಂದಲ್ಲಿ ಅದಕ್ಕೆ ಸಂಬಂಧಿಸಿದ ಶಿಕ್ಷಕರನ್ನು ಹೊಣೆಗಾರರನ್ನಾಗಿಸುವ ಹೊಸ ಕಾಯ್ದೆ ಜಾರಿಗೆ ತರುವ ಅವಶ್ಯಕತೆ ಇದೆ. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಹೇಳಿದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಮತ್ತು ಶೈಕ್ಷಣಿಕ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಸರ್ಕಾರದ ಕೆಲವು ನೀತಿಗಳಿಂದ ಶಿಕ್ಷಕರು ಕಷ್ಟ ಅನುಭವಿಸುತ್ತಿದ್ದಾರೆ. ಶಿಕ್ಷಕರಿಗಿರುವ ಸಮಸ್ಯೆ ಮೊದಲು ಪರಿಹರಿಸಿ ಒತ್ತಡ ರಹಿತ ಶಿಕ್ಷಣ ನೀಡುವಂತಾಗಲಿ, ಶಿಕ್ಷಕರ ಏನೇ ಸಮಸ್ಯೆಗಳಿದ್ದರೂ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಪರಿಹರಿಸುವ ಕಾರ್ಯ ಮಾಡುವೆ. ಅದರಂತೆಯೇ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಜಿಲ್ಲೆಯ ಶೈಕ್ಷಣಿಕ ಬೆಳವಣಿಗೆಗೆ ಕೈ ಜೋಡಿಸಬೇಕು ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:23.02.2025

## 15.ನೆಲದ ಕಲಾವಿದರ ಗುರುತಿಸಿ ಬೆಳಸಬೇಕು

ಬೆಂಗಳೂರಿಗೆ ಸೀಮಿತವಾಗಿ ಕಲಾಕಾರರನ್ನು ಕರೆಸುವ ಕೆಲಸ ಆಗದೆ ಈ ನೆಲದಲ್ಲೂ ಸಾಕಷ್ಟು ಕಲಾವಿದರು, ಪ್ರತಿಭಾವಂತರು ಇದ್ದಾರೆ. ಅವರನ್ನು ಗುರುತಿಸಿ, ಬೆಳೆಸುವ ಕೆಲಸ ಮಾಡಿ ಎಂದು ಉತ್ತರ ಕರ್ನಾಟಕ ಭಾಗದ ಸಚಿವರು, ಶಾಸಕರಿಗೆ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ ನೀಡಿದ್ದಾರೆ. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರನ್ನ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಮುಧೋಳ ನಗರದ ರನ್ನ ಕ್ರೀಡಾಂಗಣದ ಮೈದಾನದಲ್ಲಿ ಚಾವುಂಡರಾಯ ಮುಖ್ಯ ವೇದಿಕೆಯಲ್ಲಿ 'ರನ್ನ ವೈಭವ–2025'ರ 2ನೇ ದಿನದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಾಡಿನ ಸಾಹಿತ್ಯ ಕ್ಷೇತ್ರಕ್ಕೆ ರನ್ನನ ಕೊಡುಗೆ ದೊಡ್ಡದಿದೆ. ಮುಂಬರುವ ಅಧಿವೇಶನದ ವೇಳೆ ವಿಧಾನಪರಿಷತ್‌ನಲ್ಲಿ ರನ್ನನ ಬಗ್ಗೆ, ಇಲ್ಲಿನ ಕಲೆ, ಸಂಸ್ಕೃತಿ ಕುರಿತು ನೆನಪಿಸುವ ಕೆಲಸವನ್ನು ಮಾಡಿ, ಪರಿಷತ್‌ನಲ್ಲಿ ನಾನೇ ಸಭಾಪತಿ ಇದ್ದು, ನಿಮಗೆ ಸಂಪೂರ್ಣ ಸಹಕಾರ ಕೊಡುತ್ತೇನೆ ಎಂದು ವೇದಿಕೆಯಲ್ಲಿದ್ದ ಪರಿಷತ್ ಸದಸ್ಯರಾದ ಉಮಾಶ್ರೀ ಹಾಗೂ ಪಿ.ಎಚ್. ಪೂಜಾರ ಅವರಿಗೆ ಸಲಹೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಸಚಿವ ಶಿವಾನಂದ ಪಾಟೀಲ, ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮತ್ತಿತರರು ಉಪಸ್ಥಿತರಿದ್ದರು.

**ಆಧಾರ:**ವಿಜಯವಾಣಿ, ದಿನಾಂಕ:24.02.2025

## 16.ಭೋಜನ ಬಳಿಕ ಶಾಸಕರು ವಿಶ್ರಾಂತಿ ಪಡೆಯಲು ರಿಕ್ಲೈನರಿ ಕುರ್ಚಿ: ಖಾದರ್

ದಿನಾಂಕ:24.02.2025ರಂದು ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭೋಜನ ವಿರಾಮದ ಬಳಿಕ ಬಹಳಷ್ಟು ಶಾಸಕರು ಸದನಕ್ಕೆ ಹಾಜರಾಗುವುದಿಲ್ಲ. ಭೋಜನದ ಬಳಿಕ ಸದನದಲ್ಲಿ ಶಾಸಕರ ಸಂಖ್ಯೆ ಕೊರತೆ ಇರುತ್ತದೆ. ಭೋಜನಕ್ಕೆ ತೆರಳಿದ ಬಳಿಕ ಬಹುತೇಕರು ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಬಾರಿ ಅಧಿವೇಶನದಲ್ಲಿ ಶಾಸಕರ ವಿಶ್ರಾಂತಿಗಾಗಿ ರಿಕ್ಲೈನರ್ ಕುರ್ಚಿಗಳನ್ನು ಬಾಡಿಗೆಗೆ ಪಡೆದುಕೊಳ್ಳಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಸ್ವಂತಕ್ಕೆ ಖರೀದಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ 10–15 ರಿಕ್ಲೈನರ್ ಕುರ್ಚಿಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ ಚಿಂತನೆ ನಡೆಸಲಾಗಿದೆ. ಸದನ ಮುಗಿದ ಬಳಿಕ ಅವುಗಳನ್ನು ಹಿಂತಿರುಗಿಸಲಾಗುವುದು. ಶಾಸಕರು ಸದನಕ್ಕೆ ಹಾಜರಾಗಲು ಈಗಾಗಲೇ ಹಲವು ಸುಧಾರಣೆಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಂತೆಯೇ ಇದು ಸಹ ಒಂದು ಕ್ರಮವಾಗಿದ್ದು, ಇದರಿಂದ ಸದನದಲ್ಲಿ ಶಾಸಕರ ಹಾಜರಾತಿ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗಿದೆ ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:25.02.2025

## 17. ವಿಧಾನಸೌಧ ಆವರಣದಲ್ಲಿ ಪುಸ್ತಕ ಮೇಳ – ಸಾರ್ವಜನಿಕರಿಗೆ ಮುಕ್ತ ಪ್ರವೇಶ

ಶಾಸಕಾಂಗ, ಕಾರ್ಯಾಂಗ, ಅಧಿಕೃತ ಸಮಾರಂಭಗಳಿಗೆ ಸೀಮಿತವಾಗಿದ್ದ ವಿಧಾನಸೌಧ ಅವರಣ ಮೊದಲ ಬಾರಿಗೆ ಪುಸ್ತಕಗಳ ಆರಾಧನೆಗೆ ತಾಣವಾಗಲಿದೆ. ಕರ್ನಾಟಕವೂ ಸೇರಿ ದೇಶ–ವಿದೇಶದ ಹೆಸರಾಂತ ಸಾಹಿತಿಗಳು, ಚಿಂತಕರು, ಉದಯೋನ್ಮುಖ ಬರಹಗಾರರು, ಪ್ರಮುಖ ಪ್ರಕಾಶನಗಳು ಪ್ರಕಟಿಸಿದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟದ ಮೇಳ ನಡೆಯಲಿದೆ. 27ರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳಿಗೆ 28ರಿಂದ ಮಾ.2ರವರೆಗೆ ಮಾತ್ರ ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ವಿವಿಧ ವಿಚಾರಗಳು, ತತ್ವ–ಸಿದ್ಧಾಂತಗಳು, ವಿಭಿನ್ನ ಅಲೋಚನೆ, ಅವಿಷ್ಕಾರಗಳು, ಹಿರಿಯ, ಹೊಸ ತಲೆಮಾರಿನ ಸಾಹಿತಿಗಳ ಜತೆಗೆ ಎಲ್ಲ ಪ್ರಕಾರದ ಸಾಹಿತ್ಯಕ ಕೃತಿಗಳ ಉತ್ಸವದ ರೀತಿಯಲ್ಲಿ ಈ ಮೇಳ ನಡೆಯಲಿದೆ.

ವಿಧಾನಸೌಧದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಾಹಿತಿ ಹಂಚಿಕೊಂಡರು. ಉದ್ಘಾಟನಾ ಸಮಾರಂಭಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕರ್ನಾಟಕದ ಡಾ.ಚಂದ್ರಶೇಖರ ಕಂಬಾರ, ಗೋವಾದ ದಾಮೋದರ ಮೌಜೋ ಭಾಗವಹಿಸಲಿದ್ದಾರೆ. ಸಮಾರೋಪ ಕಾರ್ಯಕ್ರಮ ಮಾ.2ರಂದು ನಡೆಯಲಿದೆ. ಪೂರ್ವನಿಗದಿತ ಕಾರ್ಯಕ್ರಮಕ್ಕೆ ರಾಜ್ಯಪಾಲರು ತೆರಳಿರುವ ಕಾರಣ ಅಂದು ಲಭ್ಯವಿಲ್ಲ. ಹೀಗಾಗಿ ಮರುದಿನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ನಂತರ ಪುಸ್ತಕ ಮೇಳ ತೋರಿಸುತ್ತೇವೆ ಎಂದು ತಿಳಿಸಿದರು. ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಇದ್ದರು.

ಮೇಳಕ್ಕೆ 214ಕ್ಕೂ ಹೆಚ್ಚು ಮಳಿಗೆಗಳಿಗೆ ಬೇಡಿಕೆ ಬಂದಿದ್ದವು. ಆದರೆ 150 ಮಳಿಗೆಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ರಿಯಾಯಿತಿ ದರದಲ್ಲಿ ಪುಸ್ತಕ ಖರೀದಿಗೆ ಅವಕಾಶ ಕಲ್ಪಿಸಲು ಕೂಡ ಪ್ರದರ್ಶಕರು, ಪ್ರಕಾಶಕರು ಒಪ್ಪಿಕೊಂಡಿದ್ದಾರೆ. ಮೇಳ ನಡೆಯುವ ನಾಲ್ಕು ದಿನವೂ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಫೆಬ್ರವರಿ28ರಿಂದ ಮಾರ್ಚ್2ರವರೆಗೆ ಸಂವಾದ ಗೋಷ್ಠಿ ಏರ್ಪಡಿಸಲಾಗಿದೆ. ಒಟ್ಟು 15 ವಿಷಯಗಳನ್ನು ಸಂವಾದಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬೆಳಿಗ್ಗೆ ಹಾಗೂ ಮಧ್ಯಾಹ್ನ ತಲಾ ಎರಡರಂತೆ ನಾಲ್ಕು ಸಂವಾದ ಗೋಷ್ಠಿಗಳು ನಡೆಯಲಿದ್ದು, ಹೊಸ ಲೇಖಕರಿಗೆ ತಮ್ಮ ಪುಸ್ತಕಗಳ ಬಿಡುಗಡೆ ವೇದಿಕೆ ಒದಗಿಸಲಿದೆ. ಮಾರಾಟಕ್ಕೆ ಮಳಿಗೆಯೊಂದನ್ನು ಮೀಸಲಿರಿಸಲು ನಿರ್ಧರಿಸಲಾಗಿದೆ ಎಂದು ಯು.ಟಿ. ಖಾದರ್ ವಿವರಿಸಿದರು.

**ಆಧಾರ:**ವಿಜಯವಾಣಿ, ದಿನಾಂಕ:25.02.2025

## 18. ಪುಸ್ತಕಮೇಳ: ಶಾಸಕರಿಗೆ ಅವಕಾಶ

'ವಿಧಾನಸಭೆ ಸಚಿವಾಲಯದ ವತಿಯಿಂದ ವಿಧಾನಸೌಧದ ಆವರಣದಲ್ಲಿ ಇದೇ 27 ರಿಂದ ಮಾರ್ಚ್ 3ರವರೆಗೆ ಅಯೋಜಿಸಲಾಗಿರುವ 'ಪುಸ್ತಕ ಮೇಳ'ದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರಸಕ್ತ ಸಾಲಿನ ಅನುದಾನದಲ್ಲಿ ರೂ.2ಲಕ್ಷ ಮಿತಿಯೊಳಗೆ ಪುಸ್ತಕಗಳನ್ನು ಖರೀದಿಸಿ ತಮ್ಮ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲಾ–ಕಾಲೇಜುಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪುಸ್ತಕಮೇಳ'ವನ್ನು 27ರಂದು ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ, ಸಚಿವರು, ಸಾಹಿತಿಗಳು ಭಾಗವಹಿಸಲಿದ್ದಾರೆ ಎಂದರು. ವಿಧಾನಸೌಧದ ಆವರಣದಲ್ಲಿ 28 ರಿಂದ ಮಾರ್ಚ್ 2ರವರೆಗೆ ಎರಡು ವೇದಿಕೆಗಳಲ್ಲಿ ಸಂವಾದ ಕಾರ್ಯಕ್ರಮಗಳು, ಕವಿಗೋಷ್ಠಿ, ಪುಸ್ತಕ ಬಿಡುಗಡೆ

ಕಾರ್ಯಕ್ರಮ ನಡೆಯಲಿವೆ. ವಿವಿಧ ಲೇಖಕರ ಪುಸ್ತಕಗಳ ಬಿಡುಗಡೆಗೂ ಅವಕಾಶ ಮಾಡಿಕೊಳ್ಳಲಾಗುವುದು. ಈ ಎಲ್ಲ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗುವುದು ಎಂದರು.

216ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲು ಬೇಡಿಕೆಯಿದೆ. 150 ಮಳಿಗೆ ತೆರೆಯಲು ಮಾತ್ರ ಅವಕಾಶವಿದ್ದು, ವಿವಿಧ ಅಕಾಡೆಮಿಗಳ ಮಳಿಗೆಗಳು ಖಾಸಗಿ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಮಾರ್ಚ್ 3ರಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪುಸ್ತಕಮೇಳ ವೀಕ್ಷಿಸಲಿದ್ದಾರೆ ಎಂದು ತಿಳಿಸಿದರು.

ಪುಸ್ತಕ ಮಳಿಗೆ ತೆರೆಯಲು ರಾಜ್ಯ, ಹೊರರಾಜ್ಯ, ಅಂತರರಾಷ್ಟ್ರೀಯ ಮಟ್ಟದ ಪ್ರಕಾಶಕರು ಅವಕಾಶ ಕೋರಿದ್ದಾರೆ. ರಿಯಾಯಿತಿ ದರದಲ್ಲಿ ಪುಸ್ತಕಗಳು ಲಭ್ಯವಾಗಲಿದೆ. ಮೇಳದ ಅಂಗವಾಗಿ ಐದು ಮಂದಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದರು. ಪ್ರತಿ ದಿನ ಸಂಜೆ 5 ಗಂಟೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮಾರ್ಚ್ 2 ರಂದು ಸಾಧುಕೋಕಿಲ ಅವರಿಂದ ಸಂಗೀತ ರಸಸಂಜೆ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

**ಆಧಾರ:**ಪ್ರಜಾವಾಣಿ, ದಿನಾಂಕ:25.02.2025

## 19.ಅಧಿವೇಶನ ವೇಳೆಗೆ ಸಿ.ಟಿ.ರವಿ, ಲಕ್ಷ್ಮೀಹೆಬ್ಬಾಳ್ಕರ್ ವಿವಾದಕ್ಕೆ ತೆರೆ

ಮುಂಬರುವ ಅಧಿವೇಶನದ ವೇಳೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ನಡುವಿನ ವಿವಾದಕ್ಕೆ ತೆರೆ ಬೀಳಲಿದೆ ಎನ್ನುವ ಭರವಸೆಯಿದೆ ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನೀತಿ–ನಿರೂಪಣೆ ಸಮಿತಿಗೆ ಇದನ್ನು ನೀಡಲಾಗಿದೆ. ಅವರು ಏನು ಮಾಡಿದ್ದಾರೆ ಗೊತ್ತಿಲ್ಲ. ಅಧಿವೇಶನ ಸಂದರ್ಭ ಇದಕ್ಕೊಂದು ಇತಿಶ್ರೀ ಹಾಡಬೇಕು ಎಂದಿದ್ದೇನೆ ಎಂದರು.

**ಆಧಾರ:** ಉದಯವಾಣಿ, ದಿನಾಂಕ:21.02.2025

## 20. ವಿಧಾನಸೌಧದ 3 ದಿನಗಳ ಪುಸ್ತಕ ಜಾತ್ರೆಗೆ 2 ಲಕ್ಷ ಜನ



ಮೊದಲ ಬಾರಿಗೆ ವಿಧಾನಸೌಧದ ಅವರಣದಲ್ಲಿ ನಡೆದ ಪುಸ್ತಕ ಮೇಳ ದಿನಾಂಕ:02.03.2025ರಂದು ತೆರೆ ಕಂಡಿದ್ದು, ಮೂರು ದಿನದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ಆಗಮಿಸಿದ್ದರು. ಸಾರ್ವಜನಕರಿಗೆ ಕೊನೆಯ ದಿನವಾದ ದಿನಾಂಕ:02.03.2025ರಂದು ಅಕ್ಷರಶಃ ಜಾತ್ರೆಯ

ವಾತಾವರಣ ನಿರ್ಮಾಣವಾಗಿತ್ತು. ದಿನಾಂಕ:03.03.2025ರಂದು ಪುಸ್ತಕ ಮೇಳದಲ್ಲಿ ಶಾಸಕರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ನಿರ್ದೇಶಕ ಅರ್ಜುನ್ ಜನ್ಯ ತಂಡದ ಸಂಗೀತ ಕಾರ್ಯಕ್ರಮದೊಂದಿಗೆ ಮೇಳಕ್ಕೆ ತೆರೆ ಬಿತ್ತು. ದಿನಾಂಕ:02.03.2025ರಂದು ಬೆಂಗಳೂರು ಮಾತ್ರವಲ್ಲದೆ ತುಮಕೂರು, ರಾಮನಗರ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಹೊರ ಜಿಲ್ಲೆಗಳಿಂದಲೂ ಜನರು ಹರಿದು ಬಂದಿತ್ತು. 151 ಪುಸ್ತಕಗಳ ಮಳಿಗೆಗಳಿಗೂ ಭೇಟಿ ನೀಡಿದ ಜನರು ಇಷ್ಟದ ಪುಸ್ತಕ ಖರೀದಿಸಿದರು.

ಪುಸ್ತಕ ಮೇಳದ ಬಗ್ಗೆ ಕನ್ನಡ ಪ್ರಭದೊಂದಿಗೆ ಮಾತನಾಡಿದ ಸ್ಪೀಕರ್ ಶ್ರೀ ಯು.ಟಿ.ಖಾದರ್, ಒಟ್ಟು ಎರಡು ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡಿರುವುದಾಗಿ ಅಂದಾಜಿಸಲಾಗಿದೆ. ಕೊನೆಯ ದಿನ ದಿನಾಂಕ:02.03.2025ರಂದು 1 ಲಕ್ಷಕ್ಕೂ ಹೆಚ್ಚು ಮಂದಿ ಪುಸ್ತಕ ಮೇಳದಲ್ಲಿ ಭಾಗಿಯಾಗಿದ್ದಾರೆ ಎಂದರು. 3 ದಿನಗಳ ಪುಸ್ತಕ ಮೇಳ ಯಶಸ್ವಿಯಾಗಿ ನಡೆದಿದೆ. ಮೊದಲ ಬಾರಿಗೆ ಆಯೋಜಿಸಿದ್ದರಿಂದ ಕೆಲ ಸಣ್ಣಪುಟ್ಟ ಸಮಸ್ಯೆ ಕೆಲವರಿಗೆ ಆಗಿರಬಹುದು. ಮುಂದೆ ಅವುಗಳನ್ನು ಸರಿಪಡಿಸಿಕೊಳ್ಳುತ್ತೇವೆ. ಮುಂದಿನ ವರ್ಷ ಇನ್ನೂ ದೊಡ್ಡ ಮಟ್ಟದಲ್ಲಿ ಹಾಗೂ ಇನ್ನಷ್ಟು ವ್ಯವಸ್ಥಿತವಾಗಿ ಪುಸ್ತಕ ಮೇಳ ಆಯೋಜಿಸಲಾಗುವುದು. ಭವಿಷ್ಯದಲ್ಲಿ ಒಂದು ರೀತಿ ರಾಜ್ಯಮಟ್ಟ ಪುಸ್ತಕ ಹಬ್ಬವಾಗಿ ಬೆಳೆಯುವ ನಿರೀಕ್ಷೆಯಿದೆ ಎಂದರು.

**ಆಧಾರ:**ಕನ್ನಡಪ್ರಭ, ದಿನಾಂಕ:03.03.2025

## 21. ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯಸಚೇತಕರಾಗಿ ರವಿಕುಮಾರ್

ಕರ್ನಾಟಕ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಎನ್.ರವಿಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಸಭಾಪತಿಗಳಿಗೆ ಪತ್ರ ಬರೆದು ಮಾಹಿತಿ ನೀಡಿದ್ದ ಹಿನ್ನೆಲೆಯಲ್ಲಿ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ಈ ವಿಷಯವನ್ನು ಪ್ರಕಟಿಸಿದರು. ನಂತರ ರವಿಕುಮಾರ್ ಅವರು ಪ್ರತಿಪಕ್ಷ ಸಚೇತಕರ ಸ್ಥಾನವನ್ನು ಅಲಂಕರಿಸಿದರು. ಈ ಕುರಿತಂತೆ ಅವರ ಕುರಿತು ಸದಸ್ಯರು ಮಾತನಾಡಲು ಅವಕಾಶ ನೀಡುವುದಾಗಿ ಸಭಾಪತಿಗಳು ಪ್ರಕಟಿಸಿ ಸದನವನ್ನು ಮುಂದೂಡಿದರು.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:04.03.2025

## 22. ಶಿಕ್ಷಕರಿಗೆ ಅನ್ಯ ಕಾರ್ಯಬೇಡ: ಸಚಿವರಿಗೆ ಸಭಾಪತಿ ಸೂಚನೆ

ಶಿಕ್ಷಕರಿಗೆ ಜನಗಣತಿ, ದನಗಣತಿ, ಚುನಾವಣೆ ಕೆಲಸ ಎಂದು ಅನ್ಯ ಕಾರ್ಯಕ್ಕೆ ಹಚ್ಚಬೇಡಿ. ಕೆಲ ಶಾಲೆಗಳಲ್ಲಿ ಮೂವರು ಶಿಕ್ಷಕರಿದ್ದರೆ ಆ ಮೂವರನ್ನು ಬೇರೆ ಕೆಲಸಕ್ಕೆ ನಿಯೋಜಿಸಿದ ಉದಾಹರಣೆಯಿದೆ. ಆದ್ದರಿಂದ ಶಿಕ್ಷಕರಿಗೆ ಅನ್ಯ ಕೆಲಸದ ಹೊರೆ ಕಡಿಮೆ ಮಾಡಿ ಎಂದು ಸಭಾಪತಿ ಬಸವರಾಜ ಎಸ್. ಹೊರಟ್ಟಿಯವರು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸೂಚಿಸಿದರು. ಡಾ. ಧನಂಜಯ ಸರ್ಜಿ ಅವರು ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಕ್ರಮದ ಕುರಿತು ಮಾತನಾಡುವ ವೇಳೆ ಸಭಾಪತಿ ಸಲಹೆ ನೀಡಿದರು. ಈ ವೇಳೆ ಉತ್ತರಿಸಿದ ಮಧು ಬಂಗಾರಪ್ಪ, ಓದು ಕರ್ನಾಟಕ ಕಾರ್ಯಕ್ರಮದಡಿ ರಾಜ್ಯದ 42 ಸಾವಿರ ಶಿಕ್ಷಕರಿಗೆ ತರಬೇತಿ ನೀಡಿ ಪ್ರತಿ ದಿನ ಭಾಷಾ ಮತ್ತು ಕಲಿಕೆಗೆ ತಲಾ 1 ಅವಧಿ ನಿಗದಿಪಡಿಸಿ 60 ದಿನಗಳ ಕಾಲ ಶಾಲೆಯಲ್ಲಿ ಅನುಷ್ಠಾನಗೊಳಿಸಲಾಗುವುದು. ಸದ್ಯ 6ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ತರಗತಿ ನಡೆಯುತ್ತಿರುವ 1001 ಶಾಲೆಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ 7ನೇ ತರಗತಿಗೂ ಆಂಗ್ಲ ಮಾಧ್ಯಮ ಅಳವಡಿಸಿಕೊಳ್ಳಲಾಗುವುದು ಎಂದರು.

**ಆಧಾರ:**ಉದಯವಾಣಿ, ದಿನಾಂಕ:07.03.2025

## 23. ಕಲಾಪಕ್ಕೆ ಬಾರದ ಸಚಿವರು: ಸ್ಪೀಕರ್ ಗರಂ

ವಿರೋಧ ಪಕ್ಷಗಳ ಆರೋಪಕ್ಕೆ ಉತ್ತರ ನೀಡಲು ಕಲಾಪಕ್ಕೆ ಹಾಜರಾಗದೆ ಸಚಿವರೇ ಸರ್ಕಾರ ಮರ್ಯಾದೆ ಕಳೆಯುತ್ತಿದ್ದಾರೆ ಎಂದು ಸ್ಪೀಕರ್ ಯು.ಟಿ.ಖಾದರ್ ತರಾಟೆಗೆ ತೆಗೆದುಕೊಂಡರು. ವಿಪಕ್ಷ ನಾಯಕ ಆರ್.ಅಶೋಕ್ ರಾಜ್ಯದ ಕಾನೂನು ಸುವ್ಯವಸ್ಥೆ ಕುರಿತು ಮಾತನಾಡುವ ಸಂದರ್ಭದಲ್ಲಿ, ಸಚಿವರಾದ ಕೆ.ಎಚ್. ಮುನಿಯಪ್ಪ ಆರ್.ಬಿ.ತಿಮ್ಮಾಪೂರ್, ಕೃಷ್ಣಭೈರೇಗೌಡ ಮಾತ್ರ ಹಾಜರಿದ್ದರು. ಉಳಿದವರ ಗೈರಿನ ಬಗ್ಗೆ ಪ್ರತಿಪಕ್ಷದ ಶಾಸಕರು ಆಕ್ಷೇಪಿಸಿದರು.

ಧ್ವನಿಗೂಡಿಸಿದ ಯು.ಟಿ.ಖಾದರ್ ಕಲಾಪ ಆರಂಭವಾದಾಗ ಸಚಿವರು ಹಾಜರಿರಬೇಕು. ಎಷ್ಟೇ ಉತ್ತಮ ಕೆಲಸ ಮಾಡಿದರೂ ಸಮಯಕ್ಕೆ ಸರಿಯಾಗಿ ಬಾರದೇ ಸರ್ಕಾರದ ಮರ್ಯಾದೆ ತೆಗೆಯುತ್ತಿದ್ದಾರೆ ಎಂದರು. ಮಧ್ಯಪ್ರವೇಶಿಸಿದ ಸಚಿವರಾದ ಮುನಿಯಪ್ಪ ಕೃಷ್ಣಭೈರೇಗೌಡ, ಸಚಿವರು ಬರುತ್ತಿದ್ದಾರೆ, ಕಲಾಪ ಆರಂಭವಾಗಿದೆಯಲ್ಲ ನಡೆಸಿ ಎಂದು ಮನವಿ ಮಾಡಿದರು.

ಕಲಾಪಕ್ಕೆ ಬರುವವರು ಮಾತ್ರ ಸಚಿವರಾಗಲಿ: ಇದಕ್ಕೆ ಆಕ್ಷೇಪಿಸಿದ ಖಾದರ್, ದಿನಾಂಕ:17.03.2025ರಂದು ಸಂಜೆ ನಂತರ ಕೃಷ್ಣಭೈರೇಗೌಡ ಒಬ್ಬರೇ ಸಚಿವರಾಗಿ ಹಾಜರಿದ್ದರು. ಅವರು ಇದ್ದಿದ್ದಕ್ಕೆ ಕಲಾಪ ನಡೆಯಿತು. ಬೇರೆ ಸಚಿವರು ಕಲಾಪದಲ್ಲಿರಲೇ ಇಲ್ಲ. ಸದನಕ್ಕೆ ಉತ್ತರ ನೀಡದವರು ಏತಕ್ಕೆ ಬೇಕು? ಕಲಾಪಕ್ಕೆ ಹಾಜರಾಗುವವರನ್ನು ಸಚಿವರನ್ನಾಗಿ ಮಾಡಿ ಎಂದು ತರಾಟೆಗೆ ತೆಗೆದುಕೊಂಡರು. ಮುಖ್ಯಮಂತ್ರಿ ಅವರು ಸದನಕ್ಕೆ ಬಂದಾಗ ಎಲ್ಲರೂ ಇರುತ್ತಾರೆ. ಸಿಎಂ ಸಮರ್ಥವಾಗಿ ನಿಭಾಯಿಸುತ್ತಾರೆ. ಆಗ ಎಲ್ಲ ಸಚಿವರು ಬರುವ ಅಗತ್ಯವಿಲ್ಲ. ಆದರೆ, ಅವರಿಲ್ಲದಿದ್ದಾಗ ಯಾರೂ ಬರುವುದಿಲ್ಲ ಎಂದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:19.03.2025

## 24. ಸ್ಪೀಕರ್ ಯು.ಟಿ. ಖಾದರ್‌ಗೆ 'ಕೆಂಗಲ್ ಹನುಮಂತಯ್ಯ ಪ್ರಶಸ್ತಿ'

ಕನ್ನಡ ಸಾಹಿತ್ಯ ಪರಿಷತ್ತು(ಕಸಾಪ) ನೀಡುವ 'ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ'ಗೆ ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್ ಆಯ್ಕೆಯಾಗಿದ್ದಾರೆ. ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಪ್ರಶಸ್ತಿ ಸ್ಥಾಪಿಸಿದೆ. ಪ್ರಶಸ್ತಿಯು ರೂ.25ಸಾವಿರ ನಗದು ಒಳಗೊಂಡಿದೆ. ಯು.ಟಿ.ಖಾದರ್ ಅವರು ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಹಿಂದೆ ಆರೋಗ್ಯ ಹಾಗೂ ವಸತಿ ಸಚಿವರಾಗಿ ಕಾರ್ಯನಿರ್ವಹಿಸುವಾಗಲೂ ಜನಪರ ಚಿಂತನೆಗಳನ್ನು ಹೊಂದಿದ್ದರು. ಪ್ರಸ್ತುತ ವಿಧಾನಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ಹಲವು ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಇತ್ತೀಚೆಗೆ ಯಶಸ್ವಿಯಾಗಿ ನಡೆದ 'ಪುಸ್ತಕ ಮೇಳ' ಅದಕ್ಕೆ ಉದಾಹರಣೆ ಎಂದು ಕಸಾಪ ತಿಳಿಸಿದೆ.

**ಆಧಾರ:**ಪ್ರಜಾವಾಣಿ, ದಿನಾಂಕ:20.03.2025

## 25. ಅಧಿವೇಶನ ಕಲಾಪದ ಮೇಲೆ ಎಐ ನಿಗಾ

ಸದನದ ಕಾರ್ಯಕಲಾಪದ ಮೇಲೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎಐ) ಬಳಸಿಕೊಂಡು ನಿಗಾ, ದಾಖಲೀಕರಣ ವ್ಯವಸ್ಥೆ ಮಾಡಲಾಗಿದೆ ಎಂದು ಸ್ಪೀಕರ್ ಯು.ಟಿ.ಖಾದರ್ ಮಾಹಿತಿ ನೀಡಿದರು. ಪ್ರತಿಯೊಬ್ಬ ಶಾಸಕರು ಪ್ರತಿದಿನ ಎಷ್ಟು ಹೊತ್ತಿಗೆ ಸದನಕ್ಕೆ ಹಾಜರಾದರು ಎಷ್ಟು ಸಮಯ ಇದ್ದರು, ಕಾರ್ಯ–ಕಲಾಪದಲ್ಲಿ ಭಾಗವಹಿಸುವಿಕೆ ಹೀಗೆ... ಪ್ರತಿಯೊಂದು ಅಂಶವನ್ನೂ ಎಐ ದಾಖಲಿಕೊಳ್ಳುತ್ತಿದೆ. ಅದೇ ರೀತಿ ಯಾವೆಲ್ಲ ಸಚಿವರು ಸದನಕ್ಕೆ ಬಂದಿದ್ರು. ಆ ದಿನ ಕಲಾಪ ಪಟ್ಟಿಯಲ್ಲಿ ಹೆಸರಿದ್ದರೂ

ಬಾರದವರು, ಚರ್ಚೆಯಲ್ಲಿ ಪಾಲ್ಗೊಂಡವರು, ಹಾಜರಿದ್ದ ಅವಧಿ ದಾಖಲಾಗಿದೆ. ಇದಕ್ಕಾಗಿ ಸಚಿವ ಮತ್ತು ಶಾಸಕರ ಹಾಜರಾತಿಯನ್ನು ಪ್ರತ್ಯೇಕ ಬಣ್ಣಗಳಲ್ಲಿ ಗುರುತು ಹಾಕುತ್ತದೆ. ಎಐ ಮೂಲಕ ದಾಖಲಿಸಿಕೊಂಡ ವರದಿಯನ್ನು ಅಧಿವೇಶನ ಕೊನೆಯ ದಿನ ಸದನದ ಮುಂದಿಡುವೆ. ಈ ವರದಿಯನ್ನು ಆಯಾ ಪಕ್ಷದವರು ತಮ್ಮ ಹೈಕಮಾಂಡ್‌ಗೆ ಕಳುಹಿಸಬಹುದು ಎಂದು ಖಾದರ್ ಹೇಳಿದರೆ, ಪ್ರತಿಪಕ್ಷಗಳು ಮೊದಲು ಕಾಂಗ್ರೆಸ್ ಹೈಕಮಾಂಡ್‌ಗೆ ಸಲ್ಲಿಕೆಯಾಗಲಿ ಎಂದು ನಗುತ್ತಾ ಕಾಲೆಳೆದರು.

**ಆಧಾರ**:ವಿಜಯವಾಣಿ, ದಿನಾಂಕ:19.03.2025

## 26. ಪೀಠದ ಗೌರವ ಉಳಿಸಲು ಅಮಾನತು

ಸಭಾಧ್ಯಕ್ಷ ಪೀಠಕ್ಕೆ ಅಗೌರವ ತೋರಿದ ಸದಸ್ಯರಿಗೆ ತಿದ್ದಿಕೊಳ್ಳಲು ಅವಕಾಶವಿದ್ದರೂ ಕಲಾಪ ಮತ್ತೆ ಸೇರಿದ ನಂತರವೂ ಅದೇ ವರ್ತನೆ ಮುಂದುವರಿಸಿದರು. ದುರ್ವರ್ತನೆ ಸಹಿಸಲು ಸಾಧ್ಯವಿಲ್ಲ' ಎಂದು ಬಿಜೆಪಿಯ 18 ಶಾಸಕರ ಅಮಾನತು ಕ್ರಮವನ್ನು ಸ್ಪೀಕರ್ ಯು.ಟಿ.ಖಾದರ್ ಸಮರ್ಥಿಸಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಾಹ್ನ 12ರ ಸುಮಾರಿಗೆ ಘಟನೆ ನಡೆದಿತ್ತು. ಸಂಜೆ 4ಕ್ಕೆ ಕಲಾಪ ಮತ್ತೆ ಸೇರಿದಾಗಲೂ ಅವರ ವರ್ತನೆ ಬದಲಾಗಲಿಲ್ಲ. ಪೀಠಕ್ಕೆ ಅಗೌರವವಾಗಿದೆ. ತಪ್ಪು ಮಾಡಿದ್ದೇವೆ ಎಂಬ ಭಾವನೆ ಅವರಲ್ಲಿ ಕಾಣಲಿಲ್ಲ. ಪೀಠದ ಗೌರವಕ್ಕಾಗಿ ಅಮಾನತು ಶಿಕ್ಷೆ ಅನಿವಾರ್ಯ ಆಗಿತ್ತು. ಬಿಜೆಪಿ ಸದಸ್ಯರ ವರ್ತನೆ ಇತರರಿಗೆ ಮಾದರಿಯಾಗಬಾರದು. ಜಿಲ್ಲಾ, ತಾಲ್ಲೂಕು ಸಭೆಗಳಲ್ಲಿ ಇಂತಹದು ಮರುಕಳಿಸಬಾರದು ಎಂದರು.

'ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಹನಿಟ್ರ್ಯಾಪ್ ವಿಷಯ ಪ್ರಸ್ತಾಪಿಸಿದಾಗ ಅವಕಾಶ ಕೊಟ್ಟೆ. ಚರ್ಚೆಯಾಯಿತು. ಗೃಹ ಸಚಿವರು, ಮುಖ್ಯಮಂತ್ರಿ ತನಿಖೆಯ ಭರವಸೆ ನೀಡಿದರು. ಆದರೂ. ಧನ ವಿನಿಯೋಗ ಮಸೂದೆಗೆ ಅಡ್ಡಿಪಡಿಸಲು ಪ್ರಯತ್ನಿಸಿದರು. ಗೊಂದಲ ಸೃಷ್ಟಿಸಿದರು. ಆರೋಗ್ಯ ಸಮಸ್ಯೆ ಇರುವ ಮುಖ್ಯಮಂತ್ರಿಗೆ ನಿರಂತರವಾಗಿ ಅಡ್ಡಿ ಮಾಡಿದರು. ಪೀಠದ ಮೇಲೇರಲು ಪ್ರಯತ್ನಿಸಿದರು' ಎಂದು ಘಟನೆ ವಿವರಿಸಿದರು.

ಅವರಿಗೆ ಹೆದರಿ ಅಧಿವೇಶನ ಮೊಟಕುಗೊಳಿಸಬೇಕಿತ್ತಾ? ಧನ ವಿನಿಯೋಗ ಮಸೂದೆಗೆ ಅಂಗೀಕಾರ ಪಡೆಯಲು ಮತ್ತೆ ಅಧಿವೇಶನ ಕರೆಯಬೇಕಿತ್ತಾ? ಭಾವನಾತ್ಮಕವಾಗಿ ಯೋಚಿಸಿದರೆ ಸಂವಿಧಾನ ಪೀಠದ ಗೌರವ ಉಳಿಸಲು ಸಾಧ್ಯವಿಲ್ಲ. ಅದಕ್ಕಾಗಿ ಅವರಿಗೆ ಬುದ್ಧಿ ಕಲಿಸಲು ಎಚ್ಚರಿಕೆಯ ಸಂದೇಶ ನೀಡಬೇಕಾಯಿತು ಎಂದರು.

**ಆಧಾರ**:ಪ್ರಜಾವಾಣಿ, ದಿನಾಂಕ:23.03.2025

## 27. Horatti issues summons to horti dept secy, VC, registar

Legislative Council Chairman Basavaraj Horatti on Dated:19.03.2025 issued summons to Horticulture De-partment secretary, Vice Chan cellor and registrar of the University of Horticulture Sciences, Bagalkot seeking an explanation for their failure to appoint BJP MLC Hanumanth Nirani to the varsity board.

Horatti's decision to issue summons to the officials come a day after Niranı sought to know why the department was dragging its fect on confirming his appointment Congress MLCs Puttanna, Ivan D'Souza and Nagaraj Yadav brought the

issue to Horatti's attention, pointing out that the varsity and department had not complied with the Council Chairman's order to appoint Nirani.

"It is not right to disregard the directions of the Council Chairman. Why are the officials being so indifferent to your(Horatti) directions? If your directions are not honoured, what is their value, asked Puttanna. Echoing their party colleague's concerns, Ivan D'Souza and Yadav said that, despite Horarti issuing directions to Horticulture Minister S.S Mallikarjun to remedy this mistake, no action had been taken. "This issue must be taken up urgently, and the officials concerned summoned to the House immediate” he two Congress MLCs said.

Horatti then directed House Leader N.S Bose Raju, also the Minor Irrigation minister, to ensure that the Horticulture Department secretary, and the varsity's VC and registrar were in his chamber at 10.20 am on Dated:20.03.2025 to explain why the Council Chairman's orders had not been complied with.

Hanumanth Nirani had complained that his appointment, made 8 months ago, had not been confirmed by the Horticulture Department. He had, in fact, threatened to move a privilege motion against Mallikarjun in the event of the Horticulture Department failing to confirm the appointment by the end of the day.

**Courtesy:**Deccan Herald, dated:20.03.2025

## 28. **ಮೇಲ್ಮನೆಯಲ್ಲಿ ಭೂಕಬಳಿಕೆ ನಿಷೇಧ ಸೇರಿ 6 ವಿಧೇಯಕಗಳು ಅಂಗೀಕಾರ**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ 2025, ಕರ್ನಾಟಕ ಭೂ ಕಬಳಿಕೆ ನಿಷೇಧ ತಿದ್ದುಪಡಿ ವಿಧೇಯಕ 2025 ಸೇರಿ ಆರು ತಿದ್ದುಪಡಿ ವಿಧೇಯಕಗಳು ಹೆಚ್ಚಿನ ಚರ್ಚೆ ಇಲ್ಲದೆ ಅಂಗೀಕಾರಗೊಂಡವು.

ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು, ಪಂಚಾಯತ್ ವ್ಯಾಪ್ತಿಯ ಅನಧಿಕೃತ ನಿವೇಶನಗಳು, ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ಸೇರ್ಪಡೆ ಮಾಡುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ–2025 ಮಂಡಿಸಿದರು. ಈ ವಿಧೇಯಕ ಸದನದಲ್ಲಿ ಸರ್ವಾನುಮತದಿಂದ ಅಂಗೀಕೃತಗೊಂಡಿತು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು, ವಿಧಾನಸಭೆಯಲ್ಲಿ ಅಂಗೀಕೃತ ರೂಪದಲ್ಲಿದ್ದ ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ವಿಧೇಯಕ 2025, ನೋಂದಣಿ ಕರ್ನಾಟಕ ತಿದ್ದುಪಡಿ ವಿಧೇಯಕ–2025, ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ–2025, ಕರ್ನಾಟಕ ಗ್ರಾಮ ಹುದ್ದೆಗಳ ರದ್ದತಿಗಾಗಿ ತಿದ್ದುಪಡಿ ವಿಧೇಯಕ–2025 ಮತ್ತು ಕರ್ನಾಟಕ ಭೂ ಕಬಳಿಕೆ ನಿಷೇಧ ತಿದ್ದುಪಡಿ ವಿಧೇಯಕ–2025 ಅನ್ನು ಮಂಡಿಸಿದರು. ಈ ವಿಧೇಯಕಗಳಿಗೆ ಹೆಚ್ಚಿನ ಚರ್ಚೆ ಇಲ್ಲದೆ ಸದನದಲ್ಲಿ ಅಂಗೀಕಾರ ದೊರೆಯಿತು.

**ಆಧಾರ:** ಕನ್ನಡ ಪ್ರಭ, ದಿನಾಂಕ:21.03.2025

## 29. ಅಧಿವೇಶನದಲ್ಲಿ 99 ಗಂಟೆ ಕಲಾಪ: ಸ್ಪೀಕರ್

16ನೇ ವಿಧಾನಸಭೆಯ 6ನೇ ಅಧಿವೇಶನವು ಒಟ್ಟು 15 ದಿನಗಳ ಕಾಲ ಸುಮಾರು 99 ಗಂಟೆ 34 ನಿಮಿಷಗಳ ಕಾಲ ಕಾರ್ಯಕಲಾಪ ನಡೆದಿದ್ದು, ಧನ ವಿನಿಯೋಗ ವಿಧೇಯಕ ಸೇರಿ ಒಟ್ಟು 27 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 14 ಸದಸ್ಯರು 8 ಗಂಟೆ 2 ನಿಮಿಷಗಳ ಕಾಲ ಭಾಗವಹಿಸಿದ್ದರು. ಇನ್ನು ಬಜೆಟ್ ಮೇಲಿನ ಚರ್ಚೆಯಲ್ಲಿ 80 ಸದಸ್ಯರು ಒಟ್ಟು 28 ಗಂಟೆ 56 ನಿಮಿಷ ಕಾಲ ಪಾಲ್ಗೊಂಡಿದ್ದರು. ಇತ್ತೀಚೆಗೆ ನಿಧನ ಹೊಂದಿದ ಗಣ್ಯರಿಗೆ ಸಂತಾಪ ಸೂಚನಾ ನಿರ್ಣಯ ಮಂಡಿಸಿ, ಅಂಗೀಕರಿಸಲಾಗಿದೆ ಎಂದರು. ಒಟ್ಟು 12 ಅಧಿಸೂಚನೆಗಳು, 122 ವಾರ್ಷಿಕ ವರದಿಗಳು, 111 ಲೆಕ್ಕ ಪರಿಶೋಧನಾ ವರದಿಗಳು, 1 ಅನುಪಾಲನಾ ವರದಿ ಮಂಡಿಸಲಾಗಿದೆ ಎಂದು ವಿವರಿಸಿದರು.

ಒಟ್ಟು 3096 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತರಿಸಬೇಕಾಗಿದ್ದ 195 ಪ್ರಶ್ನೆಗಳ ಪೈಕಿ 189 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 2583 ಪ್ರಶ್ನೆಗಳ ಪೈಕಿ 2190 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ. ನಿಯಮ 351ರಡಿ ಸ್ವೀಕೃತವಾದ 260 ಸೂಚನೆಗಳಲ್ಲಿ 133 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ. ಗಮನ ಸೆಳೆಯುವ 388 ಸೂಚನೆಗಳ ಪೈಕಿ 175 ಸೂಚನಾ ಪತ್ರಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ. ಸದಸ್ಯರಾದ ಎಚ್.ಕೆ.ಸುರೇಶ್ ಮತ್ತು ದರ್ಶನ್ ಪುಟ್ಟಣ್ಣಯ್ಯ ನೀಡಿರುವ 2 ಖಾಸಗಿ ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಗಿದೆ. ಎರಡು ಹಕ್ಕುಚ್ಯುತಿ ಸೂಚನೆಗಳನ್ನ ತನಿಖೆ, ಪರಿಶೀಲನೆ ಮತ್ತು ವರದಿಗಾಗಿ ಹಕ್ಕುಬಾಧ್ಯತೆಗಳ ಸಮಿತಿಗೆ ವಹಿಸಲಾಗಿದೆ. ಶೂನ್ಯ ವೇಳೆ ಅಡಿಯಲ್ಲಿ 14 ಸೂಚನೆಗಳನ್ನು ಚರ್ಚಿಸಲಾಗಿದೆ ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:23.03.2025

## 30. ಬೆಳಗಾವಿಯಲ್ಲಿ 400 ಕೊಠಡಿಗಳ ಶಾಸಕರ ಭವನ

ಬೆಳಗಾವಿಯಲ್ಲಿ ಅಧಿವೇಶನದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ, ಸಚಿವರು, ಅಧಿಕಾರಿಗಳ ವಾಸ್ತವ್ಯಕ್ಕೆ ಅನುಕೂಲವಾಗುವಂತೆ 400 ಕೊಠಡಿಗಳ ಬಹುಪಯೋಗಿ ಕಟ್ಟಡ ನಿರ್ಮಿಸುವ ಉದ್ದೇಶವಿದೆ ಎಂದು ಸ್ಪೀಕರ್ ಯು.ಟಿ.ಖಾದರ್ ತಿಳಿಸಿದರು. ವಿಧಾನಸೌಧದಲ್ಲಿ ಮಾತನಾಡಿದ ಅವರು, ಪ್ರತಿವರ್ಷ ಚಳಿಗಾಲದ ಅಧಿವೇಶನ ನಡೆಯುತ್ತದೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಚಿವರು, ಅಧಿಕಾರಿಗಳ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಬೇಕಿದೆ. ಈ ದೃಷ್ಟಿಯಿಂದ ಬೆಂಗಳೂರಿನ ಕುಮಾರಕೃಪ ಅತಿಥಿ ಗೃಹದ ಮಾದರಿಯಲ್ಲಿ 400 ಕೊಠಡಿಗಳ ಶಾಸಕರ ಭವನ ನಿರ್ಮಿಸುವ ಉದ್ದೇಶವಿದೆ. ಈ ಬಗ್ಗೆ ಲೋಕೋಪಯೋಗಿ ಹಾಗೂ ಪ್ರವಾಸೋದ್ಯಮ ಸಚಿವರೊಂದಿಗೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

**ಆಧಾರ:**ವಿಜಯ ವಾಣಿ, ದಿನಾಂಕ:23.03.2025

## 31. ಕೃಷಿ ವಿಜ್ಞಾನ ವಿವಿ ಸೇರಿ ಅನೇಕ ಮಸೂದೆ ಪಾಸ್

ಮಂಡ್ಯದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ ವಿಧೇಯಕ)–2025ರ ಸೇರಿ ಗ್ರೇಟರ್ ಬೆಂಗಳೂರು ತಿದ್ದುಪಡಿ ವಿಧೆಯಕ ಮತ್ತಿತರ ಮಸೂದೆಗಳು ಅಂಗೀಕಾರ ಪಡೆದವು.

ಕೃಷಿ ಸಚಿವ ಚೆಲುವರಾಯಸ್ವಾಮಿ ಮಸೂದೆ ಮಂಡಿಸಿ ಅನುಮೋದನೆ ಪಡೆದುಕೊಂಡರು. ಬಾಗಲಕೋಟೆ ತೋಟಗಾರಿಕೆ ವಿವಿ ಮುಚ್ಚುವ ಪ್ರಶ್ನೆಯೇ ಇಲ್ಲ. ಈ ವಿವಿ ವ್ಯಾಪ್ತಿಯ ಸಂಶೋದನಾ ಕೇಂದ್ರ, ಸ್ನಾತಕೋತ್ತರ ಕೇಂದ್ರ ಹೊರತುಪಡಿಸಿ ಮೈಸೂರು ವಿಭಾಗದಲ್ಲಿ ಕಾರ್ಯವ್ಯಾಪ್ತಿ ಹೊಂದಲಿದೆ. ತೋಟಗಾರಿಕೆ ವಿ.ವಿ.ಗೊಳಪಡುವ ಜಿಲ್ಲೆಗಳ ವಿದ್ಯಾರ್ಥಿಗಳು ಅತಂಕಪಡುವ ಅಗತ್ಯವಿಲ್ಲ ಎಂದು ಅಭಯ ನೀಡಿದರು.

ಕಳೆದ 1931ರಲ್ಲಿ ಮೈಸೂರಿನ ನಾಲ್ವಾಡಿ ಕೃಷ್ಣರಾಜ ಒಡೆಯರು ಬಿ.ಸಿ.ಫಾರ್ಮ್‌ಗಾಗಿ 650 ಎಕರೆ ಜಮೀನು ಮೀಸಲಿಟ್ಟಿದ್ದರು. ಮೂಲಕ ಸೌಕರ್ಯ ವ್ಯವಸ್ಥೆಯೂ ಇದೆ. ಹೊಸದಾಗಿ ಏನು ಮಾಡುವ ಪ್ರಮಯೇ ಉದ್ಭವಿಸಲ್ಲ. ಇಲ್ಲಿ 209 ಕಾಲೇಜುಗಳಿವೆ. ರಾಜ್ಯದ ಮೂರು ವಿಭಾಗಗಳಲ್ಲೂ ಕೃಷಿ ವಿವಿಯಿದೆ. ಆದರೆ ಈಗ ಮೈಸೂರು ವಿಭಾಗದಿಂದ ಮಂಡ್ಯದಲ್ಲಿ ಹೊಸ ಕೃಷಿ ವಿಜ್ಞಾನಗಳ ವಿ.ವಿ ತಲೆಯೆತ್ತಲಿದೆ ಎಂದರು.

**ಆಧಾರ**: ವಿಶ್ವವಾಣಿ, ದಿನಾಂಕ:25.03.2025

# ಭಾಗ–2

# ಕರ್ನಾಟಕ ವಿಧಾನ ಮಂಡಲದ ಕಾರ್ಯಚಟುವಟಿಕೆಗಳು

## 1. ಕರ್ನಾಟಕ ವಿಧಾನ ಪರಿಷತ್ತಿನ 155ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಾನ್ಯ ಸಭಾಪತಿಯವರು:–**

ವಿಧಾನ ಪರಿಷತ್ತಿನ 155ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:03.03.2025 ರಿಂದ 21.03.2025ರವರೆಗೆ ಒಟ್ಟು 15 ದಿನಗಳು ಅಂದರೆ, 93 ಗಂಟೆ 45 ನಿಮಿಷ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 10 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ದಿನಾಂಕ:07.03.2025ರಂದು ಮಾನ್ಯ ಮುಖ್ಯಮಂತ್ರಿಯವರು 2025–26ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ 7 ಗಂಟೆ 10 ನಿಮಿಷಗಳ ಕಾಲ ಚರ್ಚೆ ನಡೆಸಿ, ದಿನಾಂಕ:21.03.2025 ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಮಾನ್ಯ ಶಾಸಕರಾದ ಶ್ರೀ ಎನ್. ರವಿಕುಮಾರ್ ಅವರನ್ನು ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ಮಾನ್ಯತೆ ನೀಡಲಾಯಿತು.

ಮಾನ್ಯ ಶಾಸಕರಾದ ಶ್ರೀ ಡಿ.ಎಸ್.ಅರುಣ್ ಅವರು ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡವು 12 ವರ್ಷಗಳ ತರುವಾಯ ವಿಜೇತರಾದ ಭಾರತೀಯ ಕ್ರಿಕೆಟ್ ತಂಡಕ್ಕೆ ಹಾಗೂ ಮಂಗಳೂರಿನಲ್ಲಿ ಕೋಟಿ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯಲ್ಲಿ ಶ್ರಮವಹಿಸಿರುವ ಗೃಹ ಇಲಾಖೆಯ ಪೊಲೀಸ್ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2024–25ನೇ ಸಾಲಿನ ಪೂರಕ ಅಂದಾಜುಗಳು (ಮೂರನೇ ಹಾಗೂ ಅಂತಿಮ ಕಂತು) ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02 ಹಾಗೂ 03ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಮಾರ್ಚ್–2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ (2025ರ ವರದಿ ಸಂಖ್ಯೆ:1) ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸಲಾಯಿತು.

2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ವರದಿ ಮತ್ತು 2024–25ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 103ನೇ ವರದಿಗಳನ್ನು ಒಪ್ಪಿಸಲಾಯಿತು.

ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿ

ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:14.01.2025 ರಿಂದ 13.07.2025ರವರೆಗೆ ಆರು ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಕುರಿತು 3 ಗಂಟೆ 34 ನಿಮಿಷ ವಿಶೇಷ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಯಿತು.

ನಿಯಮ 59 ರಡಿಯಲ್ಲಿ ಒಟ್ಟು 03 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಉತ್ತರಿಸಲಾಯಿತು. ಉಳಿದ 02 ಸೂಚನೆಗಳನ್ನು ನಿಯಮ 330ಕ್ಕೆ ಪರಿವರ್ತಿಸಿ ಒಂದನ್ನು ಚರ್ಚಿಸಿ ಉತ್ತರಿಸಲಾಯಿತು.

ನಿಯಮ 68ರಡಿಯಲ್ಲಿ 02 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1609 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 195 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 158 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1414 ಪ್ರಶ್ನೆಗಳ ಪೈಕಿ 1035 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಒಂದು ಸೂಚನೆಗೆ ಚರ್ಚಿಸಲು ಅವಕಾಶ ನೀಡಲಾಯಿತು.

ನಿಯಮ 72ರಡಿಯಲ್ಲಿ 133 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 49 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 78 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 12 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 137 ಸೂಚನೆಗಳ ಪೈಕಿ 03 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 75 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 07 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 21 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

**ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಮಾತನಾಡಿದ ನಂತರ:–**

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸಿದರು.

## 2. ಕರ್ನಾಟಕ ವಿಧಾನ ಪರಿಷತ್ತಿನ ನೀತಿ ನಿರೂಪಣಾ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ ಲಘು ಪ್ರಕಟಣೆ

# ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ:11ನೇ ಫೆಬ್ರವರಿ, 2025**

**ಸಂಖ್ಯೆ:06**

ಕರ್ನಾಟಕ ವಿಧಾನ ಪರಿಷತ್ತಿನ ನೀತಿ ನಿರೂಪಣಾ ಸಮಿತಿಯ ಸದಸ್ಯರನ್ನಾಗಿ ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರನ್ನು ದಿನಾಂಕ:30.08.2024ರಂದು ನಾಮನಿರ್ದೇಶನ ಮಾಡಲಾಗಿತ್ತು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಸಿ)(1)(ಇ) ಅನ್ವಯ ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರ ಬದಲಿಗೆ ಶ್ರೀ ಪಿ.ಹೆಚ್. ಪೂಜಾರ್ ಅವರನ್ನು ವಿಧಾನ ಪರಿಷತ್ತಿನ ನೀತಿ ನಿರೂಪಣಾ ಸಮಿತಿಯ ಸದಸ್ಯರನ್ನಾಗಿ ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

**ಕೆ.ಆರ್ ಮಹಾಲಕ್ಷ್ಮಿ,**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ವಿಧಾನ ಪರಿಷತ್ತಿನ ಮಾನ್ಯಶಾಸಕರುಗಳಿಗೆ,

## 3. ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

## ಕರ್ನಾಟಕ ವಿಧಾನ ಪರಿಷತ್ತು

## 155ನೇ ಅಧಿವೇಶನ

### ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ:05ನೇ ಮಾರ್ಚ್, 2025

ಸಂಖ್ಯೆ:13

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

1. ಶ್ರೀ ಬಿ.ಕೆ.ಹರಿಪ್ರಸಾದ್
2. ಶ್ರೀಮತಿ ಭಾರತಿ ಶೆಟ್ಟಿ
3. ಶ್ರೀ ಎಸ್.ಎಲ್. ಭೋಜೇಗೌಡ
4. ಶ್ರೀ ಮಂಜುನಾಥ್ ಭಂಡಾರಿ

**ಕೆ.ಆರ್ ಮಹಾಲಕ್ಷ್ಮಿ,**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

ವಿಧಾನ ಪರಿಷತ್ತಿನ ಮಾನ್ಯಶಾಸಕರುಗಳಿಗೆ,

## 4. ಹದಿನಾರನೇ ವಿಧಾನಸಭೆಯ ಆರನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹದಿನಾರನೇ ವಿಧಾನಸಭೆಯ ಆರನೇ ಅಧಿವೇಶನವು ದಿನಾಂಕ 03ನೇ ಮಾರ್ಚ್, 2025 ರಿಂದ 21ನೇ ಮಾರ್ಚ್, 2025 ರವರೆಗೆ ಒಟ್ಟು 15 ದಿನಗಳ ಕಾಲ ಸುಮಾರು 99 ಗಂಟೆ 34 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ದಿನಾಂಕ:03.03.2025ರಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 14 ಮಾನ್ಯ ಸದಸ್ಯರುಗಳು ಒಟ್ಟು 08 ಗಂಟೆ 02 ನಿಮಿಷಗಳ ಕಾಲ ಭಾಗವಹಿಸಿದ್ದು, ವಂದನಾ ನಿರ್ಣಯದ ಪ್ರಸ್ತಾವವನ್ನು ದಿನಾಂಕ: 17.03.2025 ರಂದು ಅಂಗೀಕರಿಸಲಾಗಿದೆ.

- 2025–26ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:07.03.2025 ರಂದು ಮಂಡಿಸಿರುತ್ತಾರೆ. ಆಯವ್ಯಯದ ಸಾಮಾನ್ಯ ಚರ್ಚೆಯಲ್ಲಿ 80 ಮಾನ್ಯ ಸದಸ್ಯರುಗಳು ಒಟ್ಟು 28 ಗಂಟೆ 56 ನಿಮಿಷಗಳ ಕಾಲ ಭಾಗವಹಿಸಿದ್ದು, ದಿನಾಂಕ:21.03.2025ರಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಿದ ನಂತರ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

- 2024–25ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು) ಬೇಡಿಕೆಗಳನ್ನು ದಿನಾಂಕ:19.03.2025 ರಂದು ಮಂಡಿಸಿದ್ದು, ದಿನಾಂಕ:21.03.2025ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.

- ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.

- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ವರದಿಯನ್ನು (2025ರ ವರದಿ ಸಂಖ್ಯೆ:1) ಸದನದಲ್ಲಿ ಮಂಡಿಸಲಾಗಿದೆ.

- 2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ, ವರದಿ ನೀಡಲು ರಚಿಸಲಾಗಿದ್ದ ಕರ್ನಾಟಕ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ವರದಿ, ಕರ್ನಾಟಕ ವಿಧಾನ ಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2024–25ನೇ ಸಾಲಿನ ಐದನೇ ವರದಿ, ಕರ್ನಾಟಕ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 2023–24ನೇ ಸಾಲಿನ ನಾಲ್ಕನೇ ವರದಿ ಹಾಗೂ ಕರ್ನಾಟಕ ವಿಧಾನಸಭೆಯ ಅಂದಾಜುಗಳ ಸಮಿತಿಯ 2024–25ನೇ ಸಾಲಿನ ಎರಡನೇ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.

–: 2 :–

- ಒಟ್ಟು 12 ಅಧಿಸೂಚನೆಗಳು, 2 ಆಧ್ಯಾದೇಶಗಳು ಮತ್ತು 122 ವಾರ್ಷಿಕ ವರದಿಗಳು, 111 ಲೆಕ್ಕ ಪರಿಶೋಧನಾ ವರದಿಗಳು, 01 ಅನುಪಾಲನ ವರದಿಗಳು ಹಾಗೂ 01 ಅನುಸರಣಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.

- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳೂ ಸೇರಿದಂತೆ ಒಟ್ಟು 27 ವಿಧೇಯಕಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ. ಕರ್ನಾಟಕ ವಿಧಾನಸಭೆಯಲ್ಲಿ ಮಂಡಿಸಿದಂತೆ, ಕರ್ನಾಟಕ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ, ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.

- ನಿಯಮ 60 ರಡಿಯಲ್ಲಿ ನೀಡಿದ್ದ 03 ನಿಲುವಳಿ ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿರುವುದನ್ನು ಸೇರಿದಂತೆ ಒಟ್ಟು 04 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ.

- ಈ ಅವಧಿಯಲ್ಲಿ ಒಟ್ಟು 50 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

- ಒಟ್ಟು 3096 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 195 ಪ್ರಶ್ನೆಗಳ ಪೈಕಿ 189 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 2583 ಪ್ರಶ್ನೆಗಳ ಪೈಕಿ 2190 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ನಿಯಮ 351 ರಡಿಯಲ್ಲಿ ಸ್ವೀಕೃತವಾದ 260 ಸೂಚನೆಗಳ ಪೈಕಿ 133 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಗಮನ ಸೆಳೆಯುವ 388 ಸೂಚನೆಗಳ ಪೈಕಿ 175 ಸೂಚನಾ ಪತ್ರಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಮಾನ್ಯ ಸದಸ್ಯರಾದ ಶ್ರೀ ಹೆಚ್.ಕೆ. ಸುರೇಶ್ ಹಾಗೂ ಶ್ರೀ ದರ್ಶನ್ ಪುಟ್ಟಣ್ಣಯ್ಯ ರವರುಗಳು ನೀಡಿರುವ 02 ಖಾಸಗಿ ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಗಿದೆ.

- ಎರಡು ಹಕ್ಕುಚ್ಯುತಿ ಸೂಚನೆಗಳನ್ನು ತನಿಖೆ, ಪರಿಶೀಲನೆ ಮತ್ತು ವರದಿಗಾಗಿ ಹಕ್ಕುಬಾಧ್ಯತೆಗಳ ಸಮಿತಿಗೆ ವಹಿಸಲಾಗಿದೆ.

- ಶೂನ್ಯ ವೇಳೆ ಅಡಿಯಲ್ಲಿ 14 ಸೂಚನೆಗಳನ್ನು ಚರ್ಚಿಸಲಾಗಿದೆ.

- ದಿನಾಂಕ:04.03.2025ರ ಮಂಗಳವಾರದಂದು ವಿಧಾನ ಸೌಧದ ವಿಧಾನಸಭೆಯ ಸಭಾಂಗಣ ಮೊಗಸಾಲೆ ಪ್ರವೇಶಿಸುವ ದ್ವಾರದ ಬಳಿ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಪ್ರಜಾಪ್ರಭುತ್ವ ಸಂಸ್ಥೆಯನ್ನು ಸ್ಥಾಪಿಸಿದ ಕರ್ನಾಟಕ ರಾಜ್ಯದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳು ಮತ್ತು ವಿಧಾನಸಭೆಯ ಅಧಿವೇಶನಗಳು ಮೈಸೂರಿನ ಸಾರ್ವಜನಿಕ ಕಚೇರಿ ಕಟ್ಟಡ, ಜಗನ್ಮೋಹನ್ ಅರಮನೆ, ಕ್ರಾಫರ್ಡ್ ಹಾಲ್

- ಮತ್ತು ಬೆಂಗಳೂರಿನ ಸರ್ ಕೆ.ಪಿ. ಪುಟ್ಟಣ ಚೆಟ್ಟಿ ಪುರಭವನ, ಓಲ್ಡ್ ಪಬ್ಲಿಕ್ ಆಫೀಸ್ ಕಟ್ಟಡ, ಅಠಾರ ಕಛೇರಿ ಕಟ್ಟಡಗಳಲ್ಲಿ ನಡೆದಿದ್ದು, ಸದರಿ ಕಟ್ಟಡಗಳ ವರ್ಣ ಚಿತ್ರಗಳನ್ನು ಅನಾವರಣಗೊಳಿಸಲಾಗಿದೆ ಹಾಗೂ ಪಂಡಿತ್ ಜವಹರಲಾಲ್ ನೆಹರು ರವರು ವಿಧಾನ ಸೌಧಕ್ಕೆ ಶಂಕುಸ್ಥಾಪನೆ ನೆರವೇರಿಸಲ್ಪಟ್ಟ ಸಂದರ್ಭ, ಶ್ರೀ ಜಯಚಾಮರಾಜ ಒಡೆಯರ್ ಅವರು ಅಂದಿನ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯ ಹಾಗೂ ಇನ್ನಿತರರೊಂದಿಗೆ ವಿಧಾನ ಸೌಧ ಕಟ್ಟಡ ನಿರ್ಮಾಣ ಕಾಮಗಾರಿ ವೀಕ್ಷಿಸುತ್ತಿರುವ ಹಾಗೂ ಅಂದಿನ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಸದನಗಳ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡುತ್ತಿರುವ ಸಂದರ್ಭಗಳ ವರ್ಣ ಚಿತ್ರಗಳನ್ನು ಸಹ ಅನಾವರಣಗೊಳಿಸಲಾಗಿದೆ.

- ಈ ಕೆಳಕಂಡ ಅಧಿಕೃತ ನಿರ್ಣಯಗಳನ್ನು ದಿನಾಂಕ:20.03.2025ರಂದು ಸದನದಲ್ಲಿ ಮಂಡಿಸಲಾಗಿದ್ದು, ಸದನವು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

1. ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 38) ಮತ್ತು ಸಾರ್ವಜನಿಕ ಋಣ ಅಧಿನಿಯಮ, 1944 (1944ರ ಕೇಂದ್ರ ಅಧಿನಿಯಮ 18) ರ ನಿರಸನದ ಪ್ರಸ್ತಾವನೆಗೆ ಸಂಸತ್ತು ಮಾಡಿರುವ ತಿದ್ದುಪಡಿಗೆ ಈ ಸದನದ ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗ್ಗೆ.

2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಮುಂಗಡ ಪತ್ರದ ಒಂದು ಭಾಗವನ್ನು ಕೇವಲ ಅದೇ ಉದ್ದೇಶಕ್ಕಾಗಿ ಮೀಸಲಿಡುವ ಬಗ್ಗೆ.

3. ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ಕೇಂದ್ರ ಸರ್ಕಾರದ ವಕ್ಫ್ (ತಿದ್ದುಪಡಿ) ಮಸೂದೆ, 2024ನ್ನು ಹಿಂಪಡೆಯುವ ಬಗ್ಗೆ.

4. ಯುನಿವರ್ಸಿಟಿ ಗ್ರಾಂಟ್ಸ್ ಕಮೀಷನ್ (ಮಿನಿಮಮ್ ಕ್ವಾಲಿಫಿಕೇಷನ್ಸ್ ಫಾರ್ ಅಪಾಯಿಂಟ್‌ಮೆಂಟ್ ಅಂಡ್ ಪ್ರಮೋಷನ್ ಆಫ್ ಟೀಚರ್ಸ್ ಅಂಡ್ ಅಕಾಡೆಮಿಕ್ ಸ್ಟಾಫ್ ಇನ್ ಯುನಿವರ್ಸಿಟೀಸ್ ಅಂಡ್ ಕಾಲೇಜಸ್ ಅಂಡ್ ಮೆಷರ್ಸ್ ಫಾರ್ ದ ಮೆಂಟೈನೆನ್ಸ್ ಆಫ್ ಸ್ಟಾಂಡರ್ಡ್ಸ್ ಇನ್ ಹೈಯರ್ ಎಜುಕೇಷನ್) ರೆಗುಲೇಷನ್ಸ್, 2025 ಅನ್ನು ಹಿಂಪಡೆಯ ಬಗ್ಗೆ.

5. ದಿನಾಂಕ:21.03.2025ರಂದು ಸದನದಲ್ಲಿ ಪೀಠದ ಆದೇಶವನ್ನು ಲೆಕ್ಕಿಸದೆ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತಿನಿಂದ ಹಾಗೂ ಅಗೌರವದಿಂದ ನಡೆದುಕೊಂಡಿದ್ದರಿಂದ 18 ಜನ ಮಾನ್ಯ ವಿಧಾನಸಭಾ ಸದಸ್ಯರುಗಳನ್ನು 6 ತಿಂಗಳುಗಳ ಅವಧಿಯವರೆಗೆ ಸದನಕ್ಕೆ ಬಾರದಂತೆ ತಡೆಯಿಡಿದು ಅಮಾನತ್ತು ಮಾಡಲಾಗಿದೆ.

6. ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಉಪ ಸಭಾಧ್ಯಕ್ಷರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಎಲ್ಲಾ ಮಾನ್ಯ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

******

**5. ಗ್ರೇಟರ್ ಬೆಂಗಳೂರು ವಿಧೇಯಕ ಪರಿಶೀಲನಾ ಸಮಿತಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ**

# ಕರ್ನಾಟಕ ವಿಧಾನಸಭೆ

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ-2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ 19ನೇ ಫೆಬ್ರವರಿ, 2025**

**ಸಂಖ್ಯೆ: 138**

2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಿ, ವರದಿಯನ್ನು ನೀಡಲು ರಚಿಸಲಾಗಿರುವ ಕರ್ನಾಟಕ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ಅವಧಿಯನ್ನು 2025ರ ಮಾರ್ಚ್ ಅಂತ್ಯದವರೆಗೆ ವಿಸ್ತರಿಸಿ ಸನ್ಮಾನ್ಯ ಸಭಾಧ್ಯಕ್ಷರು ಕಾಲಾವಕಾಶವನ್ನು ನೀಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ,**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

೬. Panel of Chairmen: ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಆರನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ 27ನೇ ಫೆಬ್ರವರಿ, 2025**

---

**ಸಂಖ್ಯೆ: 141**

ಸನ್ಮಾನ್ಯ ಸಭಾಧ್ಯಕ್ಷರ ಅನುಪಸ್ಥಿತಿಯಲ್ಲಿ ವಿಧಾನಸಭೆಯ ಅಧ್ಯಕ್ಷತೆಯನ್ನು (Panel of Chairmen) ವಹಿಸಿಕೊಳ್ಳಲು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 9ರ ಮೇರೆಗೆ ಸನ್ಮಾನ್ಯ ಸಭಾಧ್ಯಕ್ಷರು ಈ ಕೆಳಕಂಡ ವಿಧಾನಸಭಾ ಸದಸ್ಯರುಗಳನ್ನು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಶ್ರೀಯುತರುಗಳಾದ :**

1. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
2. ಕೌಜಲಗಿ ಮಹಾಂತೇಶ್ ಶಿವಾನಂದ್
3. ಕೆ.ಎಂ. ಶಿವಲಿಂಗೇಗೌಡ
4. ಟಿ. ರಘುಮೂರ್ತಿ
5. ಆರಗ ಜ್ಞಾನೇಂದ್ರ
6. ಜಿ.ಟಿ. ದೇವೇಗೌಡ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

7. **ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರವನ್ನು ಒದಗಿಸದೇ ಇರುವ ಇಲಾಖಾಧಿಕಾರಿಗಳನ್ನು ಕರೆಯಿಸಿ ಪರಿಶೀಲಿಸುವ ಕಾರ್ಯವನ್ನು ವಿಧಾನ ಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ವಹಿಸುವ ಬಗ್ಗೆ**

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ 18ನೇ ಮಾರ್ಚ್, 2025**

**ಸಂಖ್ಯೆ: 144**

ಸದನದಲ್ಲಿ ಪ್ರಶ್ನೋತ್ತರ ಕಲಾಪವು ಅತ್ಯಂತ ಮಹತ್ವದ ಪಾತ್ರವನ್ನು ಹೊಂದಿದ್ದು, ಮಾನ್ಯ ಸದಸ್ಯರುಗಳು ಅವರವರ ಕ್ಷೇತ್ರಗಳ ಮತ್ತು ನಾಡಿನ ಜ್ವಲಂತ ಸಮಸ್ಯೆಗಳ ಕುರಿತು ಸರ್ಕಾರದಿಂದ ಪರಿಹಾರ ಕಂಡುಕೊಳ್ಳಲು ಒಂದು ಸದಾವಕಾಶವಾಗಿರುತ್ತದೆ. ಅಂತೆಯೇ ಇದೊಂದು ಸದಸ್ಯರ ಅಂತರ್ಗತ ಹಕ್ಕಾಗಿ ಪರಿಣಮಿಸಿರುತ್ತದೆ.

ಇಂತಹ ಮಹತ್ವದ ಪ್ರಶ್ನೋತ್ತರ ಅವಧಿಯಲ್ಲಿ ಮಾನ್ಯ ಸದಸ್ಯರುಗಳು ಉತ್ತರಗಳನ್ನು ಬಯಸಿ ಸಲ್ಲಿಸಿರುವ ಹಲವಾರು ಪ್ರಶ್ನೆಗಳಿಗೆ ಇಲಾಖೆಗಳಿಂದ ಉತ್ತರಗಳನ್ನು ಒದಗಿಸದೆ ಇರುವುದನ್ನು ಮತ್ತು ಮಾನ್ಯ ಸದಸ್ಯರುಗಳ ಅಸಮಾಧಾನ, ಕಳಕಳಿ ಹಾಗೂ ಅಭಿಪ್ರಾಯವನ್ನು ಮನಗಂಡ ಸನ್ಮಾನ್ಯ ಸಭಾಧ್ಯಕ್ಷರು ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಸಕಾಲದಲ್ಲಿ ಸರ್ಕಾರದಿಂದ ಉತ್ತರಗಳನ್ನು ಪಡೆದು ಒದಗಿಸುವ ಕ್ರಮಗಳನ್ನು (Follow Up Action) ಕೈಗೊಳ್ಳುವ ಮೂಲಕ ಸಾರ್ವಜನಿಕವಾಗಿ ಸದನದ ಗೌರವವನ್ನು ಎತ್ತಿ ಹಿಡಿಯುವ ದಿಸೆಯಲ್ಲಿ, ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 363ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ಹಾಗೂ ನಿಯಮ 283(4)ರಡಿ ಇರುವ ಅಂತರ್ಗತ ಅಧಿಕಾರವನ್ನು ಚಲಾಯಿಸಿ, ಈ ಕೆಳಕಾಣಿಸಿದ ನಿರ್ದೇಶನವನ್ನು ನೀಡಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

**ಸಭಾಧ್ಯಕ್ಷರ ನಿರ್ದೇಶನ**

"ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸರ್ಕಾರವು ಸಕಾಲದಲ್ಲಿ ಉತ್ತರಗಳನ್ನು ಒದಗಿಸದೆ ಇರುವ ಸಂಬಂಧಪಟ್ಟ ಇಲಾಖಾಧಿಕಾರಿಗಳನ್ನು ಸಮಿತಿ ಸಭೆಗೆ ಕರೆಯಿಸಿ ಪರಿಶೀಲನೆ ನಡೆಸುವ ಹೊಣೆಗಾರಿಕೆಯನ್ನು ವಿಧಾನ ಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ವಹಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

## 8. ವಿಧಾನ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತು ಹಾಗೂ ಅಗೌರವದಿಂದ ವರ್ತಿಸಿದ ಮಾನ್ಯ ಸದಸ್ಯರುಗಳನ್ನು ಅಮಾನತುಗೊಳಿಸಿದ ಬಗ್ಗೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ 21ನೇ ಮಾರ್ಚ್, 2025**

**ಸಂಖ್ಯೆ: 145**

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಂಡಿಸಿದ ಹಾಗೂ ಸದನವು ಅಂಗೀಕರಿಸಿದ ಪ್ರಸ್ತಾವದಂತೆ ಈ ದಿನ ಅಂದರೆ, ದಿನಾಂಕ: 21.03.2025ರಂದು ಸದನದಲ್ಲಿ ಪೀಠದ ಆದೇಶವನ್ನು ಲೆಕ್ಕಿಸದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತಿನಿಂದ ಹಾಗೂ ಅಗೌರವದಿಂದ ನಡೆದುಕೊಂಡಿದ್ದರಿಂದ ಮಾನ್ಯ ವಿಧಾನಸಭಾ ಸದಸ್ಯರುಗಳಾದಂತಹ ಶ್ರೀ ದೊಡ್ಡನಗೌಡ ಹೆಚ್. ಪಾಟೀಲ್, ವಿರೋಧ ಪಕ್ಷದ ಮುಖ್ಯ ಸಚೇತಕರು, ಡಾ: ಅಶ್ವಥ್‌ನಾರಾಯಣ್ ಸಿ.ಎನ್., ಶ್ರೀ ಎಸ್.ಆರ್. ವಿಶ್ವನಾಥ್, ಶ್ರೀ ಬಿ.ಎ. ಬಸವರಾಜ, ಶ್ರೀ ಎಂ.ಆರ್. ಪಾಟೀಲ್, ಶ್ರೀ ಚನ್ನಬಸಪ್ಪ (ಚೆನ್ನಿ), ಶ್ರೀ ಬಿ. ಸುರೇಶ್‌ಗೌಡ, ಶ್ರೀ ಉಮಾನಾಥ್ ಎ. ಕೋಟ್ಯಾನ್, ಶ್ರೀ ಶರಣು ಸಲಗರ, ಡಾ: ಶೈಲೇಂದ್ರ ಬೆಲ್ದಾಳೆ, ಶ್ರೀ ಸಿ.ಕೆ. ರಾಮಮೂರ್ತಿ, ಶ್ರೀ ಯಶಪಾಲ್ ಎ. ಸುವರ್ಣ, ಶ್ರೀ ಬಿ.ಪಿ. ಹರೀಶ್, ಡಾ: ಭರತ್‌ಶೆಟ್ಟಿ ವೈ., ಶ್ರೀ ಮುನಿರತ್ನ, ಶ್ರೀ ಬಸವರಾಜ್ ಮತ್ತಿಮೂಡ್, ಶ್ರೀ ಧೀರಜ್ ಮುನಿರಾಜು ಮತ್ತು ಡಾ: ಚಂದ್ರು ಲಮಾಣಿ ಅವರುಗಳನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 348ರ ಮೇರೆಗೆ ತಕ್ಷಣದಿಂದ ಜಾರಿಗೆ ಬರುವಂತೆ 6 ತಿಂಗಳುಗಳ ಕಾಲ ಸದನಕ್ಕೆ ಬಾರದಂತೆ ತಡೆಹಿಡಿದು ಅಮಾನತ್ತುಗೊಳಿಸಲಾಗಿರುತ್ತದೆ.

**ಸದರಿಯವರುಗಳ ಅಮಾನತ್ತು ಅವಧಿಯಲ್ಲಿ ಈ ಕೆಳಕಂಡ ಪರಿಣಾಮಗಳು ಜಾರಿಯಲ್ಲಿರುತ್ತವೆ.**

1. ಅವರುಗಳು ವಿಧಾನಸಭೆಯ ಸಭಾಂಗಣ, ಲಾಬಿ ಮತ್ತು ಗ್ಯಾಲರಿಗಳಿಗೆ ಪ್ರವೇಶಿಸುವಂತಿಲ್ಲ.
2. ಅವರು ಸದಸ್ಯರಾಗಿರುವ ವಿಧಾನಮಂಡಲದ/ವಿಧಾನ ಸಭೆಯ ಸ್ಥಾಯಿ ಸಮಿತಿಗಳ ಸಭೆಗಳಲ್ಲಿಯೂ ಭಾಗವಹಿಸುವಂತಿಲ್ಲ.
3. ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅವರುಗಳ ಹೆಸರಿನಲ್ಲಿ ಯಾವುದೇ ವಿಷಯವನ್ನು ನಮೂದು ಮಾಡತಕ್ಕದಲ್ಲ.

4. ಅಮಾನತ್ತಿನ ಅವಧಿಯಲ್ಲಿ ಅವರುಗಳು ನೀಡುವ ಯಾವುದೇ ಸೂಚನೆಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಅಮಾನತ್ತಿನ ಅವಧಿಯಲ್ಲಿ ನಡೆಯುವ ಸಮಿತಿಗಳ ಚುನಾವಣೆಯಲ್ಲಿ ಅವರುಗಳು ಮತದಾನ ಮಾಡುವಂತಿಲ್ಲ.
6. ಅಮಾನತ್ತಿನ ಅವಧಿಯಲ್ಲಿ ಅವರುಗಳು ಯಾವುದೇ ದಿನಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ. ಎಂದು ಈ ಮೂಲಕ ತಿಳಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

# ಭಾಗ–3

# ಸಂಸತ್ ಸುದ್ದಿಗಳು

## 1. House nod to 16 bills in 24: Govt

A TOTAL of 16 Bills, including the Aircraft Bill and Public Examination Act, has been passed by both the Houses of Parliament during 2024, said the ministry of Parliamentary Affairs on dated:02.01.2025 Apart from these important legislations, two crucial bills the Waqf (Amendment) Bill, 2024, and the 'One Nation One Election' were also introduced and referred to a Joint Parliamentary Committee for further scrutiny.

In a year ender release published the ministry said that the Waqf (Amendment) Bill, 2024, which seeks to amend the Waqf Act, 1995, was referred to the Joint Parliamentary Committee.

It further said that two bills the Constitution (One Hundred and Twenty-Ninth Amendment) Bill, 2024, which seeks to amend the Constitution of India; and the Union Territories Laws (Amendment) Bill, 2024, which seeks to amend the Government of Union Territories Act, 1963, the Government of National Capital Territory of Delhi Act, 1991 and the Jammu and Kashmir Reorganisation Act, 2019 were referred to the JPC on December 20.

The 16 crucial legislations enacted during 2024 include the Public Examination (Prevention of Unfair Means) Act, the Jammu and Kashmir Local Bodies Laws (Amendment) Act, and the Bharatiya Vayuyan Vidheyak, among others.

The government said that the Water (Prevention and Control of Pollution) Amendment Act, 2024 was aimed at amending the Water (Prevention and Control of Pollution) Act, 1974 to decriminalise various provisions in the Act for minor violation.

Another bill the Public Examination (Prevention of Unfair Means) Act, 2024 - is meant to bring greater trans-parency, fairness and credibil-ity to the public examination systems and to reassure the youth that their genuine efforts will be fairly rewarded and their future is safe.

The crucial Jammu and Kashmir Local Bodies Laws (Amendment) Act, 2024 is in-tended to make appropriate - amendments to the Jammu and Kashmir Panchayati Raj Act, 1989, the Jammu and Kashmir Municipal Act, 2000 and the Jammu and Kashmir Municipal Corporation Act, 2000 to provide reservations to the Other Backward Classes and also align certain provisions of these Acts with the Constitution.

As part of the 100 days agenda of the government, it launched six new initiatives including the 75th anniversary of adoption of the Constitution on November, 26, 2024 and a special function on the Constitution Day in Central Hall of

Samvidhan Sadan. It held a discussion by both Houses on 'Glorious journey of 75 years of the Constitution'.

About 729 matters in Lok Sabha and 317 in Rajya Sabha were raised by members during the zero hour. The government said these matters were forwarded to the concerned ministries or departments for appropriate action.

**Courtesy**:Indian Express, Dated: 02.01.2025

## 2. Only Parliament can constitutionally remove HC judge:Jagdeep Dhankhar

Rajya sabha chairman Jagdeep Dhankhar asserted that only parliament has the jurisdiction to constitutionally remove a high Court judge, saying a notice for the removal of Justice Shekhar Yadav of the Allahabad High Court is pending with him.

His remarks come in the context of the Supreme Court's summons to Justice Yadav to appear before senior justice of the top court regarding his communally charged remarks. Earlier in January, the SC sought a report from the Chief Justice of the Allahabad High Court on the issue as well.

Speaking in the House, the Chairman made it clear that Justice Yadav's fate fell within his domain. He asked the Rajya Sabha Secretart General to share with the Secretart General of the SC the information that 55 members of the Upper House had also given a notice to the Chairman, seeking the removal of Justice Yadav in December.

"I am seized of an undated notice for motion received on 13 December 2024, bearing 55 purported signatures of the members of the Rajya Sabha seeking removal from office of Justice Shekhar Yadav of Allahabad High Court under Article 124(4) of the Constitution. The jurisdiction for the stated subject matter constitutionally lies in exclusivity with the chairman, Rajya sabha and in an eventuality with the parliament and Hon'ble president," Mr. Dhankhar said.

"Taking note of public domain information and inputs available, it is expedient that the Secretary General, Rajya Sabha shares this information with the Secretary General, Supreme Court of India," he said.

**Courtesy:** Indian Express, Dated:14.02.2025

## 3. ಹೊಸ ಐಟಿ ಮಸೂದೆ ಮಂಡನೆ

ಆದಾಯ ತೆರಿಗೆಗೆ ಸಂಬಂಧಿಸಿದ ಹೊಸ ಮಸೂದೆಯನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ದಿನಾಂಕ: 13.02.2025ರಂದು ಮಂಡಿಸಿದರು. ಮಸೂದೆ ಮಂಡನೆಗೆ ವಿರೋಧ ಪಕ್ಷಗಳ ಸದಸ್ಯರು ಭಾರಿ ವಿರೋಧ ವ್ಯಕ್ತಪಡಿಸಿದರು. ಆದರೆ, ಧ್ವನಿಮತದ ಮೂಲಕ ಮಸೂದೆ ಮಂಡನೆಗೆ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ಹಿನ್ನೆಲೆಯಲ್ಲಿ ಸಚಿವೆ 'ಆದಾಯ ತೆರಿಗೆ ಕಾಯ್ದೆ 2025'ನ್ನು ಮಂಡಿಸಿದರು. ಈ ವೇಳೆ ಕರಡು ಮಸೂದೆಯನ್ನು ಸದನದ ಆಯ್ಕೆ ಸಮಿತಿಗೆ ಶಿಫಾರಸ್ಸು ಮಾಡಬೇಕು ಎಂದು ಮನವಿ ಮಾಡಿದರು. ಈ ನಡುವೆ, ಜನವರಿ 30 ರಿಂದ ನಡೆಯುತ್ತಿದ್ದ ಬಜೆಟ್ ಅಧಿವೇಶನದ ಉಭಯ ಸದನಗಳ ಮೊದಲ ಹಂತದ ಕಲಾಪ ಮುಕ್ತಾಯಗೊಂಡಿದ್ದು, ಮಾರ್ಚ್.10ಕ್ಕೆ ಮುಂದೂಡಿಕೆಯಾಗಿದೆ. ಆಯ್ಕೆ ಸಮಿತಿ ಅಂದಿನ ಅಧಿವೇಶನದ ಮೊದಲ ದಿನ ತನ್ನ ವರದಿಯನ್ನು ಸಲ್ಲಿಸಲಿದೆ. ಹೊಸ ಕಾಯ್ದೆಯಲ್ಲಿ ಅಸೆಸ್‌ಮೆಂಟ್ ಇಯರ್ ಎಂಬುದನ್ನು ಕೈಬಿಟ್ಟು ಟ್ಯಾಕ್ಸ್ ಇಯರ್ ಎಂಬ ಪದವನ್ನು ಬಳಸಲಾಗಿದೆ. ಆರು ದಶಕಗಳಷ್ಟು ಹಳೆಯ ಕಾಯ್ದೆಗಳಲ್ಲಿದ್ದ ಹಲವು ಸೆಕ್ಷನ್‌ಗಳನ್ನು ತೆಗೆದುಹಾಕಲಾಗಿದೆ.

**ಆಧಾರ**:ವಿಜಯವಾಣಿ, ದಿನಾಂಕ:14.02.2025

## 4. Lok Sabha to discuss President's Rule in Manipur, approve Budget

The Lok Sabha will have an hour-long discussion on the statutory resolution seeking approval of the proclamation of President's Rule in Manipur. A meeting of the House Business Advisory Committee, chaired by Speaker Om Birla on dt:10.03.2025, decided on the discussion.

Manipur is currently under President's Rule and Parliament will have to approve its Budget. Earlier Finance Minister Nirmala Sitharaman tabled the Manipur Budget for 2025-26 in the Lok Sabha, earmarking an expenditure of 135,1039 crore, up from 132,656 31 crore in this financial year. The Budget discussions will start from 04.03.2025 and they have been clubbed with the debates on the second batch of Supplementary Demands for Grants for 2024-25 and the Demands for Excess Grants for 2021-22 and six hours have been allotted for it.

**Courtesy:** The Hindu, Dated: 11.03.2025

## 5. Union Minister, DMK MPs spar in Lok Sabha

"I have used a word which I should not have used for the members from Tamil Nadu, Tamil Nadu government, and people of Tamil Nadu. I withdraw my word if it has hurt anyone," Mr. Pradhan said in the House.

Amid protests by the DMK members, Mr. Birla rewoul buked party MP Dayanidhi Maran for making a that comment on the Chair. "Be careful while speaking, whatever you said leader was not on record. Had it been on record, I would with have ensured proper action against you," Mr. Birla warned Mr. Maran.

The Speaker then asked Parliamentary Affairs Minister Kiren Rijiju to bring a motion against Mr. Maran. Mr. Rijiju condemned the remark of the DMK member and assured the Chair that the government would act after taking a sense of the House.

Trouble started during the Question Hour when Mr. Pradhan said the DMK-led Tamil Nadu government had changed its stand on implementing the centrally sponsored PM SHRI scheme that seeks to strengthen schools managed by the Centre, State, or local bodies.

A State has to sign a memorandum of under standing with the Union government that it would implement the National Education Policy, (NEP) 2020 and in return, the Union government would provide the funds.

"The Tamil Nadu government had initially agreed to sign the MoU. But now they have changed the stand. Many non BJP ruled states, including Karnataka and Himachal Pradesh, have sent signed the agreement," Mr. Pradhan said, adding that the DMK too had agreed at one point when a delegation came to meet him.

The Minister claimed that Tamil Nadu Chief Mi nister M.K. Stalin had also agreed initially "but suddenly some super CM appeared and they took a U-Turn. They just want to do politics".

Taking strong exception to the Minister's remarks, the DMK members trooped in to the Well of the House and forced an adjournment. When the House reassembled at noon, Ms. Kanimozhi said she was "very pained and hurt" by a particu lar word used by Mr. Pradhan.

She added that along with Tamil Nadu Educa tion Minister and other DMK colleagues, she had met Mr. Pradhan to request him to release the funds to the State under education schemes. "We have clearly said that we have issues with the NEP and we cannot accept it in full. We said that the three language formula is not acceptable to Tamil Nadu," Ms. Kanimozhi said.

Speaking to presspersons outside Parliament, Ms. Kanimozhi said, "This is a budgetary allocation. Why are you withholding that money and saying that you come and sign that you will accept the NEP and three-language policy, only then we will release the funds?"

**Courtesy:**The Hindu, Dated:11.03.2025

## 6. Parliamentary panel asks govt. to conduct Census at the earliest

The Parliamentary Standing Committee on Home Affairs has recommended that the Census be completed at the earliest.

The panel observed that the Union Ministry of Home Affairs (MIA) may prepare data on the influx of immigrants, including Bangladesh is, Rohingya from Myanmar, and those from other countries. "Rohingyas are entering and settling illegally in various parts of the country," the committee said.

"MHA should take effective steps to identify the illegally settled Rohingyas and repatriate them to their parent countries," it recommended. The panel suggested that the Ministry explore and leverage additional existing digital platforms and tools, including mobile phone connections, Aadhaar, and other government databases for real time data collection. Further, linking the data collected through these digital channels with the Aadhaar database could provide additional layers of verification, ensuring data integrity and reducing the need for manual cross checking, the committee said.

The population count that was to be done in 2021 has been Indefinitely postponed by the government.The committee, led by Radha Mohan Das Agarwal of the BJP, tabled the 252$^{nd}$ report on Demand for Grante (2025-26) for the Ministry on 10.03.2025 in the Rajya Sabha.

The Ministry informed the committee that 11,309.46 crore was allocated for the Census exercise in the Union Budget, 2024-25 in anticipation of the declaration of the Census and update of the National Population Register (NPR), which had been postponed after the outbreak of COVID-19.

"As the Census was not declared, the Revised Esti mate for 2024-25 was re duced to 1572 crores. In view of this, the Budges Estimate for 2025-26, for the time being, has been kept at 1574.80 crores considering the expected liabilities for various activities under this Head," the report said.

The Ministry said many of the Census related preparatory activities had been completed, technological update was in progress, and as and when the Cen sus exercise was undertaken, additional funds would be sought in accordance with the yearwise requirement. It said the proposed posed expenditure expend for the financial year 2025-26 encompassed various activities aimed at continuing preparatory work for the Census and the NPR, including technological up dates.

**Courtesy:**The Hindu Dated:11.03.2025

## 7. Don't stand in the way of aspirations of students, Pradhan tells T.N. govt.

Maintaining his position that the three language formula in the National Education Policy of 2020 is different from the policy implemented by the Congress government in 1968, Union Education Minister Dharmendra Pradhan on dated 11.03.2025 urged the Tamil Nadu government not to create impediments to the aspirations of the students in the State.

Replying to a debate in the Rajya Sabha on dated 11.03.2025, he said multilingualism was the order of the day, and said NEP promoted learning in the mother tongue up to Class 5.

On the controversy over appointment of Vice Chancellors in various public universities, he said there was nothing new in it, and pointed a finger at University Grants Commission guidelines on faculty appointments adopted in 2010, when the UPA was in power, for the problems. He said if there was any need for changes in the guidelines, the Centre would consider it.

On the three language  formula, he said the Centre never discriminated against anybody. "We are open to everybody," he said and expressed regrets if his statemer its in the Lok Sabha on Monday hurt anybody. "But you have to face the truth and truth is bitter," he said adding that by launching the Kashi Tamil Sangamann and Saurashtra Tamil Sangamam, translating Tinularral into various languages and establishing an International Centre on Thin rvalluvar in Singapore, the Narendra Modi government was making all efforts to promote the Tamil  languge.

"You can call me a fool. But, you cannot make people of Tamil Nad in fools all the time. Please come out of these old ideas," he said.

He said in schools in the State, Tamil language was declining and English was on the rise. Citing government data, he said enrolments in Tamil medium dropped from 65.87 lakh in 2018-19 to 46.83 lakh in 2023-24. "Sixty-seven percent of students are now in English medium schools, while Tamil medium enrolment has dropped from 54% (2018-19) to 36% (2023 24). In government schools, English medium enrolment jumped five times from 3.4 lakh to 17.7 lakh in just five years. Tamil enrolment fell by 7.3 lakh in government-aided schools, reflecting a deep shift in preference," the Minister said.

DMK member Kanimozhi N.V.N. Somu said the State's autonomy was being infringed upon, deviating from established feder all principles and undermining the intensive framework of development and inclusive governance. The delayed release of

funds for Tamil Nadu education system is just not an administrative issue. It is a matter of constitutional and federal importance," she said:

**Courtesy**:The Hindu, Dated:12.03.2025

## 8. Lok Sabha passes Bill to boost investments in oil and gas sector

A Bill that seeks to amend the existing law governing exploration and prodution of oil and gas as well as delink petroleum operations from mining operations was passed by the Lok Sabha .

The Oilfields (Regulation and Development) Amendment Bill, 2024, is aimed at boosting investment in the sector. The Bill was passed by the Rajya Sabha in December.

Replying to the debate before the passage of the Bill, Union Petroleum and Natural Gas Minister Hardeep Singh Puri said India was the only country where in the reference period of the past three years, the prices of petrol and diesel had actually come down. This had been possible because "the Prime Minister reduced the central excise (duty) on two occasions."

Mr. Puri said that Congress-ruled States have increased VAT (value added tax) on petrol and diesel. "The oil Bill aims to resolve one of the biggest grievances of global oil companies interested in investing in India by providing stability in operation, both in terms of tenure of the lease and the condition. The Bill also does not alter the rights of the States, which will continue to give petroleum leases and receive royalties as before. The Bill also does not alter the existing level playing field and offers no preference to either the private or the public sector," the Minister said.

Among others, the Bill aims to decriminalise some of the provisions of the original Oilfields (Regulation and Development) Act, 1948, by introducing "penalties, adjudication by an adjudicating authority and appeal as against the order of adjudicating authority".

Earlier, Congress MP Manish Tewari said the draft Bill lacked vision and a road map. Referring to oil imports, Mr. Tewari said that India was not "future ready".

"What is required is a road map to make India energy sufficient, which unfortunately is completely missing. What is the government planning to do to encourage independent oil explorers?  Is there anything in the Bill that incentivises them," he asked.

**Courtesy:**The Hindu, Dated:13.03.2025

## 9. ಅಕ್ರಮ ವಲಸೆ ತಡೆ ಮಸೂದೆಗೆ ಲೋಕ ಅಂಗೀಕಾರ

ದೇಶದೊಳಗೆ ವಿದೇಶಿಯರ ಪ್ರವೇಶವನ್ನು ನಿಯಂತ್ರಿಸುವ ಮತ್ತು ಅಕ್ರಮ ವಲಸೆಯನ್ನು ತಡೆಯುವ ನಿಟ್ಟಿನಲ್ಲಿ ರೂಪಿಸಲಾದ ವಲಸೆ ಮತ್ತು ವಿದೇಶಿಯರ ಮಸೂದೆ 2025 ಅನ್ನು ಲೋಕಸಭೆಯಲ್ಲಿ ಅಂಗೀಕರಿಸ ಲಾಯಿತು. ವೀಸಾ ನೋಂದಣಿ, ಪಾಸ್‌ಪೋರ್ಟ್‌ಗಳಂತಹ ಪ್ರಯಾಣ ಸಂಬಂಧಿತ ದಾಖಲೆಗಳು ಸೇರಿದಂತೆ ವಿದೇಶಿಯರ ಭಾರತ ಪ್ರವೇಶಕ್ಕೆ ಸಂಬಂಧಿಸಿದ ವಿಷಯಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸುವುದು ಇದರ ಉದ್ದೇಶವಾಗಿದೆ.

- ವಲಸಿಗರು ಭಾರತಕ್ಕೆ ಪ್ರವೇಶಿಸುತ್ತಿದ್ದಂತೆ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ.
- ಕೆಲ ಸ್ಥಳಗಳಿಗೆ ಪ್ರಯಾಣಿಸುವುದು, ಹೆಸರು ಬದಲು, ಸಂರಕ್ಷಿತ ಅಥವಾ ನಿರ್ಬಂಧಿತ.
- ಮಾನ್ಯ ವೀಸಾ, ಪಾಸ್‌ಪೋರ್ಟ್ ಇಲ್ಲದ ವಿದೇಶಿಯರಿಗೆ 5 ವರ್ಷ ಜೈಲು ಶಿಕ್ಷೆ ಅಥವಾ ಅಥವಾ 5 ಲಕ್ಷ ರೂ.ದಂಡ–ನಕಲಿ ದಾಖಲೆ ಬಳಸಿ ಪ್ರವೇಶ, ವಾಸ, ನಿರ್ಗಮನಕ್ಕೆ 2ರಿಂದ 7 ವರ್ಷ ಜೈಲು ಮತ್ತು 10 ಲಕ್ಷವರೆಗೆ ದಂಡ.
- ಅವಧಿ ಮೀರಿ ವಾಸ, ವೀಸಾ ನಿಯಮ ಉಲ್ಲಂಘಿಸಿದರೆ 3 ವರ್ಷ ಸೆರೆವಾಸ ಅಥವಾ 3.ಲಕ್ಷ ರೂ.ದಂಡ.
- ಶಿಕ್ಷಣ ಸಂಸ್ಥೆ ವಿವಿ, ಆಸ್ಪತ್ರೆ, ನರ್ಸಿಂಗ್ ಹೋಂಗಳು ವಿದೇಶಿಯರ ಬಗ್ಗೆ ನೋಂದಣಿ ಕಚೇರಿಗೆ ವರದಿ ಮಾಡುವುದು ಕಡ್ಡಾಯ.
- ಪ್ರದೇಶಗಳಲ್ಲಿ ವಾಸದ ಮೇಲೆ ನಿರ್ಬಂಧ.

**ಆಧಾರ:**ಕನ್ನಡಪ್ರಭ, ದಿನಾಂಕ:28.03.2025

# ಭಾಗ–4

# ಕೇಂದ್ರ ಸುದ್ದಿಗಳು

## 1. 2023ನೇ ಸಾಲಿನಲ್ಲಿ ಕರ್ನಾಟಕ ಆರ್ಥಿಕತೆ ಆರೋಗ್ಯಕರ: ಕೇಂದ್ರ

ರಾಜ್ಯಗಳ ಅರ್ಥಿಕ ಆಯೋಗಕ್ಕೆ ಸಂಬಂಧಿಸಿದಂತೆ ವಾರ್ಷಿಕ ವರದಿಯನ್ನು ಕೇಂದ್ರ ಸರ್ಕಾರದ ನೀತಿ ಅಯೋಗ ಬಿಡುಗಡೆ ಮಾಡಿದೆ. ಈ ವರದಿಯ ಪ್ರಕಾರ 2022–23ರಲ್ಲಿ ಉತ್ತಮ ಆರ್ಥಿಕ ಆರೋಗ್ಯ ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 10ನೇ ಸ್ಥಾನ ಪಡೆದುಕೊಂಡಿದೆ.

ಆರ್ಥಿಕ ಆರೋಗ್ಯ ಸೂಚ್ಯಂಕ–2025 ಎಂದು ಈ ವರದಿಯನ್ನು ಬಿಡುಗಡೆ ಮಾಡಿದ್ದು, 18 ರಾಜ್ಯಗಳ ಆರ್ಥಿಕ ಸ್ಥಿತಿಯ ವಿವರಣೆ ನೀಡಲಾಗಿದೆ. ಖನಿಜ ಸಂಪನ್ಮೂಲ ವ್ಯಾಪಕವಾಗಿ ಹೊಂದಿರುವ ಒಡಿಶಾ ಅಗ್ರ ಸ್ಥಾನದಲ್ಲಿದ್ದು, 67.8 ರೇಟಿಂಗ್ ಅಂಕಗಳನ್ನು ಪಡೆದುಕೊಂಡಿದೆ. ಉಳಿದಂತೆ ಛತ್ತೀಸ್‌ಗಢ (55.2), ಗೋವಾ(53.6), ಜಾರ್ಖಂಡ್(51.6), ಗುಜರಾತ್(50.5) ನಂತರದ 4 ಸ್ಥಾನಗಳಲ್ಲಿವೆ. 40.8 ಅಂಕ ಪಡೆದುಕೊಂಡಿರುವ ಕರ್ನಾಟಕ 10ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಆದಾಯ ಮತ್ತು ವೆಚ್ಚದ ಪ್ರಮಾಣ ಸಮವಾಗಿತ್ತು ಎಂದು ವರದಿ ತಿಳಿಸಿದೆ.

ಕೇವಲ 10.7 ಅಂಕ ಪಡೆದುಕೊಂಡಿರುವ ಪಂಜಾಬ್ ಕೊನೆಯ ಸ್ಥಾನದಲ್ಲಿದೆ. ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳ ಆರ್ಥಿಕ ಸ್ಥಿತಿ ದುಸ್ಥಿತಿಯಲ್ಲಿದೆ ಎಂದು ವರದಿ ತಿಳಿಸಿದೆ.

**ಆಧಾರ:**ಉದಯವಾಣಿ, ದಿನಾಂಕ:25.01.2025

## 2. ಸುವರ್ಣ ಭಾರತದ ಅಭಿವೃದ್ಧಿ ಅನಾವರಣ

ಸುವರ್ಣ ಭಾರತ–ಪರಂಪರೆ ಹಾಗೂ ಅಭಿವೃದ್ಧಿ ಧ್ಯೇಯವಾಕ್ಯದೊಂದಿಗೆ ಕರ್ತವ್ಯ ಪಥದಲ್ಲಿ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮ ವೈಭವೋಪೇತವಾಗಿ ನಡೆಯಿತು. ಪಥ ಸಂಚಲನದ ವೇಳೆಗೆ, ಜಾನಪದ ಮತ್ತು ಬುಡಕಟ್ಟು ಸಮುದಾಯಕ್ಕೆ ಸೇರಿದ ಸುಮಾರು 5,000 ಕಲಾವಿದರು ವಿವಿಧ ರಾಜ್ಯಗಳಿಂದ 45 ಪ್ರಕಾರದ ನೃತ್ಯಗಳನ್ನು ಪ್ರದರ್ಶಿಸಿದರು. ಇದೇ ಮೊದಲ ಬಾರಿಗೆ ಕರ್ತವ್ಯ ಪಥದ ವಿಜಯ್ ಚೌಕ್‌ನಿಂದ ವಿಸ್ತರಿತ ಮಾರ್ಗವು ಸಾಂಸ್ಕೃತಿಕ ನೃತ್ಯಗಳಿಂದ ಪೂರ್ಣವಾಗಿ ತುಂಬಿಕೊಂಡಿತ್ತು.

ಜಾರ್ಖಂಡ್‌ನ ಬುಡಕಟ್ಟು ನಾಯಕ ಬಿರ್ಸಾ ಮುಂಡಾ ಅವರ 150ನೇ ಜನ್ಮ ವರ್ಷಾಚರಣೆಯ ಪ್ರಯುಕ್ತ ನಡೆದ ನೃತ್ಯ ರೂಪಕವು ಜಾನಪದ ಹಾಗೂ ಬುಡಕಟ್ಟು ಪರಂಪರೆಯ ಕಲಾ ಶ್ರೀಮಂತಿಕೆಯನ್ನು ಅನಾವರಣಗೊಳಿಸಿತು. ವಿಕಸಿತ ಭಾರತ ಶ್ರೇಷ್ಠ ಭಾರತ ವಿಷಯಾಧಾರಿತ ನೃತ್ಯ ಪ್ರದರ್ಶನಗಳು ಮುಚ್ಚುಗೆಗೆ ಪಾತ್ರವಾದವು. ಸಂಗೀತ ನಾಟಕ ಅಕಾಡೆಮಿಯಿಂದ ನಿಮಿಷಗಳ 'ಜಯತಿ ಜಯ ಮಮ: ಭಾರತಂ' ಶೀರ್ಷಿಕೆಯ ಪ್ರದರ್ಶನ ನಡೆಯಿತು.

ಕರ್ತವ್ಯ ಪಥದಲ್ಲಿ ನಡೆದ ಧ್ವಜಾರೋಹಣಕ್ಕೂ ಮೊದಲು ಹೊಸದಿಲ್ಲಿಯಲ್ಲಿರುವ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ, ಹುತಾತ್ಮ ಸೈನಿಕರಿಗೆ ಗೌರವ ವಂದನೆ ಸಲ್ಲಿಸಿದರು. ಈ ವೇಳೆ ಮೂರು ರಕ್ಷಣಾ ಪಡೆಗಳ ಮುಖ್ಯಸ್ಥರು ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉಪಸ್ಥಿತರಿದ್ದರು.

ಮುಖ್ಯ ಅತಿಥಿಯಾಗಿರುವ ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೋ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿದ ಇಂಡೊನೇಷ್ಯಾದ ನಾಲ್ಕನೇ ಅಧ್ಯಕ್ಷ. ಭಾರತೀಯ ವಾಯುಪಡೆಯ ವೈಮಾನಿಕ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಒಟ್ಟು 40 ವಿಮಾನಗಳು ದಿಲ್ಲಿಯಲ್ಲಿ ಹಾರಾಟ ನಡೆಸಿ, ತಮ್ಮ ಸಾಮರ್ಥ್ಯ ಹಾಗೂ ಶಕ್ತಿಯ ಪ್ರದರ್ಶನ ಮಾಡಿದವು. 22 ಫೈಟರ್ ಜೆಟ್‌ಗಳು, ಹನ್ನೊಂದು ಸರಕು ಸಾಗಣೆ ವಿಮಾನಗಳು ಹಾಗೂ ಏಳು ಹೆಲಿಕಾಪ್ಟರ್‌ಗಳು ಪ್ರದರ್ಶನದಲ್ಲಿ ಭಾಗಿಯಾದವು. ರಫೇಲ್, ಸುಖೋಯ್–30, ಜಾಗ್ವರ್, ಡಾರ್ನಿಯರ್–228, ಅತ್ಯಾಧುನಿಕ ಅಪಾಚೆ ಹೆಲಿಕಾಪ್ಟರ್‌ಗಳು ವಿಕ್ಟರಿ ಫಾರ್ಮೇಷನ್‌ನಲ್ಲಿ ಘರ್ಜಿಸಿದವು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:27.01.2025

### 3. Kharge seeks Rs.5,000 cr.in Budget for development of KK region

Congress president Mallikarjun Kharge has written to Union Finance Minister Nirmala Sitharaman seeking a special grant of Rs.5,000 crore for the development of the Kalyana Karnataka region, which has been accorded special status under Article 371 (J) of the Constitution, in the upcoming Union budget.

In the letter dated January 15, later acknowledged by the Ministry, Mr Kharge said, This allocation will significantly accelerate the region’s progress and address its critical developmental challenges.

He also pointed out that the Sate Cabinet, in a meeting held earlier in Kalaburagi, had decided to demand a special grant. Mr. Kharge, in his letter, listed various projects taken up by the Karnataka government and the allocations made by the State, urging the Centre to make provision for special grants to address the persistent challenges.

In September 2024, after the special Cabinet meeting in Kalaburagi, Chief Minister Siddaramaiah said the Union government had not given a single ruppee” after the region got the special status in 2012. The meeting had also decided to establish a separate secretariat for effective implementation of Article 371(J) of the Constitution.

**Courtesty:** The Hindu, Dated:29.01.2025.

### 4. ವಕ್ಫ್ ವಿಧೇಯಕ: ಸ್ಪೀಕರ್ ವರದಿ

ವಕ್ಫ್(ತಿದ್ದುಪಡಿ) ಮಸೂದೆ ಪರಿಶೀಲಿಸಲು ರಚಿಸಿದ ಸಂಸತ್ತಿನ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ತನ್ನ ವರದಿ ಸಲ್ಲಿಸಿದೆ.

ಸಮಿತಿಯು ಆಡಳಿತಾರೂಢ ಬಿಜೆಪಿ ಸದಸ್ಯರು ಸೂಚಿಸಿದ ಬದಲಾವಣೆಗಳನ್ನು ಒಳಗೊಂಡಿರುವ ತನ್ನ ವರದಿಯನ್ನು ಬಹುಮತದ ಮತದಿಂದ ಅಂಗೀಕರಿಸಿತ್ತು. ಪ್ರತಿಪಕ್ಷಗಳ ಸದಸ್ಯರು ಪ್ರಸ್ತಾಪಿಸಿದ ಎಲ್ಲ ಬದಲಾವಣೆಗಳನ್ನು ಸಮಿತಿ ತಿರಸ್ಕರಿಸಿದೆ. ಎಲ್ಲ ಬದಲಾವಣೆಗಳನ್ನು ಸಮಿತಿ ತಿರಸ್ಕರಿಸಿದೆ. ಜೆಪಿಸಿ ಮಸೂದೆ ಕುರಿತ ಕರಡು ವರದಿಯನ್ನು 15–11 ಬಹುಮತದಿಂದ ಅಂಗೀಕರಿಸಿದೆ. ವರದಿಗೆ ಪ್ರತಿಪಕ್ಷದ ಸದಸ್ಯರು ಭಿನ್ನಾಭಿಪ್ರಾಯ ಟಿಪ್ಪಣಿಗಳನ್ನು ಸಲ್ಲಿಸಿದ್ದಾರೆ.

2024ರ ಆಗಸ್ಟ್‌ನಲ್ಲಿ ಲೋಕಸಭೆಯಲ್ಲಿ ಪರಿಚಯಿಸಲಾದ ಮಸೂದೆಯು, ವಕ್ಫ್ ಆಸ್ತಿಗಳ ನಿರ್ವಹಣೆಯಲ್ಲಿ ಆಧುನಿಕತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರುವ ಗುರಿಯನ್ನು ಹೊಂದಿದೆ ಎಂದು ಬಿಜೆಪಿ ಸದಸ್ಯರು ಸಮರ್ಥಿಸಿಕೊಂಡಿದ್ದಾರೆ. ಆದರೆ, ಪ್ರತಿಪಕ್ಷಗಳು ಇದನ್ನು ಮುಸ್ಲಿಂ ಸಮುದಾಯದ ಸಾಂವಿಧಾನಿಕ ಹಕ್ಕುಗಳ ಮೇಲಿನ ದಾಳಿ ಮತ್ತು ವಕ್ಫ್ ಮಂಡಳಿಗಳ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಎಂದಿವೆ.

**ಆಧಾರ:**ವಿಶ್ವವಾಣಿ, ದಿನಾಂಕ:31.01.2025

### 5. Budget a force multiplier that will boost consumption, investment and growth:PM

Prime Minister Narendra Modi lauded the Union budget as a “ people’s budget” that fulfils the dreams of every India and said that it is a “force-multiplier” that will boost consumption, investment and growth.

In televised remarks after Finance Minister Nirmala Sitharaman presented the Budget in the Lok Sabha, Modi highlighted a host of measures for different sectors and noted that budgets generally look to fill the government's treasury but this one seeks to put more money in people's pockets and increase their savings.

This budget focuses on marking people a partner in India's development journey, he said, describing it as a histroric and important milestone on the road to the country's progress. It lays the foundation for attaining these goals, he added.

"The Budget lays a strong foundation to increase savings and make citizens partners in development," Modi said, adding that its welfare initiatives for gig workers underscore the government's commitment to the dignity of labour.

He said the measures presented in the Budget for the manufacturing sector will allow Indian products to shine globally. The tax relief will provide big benefits to the middle class and salaried employees, he said, adding the Budget announcement that those earning up to Rs 12lakh will have to pay no income tax will present those entering the job sector with a big opportunity.

Modi praised the historic decision to promote the private sector in nuclear energy, saying civil nuclear energy will ensure a significant contribution to the country's development in the future.

Stressing that the Budget has prioristed all job generating sectors, he highlighted two key reforms, including granting infrastructure status to shipbuilding that will boost the construction of large ships in India and accelerate the 'Atmanirbhar Bharat' programme.

Including hotels in 50 tourist destinations under the infrastructure category will provide a major fillip to tourism, he said, noting that the hospitality industry is the largest employment sector. He said the country is progresssing with mantra of Vikas bhi, virasat bhi, (development as well as heritage).

**Courtesy:** Deccan Hearld, Dated:02.02.2025

## 6. India is 2nd largest AI market: Altman

TWO years after dismissing India's AI potential as hopeless Open AI CEO Sam Altman on dated:05.02.2025, acknowledged that India has grown to become the second biggest market for his firm's flagship product, the Chat GPT, after the US.

Althman, while discussing India's progress in AI alongside Union minister Ashwini Vaishnaw at an event in Delhi said Open AI has tripled its users in India in the past year.

Praising India's rapid optimisation of the new technology, he said: The innovation that's happening, what people are building in India, it's really incredible.

We're excited to do much, much more here, and I think it's (the Indian AI program) a great plan.

During his earlier visit to india in June 2023, Altman had termed the country's ability to develop a foundational model similar to Chat GPT "totally hoeless", suggesting that India would be better off without trying to create its own model. He later claimed his words were taken out of context.

Altman now says training AI models is still expensive but it is becoming increasingly feasible, so India can take the lead in AI development. His shift in tone comes in the wake of Chinese AI startup DeepSeek creating a foundation model at a fraction of the cost of Open AI's offering. The rise of Deepseek has put pressure on Open AI and other Western firms to lower Prices to remain competitive.

**Courtesy:**Indian Express, Dated:06.02.2025

## 7. ಕರ್ನಾಟಕವೇ ನಂ.1

ಪಂಚಾಯಿತಿ ವಿಕೇಂದ್ರಿಕರಣ ಕುರಿತು ದೇಶದ ಎಲ್ಲ ರಾಜ್ಯಗಳಲ್ಲಿ ನಡೆಸಿರುವ ಅಧ್ಯಯನ ವರದಿಯನ್ನು ಕೇಂದ್ರದ ಪಂಚಾಯತ್ ರಾಜ್ ಸಚಿವಾಲಯ ಬಿಡುಗಡೆಗೊಳಿಸಿದ್ದು, ಸೂಚ್ಯಂಕದ ಪಟ್ಟಿಯಲ್ಲಿ ಕರ್ನಾಟಕ ಅಗ್ರ ಸ್ಥಾನದಲ್ಲಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ (ಐಐಪಿಎ) ಈ ಬಗ್ಗೆ ಅಧ್ಯಯನ ನಡೆಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಕಾರ್ಯವಿಧಾನ, ಕಾರ್ಯದ ಚೌಕಟ್ಟು, ಹಣಕಾಸು ನಿರ್ವಹಣೆ, ಕಾರ್ಯನಿರ್ವಾಹಕರು, ಸಾಮರ್ಥ್ಯವರ್ಧನೆ, ಹೊಣೆಗಾರಿಕೆ ಈ ಆರು ಅಯಾಮದಡಿ ಅಧ್ಯಯನ ನಡೆಸಲಾಗಿದ್ದು, 34 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ 68 ಜಿಲ್ಲೆಗಳ 172 ಪಂಚಾಯತ್‌ಗಳಲ್ಲಿ ಅಧ್ಯಯನ ನಡೆಸಲಾಗಿತ್ತು. ಎಲ್ಲಾ ರಾಜ್ಯಗಳಿಂದ ಒಟ್ಟು 1594 ಜನರ ಪ್ರತಿಕ್ರಿಯ ಪಡೆದು ವರದಿ ಸಿದ್ದಪಡಿಸಲಾಗಿದೆ.

ಐಐಪಿಎ ಸಿದ್ಧಪಡಿಸಿದ ವರದಿ ಪ್ರಕಾರ, 2013–14 ರಿಂದ 2021–22ರ ಅವಧಿಯಲ್ಲಿ ಪಂಚಾಯತ್ ವಿಕೇಂದ್ರೀಕರಣವು ಶೇ.39.9 ರಿಂದ ಶೇ.43.9ಕ್ಕೆ ಏರಿದೆ. 2018ರಲ್ಲಿ ಪ್ರಾರಂಭಗೊಂಡ ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯನದಿಂದಾಗಿ ಸೂಚ್ಯಂಕದ ಸಾಮರ್ಥ್ಯ ವರ್ಧನೆ ಶೇ.44ರಿಂದ ಶೇ.54.6, ಎಂದರೆ ಶೇ.10 ಹೆಚ್ಚಳ ಕಂಡಿದೆ. ಈ ಅವಧಿಯಲ್ಲಿ, ಭಾರತ ಸರ್ಕಾರ ಮತ್ತು ಅಯಾ ರಾಜ್ಯ ಸರ್ಕಾರ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂಲಸೌಕರ್ಯ ಒದಗಿಸುವಲ್ಲಿ ಅಪಾರ ಪ್ರಯತ್ನಗಳನ್ನು ಮಾಡಿರುವುದರ ಜತೆಗೆ ಗ್ರಾಮೀಣ ಹಾಗೂ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಅಧಿಕಾರಿಗಳನ್ನು ನೇಮಿಸಿಕೊಂಡಿವೆ. ಇದರ ಪರಿಣಾಮವಾಗಿ ಕಾರ್ಯವಿಧಾನಕ್ಕೆ ಸಂಬಂಧಿಸಿದ ಸೂಚ್ಯಂಕದ ಅಂಶವು ಶೇ.39.6ರಿಂದ ಶೇ.50.9ಕ್ಕೆ ಏರಿಕೆ ಕಂಡಿದೆ.

ಭಾರತದ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಗೆ ಪಂಚಯತ್ ವಿಕೇಂದ್ರೀಕರಣ ಸೂಚ್ಯಂಕವು ನಿರ್ಣಾಯಕವಾಗಿದೆ. ಇದು ಉತ್ತಮವಾಗಿ ಕಾರ್ಯನಿರ್ವಹಿಸಿದ ರಾಜ್ಯಗಳನ್ನು ಪ್ರೇರೇಪಿಸುವುದಲ್ಲದೆ, ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಸಬಲೀಕರಣಗೊಳಿಸುವ ವಾತಾವರಣವನ್ನು ಸೃಷ್ಟಿಸಲು ರಾಜ್ಯ ಸರ್ಕಾರಗಳನ್ನು ಪ್ರೋತ್ಸಾಹಿಸುತ್ತದೆ. ಸೂಚ್ಯಂಕದಲ್ಲಿ 15ನೇ ಸ್ಥಾನದಿಂದ ಈಗ 5ನೇ ಸ್ಥಾನಕ್ಕೆ ಬಂದಿರುವ ಉತ್ತರ ಪ್ರದೇಶ ಗಮನಾರ್ಹ ಪ್ರಗತಿ ಕಂಡಿದೆ. ಉತ್ತರ ಪ್ರದೇಶದ ಯಶಸ್ಸಿನ ಕಥೆಯನ್ನು ವಿಶೇಷವಾಗಿ ಉಲ್ಲೇಖಿಸಲು ನನಗೆ ಹೆಮ್ಮೆಯಿದೆ ಎಂದು ಕೇಂದ್ರ ಪಂಚಾಯತ್ ರಾಜ್ ಸಚಿವ ಪ್ರೊ.ಎಸ್.ಪಿ.ಸಿಂಗ್ ಬಘೇಲ್ ಅಭಿಪ್ರಾಯಪಟ್ಟಿದ್ದಾರೆ.

**ಆಧಾರ**:ವಿಜಯ ವಾಣಿ, ದಿನಾಂಕ:15.02.2025

## 8. ಜ್ಞಾನೇಶ್‌ಕುಮಾರ್ ನೂತನ ಮುಖ್ಯ ಚುನಾವಣಾ ಆಯುಕ್ತ

ಕೇಂದ್ರ ಚುನಾವಣಾ ಆಯೋಗದ ನೂತನ ಮುಖ್ಯ ಚುನಾವಣಾ ಆಯುಕ್ತರಾಗಿ ಜ್ಞಾನೇಶ್‌ಕುಮಾರ್ ಅವರನ್ನು ನೇಮಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿ ಹಾಲಿ ಚುನಾವಣಾ ಆಯುಕ್ತರಾಗಿರುವ ಜ್ಞಾನೇಶ್‌ಕುಮಾರ್ ಹೆಸರನ್ನು ಅಂತಿಮಗೊಳಿಸಿದ್ದು, ಅದಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ. ಹಾಲಿ ಮುಖ್ಯ ಚುನಾವಣಾ ಆಯುಕ್ತರಾಗಿರುವ ರಾಜೀವ್‌ಕುಮಾರ್ ಅವಧಿ ಮುಕ್ತಾಯಗೊಳಲ್ಲಿದ್ದು, ಜ್ಞಾನೇಶ್ ಅವರು 2029ರ ಜನವರಿ 26ರವರೆಗೆ ಅಧಿಕಾರದಲ್ಲಿರಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನೊಳಗೊಂಡ ಸಮಿತಿಯಲ್ಲಿ ನೂತನ ಸಿಇಸಿ ಆಯ್ಕೆಗೆ ಸಭೆ ನಡೆಸಿತು. ಆದರೆ ಸಭೆಯಲ್ಲಿ ಭಾಗಿಯಾಗಿದ್ದ ರಾಹುಲ್ ಗಾಂಧಿ, ಮುಖ್ಯ ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯ ರಚನೆಯ ಕುರಿತು ಸಲ್ಲಿಸಲಾಗಿರುವ ಅರ್ಜಿಯ ಕುರಿತು ಸುಪ್ರೀಂ ಕೋರ್ಟ್ ಫೆಬ್ರವರಿ 19ರಂದು ವಿಚಾರಣೆ ನಡೆಸಲಿದ್ದು, ಆದಾದ ಬಳಿಕವೇ ಆಯುಕ್ತರನ್ನು ಘೋಷಿಸಿ ಎಂದು ಒತ್ತಾಯ ಮಾಡಿದರು. ಆದರೆ ಅವರ ಆಕ್ಷೇಪದ ಹೊರತಾಗಿಯೂ ಸಮಿತಿಯ ಉಳಿದಿಬ್ಬರು ಸದಸ್ಯರು ಬಹುಮತದೊಂದಿಗೆ ಜ್ಞಾನೇಶ್‌ಕುಮಾರ್ ಹೆಸರನ್ನು ಅಂತಿಮಗೊಳಿಸಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:18.02.2025

## 9. PM's team to fight obesity includes Murty & Nilekani

PM Modi nominated 10 persons from different walks of life, including J&K chief minister Omar Abdullah, businessman Anand Mahindra and actor Monhanlal, to help fight obesity, a day after he exhorted people to take measures to curb the health menace.

I would like to nominate the following people to help strengthen the fight against obesity and spread awareness on reducing edible oil consumption in food. I also request them to nominate 10 people each so that our movement gets bigger, Modi posted on X.

Olympians shooter Manu Bhaker and weightlifter Mirabaai chanu, Infosys co-founder Nandan Nilekani, actor R Madhavan, singer Shreya Ghoshal, philanthropist and Rajya Sabha MP Sudha Murty and Bhojpuri singer actor Nirahua were the other personalities nominated by the PM.

Making a strong pitch for fighting obesity, Modi in his monthly Mann Ki Baat broadcast urged people to use less oil in food and pass on the challenge of reducing oil intake by 10% to 10 others.

Omar, who said he was happy to join the PM's campaign, also nominated 10 persons to join it. They are Biocon managing director Kiran Mazumdar Shaw, businessman Sajjan Jindal, actor Deepika padukone, former tennis player Sanja Mirza ex-cricketer Irfan Pathan, MP Supriya Sule and former wushu player Kuldeep Handoo. Mahindra Group chairman Anand Mahindra said to achieve the mission of a Viksit Bharat by 2047, we not only need a strong economy, but a healthy population

as well. Making small changes like using even 10 percent less cooking oil can build up to big contributions; be it to your well being, to your wallet, or to a healthier world. Mahindra posted on X. He nominated actors Anil Kapoor and Gul Panag, Zerodha co-founder Nikhil Kamath, India’s first chess grandmaster Vishwanathan Anand, and ace badminton player P V Sindhu to take forward the campaign.

Nilekani said apart from a range of health related benefits, reduced use of edible oil will also strengthen the nation’s economy by cutting dependence on imports and saving valuable resources. In adition to dietary changes, I have also incorporated daily exercise to keep obesity and related issues in check, he said.

Nelekani nominated Goenka group chairman Harsh Goenka, chef Ritu Dalmia, Myntra founder Mukesh Bansal and Kotak Mahindra Bank director Uday Kotak, amoung others for the campaign. Sudha Murthy nominated fellow parliamentarian and former Olympian P T Usha, ex-cricketers Anil Kumble and venkatesh Prasad, former too cop and governor Kiran Bedi and author Amish Tripathi among others.Weightlifter Mirabai Chanu, who won the silver at the 2021. Tokyo Olympics, wrote on X, “ Making small changes to our daily lives can result in a huge transformation all over the country and help us move towards achieving our dream of making a fit India. “ Chanu nominated reigning world chess champion D Gukesh, Paralympian Avani Lekhara, former shooter Gagan Narang, and star shuttler P V Sindhu, amoun others, for the campaign.

**Courtesy:**Times of India, Dated:25.02.2025

## 10. ಹೊಸ ಆದಾಯ ತೆರಿಗೆ ಮಸೂದೆ ಮಂಡನೆ

‘ಸಂಸತ್ತಿನ ಬರುವ ಬಜೆಟ್ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ಹೊಸ ಆದಾಯ ತೆರಿಗೆ ಮಸೂದೆಯನ್ನು ಮಂಡಿಸುವ ಸಾಧ್ಯತೆ ಇದೆ. ಪ್ರಸ್ತುತ ಇರುವ ಆದಾಯ ತೆರಿಗೆ ಕಾಯ್ದೆಯ ಬದಲಿಗೆ ಗ್ರಹಿಕೆಗೆ ಅನುಕೂಲಕರವಾಗುವಂತೆ ಸರಳೀಕರಣ ಮತ್ತು ಪುಟಗಳ ಸಂಖ್ಯೆಯನ್ನು ಶೇಕಡ 60ರಷ್ಟು ಮಾಡಿ ಹೊಸ ಕಾಯ್ದೆ ಮಂಡನೆಗೆ ಸರ್ಕಾರ ಉದ್ದೇಶಿಸಿದೆ ಎಂದು ಮೂಲಗಳು ಹೇಳಿವೆ.

ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961 ಅನ್ನು ಆರು ತಿಂಗಳಲ್ಲಿ ಸಮಗ್ರ ಪರಿಶೀಲನೆಗೆ ಒಳಪಡಿಸಲಾಗುವುದು’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2024ರ ಜುಲೈನಲ್ಲಿ ಮಂಡಿಸಿದ್ದ ಮಧ್ಯಂತರ ಬಜೆಟ್ ವೇಳೆ ಹೇಳಿದ್ದರು. ನಿರ್ಮಲಾ ಸೀತಾರಾಮನ್ ಅವರ ಈ ಹೇಳಿಕೆಯ ಬೆನ್ನಲ್ಲೇ ಹಳೆಯ ಕಾಯ್ದೆಯ ಪರಿಶೀಲನೆ ಮತ್ತು ಸಂಕ್ಷಿಪ್ತ, ಸ್ಪಷ್ಟ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತಹ, ವಿವಾದಗಳನ್ನು ಕಡಿಮೆ ಮಾಡುವಂತಹ ಹೊಸ ಕಾಯ್ದೆಯ ರಚನೆ ಕುರಿತಾದ ಮೇಲ್ವಿಚಾರಣೆಗಾಗಿ ಸಿಬಿಟಿಡಿ ಆಂತರಿಕ ಸಮಿತಿಯನ್ನೂ ಸ್ಥಾಪಿಸಿತು. ಜೊತೆಗೆ, ಕಾಯ್ದೆಯ ವಿವಿಧ ಅಯಾಮಗಳ ಪರಿಶೀಲನೆಗೆ 22 ವಿಶೇಷ ಉಪಸಮಿತಿಗಳನ್ನು ರಚಿಸಿತು.

ಈ ಸಂಬಂಧ ಸಾರ್ವಜನಿಕರ ಅಭಿಪ್ರಾಯ ಮತ್ತು ಸಲಹೆಗಳನ್ನು ನಾಲ್ಕು ವಿಭಾಗಗಳಲ್ಲಿ ಅಹ್ವಾನಿಸಲಾಗಿತ್ತು. ಭಾಷೆಯ ಸರಳೀಕರಣ, ದಾವೆಯ ಕಡಿತ ಅನುಸರಣೆ ಕಡಿತ ಮತ್ತು ಅನಗತ್ಯ ನಿಬಂಧನೆಗಳ ಕುರಿತಾಗಿ ಅಭಿಪ್ರಾಯ ಮತ್ತು ಸಲಹೆ ಕೋರಲಾಗಿತ್ತು. ಆದಾಯ ತೆರಿಗೆ ಇಲಾಖೆಯು ಈವರೆಗೆ 6,500 ಸಲಹೆಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿದೆ.

ಹೊಸ ಆದಾಯ ತೆರಿಗೆ ಮಸೂದೆಯನ್ನು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಗುವುದು. ಇದೊಂದು ಹೊಸ ಕಾಯ್ದೆಯಾಗಿದ್ದು, ಹಳೆಯ ಕಾಯ್ದೆಯ ತಿದ್ದುಪಡಿ ಆಗಿರುವುದಿಲ್ಲ. ಪ್ರಸ್ತುತ ಕರಡು ಮಸೂದೆಯನ್ನು ಕಾನೂನು ಸಚಿವಾಲಯ ಪರಿಶೀಲಿಸುತ್ತಿದೆ ಮತ್ತು ಅದನ್ನು ಬಜೆಟ್ ಅಧಿವೇಶನ ದ್ವಿತೀಯಾರ್ಧದಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಪ್ರಸ್ತುತ ಬಳಕೆಯಲ್ಲಿರುವ ಆದಾಯ ತೆರಿಗೆ ಕಾಯ್ದೆ 1961ರಲ್ಲಿ ವೈಯಕ್ತಿಕ ಆದಾಯ ತೆರಿಗೆ, ಕಾರ್ಪೋರೇಟ್ ತೆರಿಗೆ, ಭದ್ರತಾ ವಹಿವಾಟು ತೆರಿಗೆ, ಸಂಪತ್ತಿನ ತೆರಿಗೆ ಸೇರಿ ನೇರ ತೆರಿಗೆ ಸಂಬಂಧಿತ 298 ಸೆಕ್ಷನ್ ಮತ್ತು 23 ಅಧ್ಯಾಯಗಳಿವೆ. ಈ ಕಾಯ್ದೆಯ ಶೇಕಡ 60 ರಷ್ಟನ್ನು ಕಡಿತಗೊಳಿಸುವ ಉದ್ದೇಶ ಹೊಂದಲಾಗಿದೆ.

**ಆಧಾರ**:ವಿಜಯ ವಾಣಿ, ದಿನಾಂಕ:25.01.2025

## 11. Five rich states contribute about 72% of direct taxes

TOP five industrial states of the country contribute more than two-third of the direct taxs collected by the central government even as less developed states like Uttar Pradesh, Bihar and Madhya Pradesh are taking away more than a third of tax devolved by the Centre to he states, the government informed parliament on dated:10th March2025.

Responding to a question in Lok Sabha, minister of state for finance pankaj chaudhary tabled the total state-wise contribution of direct taxes and Central GST as also state wise devolution of taxes from FY20 to FY24. As per the date tabled in parliament, five state Maharashtra, Karnataka, Delhi, Tamil Nadu and Gujarat accounted for 72% of the direct taxes and 53% of Central GST collected by the government in FY24.

These five states contributed Rs.14.2 lakh crore of Rs.19.62 lakh crore collected in direct taxes in 2023-24. During the year, these states contributed Rs. 2 lakh crore of Rs. 3.75lakh crore collected via Central GST. GST has three components Central, state and integrated GST. Integrated GST is collected on inter state transfer of goods and services. Five southern states-Tamil Nadu, Karnataka, Telangana, Andhra Pradesh and Kerala- contribute 25% of the direct taxes and 27% of Central GST collected during FY24. These states received 15% from the Center’s divisible tax pool. The Center’s divisible tax pool. The Centre shares 41% of the taxes collected by it with the states.

UP, Bihar and MP received 36% of the tax (Rs lakh cr of Rs 11.3 lakh crore) meant for sharing with the state. These three states contributed only 5% of the total direct tax and Central GST collected by the Centre during that period.

THE Goods and Services Tax(GST) department has detected Rs.1.95 lakh crore tax evasion in over 25,000 cases so far in the current financial year. According to the

finance ministry, of the Rs.1.95 lakh crore evasion detected, taxpayers have voluntarily submitted Rs.21,500 crore.

In the past five years including the current financial year, the total GST evasion detected amounted to Rs.6.8 lakh crore, out of which evaders voluntarily deposited Rs.1.24 lakh crore.

Of the total GST fraud cases, fake ITC claims worth Rs.46,472 crore were detected during the current financial year.

The minister of state for finance Pankaj Chaudhary told parliament that the government has taken several measures for preventing tax evasions such as digitization through e-invoicing and GST analytics.

**Courtesy:**Indian Express, Dated:11.03.2025

## 12. ಕರ್ನಾಟಕ ಜತೆ ಕನ್ನಡದಲ್ಲೇ ಪತ್ರ ವ್ಯವಹಾರ: ಅಮಿತ್ ಶಾ

ಹಿಂದಿ ಭಾಷೆ ಹೇರಿಕೆ ಮಾಡುವುದಿಲ್ಲ. ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳ ಜತೆ ಆ ನೆಲದ ಅಥವಾ ಅಧಿಕೃತ ಭಾಷೆಯಲ್ಲಿಯೇ ಮುಂಬರುವ ಡಿಸೆಂಬರ್ ತಿಂಗಳಿಂದ ಪತ್ರ ವ್ಯವಹಾರವನ್ನು ಕೇಂದ್ರದ ಗೃಹ ಸಚಿವಾಲಯ ನಡೆಸುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ಕನ್ನಡದಲ್ಲಿ, ತಮಿಳುನಾಡು ಸರ್ಕಾರಕ್ಕೆ ತಮಿಳಿನಲ್ಲಿ, ಕೇರಳ ಸರ್ಕಾರಕ್ಕೆ ಮಲಯಾಳಂ, ಆಂಧ್ರ-ತೆಲಂಗಾಂ ರಾಜ್ಯಗಳ ಸರ್ಕಾರಗಳಿಗೆ ತೆಲುಗಿನಲ್ಲಿಯೇ ಪತ್ರ ಬರೆದು ಸಂವಹನ ನಡೆಸುವುದಾಗಿ ರಾಜ್ಯ ಸಭೆಯಲ್ಲಿ ಸಚಿವ ಅಮಿತ್ ಶಾ ಹೇಳಿದ್ದಾರೆ. ಅ ಮೂಲಕ ಸ್ಥಳೀಯ ಭಾಷೆಗಳ ಬಳಕೆ ವಿಚಾರದಲ್ಲಿ ಕೇಂದ್ರ ಸರ್ಕಾರದ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

ಡಿಸೆಂಬರ್ ಬಳಿಕ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಮತ್ತು ಸಂಸದರೊಂದಿಗೆ ಅವರದೇ ರಾಜ್ಯದ ಭಾಷೆಯಲ್ಲಿಯೇ ಕೇಂದ್ರ ಗೃಹ ಸಚಿವಾಲಯ ಪತ್ರ ವ್ಯವಹಾರ ನಡೆಸಲಿದೆ ಎಂದಿದ್ದಾರೆ. ತಮ್ಮ ಭ್ರಷ್ಟಚಾರ ಮರೆಮಾಚಲು ಭಾಷೆ ಹೆಸರಲ್ಲಿ ರಾಜಕೀಯ ಮಾಡುವವರಿಗೆ ನಮ್ಮ ಈ ಪ್ರಯತ್ನ ತಕ್ಕ ಪ್ರತ್ಯುತ್ತರವಾಗಲಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ಅಧಿಕೃತ ಭಾಷಾ ಇಲಾಖೆಯ ಅಡಿಯಲ್ಲಿ ನರೇಂದ್ರ ಮೋದಿ ಸರ್ಕಾರವು ಎಲ್ಲಾ ಭಾರತೀಯ ಭಾಷೆಗಳ ಬಳಕೆಯನ್ನು ಹೆಚ್ಚಿಸುವ ಕೆಲಸ ಮಾಡುತ್ತಿದೆ. ಅದಕ್ಕಾಗಿ ತಮಿಳು, ತೆಲಗು, ಮರಾಠಿ ಗುಜರಾತಿ, ಪಂಜಾಬಿ, ಅಸ್ಸಾಮಿ, ಬಂಗಾಳಿ ಸೇರಿದಂತೆ ಎಲ್ಲಾ ಭಾಷೆಗಳಿಗಾಗಿ ಭಾರತೀಯ ಭಾಷೆಗಳ ನಡುವೆ ಭಾಷಾಂತರಕ್ಕೆ ಮೊಬೈಲ್ ಆ್ಯಪ್ ಹೊರತರಲಾಗುವುದು ಎಂದು ಸಚಿವ ಶಾ ಪ್ರಕಟಿಸಿದ್ದಾರೆ.

ಸ್ಥಳೀಯ ಭಾಷೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ರಾಜ ಭಾಷಾ ವಿಭಾಗದಲ್ಲಿ ಹೊಸ ಇಲಾಖೆಯನ್ನು ತೆರೆಯಲಾಗಿದೆ. ಅದರ ಅಡಿಯಲ್ಲಿ ಅನುವಾದಕ್ಕೆ ಅನುಕೂಲವಾಗಲು ಆ್ಯಪ್‌ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಅಮಿತ್ ಶಾ ಹೇಳಿದ್ರು.

**ಆಧಾರ:**ವಿಶ್ವವಾಣಿ, ದಿನಾಂಕ:23.03.2025

# ಭಾಗ–5

# ರಾಜ್ಯ ಸರ್ಕಾರದ ಸುದ್ದಿಗಳು

## 1. ಕೆಎಸ್‌ಆರ್‌ಟಿಸಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ

ರಾಜ್ಯ ರಸ್ತೆ ಸಾರಿಗೆ ನಿಗಮಗೆ 9 ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಲಭಿಸಿವೆ. ಸಂಸ್ಥೆಗೆ 5 ಆ್ಯಡ್ ವರ್ಲ್ಡ್ ಶೌಡೌನ್ ಚಿನ್ನದ ಪ್ರಶಸ್ತಿ 2 ಗ್ರೌಕೇರ್ ಇಂಡಿ ಹಾಗೂ ಒಂದು ಪಿಆರ್‌ಎಸ್‌ಐ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ. ಅಶ್ವಮೇಧ ಕ್ಲಾಸಿಕ್ ಬಸ್ಸುಗಳ ಪರಿಚಯ, ಪರಿಣಾಮಕಾರಿ ಸಾರ್ವಜನಿಕ ಸಂಪರ್ಕ ಉಪಕ್ರಮ, ಅಂಬಾರಿ ಉತ್ಸವ ಬಸ್ ಅತ್ಯುತ್ತಮ ಬ್ರಾಂಡ್ ಅನುಭವ.

ಅಶ್ವಮೇಧ ಕ್ಲಾಸಿಕ್ ಬಸ್ಸುಗಳು– ಅತ್ಯುತ್ತಮ ಕಾರ್ಪೋರೇಟ್ ಸಂವಹನ ಹಾಗೂ ನಿರ್ವಹಣೆ, ಪಲ್ಲಕ್ಕಿ ಬಸ್ಸುಗಳ–ಅತ್ಯುತ್ತಮ ಗ್ರಾಹಕ ಸ್ವೀಕೃತಿ. ಪ್ರತಿಷ್ಠಿತ ಬಸ್ಸು ಸೇವೆಗಳ ಬ್ರಾಂಡಿಗ್–ಅತ್ಯುತ್ತಮ ಸಾರ್ವಜನಿಕ ಸಂಪರ್ಕ ವಿಭಾಗಗಳಲ್ಲಿ ಆ್ಯಡ್ ವರ್ಲ್ಡ್ ಶೌಡೌನ್ ಚಿನ್ನದ ಪ್ರಶಸ್ತಿ ಲಭಿಸಿದೆ.

ಅಶ್ವಮೇಧ ಕ್ಲಾಸಿಕ್ ಬಸ್ಸುಗಳು–ವರ್ಷದ ಅತ್ಯುತ್ತಮ ಬ್ರ್ಯಾಂಡ್ ನಿಗಮವು ಅತ್ಯುತ್ತಮ ಪರಿಸರ ನಿರ್ವಹಣೆ ಹಾಗೂ ವಿನೂತನ ಮಾನವ ಸಂಪನ್ಮೂಲ ಯೋಜನೆಗಳ ಅನುಷ್ಠಾನಕ್ಕಾಗಿ ಗ್ರೋ ಕೇರ್ ಇಂಡಿಯಾ ಪ್ರಶಸ್ತಿ ಎರಡು ವಿಭಾಗದಲ್ಲಿ ಪಡೆದಿರುತ್ತದೆ. ಪಿಆರ್‌ಎಸ್‌ಐ ರಾಷ್ಟ್ರೀಯ ಪ್ರಶಸ್ತಿ ನಿಗಮಕ್ಕೆ ಕಾರ್ಪೋರೇಟ್ ಚಿತ್ರ ವಿಭಾಗದಲ್ಲಿ ಲಭಿಸಿರುತ್ತದೆ. ಆ್ಯಡ್ ವರ್ಲ್ಡ್ ಪ್ರಶಸ್ತಿಗಳನ್ನು ನವದೆಹಲಿಯಲ್ಲಿ ಗ್ರೋ ಕೇರ್ ಇಂಡಿಯಾ ಪ್ರಶಸ್ತಿಗಳನ್ನು ಗೋವಾದಲ್ಲಿ ಹಾಗೂ ಪಿ.ಆರ್.ಎಸ್.ಐ ಪ್ರಶಸ್ತಿಯ್ನು ರಾಯಪುರದಲ್ಲಿ ಪ್ರದಾನ ಮಾಡಲಾಯಿತು.

**ಆಧಾರ**:ಸಂಯುಕ್ತ ಕರ್ನಾಟಕ, ದಿನಾಂಕ:02.01.2025

## 2. ಆರೋಗ್ಯವಂತ ಮನಸ್ಸಿನಿಂದ ಸ್ವಸ್ಥ ಸಮಾಜ

ನಿಮ್ಹಾನ್ಸ್ ಜನರಿಗೆ ಮಾನಸಿಕ ರೋಗ ಚಿಕಿತ್ಸೆಗೆ ಸಂಬಂಧಿಸಿದಂತೆ ಹೊಸ ಮೈಲುಗಲ್ಲು ಸೃಷ್ಠಿಸಿದೆ. ದೇಶದ ಉನ್ನತ ಮಟ್ಟದ 200 ಆಸ್ಪತ್ರೆಗಳಲ್ಲಿ ನಿಮ್ಹಾನ್ಸ್ ಕೂಡ ಒಂದು. ಲಕ್ಷಾಂತರ ಜನರು ಇಲ್ಲಿ ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಲ್ಲಿನ ಉತ್ತಮ ಪ್ರಯೋಗಾಲಯ ಮತ್ತು ಅತ್ಯಾಧುನಿಕ ಚಿಕಿತ್ಸೆಗಳು ಜನರಿಗೆ ಲಭ್ಯವಾಗುತ್ತಿವೆ. ದೇಶದಲ್ಲಿಯೇ ಈ ಸಂಸ್ಥೆ ಹೆಸರು ಮಾಡಿದ್ದು, ಮುಂದೆ ಜಾಗತಿಕ ಮಟ್ಟದಲ್ಲೂ ಹೆಸರು ಮಾಡಲಿ.

- ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡುತ್ತಿದ್ದು, ಮಾನಸಿಕ ಕಾಯಿಲೆಗಳಿಗೆ ಸಂಬಂಧಿಸಿದ ಅವೈಜ್ಞಾನಿಕ ನಂಬಿಕೆಗಳು ಮತ್ತು ಕಳಂಕ ದೂರವಾಗುತ್ತಿವೆ.
- ನಮ್ಮ ಪ್ರಾಚೀನ ಋಷಿಮುನಿಗಳು ಮತ್ತು ಸಂತರಿಂದ ಪಡೆದ ಜ್ಞಾನ ಮನಸ್ಸಿನ ಸಮತೋಲನ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.
- ಜಗತ್ತಿನಲ್ಲಿ ನಾವು ಕಾಣುವ ಎಲ್ಲದಕ್ಕೂ ಮನಸ್ಸೇ ಮೂಲ ಎಂದು ನಮ್ಮ ಧರ್ಮಗ್ರಂಥಗಳು ಹೇಳುತ್ತವೆ.
- ಆಧುನಿಕ ಆರೋಗ್ಯ ವ್ಯವಸ್ಥೆಗಳೊಂದಿಗೆ ಯೋಗದಂತಹ ಸಾಂಪ್ರದಾಯಿಕ ವಿಧಾನಗಳನ್ನು ನಿಮ್ಹಾನ್ಸ್ ಯಶಸ್ವಿಯಾಗಿ ಸಂಯೋಜಿಸಿದೆ.

**ಆಧಾರ**:ವಿಜಯ ಕರ್ನಾಟಕ, ದಿನಾಂಕ:04.01.2025

## 3. ಕೊಡವ ಕೌಟುಂಬಿಕ ಹಾಕಿಗೆ ಸರ್ಕಾರದಿಂದ ರೂ.ಒಂದು ಕೋಟಿ ಅನುದಾನ

ಕಳೆದ ವರ್ಷ ನಡೆದ ಕೊಡವ ಕುಟುಂಬಗಳ ಕುಂಡ್ಯೋಳಂಡ ಹಾಕಿ ಪಂದ್ಯಾವಳಿಯಲ್ಲಿ 360 ತಂಡಗಳು 4800 ಕ್ರೀಡಾಪಟುಗಳು ಪಾಲ್ಗೊಂಡು ಗಿನ್ನಿಸ್ ದಾಖಲೆ ನಿರ್ಮಾಣವಾಗಿದೆ. ಹಾಕಿ ಪಂದ್ಯಾವಳಿಯನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ರಾಜ್ಯ ಸರ್ಕಾರ ಎಲ್ಲಾ ನೆರವು ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಕುಂಡ್ಯೋಳಂಡ ಹಾಕಿ ಸಂಘಟಿಸಲು ಕೊಡವ ಕುಟುಂಬಕ್ಕೆ ರೂ. ಒಂದು ಕೋಟಿ ಚೆಕ್ ಅನ್ನು ಯುವ ಸಬಲೀಕರಣ ಇಲಾಖಾವತಿಯಿಂದ ವಿತರಿಸಿ ಮಾತನಾಡಿದರು.

ಹಾಕಿ ಹುಟ್ಟಿದ್ದು ಭಾರತ ದೇಶದಲ್ಲಿ ಧ್ಯಾನಚಂದ್ ಅವರಂತಹ ಹಾಕಿ ಮಾಂತ್ರಿಕ ಹುಟ್ಟಿದ ದೇಶ ನಮ್ಮದು. ಕ್ರಿಕೆಟ್ ಅಷ್ಟೇ ಅಲ್ಲ ಹಾಕಿ ಕೂಡ ಜನಪ್ರಿಯ ಕ್ರೀಡೆಯಾಗಿದ್ದು, ಕೊಡವ ಕುಟುಂಬಗಳು 23 ವರ್ಷಗಳಿಂದ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು ನಡೆಸಿಕೊಂಡು ಬರುತ್ತಿದೆ. ಮುಂದಿನ ದಿನಗಳಲ್ಲಿಯೂ ಈ ಪರಂಪರೆ ಮುಂದುವರೆಸಿಕೊಂಡು ಹೋಗುವಂತಾಗಲಿ ಎಂದು ಸಿಎಂ ಹಾರೈಸಿದರು.

**ಆಧಾರ:**ಉದಯವಾಣಿ, ದಿನಾಂಕ:10.01.2025

## 4. ಪ್ರಾಥಮಿಕ ಶಿಕ್ಷಣ ದಾಖಲಾತಿಯಲ್ಲಿ ಕರ್ನಾಟಕ ದ್ವಿತೀಯ

ಪ್ರಾಥಮಿಕ ಶಿಕ್ಷಣ ದಾಖಲಾತಿ ವಿಚಾರದಲ್ಲಿ ಕರ್ನಾಟಕ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದ್ದು, ತ್ರಿಪುರಾ ಮೊದಲ ಸ್ಥಾನದಲ್ಲಿದೆ. ಕೇಂದ್ರದ ಸಾಂಖ್ಯಿಕ ಸಚಿವಾಲಯ ಬಿಡುಗಡೆ ಮಾಡಿದ ಸಮಗ್ರ ವಾರ್ಷಿಕ ಮಾಡ್ಯುಲರ್ ಸಮೀಕ್ಷೆ 2022–23ರ ವರದಿ ಪ್ರಕಾರ, ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗೆ ಅತಿ ಹೆಚ್ಚು ದಾಖಲಾತಿ ಆಗಿರುವ ರಾಜ್ಯಗಳ ಪೈಕಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

2022ರ ಜುಲೈಯಿಂದ 2023ರ ಜೂನ್ ಅವಧಿಯನ್ನೊಳಗೊಂಡ ರಾಷ್ಟ್ರೀಯ ಮಾದರಿ ಸಮೀಕ್ಷೆ ವರದಿ ಇದಾಗಿದ್ದು, 6 ರಿಂದ 10 ವರ್ಷದ ಮಕ್ಕಳಲ್ಲಿ ಶೇ.97.4ರಷ್ಟು ಮಕ್ಕಳು ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ (1–5ನೇ ತರಗತಿ) ದಾಖಲಾಗಿದ್ದಾರೆ. ತ್ರಿಪುರಾದಲ್ಲಿ ಶೇ.97.9 ಮಕ್ಕಳು ಶಾಲೆಗಳಲ್ಲಿ ದಾಖಲಾಗಿದ್ದಾರೆ.

ಕರ್ನಾಟಕದಲ್ಲಿ ಶೇ.64.4 ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ಶೇ.10.1ರಷ್ಟು ವಿದ್ಯಾರ್ಥಿಗಳು ಅನುದಾನಿತ ಶಾಲೆಗಳಿಗೆ ಹಾಗೂ ಶೇ.25.2 ರಷ್ಟು ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ದಾಖಲಾಗುತ್ತಾರೆ. ಕರ್ನಾಟಕದಲ್ಲಿ ಒಟ್ಟಾರೆ ಸರಾಸರಿ ಶಿಕ್ಷಣ ಮಟ್ಟ 9 ವರ್ಷಗಳು ಎಂದು ವರದಿಯಲ್ಲಿ ಸೂಚಿಸಲಾಗಿದೆ.

ಕರ್ನಾಟಕ ಪ್ರಾಥಮಿಕ ಹಂತದ ಶಿಕ್ಷಣದ ದಾಖಲಾತಿ ಉತ್ತಮವಾಗಿರುವುದಕ್ಕೆ ಕೆಲವು ಮಹತ್ವದ ಅಂಶಗಳು ಕಾರಣವಾಗಿದೆ. ರಾಜ್ಯದ ಹಳ್ಳಿಗಳಲ್ಲಿ ರಸ್ತೆಗಳು ಮತ್ತು ಸಾರಿಗೆ ಸಂಪರ್ಕ ಉತ್ತಮವಾಗಿದೆ. ದಾಖಲಾತಿ ಅಭಿಯಾನಗಳು ಮತ್ತು ಮಕ್ಕಳಿಗೆ ಹಾಲು, ಮೊಟ್ಟೆ ನೀಡುವುದು, ಮಧ್ಯಾಹ್ನದ ಊಟ, ಸರ್ಕಾರದಿಂದ ಪಠ್ಯ ಶೂ ಸೇರಿ ಹತ್ತಾರು ಪ್ರೋತ್ಸಾಹಕ ಕ್ರಮಗಳು ದಾಖಲಾತಿ ಹೆಚ್ಚುವಲ್ಲಿ ಸಹಾಯಕವಾಗಿವೆ ಎಂಬುದನ್ನು ವರದಿ ಉಲ್ಲೇಖಿಸಿದೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗೆ ಹೋಗುವ ಬಾಲಕರಲ್ಲಿ ಶೇ.17ರಷ್ಟು ಮಂದಿ ಖಾಸಗಿ ಶಾಲೆಗಳಿಗೆ ಹೋಗುತ್ತಾರೆ. ಆದರೆ ಬಾಲಕಿಯರಲ್ಲಿ ಈ ಪ್ರಮಾಣ ಶೇ.13ರಷ್ಟಿದೆ. ನಗರ ಪ್ರದೇಶಗಳಲ್ಲಿ ಶೇ 46.3ರಷ್ಟು ಬಾಲಕರು ಮತ್ತು ಶೇ.46ರಷ್ಟು ಬಾಲಕಿಯರು ಖಾಸಗಿ ಶಾಲೆಗಳಿಗೆ ಹೋಗುತ್ತಾರೆ ಎಂಬುದು ವರದಿಯಲ್ಲಿ ಬಹಿರಂಗವಾಗಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:11.01.2025

## 5. ಆರೋಗ್ಯ ವಿವಿ ಮಂಗಳೂರು ಪ್ರಾದೇಶಿಕ ಕೇಂದ್ರಕ್ಕೆ ಶಿಲಾನ್ಯಾಸ

ಮಂಗಳೂರು ಸೇರಿದಂತೆ ಮೈಸೂರು, ಕಲಬುರ್ಗಿ, ದಾವಣಗೆರೆ, ಹುಬ್ಬಳ್ಳಿಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರ ಸ್ಥಾಪನೆಗೆ ಉದ್ದೇಶಿಸಿದ್ದು, ಈ ಹಿನ್ನೆಲೆಯಲ್ಲಿ ಮಂಗಳೂರು ಪ್ರಾದೇಶಿಕ ಕೇಂದದ್ರ ಕಚೇರಿ ಕಟ್ಟಡಕ್ಕೆ ಕಾವೂರಿನ ಮೇರಿಹಿಲ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಶಿಲಾನ್ಯಾಸ ನೆರವೇರಿಸಿದರು.

**ಆಧಾರ**:ಉದಯವಾಣಿ, ದಿನಾಂಕ:18.01.2025

## 6. ಶಾಸಕರ ನಿಧಿ ಬಳಕೆಗೆ ಮಾನದಂಡ ಪ್ರಕಟ

ಮಳೆಯಿಂದ ಹಾಳಾಗಿದ್ದ ಗ್ರಾಮೀಣ ಭಾಗದ ರಸ್ತೆಗಳಿಗೆ ಕಾಯಕಲ್ಪ ನೀಡಲು ಸರ್ಕಾರ ಕೊನೆಗೂ ಮುಂದಾಗಿದೆ. ರಾಜ್ಯಾದ್ಯಂತ ಗ್ರಾಮೀಣ ಭಾಗದ ಎಲ್ಲ 189 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 1,890 ಕೋಟಿ ರೂ ವೆಚ್ಚದಲ್ಲಿ ತೀವ್ರವಾಗಿ ಹಾಳಾಗಿರುವ ರಸ್ತೆ, ಸೇತುವೆ ಮತ್ತು ಚರಂಡಿಗಳ ಕಾಮಗಾರಿ ಕೈಗೆತ್ತಿಕೊಳ್ಳಲು ಸೂಚನೆ ನೀಡಲಾಗಿದೆ.

ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತಲಾ ರೂ.10ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಈ ಸಂಬಂಧ ಸ್ಥಳೀಯ ಶಾಸಕರೊಂದಿಗೆ ಸಮಾಲೋಚನೆ ನಡೆಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಎಲ್ಲ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಪಂಚಾಯತ್ ರಾಜ್ ಇಲಾಖೆ ಆದೇಶಿಸಿದೆ.

ಕಳೆದ ಮುಂಗಾರು ಮತ್ತು ಹಿಂಗಾರಿನಲ್ಲಿ ವಾಡಿಕೆಗಿಂತ ಅಧಿಕ ಮಳೆಯಿಂದಾಗಿ ಗ್ರಾಮೀಣ ಭಾಗದ ರಸ್ತೆಗಳು ವ್ಯಾಪಕವಾಗಿ ಹಾಳಾಗಿರುವ ಹಿನ್ನೆಲೆಯಲ್ಲಿ ಷರತ್ತುಬದ್ಧವಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ರೂ.5ಲಕ್ಷ ಮತ್ತು ಅದಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದು. ಮಣ್ಣಿನ ಜಲ್ಲಿ ರಸ್ತೆ ಕಾಮಗಾರಿ ತೆಗೆದುಕೊಳ್ಳುವುದ ಬೇಡ. ಆಯ್ಕೆ ಮಾಡುವ ರಸ್ತೆಗಳನ್ನು ಡಾಂಬರ್ ಅಥವಾ ಸಿಸಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದು ಕಡ್ಡಾಯ ಎಂದು ಸ್ಪಷ್ಟಪಡಿಸಲಾಗಿತ್ತು.

ಮನರೇಗಾ ಯೋಜನೆಯೊಂದಿಗೂ ಒಗ್ಗೂಡಿಸುವ ಮೂಲಕ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದ್ದು, ಹೊಸದಾಗಿ ರಸ್ತೆ ಅಭಿವೃದ್ಧಿಪಡಿಸಲು ಆಯ್ಕೆ ಮಾಡುವುದಾದರೆ ಅದು ಪ್ರಾಥಮಿಕ ಆರೋಗ್ಯ ಕೇಂದ್ರ, ಪಂಚಾಯಿತಿ ಕೇಂದ್ರ ಸ್ಥಾನ, ಮಾರುಕಟ್ಟೆ, ಶೈಕ್ಷಣಿಕ ಸಂಸ್ಥೆಗಳನ್ನು ಸಂಪರ್ಕಿಸುವಂತಿರಬೇಕು. ಈ ಅನುದಾನದಲ್ಲಿ ರಸ್ತೆ, ಚರಂಡಿ ಮತ್ತು ಸೇತುವೆಗಳನ್ನು ಮಾತ್ರ ಕ್ರಿಯಾಯೋಜನೆ ಒಳಗೊಂಡಿರಬೇಕು ಎಂದು ಆದೇಶದಲ್ಲಿ ಷರತ್ತುಗಳನ್ನು ವಿಧಿಸಲಾಗಿದೆ.

**ಆಧಾರ**:ವಿಜಯ ಕರ್ನಾಟಕ, ದಿನಾಂಕ:19.01.2025

## 7. ಎಲ್ಲ ಪಿಯು ಉಪನ್ಯಾಸಕರಿಗೂ ತರಬೇತಿ ನೀಡಿ: ಹೊರಟ್ಟಿ ಸಲಹೆ

ಪ್ರಸಕ್ತ ಸಾಲಿನ ದ್ವಿತೀಯ ಪಿಯು ಪರೀಕ್ಷೆ ಫಲಿತಾಂಶ ಹೆಚ್ಚಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸರ್ಕಾರವು ಆಯೋಜಿಸಿರುವ ಪುನಶ್ಚೇತನ ಮತ್ತು ಪರೀಕ್ಷಾ ತಯಾರಿ ತರಬೇತಿ ಕಾರ್ಯಕ್ರಮವನ್ನು ಕೇವಲ ಸರ್ಕಾರಿ ಕಾಲೇಜುಗಳ ಉಪನ್ಯಾಸಕರಿಗಷ್ಟೇ ಸೀಮಿತಗೊಳಿಸಬಾರದು. ಅನದಾನಿತ ಹಾಗೂ ಖಾಸಗಿ ಕಾಲೇಜುಗಳಿಗೂ ಅಯೋಜಿಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಪಿಯು ಇಲಾಖೆ ನಿರ್ದೇಶಕರಿಗೆ ಸೂಚಿಸಿದ್ದಾರೆ.

ರಾಜ್ಯದಲ್ಲಿ ದ್ವಿತೀಯ ಪಿಯು ಫಲಿತಾಂಶವು ಕೇವಲ ಸರಕಾರಿ ಪಿಯು ಕಾಲೇಜುಗಳಿಗೆ ಸೀಮಿತವಾಗಿಲ್ಲ. ಸರ್ಕಾರಿ ಅನುದಾನರಹಿತ ಕಾಲೇಜುಗಳನ್ನು ಕೂಡ ಒಳಗೊಂಡಿದೆ. ಹೀಗಾಗಿ, ಯಾವುದೇ ತಾರತಮ್ಯ ಮಾಡದೆ, ತರಬೇತಿ ಕಾರ್ಯಕ್ರಮವನ್ನು ಎಲ್ಲ ಸಂಸ್ಥೆಗಳಿಗೂ ನೀಡಬೇಕು. ಎಲ್ಲ ವಿಷಯಗಳ ಉಪನ್ಯಾಸಕರನ್ನು ಒಳಗೊಂಡಂತೆ ತರಬೇತಿ ನೀಡಿದರೆ ಉತ್ತಮ ಫಲಿತಾಂಶ ಲಭಿಸಲಿದೆ, ಎಂದು ತಿಳಿಸಿದ್ದಾರೆ.

**ಆಧಾರ**:ವಿಜಯ ಕರ್ನಾಟಕ, ದಿನಾಂಕ:19.01.2025

## 8. 'ಅನರ್ಹತೆಯಿಂದ ರಕ್ಷಣೆ, ಮಸೂದೆಗೆ ಅಸ್ತು'

ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಇತರ ಲಾಭಧಾಯಕ ಹುದ್ದೆ ಹೊಂದಿದ ಕಾರಣಕ್ಕೆ ಶಾಸಕರ ಸ್ಥಾನದಿಂದ ಅನರ್ಹರಾಗುವುದನ್ನು ತಡೆಯುವ ಮಸೂದೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ. ಈ ಸಂಬಂಧ ಕಾನೂನು ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ಸಲಹೆಗಾರರು, ಯಾವುದೇ ಅಯೋಗದ ಅಧ್ಯಕ್ಷರು ಹಾಗೂ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷರಾಗಿ ನೇಮಕಗೊಂಡರೆ ಅವರನ್ನ ಅನರ್ಹಗೊಳಿಸಲು ಕರ್ನಾಟಕ ವಿಧಾನಮಂಡಲ ಕಾಯ್ದೆಯಲ್ಲಿ ಅವಕಾಶವಿತ್ತು.

ವಿಧಾನಸಭಾ ಸದಸ್ಯರಾಗಿರುವ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರಾಗಿ, ಬಿ.ಆರ್.ಪಾಟೀಲ ಮುಖ್ಯಮಂತ್ರಿಯವರ ಸಲಹೆಗಾರರಾಗಿ ಮತ್ತು ಆರ್.ವಿ.ದೇಶಪಾಂಡೆ ಅವರು ಆಡಳಿತ ಸುಧಾರಣಾ ಅಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಈ ಮೂವರನ್ನೂ ಲಾಭದಾಯಕ ಹುದ್ದೆ ವ್ಯಾಪ್ತಿಯಿಂದ ಹೊರಗಿಟ್ಟು, ರಕ್ಷಿಸುವುದಕ್ಕೆ ತಿದ್ದುಪಡಿ ಮಸೂದೆ ರೂಪಿಸಲಾಗಿತ್ತು. ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ವಿಧಾನಸಭೆಯಲ್ಲಿ 'ಕರ್ನಾಟಕ ವಿಧಾನ ಮಂಡಲ(ಅನರ್ಹತಾ ನಿವಾರಣಾ) (ತಿದ್ದುಪಡಿ) ವಸೂದೆ' ಮಂಡಿಸಿದಾಗ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರಿಂದ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. 2024ರ ಫೆಬ್ರವರಿಯಲ್ಲಿ ವಿಧಾನ ಮಂಡಲದ ಅನುಮೋದನೆ ಪಡೆದ ಮಸೂದೆಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿತ್ತಾದರೂ, ರಾಜ್ಯಪಾಲರು ಸಹಿ ಹಾಕಿರಲಿಲ್ಲ. ಈಗ ರಾಜ್ಯಪಾಲರ ಅಂಕಿತ ದೊರೆತಿದ್ದು ಬಿ.ಆರ್.ಪಾಟೀಲ, ಬಸವರಾಜ ರಾಯರೆಡ್ಡಿ ಮತ್ತು ಆರ್.ವಿ.ದೇಶಪಾಂಡೆ ಅವರು ಅನರ್ಹತೆ ತೂಗುಗತ್ತಿಯಿಂದ ಪಾರಾಗಿದ್ದಾರೆ.

**ಆಧಾರ**: ಪ್ರಜಾವಾಣಿ, ದಿನಾಂಕ:22.01.2025

## 9. ಕಾಗೋಡು ತಿಮ್ಮಪ್ಪಗೆ ಗೌ.ಡಾ.ಪ್ರದಾನ

ಹಿರಿಯ ರಾಜಕಾರಣಿ, ಮಾಜಿ ಸಚಿವ ಸಮಾಜವಾದಿ ಚಿಂತಕ ಕಾಗೋಡು ತಿಮ್ಮಪ್ಪ ಅವರಿಗೆ ಕುವೆಂಪು ವಿಶ್ವವಿದ್ಯಾಲಯ ಹಾಗೂ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರದಾನ ಮಾಡಿದವು. ಎರಡೂ ವಿವಿಗಳಿಂದ ಒಂದೇ ದಿನ ಘಟಿಕೋತ್ಸವ ಸಮಾರಂಭ ನಡೆಯಿತು. ಕುವೆಂಪು ವಿ.ವಿ. ಆವರಣದಲ್ಲಿ ಜರುಗಿದ ಘಟಿಕೋತ್ಸವದಲ್ಲಿ ನಂತರ ಮಧ್ಯಾಹ್ನ ಸಾಗರ ತಾಲ್ಲೂಕು ಇರುವಕ್ಕಿ ಕೃಷಿ ಮತ್ತು ತೋಟಗಾರಿಕೆ ವಿ.ವಿ. ಆವರಣದಲ್ಲಿ ನಡೆದ ಘಟಿಕೋತ್ಸವದಲ್ಲಿ ರಾಜಪಾಲ ಥಾವರ್‌ಚಂದ್ ಗೆಹ್ಲೋಟ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

**ಆಧಾರ**:ಸಂಯುಕ್ತ ಕರ್ನಾಟಕ, ದಿನಾಂಕ:23.01.2025

## 10. ಎಲ್ಲಾ ಶಾಸಕರಿಗೆ ಶೂನ್ಯ ಫಾಸ್ಟ್ ಟ್ಯಾಗ್

ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಟೋಲ್‌ಗಳಲ್ಲಿ ಶಾಸಕರ ವಾಹನಗಳಿಗೆ ಶೂನ್ಯ ಫಾಸ್ಟ್ ಟ್ಯಾಗ್ ಒದಗಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಧರಿಸಿದೆ.

ರಾಜ್ಯದ ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರುಗಳು ತಮ್ಮ ತಮ್ಮ ಊರುಗಳಿಗೆ ಇಲ್ಲವೇ ಕೆಲಸ ಕಾರ್ಯಗಳಿಗಾಗಿ ಹೆದ್ದಾರಿಗಳಲ್ಲಿ ತೆರಳುವ ಸಂದರ್ಭದಲ್ಲಿ ಟೋಲ್‌ಗಳಲ್ಲಿ ಸಮಸ್ಯೆ ಎದುರಾಗುತ್ತಿತ್ತು. ಇನ್ನು ಮುಂದೆ ಅಂತಹ ಸಮಸ್ಯೆಗಳಿಗೆ ಅವಕಾಶವಾಗದಂತೆ ಶಾಸಕರ ವಾಹನಗಳಿಗೆ ಶೂನ್ಯ ಫಾಸ್ಟ್‌ಟ್ಯಾಗ್ ಒದಗಿಸಲಿದೆ.

ಶೂನ್ಯ ಫಾಸ್ಟ್‌ಟ್ಯಾಗ್ ಹೊಂದಲು ಪ್ರಾಧಿಕಾರದ ವೆಬ್‌ಸೈಟ್ https://exemptedfastag.nhai.org/exemptedfastag/ನಲ್ಲಿ ಅರ್ಜಿಯ ನಮೂನೆಯನ್ನು ಭರ್ತಿ ಮಾಡಿ, ಅದರ ಪ್ರತಿಯನ್ನು ಬೆಂಗಳೂರಿನಲ್ಲಿರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿಗಳಿಗೆ ಕಳುಹಿಸಬೇಕೆಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:26.01.2025

## 11. ವಿಶೇಷ ಪ್ರಕರಣಗಳಲ್ಲಿ ಅಂತಿಮ ಇ–ಖಾತಾಗೆ ಇಸಿ ಅಗತ್ಯವಿಲ್ಲ

ನಗರ ವ್ಯಾಪ್ತಿಯಲ್ಲಿರುವ ಪ್ರತಿಯೊಬ್ಬರು ಅಂತಿಮ ಇ–ಖಾತಾ ಪಡೆಯಲು ವಿಶೇಷ ಪ್ರಕರಣಗಳಲ್ಲಿ ಆಸ್ತಿ ಋಣಭಾರ ಪ್ರಮಾಣಪತ್ರ (ಇಸಿ) ಸಲ್ಲಿಸುವ ಅಗತ್ಯವಿಲ್ಲ ಎಂದು ಬಿಬಿಎಂಪಿ ಸ್ಪಷ್ಟಪಡಿಸಿದೆ. ನೊಂದಣಾಧಿಕಾರಿ ಕಚೇರಿಯಲ್ಲಿ ತಕ್ಷಣ ಮಾರಾಟ ಅಥವಾ ವಹಿವಾಟು ಮಾಡುವವರು ಮಾತ್ರ ಇ–ಖಾತಾ ವ್ಯವಸ್ಥೆಯಲ್ಲಿ ಒಂದು ಬಾರಿಗೆ ಮಾತ್ರ ಇಸಿ ನೀಡಬೇಕು. ಇದು ಶೇ.5ರಷ್ಟಾಗಿರುತ್ತದೆ. ಇದಕ್ಕೆ ಆಸ್ತಿ ಋಣಭಾರ ಪ್ರಮಾಣ ಪತ್ರವು ಆಸ್ತಿ ನೊಂದಣಿ ಮಾಡಿದ ಏಳು ದಿನಗಳೊಳಗೆ ಇರಬೇಕು ಎಂಬ ನಿಯಮ ಅನ್ವಯಿಸುವುದಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇ–ಖಾತಾ ವಿತರಣೆಯನ್ನು ಮತ್ತಷ್ಟು ಸರಳಗೊಳಿಸುವ ಉದ್ದೇಶದಿಂದ ಪಾಲಿಕೆ ವತಿಯಿಂದ ಹಾಗೂ ಯಾವುದೇ ಆಸಕ್ತ ನಾಗರಿಕ ಗುಂಪುಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಸೇರಿದಂತೆ ಇತರರು ತಮ್ಮ ಹತ್ತಿರದ ಪ್ರದೇಶಗಳಲ್ಲಿ ಇ–ಖಾತಾ ಮೇಳ ಆಯೋಜಿಸಿದರೆ, ಅದಕ್ಕೆ ಸಹಕಾರ ನೀಡಲಾಗುವುದು ಎಂದು ತಿಳಿಸಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:30.01.2025

## 12. ಪ್ರಸಾದ್ ಮುಖ್ಯ ಮಾಹಿತಿ ಆಯುಕ್ತ

ರಾಜ್ಯದ ಮುಖ್ಯ ಮಾಹಿತಿ ಆಯುಕ್ತರಾಗಿ ನಿವೃತ್ತ ಐಪಿಎಸ್ ಅಧಿಕಾರಿ ಎ.ಎಂ.ಪ್ರಸಾದ್ ಅವರನ್ನು ನೇಮಿಸಲಾಗಿದೆ. ಇದೆ ವೇಳೆ, ಖಾಲಿ ಇದ್ದ 7 ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳಿಗೆ ನೇಮಕ ಮಾಡಿ ರಾಜ್ಯಪಾಲರ ಅಂಕಿತದೊಂದಿಗೆ ಸರಕಾರ ಅಧಿಸೂಚನೆ ಹೊರಡಿಸಿದೆ.

ಖಾಲಿಯಿದ್ದ ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗೆ ಕೆ.ರಮಣ್, ಡಾ.ಹರೀಶ್‌ಕುಮಾರ್. ನಾರಾಯಣ್ ಜಿ. ಚನ್ನಾಳ್, ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್.ಮಮತಾ, ಹಿರಿಯ ಪತ್ರಕರ್ತರಾದ ರುದ್ರಣ್ಣ ಹರ್ತಿಕೋಟೆ, ಕೆ.ಬದ್ರುದ್ದೀನ್, ಎಸ್.ರಾಜಶೇಖರ್ ಅವರನ್ನು ನೇಮಕ ಮಾಡಲಾಗಿದೆ. ಅದರಂತೆ ಖಾಲಿಯಿದ್ದ ಮುಖ್ಯ ಮಾಹಿತಿ ಆಯುಕ್ತರ ಹುದ್ದೆ, ಬೆಳಗಾವಿಯಲ್ಲಿ ಒಂದು ರಾಜ್ಯ ಮಾಹಿತಿ ಆಯುಕ್ತ

ಹುದ್ದೆ, ಬೆಂಗಳೂರಿನಲ್ಲಿ 6 ರಾಜ್ಯ ಮಾಹಿತಿ ಆಯುಕ್ತರ ಹುದ್ದೆಗಳು ಭರ್ತಿಯಾದಂತಾಗಿವೆ. ಸಿಎಂ ಅಧ್ಯಕ್ಷತೆಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಸಚಿವ ಕೆ.ಜೆ.ಜಾರ್ಜ್ ಒಳಗೊಂಡ ಆಯ್ಕೆ ಸಮಿತಿ ಇತ್ತೀಚೆಗೆ ಸಭೆ ನಡೆಸಿ ಪಟ್ಟಿ ಸಿದ್ಧಪಡಿಸಿತು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:31.01.2025

## 13. ಮಂಡ್ಯ ಸಮ್ಮೇಳನ: ಖಾದರ್ ಪ್ರಶಂಸೆಗೆ ಜೋಶಿ ಧನ್ಯವಾದ

ಮಂಡ್ಯದಲ್ಲಿ ಜರುಗಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಭೂತಪೂರ್ವ ಯಶಸ್ಸು ಕಂಡಿದೆ. ಅಚ್ಚುಕಟ್ಟುತನದ ಜತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಕಾರ್ಯವೈಖರಿಯನ್ನು ಮೆಚ್ಚಿ ಸ್ಪೀಕರ್ ಖಾದರ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಈ ಕುರಿತು ಮಹೇಶ್ ಜೋಶಿ ಅವರಿಗೆ ಪತ್ರ ಬರೆದಿರುವ ಅವರು, ಮಂಡ್ಯ ಸಮ್ಮೇಳನ ಯಶಸ್ವಿಯಾಗಿ ನಡೆದಿದೆ. ಸಮ್ಮೇಳನ ಅಯೋಜನೆಗೊಂಡ ದಿನದಿಂದ ಅನಾರೋಗ್ಯದ ನಡುವೆಯೂ ವೈದ್ಯರ ಸಲಹೆ ಬದಿಗೊತ್ತಿ ಕ್ರಿಯಾಶೀಲತೆಯಿಂದ ಮುಂಚೂಣಿಯಾಗಿ ತಾವು ನಿರ್ವಹಿಸಿದ ಪಾತ್ರ ನಿಜಕ್ಕೂ ಸ್ಮರಣೀಯ. ನಿಮ್ಮ ಕನ್ನಡ ಪ್ರೀತಿ ನಾಯಕತ್ವ ಗುಣಗಳ ಇಲ್ಲಿ ಅಭಿವ್ಯಕ್ತವಾದವು ಎಂದು ಶ್ಲಾಘಿಸಿದ್ದಾರೆ. ಚಾರಿತ್ರಿಕ ಸಮ್ಮೇಳನದಲ್ಲಿ ಉದ್ಘಾಟನೆಗೆ ನನಗೆ ಅವಕಾಶ ಕಲ್ಪಿಸಿದ್ದಕ್ಕೆ ಧನ್ಯವಾದಗಳು. ಸಮ್ಮೇಳನದಲ್ಲಿ  ಕನ್ನಡಿಗರ ಅಭಿಮಾನ, ಉತ್ಸಾಹವನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಯಿತು. ಸುಸಜ್ಜಿತವಾಗಿ ನಡೆದ ಸಮ್ಮೇಳನ ಅನ್ನ-ಅಕ್ಕರೆಯ ನೆಲವೀಡಾಗಿತ್ತು. ಚರ್ಚಾ ಗೋಷ್ಠಿಗಳು ಎಲ್ಲವೂ ಅರ್ಥಪೂರ್ಣವಾಗಿತ್ತು ಎಂದು ಶ್ಲಾಘಿಸಿದ್ದಾರೆ. ಏತನ್ಮಧ್ಯೆ, ಸ್ಪೀಕರ್ ಅವರ ಅಭಿನಂದನಾ ಪತ್ರ ಸ್ವೀಕರಿಸಿರುವ ಮಹೇಶ್ ಜೋಶಿ ಅವರು ಖಾದರ್‌ಗೆ ಧನ್ಯವಾದ ಸಲ್ಲಿಸಿದ್ದಾರೆ.

**ಆಧಾರ:**ಉದಯವಾಣಿ, ದಿನಾಂಕ:05.02.2025

## 14. ನರೇಂದ್ರಸ್ವಾಮಿ ಕೆಎಸ್‌ಪಿಸಿಬಿ ಅಧ್ಯಕ್ಷ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಸರ್ಕಾರ ನಾಮನಿರ್ದೇಶನ ಮಾಡಿದೆ. ಈ ಬಗ್ಗೆ ಫೆಬ್ರವರಿ 5 ರಂದು ಅಧಿಸೂಚನೆ ಹೊರಡಿಸಲಾಗಿದೆ. ತಕ್ಷಣದಿಂದ ಆದೇಶ ಜಾರಿಯಾಗಲಿದ್ದು, ಮುಂದಿನ ಮೂರು ವರ್ಷದವರೆಗೆ ಅಧ್ಯಕ್ಷರ ಅವಧಿ  ಇರಲಿದೆ. ಮಂಡ್ಯ ಜಿಲ್ಲೆ ಮಳವಳ್ಳಿ ಕ್ಷೇತ್ರದ ನರೇಂದ್ರ ಸ್ವಾಮಿ ಅವರು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ  ಅಧಿಕಾರ ಸ್ವೀಕರಿಸಿದರು. ಹಿಂದಿನ ಅಧ್ಯಕ್ಷರಾಗಿದ್ದ ಶಾಂತ್ ತಮ್ಮಯ್ಯ ಅವರ ಅವಧಿ 2024ರ ನವೆಂಬರ್‌ನಲ್ಲಿ ಅಂತ್ಯಗೊಂಡಿತ್ತು.

**ಆಧಾರ:**ಪ್ರಜಾವಾಣಿ, ದಿನಾಂಕ:06.02.2025

## 15. ಮಹಾನಗರಗಳಲ್ಲಿ ಸಂವಿಧಾನ ಪೀಠಿಕೆ ಪ್ರತಿಮೆ

ಸರ್ಕಾರಿ ಕಛೇರಿಗಳಲ್ಲಿ ರಾರಾಜಿಸುತ್ತಿರುವ 'ಸಂವಿಧಾನ ಪೀಠಿಕೆ' ಇನ್ನು ರಾಜ್ಯದ ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ವೃತ್ತಗಳಲ್ಲಿಯೂ ಸಾರ್ವಜನಿಕವಾಗಿ ಕಂಗೊಳಿಸಲಿದೆ. ಜಿಲ್ಲಾಧಿಕಾರಿ ಕಚೇರಿ, ನಗರ ಪಾಲಿಕೆ ಸೇರಿ ರಾಜ್ಯ ಸರ್ಕಾರಿ ಕಛೇರಿಗಳಲ್ಲಿ 'ಸಂವಿಧಾನ ಪೀಠಿಕೆ' ಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ತಮ್ಮ ಇಲಾಖೆಯ ಮೂಲಕ ಆದೇಶ ಹೊರಡಿಸಿದ್ದರು. ಅದರಂತೆ ಸರ್ಕಾರದ ಎಲ್ಲ ಕಚೇರಿಗಳಲ್ಲಿ ಸಂವಿಧಾನ ಪೀಠಿಕೆಯ ಮಾದರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಅಲ್ಲದೇ, ರಾಜ್ಯದ 12 ಮಹಾನಗರ ಪಾಲಿಕೆಯ ಪ್ರಮುಖ ವೃತ್ತ

ಅಥವಾ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಇರುವ ಸಮೀಪ ಸಂವಿಧಾನ ಪೀಠಿಕೆ ದೊಡ್ಡಮಟ್ಟದಲ್ಲಿ ಹಾಕಲು ತಯಾರಿ ನಡೆಯುತ್ತಿದೆ.

ಮೈಸೂರಿನಲ್ಲಿ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯ ಸಮೀಪವೇ 15 ಲಕ್ಷ ರೂ. ವೆಚ್ಚದಲ್ಲಿ 10 ಅಡಿ ಉದ್ದ, 6 ಅಡಿ ಅಗಲದಲ್ಲಿ ರೆಡ್ ಸ್ಯಾಂಡ್ ಸ್ಟೋನ್‌ನಲ್ಲಿ ಸಂವಿಧಾನ ಪೀಠಿಕೆಯನ್ನು ಕೆತ್ತಲಾಗಿದ್ದು, ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹ ಕೆತ್ತಿದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರು ಸಂವಿಧಾನ ಪೀಠಿಕೆಯನ್ನು ಕೆತ್ತಿದ್ದಾರೆ. ಮೊದಲು ಕನ್ನಡದಲ್ಲಿದ್ದು, ನಂತರ ಇಂಗ್ಲಿಷ್‌ನಲ್ಲಿ ಪೀಠಿಕೆ ಸಂದೇಶ ಇರಲಿದೆ.

ಈ ಸಂವಿಧಾನ ಪೀಠಿಕೆಯನ್ನು ನಿರ್ಮಿತಿ ಕೇಂದ್ರ ನಿರ್ಮಾಣ ಮಾಡುತ್ತಿದೆ. ಸಂವಿಧಾನ ಸಭೆಯಲ್ಲಿ 1949ನೇ ಇಸವಿಯ ನವೆಂಬರ್ 26ನೇ ದಿನದಂದು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು, ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ, ಎಂಬುದರೊಂದಿಗೆ ಪೀಠಿಕೆ ಅಕ್ಷರಗಳನ್ನು ಸುಂದರವಾಗಿ ಕೆತ್ತಲಾಗಿದೆ. 2 ತಿಂಗಳ ಹಿಂದೆ ಕಾಮಗಾರಿ ಶುರುವಾಗಿ ಮುಕ್ತಾಯ ಹಂತಕ್ಕೆ ಬಂದಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:14.02.2025

## 16. ಆನ್‌ಲೈನ್ ಮೂಲಕ ಕೃಷಿ ಉತ್ಪನ್ನ ಮಾರಾಟಕ್ಕೂ ಲೈಸೆನ್ಸ್ ಕಡ್ಡಾಯ

ರಾಜ್ಯದ ಇ–ಮಾರಾಟಗಾರರನ್ನು 'ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ'ಯ ವ್ಯಾಪ್ತಿಗೆ ತರುವ ಮಹತ್ವದ ತಿದ್ದುಪಡಿ ವಿಧೇಯಕವನ್ನು ವಿಧಾನಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಇದರಿಂದಾಗಿ ಇನ್ನು ಮುಂದೆ ಇ–ವೇದಿಕೆಗಳ ಮೂಲಕ (ಆನ್‌ಲೈನ್) ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಎಲ್ಲರೂ ಕಡ್ಡಾಯವಾಗಿ ಪರವಾನಗಿ ಪಡೆದುಕೊಳ್ಳಬೇಕಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಮಾರುಕಟ್ಟೆ ಶುಲ್ಕಗಳಿಂದ ತಪ್ಪಿಸಿಕೊಳ್ಳದಂತೆ ಈ ತಿದ್ದುಪಡಿ ಕಟ್ಟಿ ಹಾಕಲಿದೆ. 'ಅನೇಕ ಇ–ವೇದಿಕೆಗಳು ಎಪಿಎಂಸಿಗಳಲ್ಲಿ ಉತ್ಪನ್ನ ಮಾರುವಾಗ ಮತ್ತು ವ್ಯವಹರಿಸುವಾಗ ಸರ್ಕಾರದ ವಿವಿಧ ಸೆಸ್‌ಗಳನ್ನು ಈ ಮೊದಲು ಕಟ್ಟಬೇಕಾಗಿರಲಿಲ್ಲ. ಆದರೆ ಇನ್ನು ಮುಂದೆ ಆಫ್‌ಲೈನ್ ಮಾರಾಟಗಾರರಂತೆಯೇ ಈ ವೇದಿಕೆಗಳ ನಿರ್ವಾಹಕರೂ ಕೂಡ ಸೆಸ್ ಮತ್ತಿತರ ಶುಲ್ಕಗಳನ್ನು ಕಟ್ಟಲೇಬೇಕು ಎಂಬುದಕ್ಕೆ ಈ ತಿದ್ದುಪಡಿ ತರಲಾಗಿದೆ' ಎಂದು ವಿಧೇಯಕ ಮಂಡಿಸಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ವಿವರಿಸಿದರು. ಈ ಮಸೂದೆ ಇನ್ನಷ್ಟೇ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಆಗಬೇಕಿದೆ. ಬಳಿಕ ರಾಜ್ಯಪಾಲರಿಗೆ ಕಳಿಸಲಾಗುತ್ತದೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:11.03.2025

## 17. ಕ್ರೀಡಾಂಗಣ ದುರ್ಬಳಕೆ ತಡೆಯಲು ನೀತಿ ಜಾರಿ

ಕ್ರೀಡಾಂಗಣ ದುರ್ಬಳಕೆ, ಅತಿಕ್ರಮಣ, ಪರಭಾರೆ, ಅಕ್ರಮ ಚಟುವಟಿಕೆ ನಿಯಂತ್ರಿಸಲು ಸರ್ಕಾರ ಕ್ರೀಡಾಂಗಣ ಬಳಕೆ ನೀತಿ ಜಾರಿಗೆ ತಂದಿದೆ. ಕ್ರೀಡಾಂಗಣ ಹಾಗೂ ಅದರ ಆಸ್ತಿಗಳನ್ನು ಸರ್ಕಾರದ ಅನುಮತಿ ಇಲ್ಲದೆ ದೀರ್ಘಾವಧಿಗೆ ಬಾಡಿಗೆ ನೀಡುವಂತಿಲ್ಲ ಅಥವಾ ಇತರ ರೀತಿಯಲ್ಲಿ ಪರಭಾರೆ ಮಾಡುವಂತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕ್ರೀಡಾಂಗಣ ಉಸ್ತುವಾರಿ ಸಮಿತಿ ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕ್ರೀಡಾಂಗಣಗಳ ದೈನಂದಿನ ನಿರ್ವಹಣೆಗೆ ಜಿಲ್ಲಾ ಕ್ರೀಡಾಂಗಣಗಳ ದೈನಂದಿನ ನಿರ್ವಹಣೆಗೆ ಜಿಲ್ಲಾ ಕ್ರೀಡಾಂಗಣಗಳ ನಿರ್ವಹಣಾ ಸಮಿತಿಗಳನ್ನು

ರಚಿಸಲಾಗಿದೆ. ಸಾಮಾನ್ಯ ಮಾರ್ಗಸೂಚಿ ರೂಪಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಉಪ/ಸಹಾಯಕ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ.

ಜಿಲ್ಲಾ ಕ್ರೀಡಾಂಗಣ ಉಸ್ತುವಾರಿ ಹಾಗೂ ನಿರ್ವಹಣಾ ಸಮಿತಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೆ ಗುತ್ತಿಗೆ/ಹೊರಗುತ್ತಿಗೆ ಸೇರಿ ಯಾವುದೇ ನೇಮಕಾತಿ ಮಾಡುವಂತಿಲ್ಲ. ಜಿಲ್ಲೆಯ ಯಾವುದೇ ಇಲಾಖಾ ಕ್ರೀಡಾಂಗಣದಲ್ಲಿ ರೂ.50ಲಕ್ಷ ವೆಚ್ಚ ಮೀರಿದ ಅಭಿವೃದ್ಧಿ ಅಥವಾ ವಾರ್ಷಿಕ ಒಟ್ಟು 1 ಕೋಟಿ ರೂ.ಮೇಲ್ಪಟ್ಟ ಕಾಮಗಾರಿ/ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೊದಲು ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ನಿಯಮ ಉಲಂಘನೆಯಾಗಿದ್ದಲ್ಲಿ ಸಂಬಂಧಪಟ್ಟ ಉಪ/ಸಹಾಯಕ ನಿರ್ದೇಶಕರು ನಿಯಮಗಳನ್ನು ಉಲ್ಲಂಘಿಸಿರುವ ಅಧಿಕಾರಿಗಳ ವಿವರಗಳನ್ನು ಇಲಾಖೆಗೆ ಒದಗಿಸಬೇಕು. ದುರ್ಬಳಕೆ ತಡೆಯುವುದು ಹಾಗೂ ತಕ್ಷಣ ಇಲಾಖೆ ಮುಖ್ಯಸ್ಥರ ಗಮನಕ್ಕೆ ತರುವುದು ಜಿಲ್ಲಾಮಟ್ಟದ ಅಧಿಕಾರಿಯ ಜವಾಬ್ದಾರಿ ಎಂದು ಎಚ್ಚರಿಕೆ ನೀಡಲಾಗಿದೆ.

**ಆಧಾರ**:ವಿಜಯ ವಾಣಿ, ದಿನಾಂಕ:10.03.2025

## 18. ಕರ್ನಾಟಕ ಆರ್ಥಿಕ ಸಮೀಕ್ಷೆ 2024–25

ದೇಶದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದೆ ಎಂದು 2024–25ನೇ ಸಾಲಿನ ರಾಜ್ಯದ ಆರ್ಥಿಕ ಸಮೀಕ್ಷೆ ಪ್ರತಿಪಾದಿಸಿದೆ. 2023–24ನೇ ಸಾಲಿನಲ್ಲಿ ರಾಷ್ಟ್ರೀಯ ಆದಾಯಕ್ಕೆ ರಾಜ್ಯ ಆದಾಯದ ಕೊಡುಗೆ ಶೇ.8.6ರಷ್ಟಿದ್ದು, ಇದು 2024–25ರಲ್ಲಿ ಶೇ.03.ರಷ್ಟು ಹೆಚ್ಚಾಗಿ ಶೇ.8.9ಕ್ಕೆ ಏರುವ ನಿರೀಕ್ಷೆ ಇದೆ. ಗ್ಯಾರಂಟಿಗಳ ಹೊರೆಯ ನಡುವೆಯೂ ವೆಚ್ಚದ ಗುಣಮಟ್ಟ ಕೂಡ ಚೆನ್ನಾಗಿದೆ. ರಾಜ್ಯದ ಅಭಿವೃದ್ಧಿ ವೆಚ್ಚದ ಪ್ರಮಾಣವು ಶೇ.65.10ರಷ್ಟಿದ್ದು, ಇದು ಎಲ್ಲ ರಾಜ್ಯಗಳ ಸರಾಸರಿಗಿಂತ (ಶೇ.62.50)ಹೆಚ್ಚಾಗಿದೆ ಎಂದು ಅದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ (2023–24) ದಕ್ಷಿಣದ ಐದು ರಾಜ್ಯಗಳ ಪೈಕಿ ಕರ್ನಾಟಕವು ಅತ್ಯಂತ ಕಡಿಮೆ ಶೇ.2.70ರಷ್ಟು ವಿತ್ತೀಯ ಕೊರತೆಯನ್ನು (ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತಹ) ಹೊಂದಿರುವ ರಾಜ್ಯವಾಗಿತ್ತು. ಈ ವರ್ಷ (2024–25) ವಿತ್ತೀಯ ಕೊರತೆ ಶೇ 3ಕೆ ಏರಿಕೆಯಾಗಬಹುದು ಎಂದು ಅಂದಾಜಿಸಲಾಗಿದೆ. ಕರ್ನಾಟಕದ ವಿತ್ತೀಯ ಹೊಣೆಗಾರಿಕೆ ಕಾಯ್ದೆಯ–202 ಅಡಿ ವಿತ್ತೀಯ ಕೊರತೆಯು ಶೇ.3ರ ಒಳಗೆ ಇರಬೇಕು.

ಸರ್ಕಾರದ ವೆಚ್ಚಗಳು ಹೆಚ್ಚುತ್ತಿದ್ದು, ಆದಾಯ ಇಳಿಮುಖವಾಗುತ್ತಿದೆ. ಹೀಗಾಗಿ ವಿತ್ತೀಯ ಕೊರತೆಯನ್ನು ಕಡಿಮೆ ಮಟ್ಟದಲ್ಲಿ ಇಡುವುದು ಅತ್ಯಂತ ಸವಾಲಿನ ಕೆಲಸವಾಗಿದೆ. ಹಾಗಿದ್ದರೂ, 2024–25ರ ಬಜೆಟ್ ಅಂದಾಜಿನಲ್ಲಿ ವಿತ್ತೀಯ ಕೊರತೆಯ ಗುರಿಯನ್ನು ಶೇ.2.95ಕ್ಕೆ ನಿಗದಿಪಡಿಸಲಾಗಿದೆ ಎಂದೂ ಅದು ಹೇಳಿದೆ. ರಾಜ್ಯದ ಒಟ್ಟು ಅಂತರಿಕ ಉತ್ಪನ್ನ (ಜಿಎಸ್‌ಡಿಪಿ) ಬೆಳವಣಿಗೆ ಕಾಣುತ್ತಿದ್ದು, 2023–24ರಲ್ಲಿ ಜಿಎಸ್‌ಡಿಪಿ ದರ ಶೇ.6ರಷ್ಟು ಇದ್ದರೆ, 2024–25ರಲ್ಲಿ ಶೇ.7.4ಕ್ಕೆ ಏರಬಹುದು ಎಂದು ಅಂದಾಜಿಸಲಾಗಿದೆ.

**ಆಧಾರ**:ಪ್ರಜಾವಾಣಿ, ದಿನಾಂಕ:10.03.2025

## 19. User fee for waste collection gets government approval

The State government has finally approved the long pending proposal of the Bengaluru Solid Waste Management Limited (BSWML) to levy a user fee for door-to-

door waste collection. The fee is likely to be included in the property tax from April 1st in the new financial year of 2025-26.

With the government approving a user fee for door-to-door waste collection, BSWML, which now manages SWM in the city, is set to take a major step toward financial independence.

The company will soon open an escrow account to manage the revenue generated from the fee, marking a shift from its reliance on the Bruhat Bengaluru Mahanagara Palike (BBMP) for funding.

The Urban Development Department (UDD) gave the green signal for BSWML's proposal last week to levy a user fee for providing door-to-door collection, segregation, and scientific disposal services.

The user fee will be added to the property tax, and consumers must pay it along with their tax. Earlier, the company planned to include the fee in electricity bills of Bescom, but this was later changed. The fee will be determined by the built-up area with six different slabs.

Additionally, the government has permitted BSWML to charge bulk waste generators such as apartment complexes and large commercial establishments 12 per kg if they lack an empaneled waste processing agency or an in-situ waste management system. If a 100 flat apartment generates 100 kg/day, waste management will now costs 1200/day.

BSWML is currently dependent on the BBMP to cover waste management expenses. The BBMP allocates about Rs.1,000 crore for this in its budget. BSWML has been urging the government to introduce a user fee, a policy already adopted by the Indore Municipal Corporation (IMC). The Swachh Bharat Mission (SBM) guidelines also man date municipal corporations to collect user fees for SWM.

A senior official from the BSWML talking to The Hindu said, "Everyday BSWML collects, tran sports and disposes off 6,000 tonnes of waste generated in the city Annually, nearly Rs.600 crore is spent on the same. With no independent revenue collection, the company has been struggling to pay the conractors, to which the payments of waste collectors are also being delayed. For the last four months, the salaries of the waste collectors have not been paid."

"The company will soon open an escrow account for funds generated through fee collection. Besides the user fee, BSWML is also exploring revenue from Extended Producer Responsibility (EPR) for plastic, electronic waste, and construction and demolition waste. This will ensure financial indepen dence and streamline payments,"

the official added. The official further said the bidders for company's Integrated Solid Waste Management System will show interest as the com pany will become self-reliant to make payments.

V. Ram Prasad, a solid waste management expert, said the State's approval is a step in the right direction for the city's waste man-agement. He added that BSWML has the right to charge a fee for its services, and the opposition, the BJP, cannot object as the Swachh Bharat Mission, an initiative of Prime Minister Narendra Modi, mandates user fees in its guidelines. "The company can now break free from BBMP's fi-nancial dependence," he said.

**Courtesty**:The Hindu, Dated:14.03.2025

## 20. ಸರ್ಕಾರಿ, ಖಾಸಗಿ ಸ್ವತ್ತುಗಳಿಗೆ ಡಿಜಿಟಲ್ ರಕ್ಷಣೆ

ಸ್ವತ್ತು ನೋಂದಣಿ ಪ್ರಕ್ರಿಯೆ ಇನ್ನಷ್ಟು ಸರಳೀಕರಣಗೊಳಿಸಿ, ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಸಮಗ್ರ ಡಿಜಿಟಲೀಕರಣಗೊಳಿಸುವ ಉದ್ದೇಶದ ಕರ್ನಾಟಕ ಸ್ಟಾಂಪ್(ತಿದ್ದುಪಡಿ) ಮಸೂದೆ ಸೇರಿ ಕಂದಾಯ ಇಲಾಖೆಯ ಒಟ್ಟು ಐದು ಮಸೂದೆಗಳು ಚರ್ಚೆಯ ಬಳಿಕ ವಿಧಾನಸಭೆಯಲ್ಲಿ ಅಂಗೀಕಾರಗೊಂಡವು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮಸೂದೆಗಳನ್ನು ಪರ್ಯಾಲೋಚನೆಗೆ ಮಂಡಿಸಿದರು. ಚರ್ಚೆಯಲ್ಲಿ ಬಿಜೆಪಿಯ ಅರವಿಂದ ಬೆಲ್ಲದ, ಹರೀಶ್ ಪೂಂಜಾ, ವಿ.ಸುನಿಲ್‌ಕುಮಾರ್, ಆರಗಜ್ಞಾನೇಂದ್ರ, ಕಾಂಗ್ರೆಸ್ ಡಾ.ಮಂತರ್‌ಗೌಡ ಭಾಗವಹಿಸಿದ್ದರು.

ಡಿಜಿಟಲ್ ಇ–ಸ್ಟಾಂಪ್ ಬಳಕೆ ಜಾರಿ: (ಕರ್ನಾಟಕ ಸ್ಟಾಂಪ್ ತಿದ್ದುಪಡಿ ಮಸೂದೆ) ಸ್ವತ್ತು ಮತ್ತು ಇತರ ನೋಂದಣಿಗಳಲ್ಲಿ ಡಿಜಿಟಲ್ ಸಹಿ, ಡಿಜಿಟಲ್ ಇ–ಸ್ಟಾಂಪ್ ಬಳಕೆ ಜಾರಿ ಆಗಲಿದೆ. ಈ ಹಿಂದಿನಂತೆ ಅಚ್ಚಿಟಿಸುವ ಅಥವಾ ಮುದ್ರೆ ಹಾಕುವ ಸ್ಟಾಂಪ್‌ಗಳನ್ನು ಬಳಸುವುದನ್ನು ನಿಲ್ಲಿಸಲಾಗುತ್ತದೆ. ಇ–ಸ್ಟಾಂಪ್ ದುರುಪಯೋಗವನ್ನು ತಡೆಯಲು ಸ್ಟಾಂಪ್ ಮೊತ್ತವನ್ನು ವಿದ್ಯುನ್ಮಾನ ಪಾವತಿ ಮಾಡಬೇಕು. ಸಿಬ್ಬಂದಿ ಮೂಲಕ(ಮ್ಯಾನ್ಯುವೆಲ್) ಸ್ಟಾಂಪ್ ವಿತರಿಸುವುದು ಸಂಪೂರ್ಣ ನಿಲ್ಲಲಿದೆ.

ಡಿಜಿಟಲ್ ಸಹಿ ದುರುಪಯೋಗ ಆಗದಂತೆ ಮಾಡಲು ಜಿಲ್ಲಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರದ ಅಧಿಕಾರಿಯ ಸಹಿಯನ್ನು ಆಧಾರ್‌ಗೆ ಜೋಡಣೆ ಮಾಡಲಾಗಿರುತ್ತದೆ. ಸಹಿ ದೃಢೀಕರಣಗೊಂಡರೆ ಮಾತ್ರ ಸಹಿ ಸಾಧ್ಯ. ಡಿಜಿಟಲ್ ಸಹಿಯಲ್ಲಿ ಬಯೋಮೆಟ್ರಿಕ್ ಕೂಡ ಇರುತ್ತದೆ. ಮುಂದಿನ ದಿನಗಳಲ್ಲಿ ಫೇಸ್ ರೆಕಗ್ನೈಷನ್ ಕೂಡ ಅಳವಡಿಸಲಾಗುತ್ತದೆ.

ಜಿಪಿಎ ಡೀಡ್ ನೊಂದಣಿ ಕಡ್ಡಾಯ: (ನೊಂದಣಿ) ಕರ್ನಾಟಕ ತಿದ್ದುಪಡಿ ಮಸೂದೆ) ಸಾಮಾನ್ಯ ಅಧಿಕಾರ ಪತ್ರ (ಜಿಪಿಎ) ಬಳಸಿ ಅಕ್ರಮ ಮಾಡುವುದನ್ನು ತಡೆಗಟ್ಟಲು ಇನ್ನು ಮುಂದೆ ಸ್ಥಿರ ಸ್ವತ್ತಿನ ಜಿಪಿಎ ಡೀಡ್ ನೋಂದಣಿ ಮುಂದೆ ಸ್ಥಿರ ಮಾಡುವುದು ಕಡ್ಡಾಯ. ನೋಂದಣಿಯಾದ ಜಿಪಿಎ ಮಾತ್ರ ಅಧಿಕೃತ ಅಲ್ಲದೇ, ಜಿಪಿಎ ಮೂಲಕ ಸ್ಥಿರ ಸ್ವತ್ತಿನ ವರ್ಗಾವಣೆ, ಸರ್ಕಾರದ ಮೂಲಕ ಮಂಜೂರಾದ ಸ್ಥಿರಸ್ವತ್ತಿಗೆ ಸಂಬಂಧಿಸಿದ ದಸ್ತಾವೇಜುಗಳ ನೋಂದಣಿ ಮತ್ತು ಜಿಪಿಎ ಹಾಜರುಪಡಿಸುವ ಮೂಲಕ ಕಡ್ಡಾಯವಾಗಿ ಋಜುವಾತಿ ಪಡಿಸಬೇಕು ಎಂಬ ಅಂಶಗಳನ್ನು ಮಸೂದೆ ಒಳಗೊಂಡಿದೆ.

**ಆಧಾರ**:ಪ್ರಜಾವಾಣಿ, ದಿನಾಂಕ:20.03.2025

# ಭಾಗ–6

# ನ್ಯಾಯಾಲಯ ಸುದ್ದಿಗಳು

### 1. ಸಿಬಿಐಗೆ ರಾಜ್ಯಗಳ ಅನುಮತಿ ಬೇಕಿಲ್ಲ: ಸುಪ್ರೀಂ

ವಿವಿಧ ರಾಜ್ಯಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಸಿಬಿಐಗೆ ರಾಜ್ಯ ಸರ್ಕಾರಗಳ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಭ್ರಷ್ಟಚಾರದ ಆರೋಪ ಸಂಬಂಧ ಆಂಧ್ರಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಕೇಂದ್ರ ಸರ್ಕಾರದ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆಯನ್ನು ಆಂಧ್ರಪ್ರದೇಶ ಹೈಕೋರ್ಟ್ ರದ್ದುಗೊಳಿಸಿತ್ತು. ಆದರೆ ಹೈಕೋರ್ಟ್ ಆದೇಶವನ್ನು ಈಗ ಸುಪ್ರೀಂಕೋರ್ಟ್ ರದ್ದುಪಡಿಸಿದೆ.

ಕೇಂದ್ರ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ಗಂಭೀರ ಆರೋಪವನ್ನು ಎದುರಿಸುತ್ತಿರುವಾಗ ಅವರು ಯಾವ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಮುಖ್ಯವಾಗುವುದಿಲ್ಲ ಎಂದು ನ್ಯಾಯಮೂರ್ತಿ ಸಿ.ಟಿ. ರವಿಕುಮಾರ್ ಮತ್ತು ರಾಜೇಶ್ ಬಿಂದಲ್ ಅವರಿದ್ದ ನ್ಯಾಯಪೀಠ ಹೇಳಿದೆ.

**ಆಧಾರ:**ವಿಶ್ವವಾಣಿ, ದಿನಾಂಕ:05.01.2025

### 2. Legislature should examine efficacy of laws periodically:SC

Supreme Court on dated:07th January 2025, said Parliament and assemblies should periodically review the working of laws enacted by them to find out whether these legislations have met the desired goals, required modification or repeal. Expressing disinclinaion to modify the 45 day time limit prescribed in the Representation of People Act for a candidate to file an election petition to challenge a poll result, a bench comprising Justices Surya Kant and N K Singh said, “while the judicial review can test the validity of a law, there should be periodic legislative review about working of every legislation, say in every 10, 25 or 50 years”.

“The legislature can constitute an expert body which can undertake periodic review to find out whether the law has met the objective for which it was enacted and served the purpose, whether there are bottlenecks, deficiencies or grey areas which are required to be removed,” the bench said.

The Justce Kantled bench, however, said it would not entertain BJP Lok sabha poll candidate Menaka Sanjay Gandhi’s writ petition challenging the validity of the 45 day time limit for filing an election petition challenging the poll results. Gandhi was defeated by Samajwadi Party’s Rambhual Nishad by over 43,000 votes in the Sultanpur constituency.

Gandhi’s counsel Sidharth Luthra had said she gotto know about the suppression of criminal antecedents of the SP candidate in his election affidavit, a ground for disqualification of a candidate under SC laid down criteria, after the statutory period had elapsed. If the court extends the period of limitation beyond 4 days, then it would amount to legislating, “Justice Kant said.

Luthra agreed and said there should be a periodic audit of the working of legislations. While withdrawing the writ petition, Luthra said two prayers in the petition could be raised in the appeal against the Allahabad HC order dismissing her election petition.

The bench permitted Luthra to raise those issues in Gandhi's special leave petition, which challenged the HC order that had dismissed her election petition as time barred as it was filed on July 27 even though the results were decared on June 4 last year.

SC issue notice to Nishad on Gandhi's appeal and asked the respondent to file his reply in four weeks. Gandhi has alleged that Nishad had disclosed only eight pending criminal cases against him in his election affidavit even though there are 12 criminal cases lodged against him, which as per the RP Act and an SC judgement constituted corrupt practices making his candidature liable to disqualification.

**Courtesty:**Time of India, Dated:08.01.2025

## 3. ಶಾಲೆಗಳಲ್ಲಿ ಅಗ್ನಿ ಸುರಕ್ಷತೆ ಕಡ್ಡಾಯ

ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕಾಗಿ ಶಾಲಾ ಕಟ್ಟಡದ ಸುರಕ್ಷತೆ ಪ್ರಮಾಣ ಪತ್ರ ಮತ್ತು ನಕ್ಷೆ ಅನುಮೋದನೆ, ಅಗ್ನಿ ಸುರಕ್ಷತಾ ಪ್ರಮಾಣಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆ 2022ರ ಜೂನ್.6 ರಂದು ಹೊರಡಿಸಿದ್ದ ಸುತ್ತೋಲೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಅಲ್ಲದೆ, ಈ ನಿಯಮಗಳನ್ನು ಸರ್ಕಾರಿ ಶಾಲೆಗಳೂ ಸಹ ಪಾಲಿಸಬೇಕು ಎಂದು ನ್ಯಾಯಲಯ ಆದೇಶಿಸಿದೆ. ಸರ್ಕಾರದ ಸುತ್ತೋಲೆಯನ್ನು ಪ್ರಶ್ನಿಸಿ ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಸಂಸ್ಥೆಯ ಕಾರ್ಯದರ್ಶಿ ಪ್ರಭಾಕರ ಅರಸ್ ಸೇರಿ ಹಲವು ಶಾಲೆಗಳು ಸಲ್ಲಿಸಿದ್ದ ಅರ್ಜಿಗಳನ್ನು ಆಲಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ಪೀಠ ಈ ಆದೇಶವನ್ನು ನೀಡಿದೆ. 'ಸುತ್ತೋಲೆಯಂತೆ ಶಾಲೆಗಳಿಗೆ ಅಂತಿಮ ಮಾನ್ಯತೆ ನೀಡುವ ಮುನ್ನವೇ ಎಲ್ಲ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯವಾಗಿದೆ. ಅದರ ಉದ್ದೇಶ ಶಾಲಾ ಕಟ್ಟಡಗಳಲ್ಲಿ ಬಿಲ್ಡಿಂಗ್ ಬೈಲಾ ಮತ್ತು ಇತರ ನಿಯಮಗಳನ್ನು ಪಾಲನೆ ಮಾಡಬೇಕು ಎಂಬುದಾಗಿದೆ, ಇಲಾಖೆ ಹೊಸ ಷರತ್ತುಗಳೇನೂ ವಿಧಿಸಿಲ್ಲ. ಹಾಲಿ ನಿಯಮಗಳಲ್ಲಿರುವ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚನೆ ನೀಡಿದೆ. ಹಾಗಾಗಿ ಸರ್ಕಾರದ ಆದೇಶದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ನ್ಯಾಯಾಲಯ ಹೇಳಿದೆ.

**ಆಧಾರ:**ವಿಜಯ ವಾಣಿ, ದಿನಾಂಕ:10.01.2025

## 4. ಮೀಸಲಾತಿ ನಿರಾಕರಣೆ: ಶಾಸಕಾಂಗ, ಕಾರ್ಯಾಂಗ ನಿರ್ಧರಿಸಲಿ– 'ಸುಪ್ರೀಂ'

ಮೀಸಲಾತಿಯ ಪ್ರಯೋಜನ ಪಡೆದು ಇತರರೊಂದಿಗೆ ಸ್ಪರ್ಧಿಸುವ ಸ್ಥಿತಿಯಲ್ಲಿ ಇರುವವರನ್ನು ಮೀಸಲಾತಿಯಿಂದ ಹೊರಗಿಡುವ ಕುರಿತು ಶಾಸಕಾಂಗ ಮತ್ತು ಕಾಯಾಂಗವೇ ನಿರ್ಧಾರ ಕೈಗೊಳ್ಳಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಈ ಕುರಿತು ಏಳು ಸದಸ್ಯರಿದ್ದ ಸಂವಿಧಾನ ಪೀಠವು ಕಳೆದ ವರ್ಷ ಆಗಸ್ಟ್‌ನಲ್ಲಿ ನೀಡಿದ್ದ ತೀರ್ಪಿಗೆ ಸಂಬಂಧಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ನ್ಯಾಯಪೀಠ ಮೇಲ್ಮನವಿ ವಿಚಾರಣೆ ನಡೆಸಿತು. 'ಮೀಸಲಾತಿಯ ಪ್ರಯೋಜನ ಪಡೆದವರು, ಇತರರೊಂದಿಗೆ ಸ್ಪರ್ಧಿಸುವ ಸ್ಥಿತಿಯಲ್ಲಿ ಇದ್ದಾಗ ಅವರನ್ನು ಮೀಸಲಾತಿ ಸೌಲಭ್ಯದಿಂದ ಹೊರಗಿಡಬೇಕು. ಕಳೆದ 75 ವರ್ಷಗಳ ವಿದ್ಯಮಾನಗಳನ್ನು ಪರಿಗಣನೆಗೆ ತೆಗೆದುಕೊಂಡೇ ನಾವು ನಮ್ಮ ಅಭಿಪ್ರಾಯ ತಿಳಿಸಿದ್ದೇವೆ. ಆದರೆ, ಈ ಕುರಿತು ಶಾಸಕಾಂಗ ಮತ್ತು ಕಾರ್ಯಾಂಗ ನಿರ್ಧಾರ ಕೈಗೊಳ್ಳಬೇಕು' ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು.

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ನೀಡುವುದಕ್ಕೆ ರಾಜ್ಯಗಳು ಸಂವಿಧಾನದತ್ತ ಅಧಿಕಾರ ಹೊಂದಿವೆ ಎಂಬುದಾಗಿ ಸಂವಿಧಾನ ಪೀಠ ಬಹುಮತದ ತೀರ್ಪು ನೀಡಿದೆ. ನ್ಯಾಯಮೂರ್ತಿ ಗವಾಯಿ ಅವರೂ ಈ ಸಂವಿಧಾನ ಪೀಠದಲ್ಲಿದ್ದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿನ 'ಕೆನೆಪದರ ಗುರುತಿಸಿ, ಅವರಿಗೆ ಮೀಸಲಾತಿ ಸೌಲಭ್ಯ ನಿರಾಕರಿಸುವುದಕ್ಕಾಗಿ ರಾಜ್ಯಗಳು ನೀತಿಯೊಂದನ್ನು ರೂಪಿಸಬೇಕು' ಎಂಬುದಾಗಿ ನ್ಯಾಯಮೂರ್ತಿ ಗವಾಯಿ ಅವರು ಪ್ರತ್ಯೇಕ ತೀರ್ಪು ಬರೆದಿದ್ದರು.

**ಆಧಾರ**:ಪ್ರಜಾವಾಣಿ, ದಿನಾಂಕ:10.01.2025

## 5. K'taka courts settle 17.9 lakh cases in '24; dists do better

The court in Karnataka cleared over 17.9 lakh cases ( 17,90,663) in 2024 with lower courts in taluks and districts managing most of the disposals, according to data available on the National Judicial Data Grid at 5:45pm on dated:07.01.2025. This is about 5% more than the nearly 17 lakh cases that were cleared in the state in 2023.

In 2024,lower courts in the state disposed of 17,03,605 cases and the high court 87,058. As of 5.45 pm on dated:07.01.2025, there are 20.7 lakh(20,75,040) pending cases in the lower courts and 2.5 lakh (2,50,843) in the high court.

In 2023, the court had cleared nearly 17 lakh cases in 2023, including 16 lakh in lower court and nearly 90,000 in the high court. Experts said the pendency burden shows that there is still a long way to go for the judiciary but the increase in the disposed cases reflects its efforts in handiling the the backlog. The courts in Bengaluru Urban district cleared the highest number of cases in 2024, followed by Belagavi, Mysuru, Bengaluru Rural and Tumakuru.

YR Sadashiva Reddy former chairman of Karnataka State Bar Council and co-chairman of Bar Council of India, said:"Appeals in the high court against lower court decisions, such as Regular First Appeals(RFA's), can take years to be resolved. This delay is compunded by the shortage of judges and inefficiencies in the judicial appointment process. While some judges manage to dispose of hundreds of cases in a day others handle far fewer, raising questions over consistency and efficiency. Despite these challenges, Karanataka has shown some improvement in case disposal rates compared to previous years, thanks to the establishment of more courts and better

resource allocation. However, there’s still a long way to go, particularly in appointing competent judges who can handle cases effectively and reduce pendency.

AP Ranganatha, former president, Advocates Association of Bengaluru, said infrastructure gap in judiciary is one of the reasons for pendency. Providing better infrastructure appointing additional judges, hiring stenographers and support staff, and increasing the number of courts are all essential measures that should be taken by govt. With more resources and support for the judiciary, the rate of disposals will automatically improve.

He also said the practice of granting extended vacations to trial courts is problematic. “Holidays spanning five or six working days are unnecessary and contribute to delays. The effects of these delays are farreaching. Litigants, not just advaocates are the ones who suffer the most. The main purpose of the judiciary-to deliver timely justice-is undermined by these prolonged timelines”, he added.

**Courtesty:**Time os India, Dated:10.01.2025

## 6. ರಾಜೀನಾಮೆ ಸಲ್ಲಿಸಿದ ಹತ್ತು ದಿನಗಳ ಬಳಿಕ ಅಂಗೀಕರಿಸಬೇಕು

ಗ್ರಾಮ ಪಂಚಾಯಿತಿ ಅಧ್ಯಕ್ಷರು ರಾಜೀನಾಮೆ ನೀಡಿದಲ್ಲಿ ಕಾರಣ ಸಂಬಂಧ ವಿಚಾರಣೆ ನಡೆಸಿ, ರಾಜೀನಾಮೆ ಸಲ್ಲಿಸಿದ 10 ದಿನಗಳ ಬಳಿಕವಷ್ಟೇ ಉಪ ವಿಭಾಗಾಧಿಕಾರಿಗಳು ಅಂಗೀಕರಿಸಬೇಕು ಎಂದು ಆದೇಶಿಸಿರುವ ಹೈಕೋರ್ಟ್, ನಿಯಮಗಳನ್ನು ಪಾಲಿಸದೆ ಅಂಗೀಕರಿಸಿ ಆದೇಶಿದ್ದ ರಾಜೀನಾಮೆಯನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ.

ಬೆಳಗಾವಿ ಜಿಲ್ಲೆಯ ಅಥಣಿ ಕೋಹಾಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸ್ಥಾನಕ್ಕೆ ನೀಡಿದ್ದ ರಾಜೀನಾಮೆ ಅಂಗೀಕರಿಸಿದ್ದ ಉಪವಿಭಾಗಾಧಿಕಾರಿಯ ಕ್ರಮವನ್ನು ಪ್ರಶ್ನಿಸಿ ಮಾಲಗೌಡ ಎಂಬವರು ಸಲ್ಲಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ನಿಯಮಗಳ ಪ್ರಕಾರ ರಾಜೀನಾಮೆ ಸಲ್ಲಿಸಿದ ದಿನವನ್ನು ಹೊರತುಪಡಿಸಿ ನಂತರ 10 ದಿನಗಳು ಎಂಬುದಾಗಿ ಕಾಯ್ದೆಯಲ್ಲಿ ತಿಳಿಸಲಾಗಿದೆ. ಹೀಗಾಗಿ ಅದಕ್ಕೂ ಮುನ್ನ ಅಂಗೀಕರಿಸಿರುವ ಆದೇಶವನ್ನು ರದ್ದುಪಡಿಸಲಾಗುತ್ತಿದೆ ಎಂದು ಪೀಠ ಹೇಳಿದೆ.

ಅಲ್ಲದೆ, ರಾಜೀನಾಮೆ ನೀಡಿದ ಬಳಿಕ ಅದಕ್ಕೆ ನೀಡಿದ ಕಾರಣಕ್ಕೆ ಸಂಬಂಧಿಸದಂತೆ ವಿಚಾರಣೆ ನಡೆಸಬೇಕು ಎಂಬುದಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಸೆಕ್ಷನ್ 48ರ ಅಡಿಯಲ್ಲಿ ತಿಳಿಸಲಾಗಿದೆ. ಅಲ್ಲದೆ, ರಾಜೀನಾಮೆ ಅಂಗೀಕರಿಸುವ ಸಂದರ್ಭದಲ್ಲಿ ಬೆದರಿಕೆ, ಒತ್ತಾಯ ಮಾಡಲಾಗಿದೆಯೇ ಎಂಬುದನ್ನು ಪರಿಗಣಿಸಬೇಕು. ಆ ಕಾರ್ಯ ಮಾಡದೇ 2024ರ ಡಿಸೆಂಬರ್ 16ರಂದು ಸಲ್ಲಿಸಿರುವ ರಾಜೀನಾಮೆ ಪರಿಶೀಲನೆ ನಡೆಸದೆ ಅಂಗೀಕರಿಸಿ ಆದೇಶಿಸಿದ್ದಾರೆ. ಹೀಗಾಗಿ ಈ ಆದೇಶವನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂದು ಪೀಠ ತಿಳಿಸಿತು.

**ಆಧಾರ**:ಸಂಯುಕ್ತ ಕರ್ನಾಟಕ, ದಿನಾಂಕ:02.02.2025

## 7. ಕಾಯ್ದೆ ಎತ್ತಿ ಹಿಡಿದ 'ಸುಪ್ರೀಂ'

ಕರ್ನಾಟಕ ಸರ್ಕಾರವು 2003ರಲ್ಲಿ ಜಾರಿಗೆ ತಂದಿದ್ದ ಕಾನೂನನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಬಸ್ ಕಾರ್ಯಾಚರಣೆಗಳ ಮೇಲೆ ಕೆಎಸ್‌ಆರ್‌ಟಿಸಿಯ ಏಕಸ್ವಾಮ್ಯವನ್ನು ಕಿತ್ತು ಹಾಕಿ, ಹೆಚ್ಚುತ್ತಿರುವ ಸಾರ್ವಜನಿಕ ಸಾರಿಗೆ ಅಗತ್ಯಗಳನ್ನು ಪೂರೈಸಲು ಖಾಸಗಿ ಕಂಪನಿಗಳಿಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂಬುದು ಈ ಕಾಯ್ದೆಯ ಸಾರ.

ಖಾಸಗಿಯಾಗಿ ನಿರ್ವಹಿಸಲ್ಪಡುವ ಕಾಂಟ್ರಾಕ್ಟ್ ಕ್ಯಾರೇಜ್ ಬಸ್‌ಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಮತ್ತು ಅವುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನಿಯಂತ್ರಣಕ್ಕೆ ತರುವ ಉದ್ದೇಶದಿಂದ ಜಾರಿಗೆ ತರಲಾದ 1976ರ ಹಿಂದಿನ ಶಾಸನವನ್ನು ರದ್ದುಗೊಳಿಸುವ 2003ರ ಕಾನೂನನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಪ್ರಸನ್ನ ಬಿ.ವರಾಳೆ ಅವರ ಪೀಠವು ಎತ್ತಿಹಿಡಿದಿದೆ.

ಕೆಎಸ್‌ಆರ್‌ಟಿಸಿ ಮತ್ತು ಇತರರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಪೀಠ 'ಹಿಂದಿನ ಕಾನೂನಿನ ರದ್ದತಿಯ ಶಾಸಕಾಂಗದ ಅನಿಯಂತ್ರಿತ ಕ್ರಿಯೆ ಅಲ್ಲ. ಬದಲಿಗೆ, ಅಸ್ತಿತ್ವದಲ್ಲಿರುವ ನಿಯಂತ್ರಣ ಚೌಕಟ್ಟಿನಲ್ಲಿನ ಗುರುತಿಸಲ್ಪಟ್ಟ ನ್ಯೂನತೆಗಳನ್ನು ಮತ್ತು ಸಾರಿಗೆ ವಲಯವನ್ನು ಉದಾರೀಕರಣಗೊಳಿಸುವ ಅಗತ್ಯ ಬೆಂಬಲಿಸುವ ಉದ್ದೇಶ ಮತ್ತು ಸ್ಪಷ್ಟ ಕಾರಣಗಳ ಆಧಾರದ ಮೇಲೆ ತೆಗೆದುಕೊಂಡಿರುವ ಕ್ರಮವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

ಕೆಸಿಸಿಎ ಕಾಯ್ದೆಯ ಮೂಲಕ ಕೆಎಸ್‌ಆರ್‌ಟಿಸಿಗೆ ದೊರೆತಿರುವ ಏಕಸ್ವಾಮ್ಯತೆಯನ್ನು ಕಿತ್ತು ಹಾಕುವುದು ಮತ್ತು ಹೆಚ್ಚುತ್ತಿರುವ ಸಾರ್ವಜನಿಕ ಸಾರಿಗೆ ಅಗತ್ಯಗಳನ್ನು ಪೂರೈಸಲು ಖಾಸಗಿ ಬಸ್‌ಗಳಿಗೆ ಅವಕಾಶ ಕಲ್ಪಿಸುವುದು ಇದರ ಉದ್ದೇಶವಾಗಿತ್ತು ಎಂದು ನ್ಯಾಯಪೀಠ ತಿಳಿಸಿದೆ. ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠದ ತೀರ್ಪನ್ನು ಒಪ್ಪಿಕೊಂಡಿರುವ ನ್ಯಾಯಪೀಠ, ಈ ಕಾಯ್ದೆ ರದ್ದತಿಯ ಕ್ರಮವು ಆಧುನಿಕ ಸಾರಿಗೆಯ ಪ್ರಾಯೋಗಿಕ ವಾಸ್ತವಿಕತೆಗೆ ತಕ್ಕನಾದ ಕ್ರಮವಾಗಿದೆ ಎಂದಿದೆ.

ಹೆಚುತ್ತಿರುವ ಸಾರ್ವಜನಿಕ ಸೇವೆಗಳು, ನಗರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ, ಸಮರ್ಥ ಸೇವೆ ಮತ್ತು ಹೆಚ್ಚು ಬದಲಾಗುವ ನಿಯಂತ್ರಣ ನಿಯಮಗಳಂತಹ ಸಮಕಾಲೀನ ಸವಾಲುಗಳನ್ನು ಎದುರಿಸಲು ಈ ಕ್ರಮ ಅಗತ್ಯ ಎಂದು ನ್ಯಾಯಪೀಠ ಹೇಳಿದೆ.

ಕರ್ನಾಟಕ ಕಾಂಟ್ರಾಕ್ಟ್ ಕ್ಯಾರೇಜ್(ಸ್ವಾಧೀನ) ಕಾಯ್ದೆ–1976 ಅನ್ನು ರದ್ದುಗೊಳಿಸುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ಕಾಯ್ದೆ–2003 ಸೆಕ್ಷನ್3 ಸಾಂವಿಧಾನಿಕವಾಗಿದೆ ಎಂದು ಪೀಠ ಅಭಿಪ್ರಾಯ ಪಟ್ಟಿದೆ. ರಾಜ್ಯ ಶಾಸಕಾಂಗವು ಕಾಯ್ದೆಯನ್ನು ರದ್ದುಗೊಳಿಸಲು ತನ್ನ ಅಧಿಕಾರವನ್ನು ಸರಿಯಾಗಿ ಚಲಾಯಿಸಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಹೈಕೋರ್ಟ್ 2011ರ ಮಾರ್ಚ್ 28ರಂದು ನೀಡಿದ್ದ ತೀರ್ಪಿನ ವಿರುದ್ಧ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಕೆಸಿಸಿಎ ಕಾಯ್ದೆಯನ್ನು ರದ್ದುಗೊಳಿಸುವುದು ಅಸಂವಿಧಾನಿಕ ಎಂದು ಕೆಎಸ್‌ಆರ್‌ಟಿಸಿ ಮಾಡಿದ ವಾದವನ್ನು ನ್ಯಾಯಾಲಯ ತಿರಸ್ಕರಿಸಿದೆ.

**ಆಧಾರ**:ಪ್ರಜಾವಾಣಿ, ದಿನಾಂಕ:07.02.2025

## 8. ಮಸೂದೆಗೆ ಅಂಕಿತ ಹಾಕದಿದ್ದಾಗ ರಾಜ್ಯಗಳಿಗೆ ತಿಳಿಸಬೇಕು

ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕದಿದ್ದಾಗ, ಈ ಕುರಿತು ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡದಿರುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಲ್ಲದೇ, ಇಂತಹ ನಡೆ ಮೂಲಕ 'ಬಿಕ್ಕಟ್ಟು' ಸೃಷ್ಟಿಯಾಗುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್ ಇದಕ್ಕೆ ಯಾವ ರೀತಿ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದೂ ಅಚ್ಚರಿ ವ್ಯಕ್ತಪಡಿಸಿದೆ.

ತಮಿಳುನಾಡು ವಿಧಾನಸಭೆಯ ಅಂಗೀಕಾರ ಪಡೆದಿರುವ ಮಸೂದೆಗಳಿಗೆ ಅಂಕಿತ ಹಾಕದೆ ಇರುವ ಇರುವ ರಾಜ್ಯಪಾಲ ಆರ್.ಎನ್.ರವಿ ಅವರ ನಡೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಆರ್.ಮಹಾದೇವನ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿಯ ವಿಚಾರಣೆಯನ್ನು ಮುಂದುವರಿಸಿ ಹೀಗೆ ಹೇಳಿತು.

**ಆಧಾರ:**ಪ್ರಜಾವಾಣಿ, ದಿನಾಂಕ:08.02.2025

## 9. ಜನನ ಮರಣ ನೋಂದಣಿ ತಿದ್ದುಪಡಿಗೆ 'ಹೈ' ನಿರ್ದೇಶನ

ಜನನ ಪ್ರಮಾಣ ಪತ್ರದಲ್ಲಿ ಒಮ್ಮೆ ನಮೂದಿಸಿದ ಹೆಸರನ್ನು ಮತ್ತೆ ಬದಲಾವಣೆ ಮಾಡುವುದಕ್ಕೆ ಅವಕಾಶ ಕಲ್ಪಿಸುವ ರೀತಿಯಲ್ಲಿ ಜನನ ಮರಣ ಪ್ರಮಾಣ ನೋಂದಣಿ ಕಾಯಿದೆ 1969ಕ್ಕೆ ತಿದ್ದುಪಡಿ ಮಾಡುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ತಮ್ಮ ಮಗನ ಹೆಸರನ್ನು ಬದಲಾವಣೆಗೆ ಅವಕಾಶ ಕಲ್ಪಿಸಲು ಜನನ–ಮರಣ ನೋಂದಣಾಧಿಕಾರಿಗಳಿಗೆ ನಿರ್ದೇಶನ ನೀಡಲು ಕೋರಿ ಮಗುವಿನ ಪರವಾಗಿ ಅವರ ಪೋಷಕರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್.ಸಂಜಯ್‌ಗೌಡ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ.

ಜನನ ಪ್ರಮಾಣ ಪತ್ರದಲ್ಲಿ ಒಮ್ಮೆ ಹೆಸರನ್ನು ನೋಂದಾಯಿಸಿದ ಬಳಿಕ ಅದನ್ನು ಪೋಷಕರು ಬದಲಾಯಿಸುವ ನಿರ್ಧಾರ ತೆಗೆದುಕೊಳ್ಳುವುದು ಮತ್ತು ಹಲವು ಹೆಸರುಗಳನ್ನು ಇಡುವುದು ನಮ್ಮ ದೇಶದಲ್ಲಿ ಸಾಮಾನ್ಯವಾಗಿದೆ. ಆದರೆ, ದಾಖಲೆಗಳು ಒಂದೇ ಹೆಸರನ್ನು ನಮೂದಿಸುವುದಕ್ಕೆ ಅವಕಾಶವಿರುವುದರಿಂದ ಇದು ವ್ಯಕ್ತಿಯನ್ನು ಗುರುತಿಸುವುದಕ್ಕೆ ಕೆಲವು ಸಂದರ್ಭಗಳಲ್ಲಿ ಗೊಂದಲಗಳನ್ನುಂಟು ಮಾಡಲಿದೆ. ಈ ಸಂಬಂಧ ಶಾಸನಸಭೆ ಗಮನಹರಿಸಿ ನಾಗರಿಕರು ತಾವು ಬಯಸಿದ ಸಂದರ್ಭದಲ್ಲಿ ತಮ್ಮ ಹೆಸರುಗಳನ್ನು ಬದಲಾವಣೆಗೆ ಅಡ್ಡಿಯಾಗದಂತೆ ಕ್ರಮ ಕೈಗೊಳ್ಳುವ ರೀತಿಯಲ್ಲಿ ತಿದ್ದುಪಡಿ ಮಾಡಬೇಕು. ಜೊತೆಗೆ, ಹೆಸರು ಬದಲಾಯಿಸಿಕೊಳ್ಳುವವರ ದಾಖಲೆಗಳನ್ನು ಏಕಕಾಲಕ್ಕೆ ಬದಲಾವಣೆಗೆ ಅವಕಾಶ ನೀಡುವಂತಹ ಕಾರ್ಯವಿಧಾನವನ್ನು ರೂಪಿಸಬೇಕು ಎಂದು ಪೀಠ ಆದೇಶಿಸಿದೆ.

ರಾಜ್ಯ ಕಾನೂನು ಆಯೋಗ 2013 ಜುಲೈ 20ರಂದು ಸರ್ಕಾರಕ್ಕೆ ಸಲ್ಲಿಸಿರುವ 24ನೇ ವರದಿಯಲ್ಲಿನ ಶಿಫಾರಸುಗಳನ್ನು ಪರಿಗಣಿಸಿ ಕಾಯಿದೆಗೆ ತಿದ್ದುಪಡಿ ಮಾಡುವುದು ಸೂಕ್ತ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ಅಲ್ಲದೇ, ಕಾಯಿದೆಯ ಪ್ರಕಾರ ಹೆಸರನ್ನು ತಿದ್ದುಪಡಿ ಮಾಡುವವರೆಗೂ ಪೋಷಕರು ತಮ್ಮ ಮಕ್ಕಳ ಹೆಸರನ್ನು ಬದಲಾಯಿಸುವಂತೆ ಕೋರಿ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸುವುದಕ್ಕೆ ಸಾಧ್ಯವಿಲ್ಲ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಹೆಸರು ಬದಲಾವಣೆ ಕೋರಿ ಬರುವವರ ಕುರಿತಂತೆ ಕೈಗೊಳ್ಳಬೇಕಾದಂತಹ ಕ್ರಮಗಳ ಕುರಿತು ನ್ಯಾಯಪೀಠ ಅಧಿಕಾರಿಗಳಿಗೆ ಹಲವು ನಿರ್ದೇಶನಗಳನ್ನು ನೀಡಿದೆ. ಕಾಯಿದೆ ನ್ಯಾಯಪೀಠ ಅಧಿಕಾರಿಗಳಿಗೆ

ಹಲವು ನಿರ್ದೇಶನಗಳನ್ನು ನೀಡಿದೆ. ಕಾಯಿದೆ ತಿದ್ದುಪಡಿಯಾಗುವವರೆಗೂ ಈ ನಿರ್ದೇಶನಗಳನ್ನು ಅನುಸರಿಸುವ ಮೂಲಕ ಹೆಸರನ್ನು ಬದಲಾವಣೆಗೆ ಅವಕಾಶ ಮಾಡಿಕೊಡಬೇಕು ಎಂದು ಪೀಠ ಹೇಳಿದೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:15.02.2025

## 10. ಶಾಸಕರ ಸದನದೊಳಗಿನ ಮಾತಿಗೆ ಇದೆ ರಕ್ಷಣೆ

ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪ ಸಂಬಂಧ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧದ ವಿಚಾರಣಾ ಪ್ರಕ್ರಿಯೆಗೆ ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಹೈಕೋರ್ಟ್ ವಿಸ್ತರಿಸಿದೆ.

ಪ್ರಕರಣ ಸಂಬಂಧ ತಮ್ಮ ವಿರುದ್ಧ ಬಾಗೇವಾಡಿ ಠಾಣಾ ಪೊಲೀಸರು ದಾಖಲಿಸಿರುವ ಎಫ್ಐಆರ್ ರದ್ದು ಕೋರಿ ಸಿ.ಟಿ.ರವಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಧಾರವಾಡದಲ್ಲಿ ಈ ಆದೇಶ ಮಾಡಿತು.

ಅರ್ಜಿದಾರ ಸಿ.ಟಿ.ರವಿ ಪರ ವಾದಿಸಿದ ಹಿರಿಯ ವಕೀಲ ಪ್ರಭುಲಿಂಗ ನಾವಡಗಿ, "ಪ್ರಕರಣದಲ್ಲಿ ದೂರುದಾರೆಯಾಗಿರುವ ಸಚಿವರ ಬಗ್ಗೆ ಅರ್ಜಿದಾರರಿಗೆ ಗೌರವವಿದೆ. ಶಾಸನಸಭೆಯಲ್ಲಿ (ಸದನ) ಶಾಸಕರು ನೀಡಿದ ಹೇಳಿಕೆ ಅಥವಾ ಮಾಡಿದ ಚರ್ಚೆ ಸಂಬಂಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಸಂವಿಧಾನದಲ್ಲಿ ನಿರ್ಬಂಧವಿದೆ. ಸದನದಲ್ಲಿನ ಹೇಳಿಕೆಗೆ ಸಂಬಂಧಿಸಿದಂತೆ ಶಾಸಕರಿಗೆ ರಕ್ಷಣೆಯಿದೆ," ಎಂದು ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿ ನ್ಯಾಯಪೀಠಕ್ಕೆ ವಿವರಿಸಿದರು.

ಅದಕ್ಕೆ ಉತ್ತರಿಸಿದ ರಾಜ್ಯ ಸರ್ಕಾರಿ ಅಭಿಯೋಜಕ ಬಿ.ಎ.ಬೆಳ್ಳಿಯಪ್ಪ "ಘಟನೆ ನಡೆದಾಗ ಸದನ ಮುಂದೂಡಲ್ಪಟ್ಟಿತ್ತು. ಸದನ ಮುಂದೂಡಿದ ಸಮಯದಲ್ಲಿ ಶಾಸಕರು (ಆ ಸದನದ ಸದಸ್ಯರು) ನೀಡಿದ ಹೇಳಿಕೆಗೆ ಯಾವುದೇ ರಕ್ಷಣೆ ಇಲ್ಲ, ಈ ಪ್ರಕರಣದಲ್ಲಿ ಹೆಬ್ಬಾಳ್ಕರ್ ವಿರುದ್ಧ ಸಿ.ಟಿ.ರವಿ ನೀಡಿರುವ ಹೇಳಿಕೆ ಸಂಬಂಧ ಪ್ರಕರಣ ದಾಖಲಿಸಿರುವುದು ಸೂಕ್ತವಾಗಿದೆ." ಎಂದು ವಾದಿಸಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮತ್ತು ಎಂಎಲ್‌ಸಿ ಸಿ.ಟಿ.ರವಿ ಅವರ ಅಪದ್ಧ ಪದ ಬಳಕೆ ಅರೋಪದ ಪ್ರಕರಣ ಮಾರ್ಚ್ ಅಧಿವೇಶನದಲ್ಲಿ ಇತ್ಯರ್ಥಗೊಳ್ಳುವ ವಿಶ್ವಾಸವಿದೆ," ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಈಗಾಗಲೇ ವಿಷಯವನ್ನು 8 ಸದಸ್ಯರಿರುವ ನೀತಿ ನಿರೂಪಣಾ ಕಮಿಟಿಗೆ ಕಳುಹಿಸಲಾಗಿದೆ. ಆದರೆ ಇನ್ನು ಇಲ್ಲಿಂದ ಯಾವುದೇ ರಿಪೋರ್ಟ್ ಬಂದಿಲ್ಲ" ಎಂದರು.

"ಈ ಪ್ರಕರಣದಲ್ಲಿ ಅನಿವಾರ್ಯ ಕ್ರಮವೆಂದರೆ ಒಂದು ಅವಧಿಯ ಅಧಿವೇಶನದಿಂದ ಹೊರಹಾಕಬಹುದು. ಆದರೆ ಅದನ್ನು ಅಂತ್ಯವಾಗಿಸುವ ಜವಬ್ದಾರಿ ನನ್ನ ಮೇಲಿದೆ" ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:21.02.2025

## 11. Free speech is an integral part of healthy society: SC

The Supreme said the fundamental right to free speech through poetry, theatre, stand up comedy, and satire must be cherished, even as it quashed a criminal case accusing Congress MP Imran Pratapgadhi of inciting discord through his poem on "suffering injustice with love.

The judgment was based on an appeal filed by Mr. Pratapgadhi against the registration of a criminal case by the Gujarat Police under Section 196 of the Bharatiya Nyaya Sanhita. "Seventy five years into our Republic, we cannot be seen to be so shaky on our fundamentals that a mere recital of a poem, or for that matter, any form of art or entertainment, such as standup comedy, can be alleged to lead to animosity of hatred amongst different cominunities. Subscribing to such a view would stifle all legitimate expressions of view in the public domain, which is so fundamental to a free society," a Bench of Justices AS Oka and Ujjal Bhuyan wrote in its verdict.

Justice Bhuyan explained to Solicitor-General Tushar Mehta that the "reasonable restrictions" on free speech must remain reasonable. "Restrictions cannot be harmful or oppressive. Restrictions cannot overshadow the fundamental right to free speech, Justice Bhuyan said pointedly.

The top court said free speech was an integral part of a healthy and civilised society. A person's views cannot be silenced metely. because the majority does not like the sound of them The law enforcement authorities and courts must employ the standards of reasonable, strong minded, firm, and courageous minds, and not weak and vacillating ones who scent danger in every hostile point of view, before initiating criminal action against expression.

**Courtesty:**The Hindu, Dated:29.03.2025

# ಭಾಗ–7

# ಹೊರ ರಾಜ್ಯಗಳ ಸುದ್ದಿಗಳು

## 1. ಕರ್ನಾಟಕ ಅಭಿವೃದ್ಧಿಗೆ ಬಗ್ಗೆ ಅಸ್ಸಾಂ ಸಿಎಂ ಫಿದಾ

ಕರ್ನಾಟಕವು ದೇಶದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡುತ್ತಿದೆ. ಅದೇ ರೀತಿ ದೇಶಕ್ಕೆ ಕೊಡುಗೆ ನೀಡುವ ರಾಜ್ಯವನ್ನಾಗಿ ಅಸ್ಸಾಂ ರಾಜ್ಯವನ್ನೂ ಅಭಿವೃದ್ಧಿಪಡಿಸುವುದು ನನ್ನ ಗುರಿ ಎಂದು ಬಿಜೆಪಿ ಆಡಳಿತವಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ. ಈ ಮೂಲಕ ಕರ್ನಾಟಕ ಅಭಿವೃದ್ಧಿ ಪಥವನ್ನು ಹೊಗಳಿದ್ದಾರೆ. ಇಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಹಿಮಂತ ಬಿಸ್ವ ಶರ್ಮಾ, ಈ ಹಿಂದೆ ಅಸ್ಸಾಂ ಬೇರೆಯವರ ಮೇಲೆ ಅವಲಂಬಿತವಾದ ರಾಜ್ಯವಾಗಿತ್ತು ಮತ್ತು ಅದೇ ನಮ್ಮ ಗುರುತಾಗಿತ್ತು. ಆದರೆ ಈಗ ನಾವು ಕರ್ನಾಟಕ ಮತ್ತು ತಮಿಳುನಾಡಿನಂತೆ ಕೊಡುಗೆ ನೀಡುವ ರಾಜ್ಯವಾಗಬೇಕಿದೆ. ಅದನ್ನು ಸಾಧಿಸುವುದೇ ನನ್ನ ಗುರಿ ಎಂದು ಹೇಳಿದರು. ಜೊತೆಗೆ ಈ ಕನಸು ನನಸು ಮಾಡಲು ಉದ್ಯಮಗಳನ್ನು ಪ್ರೋತ್ಸಾಹಿಸಲು ಮತ್ತು ಬೆಂಬಲಿಸಲು ಅಸ್ಸಾಂನಲ್ಲಿ ಸ್ಟಾರ್ಟಪ್ ಇಲಾಖೆ ಸ್ಥಾಪಿಸಲಾಗುವುದು. ಮೂಲಸೌಕರ್ಯ, ಎಲೆಕ್ಟ್ರಾನಿಕ್ಸ್ ನವೀಕರಿಸಬಹುದಾದ ಇಂಧನ ಪ್ರವಾಸೋದ್ಯಮ ಮತ್ತು ಲಾಜಿಸ್ಟಿಕ್ಸ್‌ನಂತಹ ಕ್ಷೇತ್ರಗಳಲ್ಲಿ ಹೂಡಿಕೆಯನ್ನು ಹೆಚ್ಚಿಸಲು 25–26 ರಂದು ಅಡ್ವಾಂಟೇಜ್ ಅಸ್ಸಾಂ 2.0 ಶೃಂಗಸಭೆಯನ್ನು ರಾಜ್ಯ ಅಯೋಜಿಸುತ್ತಿದೆ. ಅಸ್ಸಾಂನ ಭವಿಷ್ಯಕ್ಕಾಗಿ ನಮ್ಮನ್ನು ನಾವು ಪರಿವರ್ತಿಸಿಕೊಳ್ಳಬೇಕಿದೆ, ಇದೇ ನನ್ನ ಗುರಿ' ಎಂದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:27.01.2025

## 2. ಉ.ಪ್ರದೇಶದ ಮಹಾಕುಂಭ ಸ್ತಬ್ಧಚಿತ್ರಕ್ಕೆ 1ನೇ ಬಹುಮಾನ

76ನೇ ಗಣರಾಜ್ಯೋತ್ಸವದಂದು ಕರ್ತವ್ಯಪಥದಲ್ಲಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪ್ರದರ್ಶಿಸಿದ ಸ್ತಬ್ಧ ಚಿತ್ರಗಳ ಪೈಕಿ ಉತ್ತರ ಪ್ರದೇಶದ ಸ್ತಬ್ಧಚಿತ್ರಕ್ಕೆ ಮೊದಲ ಬಹುಮಾನ ದೊರೆತಿದೆ. ಪ್ರಯಾಗ್‌ರಾಜ್ ಕುಂಭಮೇಳದ ವೈಭವ, ಐತಿಹ್ಯವನ್ನು ಆ ಸ್ತಬ್ಧ ಚಿತ್ರದಲ್ಲಿ ಪ್ರದರ್ಶಿಸಲಾಗಿತ್ತು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

14 ದೇವತೆಗಳಿಗೆ ಒಟ್ಟಿಗೆ ಪೂಜೆ ಸಲ್ಲಿಸುವ ವಿಶಿಷ್ಟ ಸಂಪ್ರದಾಯ ಪ್ರತಿಬಿಂಬಿಸುವ ಸ್ತಬ್ಧಚಿತ್ರ ಪ್ರದರ್ಶಿಸಿದ ತ್ರಿಪುರಕ್ಕೆ 2ನೇ ಸ್ಥಾನ, ಆಂಧ್ರಪ್ರದೇಶದ ಪ್ರಾಚೀನ ಮರದ ಗೊಂಬೆಗಳ ಕೆತ್ತನೆ ಬಿಂಬಿಸಿದ್ದ ಟ್ಯಾಬ್ಲೊಗೆ 3ನೇ ಬಹುಮಾನ ದೊರೆತಿದೆ. ಇನ್ನು ಸಚಿವಾಲಯಗಳ ಪೈಕಿ. ಬುಡಕಟ್ಟು ಸಚಿವಾಲಯದ ಸ್ತಬ್ಧಚಿತ್ರವನ್ನು ಉತ್ತಮ ಎಂದು ಪರಿಗಣಿಸಲಾಗಿದೆ. ಇನ್ನು ಜನರೇ ವೋಟ್ ಮಾಡಿದ ಸ್ತಬ್ಧಚಿತ್ರಗಳಲ್ಲಿ ಮೊದಲ ಗುಜರಾತ್‌ಗೆ ಸ್ಥಾನ ದೊರೆತಿದೆ.

ರಕ್ಷಣಾ ಪಡೆಗಳ ಕವಾಯತಿನ ಪೈಕಿ ಜಮ್ಮು-ಕಾಶ್ಮೀರ ರೈಫಲ್ಸ್ ತುಕಡಿಯದ್ದು ಅತ್ಯುತ್ತಮ ಎಂದು ಪರಿಗಣಿಸಲಾಗಿದೆ. ಜತೆಗೆ ಕೇಂದ್ರ ಪೊಲೀಸ್. ಹಾಗೂ ಸಹಾಯಕ ಪಡೆಗಳ ಪೈಕಿ ದಿಲ್ಲಿ ಪೊಲೀಸರ ತಂಡದ ಕವಾಯತನ್ನು ಉತ್ತಮ ಎಂದು ಘೋಷಿಸಲಾಗಿದೆ.

**ಆಧಾರ:**ಉದಯವಾಣಿ, ದಿನಾಂಕ:30.01.2025

## 3. ವಾಟ್ಸ್‌ಆ್ಯಪ್‌ನಲ್ಲೇ ಆಂಧ್ರ ಸರ್ಕಾರಿ ಸೇವೆ: ಇದು ದೇಶದಲ್ಲೇ ಮೊದಲು

ದೇವಸ್ಥಾನ ಟಿಕೆಟ್, ಬಸ್ ಟಿಕೆಟ್ ಬುಕ್ ಮಾಡುವುದರ ಜೊತೆಗೆ ಸರ್ಕಾರಿ ದಾಖಲೆಗಳನ್ನು ಇನ್ನು ಮುಂದೆ ಆಂಧ್ರಪ್ರದೇಶದ ಜನ, ಬೆರಳತುದಿಯಲ್ಲಿ ಪಡೆದುಕೊಳ್ಳಬಹುದು. ಇದಕ್ಕಾಗಿ ದೇಶದಲ್ಲೇ ಮೊದಲ ಬಾರಿಗೆ ಆಂಧ್ರ ಪ್ರದೇಶ ಸರ್ಕಾರ ವಾಟ್ಸ್‌ಆ್ಯಪ್ ಮೂಲಕ ಸರ್ಕಾರಿ ಸೇವೆಯನ್ನು ಆರಂಭಿಸಿದೆ. ರಾಜ್ಯ ಸರ್ಕಾರದ ಅಧೀನದಲ್ಲಿರುವ 36 ವಿಭಾಗಗಳ 161 ಸೇವೆಗಳು ಸದ್ಯಕ್ಕೆ ವಾಟ್ಸ್‌ಆ್ಯಪ್‌ನಲ್ಲಿ ಲಭ್ಯವಿದ್ದು, ಇದಕ್ಕೆ 'ಮನ ಮಿತ್ರ' (ನಮ್ಮ ಸ್ನೇಹಿತ) ಎಂದು ಹೆಸರಿಡಲಾಗಿದೆ.

9552300009 ಫೋನ್ ನಂಬರ್‌ನಲ್ಲಿ ಈ ಸೇವೆ ಲಭ್ಯವಿದ್ದು, ಮೆಸೇಜ್ ಮಾಡುವ ಮೂಲಕ ಅಗತ್ಯವಿರುವ ಸೇವೆಗಳನ್ನು ಜನರು ಪಡೆದುಕೊಳ್ಳಬಹುದಾಗಿದೆ. ಮುಖ್ಯಮಂತ್ರಿ ಕಚೇರಿಯಲ್ಲಿ ಆಂಧ್ರಪ್ರದೇಶ ಐಟಿ ಸಚಿವ ನಾರಾ ಲೋಕೇಶ್, ಈ ಯೋಜನೆಗೆ ಚಾಲನೆ ನೀಡಿದರು.

ವಿದ್ಯುತ್, ಸಾರಿಗೆ, ಅನ್ನಾ ಕೇಂದ್ರಗಳು, ಮುಖ್ಯಮಂತ್ರಿ ಪರಿಹಾರ ನಿಧಿ, ಸ್ಥಳೀಯ ಆಡಳಿತ ಸಂಸ್ಥೆ, ದೇವಸ್ಥಾನಗಳ ಟಿಕೆಟ್ ಬುಕಿಂಗ್ ಸೇರಿದಂತೆ 161 ಸೇವೆಗಳನ್ನು ಮೊದಲ ಹಂತದಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ನೀಡಲಾಗುತ್ತಿದೆ. ಜನ್ಮ ಪ್ರಮಾಣ ಪತ್ರ ಸೇರಿದಂತೆ ಸರ್ಕಾರಿ ದಾಖಲೆಗಳನ್ನು ವಾಟ್ಸ್‌ಆ್ಯಪ್ ಮೂಲಕವೇ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

2ನೇ ಹಂತದಲ್ಲಿ ಈ ಸೇವೆಗಳನ್ನು 360ಕ್ಕೆ, ಬಳಿಕ 520ಕ್ಕೆ ಏರಿಕೆ ಮಾಡಲಾಗುತ್ತದೆ ಎಂದು ನಾರಾ ಲೋಕೇಶ್ ಹೇಳಿದರು. ಯೋಜನೆಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಲೋಕೇಶ್, 'ಪ್ರಸ್ತುತ ದಿನಗಳಲ್ಲಿ ಮೊಬೈಲ್‌ನಲ್ಲೇ ಎಲ್ಲಾ ಸೇವೆಗಳು ದೊರೆಯುತ್ತಿವೆ. ಇದನ್ನು ಸರ್ಕಾರಿ ಸೇವೆಗಳಿಗೂ ವಿಸ್ತರಿಸಲು ನಾವು ನಿರ್ಧರಿಸಿದ್ದೆವು. ಹೀಗಾಗಿ ವಾಟ್ಸ್‌ಆ್ಯಪ್ ಮೂಲಕ ಸೇವೆಯನ್ನು ಒದಗಿಸುತ್ತಿದ್ದೇವೆ. ಇದು ಜನರು ಪದೇ ಪದೇ ಸರ್ಕಾರಿ ಕಚೇರಿಗಳಿಗೆ ಅಲೆಯುವ ಸಮಯವನ್ನು ಉಳಿಸುತ್ತದೆ ಎಂದು ಹೇಳಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:31.01.2025

## 4. Survey: Telangana first in own tax revenue, K'taka, Haryana second

TELANGANA topped the country in own tax revenue (OTR), according to the Economic Survey 2024-25 tabled in Parliament . The survey also highlighted WE Hub, a state government initiative. "For 15 states, the OTR accounted for more than half of their total tax receipts, the highest being Telangana at 88%, followed by Karnataka and Haryana at 86% each," the survey said. The overall tax revenue position of the state governments appears better as of November 2024, due to the increased tax devolution by the Union government, the report said. The survey also mentioned the Telangana government's initiatives, such as the MSME policy and others. Telangana was among eight states that achieved 100% coverage in piped drinking water supply under the Jal Jeevan Mission, it said.

"Currently, India is the second largest cement producer in the world after China. The Indian cement industry comprises 159 integrated large plants, 128 grinding units, five clinkerisation units and 62 miniplants. The current annual installed capacity of the cement industry stands at around 639 million tonnes (MT). In FY24, the production is expected to reach ap proximately 427 MT. Most of the cement plants in India are located in proximity to the raw material source. About 87% of the cement industry is concentrated in the states of Rajasthan, Andhra Pradesh, Telangana, Karnataka, Madhya Pradesh, Gujarat, Tamil Nadu, Maharashtra, UP, Chhattisgarh, Odisha, Meghalaya and West Bengal. The industry has adequate capacity to meet the domestic demand. Domestic cement consumption stands at around 290 kg per capita,"

the survey said. Telangana, along with Karnataka, Maharashtra, Haryana and Tamil Nadu, has more than one-third of their services GSVA coming from real estate, ownership of dwelling and professional services, it said.

**Courtesty:** Indian Express, Dated:01.02.2025

## 5. ಕೇಂದ್ರಕ್ಕೆ ಸಡ್ಡು: ಜನೌಷಧಿ ರೀತಿ ತ.ನಾಡಲ್ಲಿ 1000 ಔಷಧ ಅಂಗಡಿ

ಮೋದಿ ಸರ್ಕಾರದ ಜನೌಷಧಿ ರೀತಿಯಲ್ಲಿ ತಮಿಳುನಾಡಿನಾದ್ಯಂತ ಸಬ್ಸಿಡಿ ದರದಲ್ಲಿ ಜನರಿಗೆ ಔಷಧಿಗಳನ್ನು ಒದಗಿಸುವ ಸುಮಾರು 1 ಸಾವಿರ 'ಮುದಲ್ವಾರ್ ಮರುಂಧ ಗಂಗಲ್' ಔಷಧ ಅಂಗಡಿಗಳಿಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ. ಮುಖ್ಯ ಮಂತ್ರಿ ಎಂ.ಕೆ.ಸ್ಟಾಲಿನ್ ರವರು ಉದ್ಘಾಟಿಸಿದರು.

ಈ ಔಷಧಾಲಯಗಳು ಸಾರ್ವಜನಿಕರಿಗೆ ಶೇ.75 ರವರೆಗೆ ರಿಯಾಯ್ತಿ ದರದಲ್ಲಿ ಔಷಧಿಗಳನ್ನು ಪೂರೈಸುತ್ತವೆ. ಅಲ್ಲದೆ, ಸುಮಾರು 1,500 ಬಿ.ಫಾರ್ಮ, ಡಿ.ಫಾರ್ಮ, ಡಿಪ್ಲೊಮಾ ಮಾಡಿದವರಿಗೆ ಉದ್ಯೋಗಾವಕಾಶವನ್ನೂ ಒದಗಿಸಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಇಂಥ ಮೆಡಿಕಲ್ ಶಾಪ್ ನಡೆಸಲು ಫಾರ್ಮಸಿಸ್ಟ್‌ಗಳು ಹಾಗೂ ಕೋ–ಆಪರೇಟಿವ್ ಸೊಸೈಟಿಗಳಿಗೆ ಸರ್ಕಾರದಿಂದ ಸಬ್ಸಿಡಿ ನೀಡಲಾಗಿದೆ. ಉದ್ಯಮಿಗಳಿಗೆ 3 ಲಕ ಹಾಗೂ ಕೋ–ಆಪರೇಟಿವ್ ಸೊಸೈಟಿಗಳಿಗೆ 2 ಲಕ್ಷ ಸಬ್ಸಿಡಿ ನೀಡಲಾಗಿದೆ. ಜನೌಷಧಿ ಕೇಂದ್ರಗಳಲ್ಲಿ ಪ್ರಮುಖ ಔಷಧಗಳ ಜನರಿಕ್ ಬ್ರಾಂಡ್ ಔಷಧಿಗಳು ಕಡಿಮೆ ದರದಲ್ಲಿ ಸಿಗುತ್ತಿದ್ದರೆ, ಇಲ್ಲಿ ಎಲ್ಲಾ ರೀತಿಯ ಔಷಧಗಳನ್ನು ಸಬ್ಸಿಡಿ ದರದಲ್ಲಿ ನೀಡಲಾಗುತ್ತದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ:25.02.2025

## 6. ಮಹಾಕುಂಭಕ್ಕೆ ಗಿನ್ನೆಸ್ ದಾಖಲೆಗಳ ಸರಮಾಲೆ

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಕಳೆದ 45 ದಿನಗಳ ಕಾಲ ನಡೆದ ವಿಶ್ವದ ಅತಿದೊಡ್ಡ ಧಾರ್ಮಿಕ ಆಚರಣೆ ಮಹಾಕುಂಭ ಮೇಳವು ವಿಶ್ವದ ಚಿತ್ರವನ್ನು ಭಾರತದತ್ತ ಸೆಳೆದಿದ್ದು ಮಾತ್ರವಲ್ಲದೇ, 3 ಗಿನ್ನೆಸ್ ದಾಖಲೆಗಳನ್ನೂ ಸೃಷ್ಟಿಸಿದೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈ ಗಿನ್ನೆಸ್ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದ್ದಾರೆ.

ಫೆಬ್ರವರಿ 14ರಂದು 300 ನೈರ್ಮಲ್ಯ ಕಾರ್ಯಕರ್ತರು ಏಕಕಾಲದಲ್ಲಿ ಗಂಗಾ ನದಿ ಸ್ವಚ್ಛಗೊಳಿಸುವ ಮೂಲಕ ಅತಿದೊಡ್ಡ ನದಿ ಸ್ವಚ್ಛತಾ ಕಾರದ ದಾಖಲೆ ನಿರ್ಮಿಸಿದ್ದಾರೆ. ಇದು 2025ರ ಕುಂಭಮೇಳದ ಮೊದಲ ಗಿನ್ನೆಸ್ ದಾಖಲೆಯಾಗಿದೆ. ನಂತರ ಫೆಬ್ರವರಿ 24ರಂದು 15,000 ಮಂದಿ ನೈರ್ಮಲ್ಯ ಕಾರ್ಯಕರ್ತರು ಏಕಕಾಲದಲ್ಲಿ ಕುಂಭಮೇಳದ 4 ವಲಯಗಳನ್ನು ಸ್ವಚ್ಛಗೊಳಿಸುವ ಮೂಲಕ ಗಿನ್ನೆಸ್ ದಾಖಲೆ ನಿರ್ಮಿಸಿದರು, ಬೆನ್ನಲ್ಲೇ, ಫೆಬ್ರವರಿ 25ರಂದು ಸೆಕ್ಟರ್–1ರಲ್ಲಿ ನಿರ್ಮಿಸಲಾಗಿದ್ದ ಗಂಗಾ ಪೆಂಡಾಲ್‌ನಲ್ಲಿ 10,000 ಮಂದಿ ಕೈ ಅಚ್ಚಿನ ಪೇಂಟಿಂಗ್ ಮಾಡುವ ಮೂಲಕ ವಿಶ್ವದ ಅತಿ ಉದ್ದದ ಕೈ ಅಚ್ಚು ಪೇಂಟಿಂಗ್ ಎಂಬ ದಾಖಲೆ ನಿರ್ಮಿಸಿದ್ದಾರೆ. ಈ ಕೈ ಅಚ್ಚಿನ ಪೇಂಟಿಂಗ್ ನಿರ್ಮಾಣಕ್ಕಾಗಿ ಪರಿಸರ ಸ್ನೇಹಿ ಬಣ್ಣವನ್ನು ಬಳಕೆ ಮಾಡಲಾಗಿದೆ. 80 ಅಡಿ ಉದ್ದ ಹಾಗೂ 5 ಅಡಿ ಅಗಲದ ಈ ಪೇಂಟಿಂಗ್ ಅನ್ನು ಕೇವಲ 8 ಗಂಟೆಯಲ್ಲಿ ರಚಿಸಲಾಗಿತ್ತು.

ಇನ್ನು 2019ರಲ್ಲಿ ನಡೆದಿದ್ದ ಅರ್ಧ ಕುಂಭ ಮೇಳದ ವೇಳೆಯೂ 10,000 ಮಂದಿ ನೈರ್ಮಲ್ಯ ಕಾರ್ಮಿಕರು ಸ್ವಚ್ಛತೆಯಲ್ಲಿ ಭಾಗಿಯಾಗಿ ದಾಖಲೆ ನಿರ್ಮಿಸಿದ್ದರು. ಜತೆಗೆ ದಟ್ಟಣೆ ಹಾಗೂ ಜನ ನಿರ್ವಹಣೆಯಲ್ಲಿಯೂ ಗಿನ್ನೆಸ್ ದಾಖಲೆ ಸೃಷ್ಟಿಸಲಾಗಿತ್ತು.

**ಆಧಾರ:**ಉದಯವಾಣಿ, ದಿನಾಂಕ:28.02.2025

## 7. Over 2,500-crore financial liabilities to be transferred to Ladakh, says J&K CM Omar

Financial liabilities amounting to ₹2,504.46 crore are to be transferred to the Union Territory of Ladakh and the matter has been taken up with the Ministry of Home Affairs and the administration of Ladakh, Jammu and Kashmir Chief Minister Omar Abdullah .

Mr. Abdullah told the Legislative Assembly that a committee had been constituted to ensure the transparent distribution of assets, liabilities and Budget between the Union Territories of J&K and Ladakh following the reorganisation. Responding to a query from member Qaysar Jam shaid Lone, the Chief Minister stated that the process is being carried out in accordance with Notification SO-339 of GAD, dated October 30, 2020.

"The apportionment was to be conducted in a manner to ensure a fair transfer of assets, liabilities and Budget between the two U.T.s. After completion of the process, an official gazette notification was issued on October 31, 2020," he said. Mr. Abdullah, who also holds the portfolio of Finance, informed that most of the committee's recommendations have already been implemented.

**Courtesty:** The Hindu, Dated:14.03.2025

## 8. T.N. opts for Tamil letter 'ரூ' Insinstead of '₹' in Budget logo

Stepping up the campaign to promote Tamil, Chief Ministers MK Stalin. released a promotional logo for the Tamil Nadu Budget for 2025-26, replacing the Indian currency symbol, ₹ used in the previous financial year's Budget with the Tamil letter 'Roo (ரூ ) to denote 'Roobai, (the Tamil word for the currency.)

The logo, shared on the official X page of the Chief Minister, carried the slogan Ellarkum Ellam (everything for everyone) conveying the idea of inclusiveness. The promotional video produced by the Information and Public Relations Department has included the Sangam period Purananooru verse in praise of the Chera King Cheraman Palai Paadiya Perumkadungo. Official sources said the Tamil Nadu government, in its Budget document, was using the Tamil letter' and the English word rupees and had not opted for the symbol ₹ in the text.

"The Chief Minister has used Tamil, one of the 15 languages in the Indian currency. It is not against the Constitution, an offcial source said. IIJP State president K. Annamalai criticised the DMK government for replacing the rupee symbol ₹, which is a blend of the Devanagari 'Ra' for rupiah and the Roman 'R' fot rupees in English. In an X post, he said, "The DMK government's State Budget for 2025-26 replaces the rupee symbol designed by a Tamilian, which was adopted by the whole of Bharat and incorporated into our currency. Thiru Udaya Kumar, who designed the symbol, is the son of a forma DMK MLA?" The symbol ₹ was designed by D. Udaya Kumar, who won a national contest to desiga a symbol for the rupee in 2010. He is the son of former DMK MLA N. Dharmalingam, who won from Rishivandi yam in the 1971 election. At a press conference, J. Jeyaranjan, Executive Vice Chairman of the State Planning Commission, claimed ₹ the Tamil letter ' (ரூ ) was used only to avoid us ing Devanagari". Reacting to Mr. Jeyaran jan's comments, Mr. Annamalai said: "Mere advertisements and meaningless decisions to hide incompetence: summary of the last four years of the DMK. Tamil Nadu Congress Committee chief K. Selva perunthagai, in a post on X, said those with hostility towards Tamil Nadu would not like the replacement of the symbol Indian currency symbol.

**Courtesty:** The Hindu, Dated:14.03.2025

# ಭಾಗ–8

# ಅಂತರಾಷ್ಟ್ರೀಯ ಸುದ್ದಿಗಳು

## 1. ಕರ್ನಾಟಕದ ಪಂಚ ಗ್ಯಾರಂಟಿ ಸ್ಕೀಂಗಳಿಗೆ ವಿಶ್ವಸಂಸ್ಥೆ ಮೆಚ್ಚುಗೆ

ಮಹಿಳೆಯರನ್ನು ಮುಖ್ಯ ಫಲಾನುಭವಿಗಳನ್ನಾಗಿಸುವ ರಾಜ್ಯ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮಹಿಳಾ ಸಬಲೀಕರಣ ಹಾಗೂ ಲಿಂಗ ಸಮಾನತೆ ತರುವಲ್ಲಿ ಈ ಯೋಜನೆಗಳ ಪಾತ್ರ ಮಹತ್ವದ್ದು ಎಂದು ಶ್ಲಾಘಿಸಿದ್ದಾರೆ.

ಫಿಲೆಮನ್ ಯಾಂಗ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದರು. ಈ ವೇಳೆ ಅವರು ಪಂಚಗ್ಯಾರಂಟಿಗಳ ಕುರಿತು ಅಭಿನಂದನೆ ಸಲ್ಲಿಸಿದ್ದಾರೆ. ಗ್ಯಾರಂಟಿ ಯೋಜನೆಗಳು ಮಹಿಳೆಯರ ಕೈಗೆ ಹಣ ನೀಡುತ್ತಿವೆ. ಜತೆಗೆ ಶಕ್ತಿ ಯೋಜನೆಯಡಿಯ ಉಚಿತ ಬಸ್ ಪ್ರಯಾಣ, ಹಸಿವು ಮತ್ತು ಅಪೌಷ್ಟಿಕತೆ ತಡೆಗಟ್ಟುವ ಅನ್ನಭಾಗ್ಯ, ಗೃಹಜ್ಯೋತಿ ಅಡಿ ಉಚಿತ ವಿದ್ಯುತ್ ಸೇರಿ ಎಲ್ಲಾ ಗ್ಯಾರಂಟಿ ಯೋಜನೆಗಳೂ ಮಹಿಳೆಯರಿಗೆ ಉಪಯುಕ್ತವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾಗಿ ಮುಖ್ಯಮಂತ್ರಿ ಕಚೇರಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಉತ್ತೇಜಿಸಲು ಮಹಿಳಾ ಪರ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದಕ್ಕಾಗಿ ಈ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಅಭಿನಂದಿಸಿದ ಯಾಂಗ್, ಭವಿಷ್ಯದ ವಿಶ್ವಸಂಸ್ಥೆಯ ಕಾರ್ಯಾಗಾರಗಳಲ್ಲಿ ಕರ್ನಾಟಕದ ಯಶಸ್ಸಿನ ಕುರಿತು ಮಾಹಿತಿ ಹಂಚಿಕೊಳ್ಳಲಾಗುವುದು. ಇದರಿಂದ ಇತರ ದೇಶಗಳೂ ಈ ಅತ್ಯುತ್ತಮ ಯೋಜನೆಗಳನ್ನು ಅಳವಡಿಸಿಕೊಳ್ಳಬಹುದೆಂದು ಅಭಿಪ್ರಾಯಪಟ್ಟಿದ್ದಾಗಿ ಹೇಳಲಾಗಿದೆ.

ಒಟ್ಟು ಇಂಧನ ಉತ್ಪಾದನೆಯಲ್ಲಿ ಶೇ.40ರಷ್ಟು ಪಾಲನ್ನು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸುವ ಮೂಲಕ ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ರಾಜ್ಯವು ದೇಶದಲ್ಲೇ ಅಗ್ರ ಸ್ಥಾನದಲ್ಲಿದೆ. ಅದೇ ರೀತಿ ಮಾಹಿತಿ ತಂತ್ರಜ್ಞಾನ, ತಂತ್ರಾಂಶ ಅಭಿವೃದ್ಧಿ, ಕೃತಕ ಬುದ್ಧಿಮತ್ತೆ (AI), ಸಂಶೋಧನೆ ಮತ್ತು ನಾವೀನ್ಯತೆಗಾಗಿ ಜಾಗತಿಕ ಸಾಮರ್ಥ ಕೇಂದ್ರಗಳ ಸ್ಥಾಪನೆ ವಿಷಯದಲ್ಲೂ ಕರ್ನಾಟಕ ಸಾಧಿಸಿರುವ ಪ್ರಗತಿಯನ್ನು ಯಾಂಗ್ ಪ್ರಶಂಸಿಸಿದರು. ಫಿಲೆಮನ್ ಯಾಂಗ್ ಅವರನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸ್ವಸಹಾಯ ಗುಂಪಿನ ಮಹಿಳೆಯರು ರೇಷ್ಮೆಗೂಡುಗಳಿಂದ ತಯಾರಿಸಿದ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:09.02.2025

## 2. ಸಿಂಗಾಪುರ ಪಾಸ್ ಪೋರ್ಟ್ ನಂ.1

ಜಾಗತಿಕ ಪ್ರಬಲ ಪಾಸ್‌ಪೋರ್ಟ್‌ಗಳ ಪೈಕಿ ಸಿಂಗಾಪುರ ಪಾಸ್‌ಪೋರ್ಟ್ ನಂ.1 ಸ್ಥಾನ ಗಳಿಸಿದೆ. ಈ ಪಾಸ್‌ಪೋರ್ಟ್ ಇದ್ದರೆ ಜಗತ್ತಿನ 227 ದೇಶಗಳ ಪೈಕಿ 193 ದೇಶಗಳಿಗೆ ವೀಸಾ ಇಲ್ಲದೆ ಪ್ರಯಾಣ ಮಾಡಬಹುದು. ಭಾರತಕ್ಕೆ 80ನೇ ಸ್ಥಾನ ದಕ್ಕಿದೆ. ನಮ್ಮ ಪಾಸ್‌ಪೋರ್ಟ್ ಇದ್ದರೆ 56 ದೇಶಗಳಿಗೆ ವೀಸಾ ಅಗತ್ಯವಿರುವುದಿಲ್ಲ. 80ನೇ ಸ್ಥಾನವನ್ನು ಅಲ್ಜೀರಿಯಾ, ತಜಕಿಸ್ತಾನ, ಈಕ್ವಟೋರಿಯಲ್ ಗಿನಿಯಾ ಕೂಡ ಹಂಚಿಕೊಂಡಿವೆ. ಹೆನ್ಲೆ ಪಾಸ್‌ಪೋರ್ಟ್ ಬಿಡುಗಡೆ ಮಾಡಿದ ಪಾಸ್‌ಪೋರ್ಟ್ ಸೂಚ್ಯಂಕದಲ್ಲಿ ಈ ವಿಷಯ ಅನಾವರಣಗೊಂಡಿದೆ.

ಸರ್ಕಾರಿ ಸಲಹಾ ಸೇವೆಗಳಲ್ಲಿ ಪರಿಣತಿ ಹೊಂದಿರುವ ಜಾಗತಿಕ ಸಲಹಾ ಸಂಸ್ಥೆಯಾದ ಹೆನ್ಲೆ ಪಾರ್ಟ್‌ನರ್ಸ್ ಸಂಗ್ರಹಿಸಿದ ಈ ಸೂಚ್ಯಂಕವು ವೀಸಾ–ಮುಕ್ತ ಅಥವಾ ವೀಸಾ–ಆನ್–ಅರೈವಲ್ ಪ್ರವೇಶವನ್ನು ಒದಗಿಸುವ ಸ್ಥಳಗಳ ಸಂಖ್ಯೆ ಆಧಾರದ ಮೇಲೆ 199 ದೇಶಗಳ ಪಾಸ್‌ಪೋರ್ಟ್‌ಗಳನ್ನು

ಮೌಲ್ಯಮಾಪನ ಮಾಡಿದೆ. ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (ಐಎಟಿಎ) ದತ್ತಾಂಶವನ್ನು ಆಧರಿಸಿ ಶ್ರೇಯಾಂಕವನ್ನು ನೀಡಿದೆ.

2 ದೇಶಗಳಿಗೆ 2ನೇ ಸ್ಥಾನ: ಜಪಾನ್ ಮತ್ತು ದಕ್ಷಿಣ ಕೊರಿಯಾ ಪಾಸ್‌ಪೋರ್ಟ್‌ಗಳು ಎರಡನೇ ಸ್ಥಾನ ಗಳಿಸಿವೆ. ಈ ಪಾಸ್‌ಪೋರ್ಟ್‌ಗಳು ಇದ್ದರೆ 190 ದೇಶಗಳಿಗೆ ವೀಸಾ ರಹಿತವಾಗಿ ಹೋಗಬಹುದು. ಮೂರನೇ ಸ್ಥಾನವನ್ನು 7 ದೇಶಗಳು ಹಂಚಿಕೊಂಡಿವೆ. ಡೆನ್ಮಾರ್ಕ್, ಫಿನ್ಲೆಂಡ್, ಫ್ರಾನ್ಸ್, ಜರ್ಮನಿ, ಐರ್ಲೆಂಡ್, ಇಟಲಿ ಮತ್ತು ಸ್ಪೇನ್ ಸೇರಿದಂತೆ 7 ದೇಶಗಳ ಪಾಸ್‌ಪೋರ್ಟ್‌ಗಳು 189 ದೇಶಗಳ ಮುಕ್ತ ಪ್ರವೇಶಕ್ಕೆ ರಹದಾರಿ ಕಲ್ಪಿಸುತ್ತವೆ. ಆಪಘಾನಿಸ್ತಾನ 99ನೇ ಸ್ಥಾನದಲ್ಲಿದೆ. ಇಲ್ಲಿನ ವೀಸಾ ಕೇವಲ 25 ದೇಶಗಳ ಪ್ರವೇಶಕ್ಕರ ರಹದಾರಿ ಕಲ್ಪಿಸುತ್ತದೆ. ಸಿರಿಯಾ ವೀಸಾ 27 ದೇಶಗಳಿಗೆ ಮುಕ್ತ ಸಂಚಾರ ಕಲ್ಪಿಸಿದ್ದು, 98 ಶ್ರೇಯಾಂಕದಲ್ಲಿದೆ. 30 ದೇಶಗಳಲ್ಲಿ ಪಾಸ್‌ಪೋರ್ಟ್ ಅನುಮತಿಸುವ ಮೂಲಕ ಇರಾಕ್ 97ನೇ ಸ್ಥಾನದಲ್ಲಿದೆ.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:09.02.2025

## 3. ಚಂದ್ರನಂಗಳಕ್ಕೆ ಮೊದಲ ಖಾಸಗಿ ನೌಕೆ ಲಗ್ಗೆ

ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾದ ವಿವಿಧ ಸಂಶೋಧನಾ ಉಪಕರಣಗಳನ್ನು ಹೊತ್ತಿದ್ದ ಖಾಸಗಿ ಸಂಸ್ಥೆಯೊಂದರ ಲ್ಯಾಂಡರ್ ನೌಕೆ ದಿನಾಂಕ:02.03.2025ರಂದು ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದಿದೆ. ಇದುವರೆಗೆ ರಷ್ಯಾ, ಅಮೆರಿಕ, ಚೀನಾ, ಜಪಾನ್ ಮತ್ತು ಭಾರತದ ಸರ್ಕಾರಿ ಬಾಹ್ಯಾಕಾಶ ಸಂಸ್ಥೆಗಳು ತಮ್ಮ ನೌಕೆಯನ್ನು ಚಂದ್ರನ ಮೇಲೆ ಇಳಿಸಲು ಯಶಸ್ವಿಯಾಗಿದ್ದವು. ಆದರೆ ಇದೀಗ ಮೊದಲ ಬಾರಿಗೆ ಖಾಸಗಿ ಕಂಪನಿಯೊಂದರ ಲ್ಯಾಂಡರ್ ಚಂದ್ರನ ಭೂಮಿ ಸ್ಪರ್ಶಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಯಾಗಿದೆ.

ಅಮೆರಿಕದ 'ಫಯರ್‌ಪ್ರೈ ಏರೋಸ್ಪೇಸ್" ಎಂಬ ಖಾಸಗಿ ಕಂಪನಿ ಹಾರಿಬಿಟ್ಟಿದ್ದ 'ಬ್ಲೂ ಘೋಸ್ಟ್' ಲ್ಯಾಂಡರ್ ಸರಾಗವಾಗಿ ಚಂದ್ರನ ಭೂಮಿಯನ್ನು ಸ್ಪರ್ಶ ಮಾಡಿದೆ. ಕಳೆದ ಜನವರಿ ತಿಂಗಳಲ್ಲಿ ಉಡ್ಡಯನಗೊಂಡಿದ್ದ ನೌಕೆಯಲ್ಲಿದ್ದ ಬ್ಲೂ ಘೋಸ್ಟ್ ಲ್ಯಾಂಡರ್ ಬಳಿಕ ಚಂದ್ರನ ಕಕ್ಷೆ ಪ್ರವೇಶಿಸಿತ್ತು.

ಚಂದ್ರನ ಈಶಾನ್ಯ ಭಾಗದಲ್ಲಿ ಸ್ವಯಂಚಾಲಿತವಾಗಿ ಭೂಸ್ಪರ್ಶ ಮಾಡಿದೆ. ಒಂದೊಮ್ಮೆ ಚಂದ್ರನಲ್ಲಿ ಜ್ವಾಲಾಮುಖಿ ಸ್ಫೋಟದಿಂದ ಸೃಷ್ಟಿಯಾಗಿದ್ದ ಬೆಟ್ಟಪ್ರದೇಶದಂಥ ಜಾಗದಲ್ಲಿ ಬ್ಲೂ ಘೋಸ್ಟ್ ಇಳಿದಿದೆ. ಈ ಲ್ಯಾಂಡರ್ ಡ್ರಿಲ್ ಹಾಗೂ ವ್ಯಾಕ್ಯೂಂನಂತಹ ಉಪಕರಣಗಳನ್ನು ತನ್ನೊಂದಿಗೆ ಹೊತ್ತೊಯ್ದಿದ್ದು, ನಾಸಾದ ಹಲವು ಪ್ರಯೋಗಗಳನ್ನು ನಡೆಸಲಿದೆ. ಲ್ಯಾಂಡರ್ ತಾನು ಚಂದ್ರನ ಭೂಮಿಯ ಸ್ಪರ್ಶಕ್ಕಾಗಿ ಸಾಗುವ ವೇಳೆ ಮಾರ್ಗಮಧ್ಯದಿಂದ ಭೂಮಿಯ ಅದ್ಭುತ ಫೋಟೋಗಳನ್ನು ಸೆರೆಹಿಡಿದು ರವಾನಿಸಿದೆ.

ಈ ಹಿಂದೆ ಕೂಡಾ ಖಾಸಗಿ ಸಂಸ್ಥೆಗಳು ಇಂಥ ಪ್ರಯತ್ನ ಮಾಡಿದ್ದವಾದರೂ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿ ಇಳಿದ ಮೊದಲ ಲ್ಯಾಂಡರ್ ಇದಾಗಿದೆ. ಉಳಿದಂತೆ ರಷ್ಯಾ, ಅಮೆರಿಕ, ಚೀನಾ, ಭಾರತ ಮತ್ತು ಜಪಾನ್‌ನ ಅಧಿಕೃತ ವ್ಯೋಮ ಸಂಸ್ಥೆಗಳಷ್ಟೇ ಈ ಸಾಧನೆ ಮಾಡಿವೆ.

2ಮೀ. ಎತ್ತರವಿರುವ ಈ ಲ್ಯಾಂಡರ್, ಚಂದ್ರನ ಮೇಲೆಯಿಂದ ಧೂಳು ಸಂಗ್ರಹ, 3ಮೀ. ಆಳಕ್ಕಿಳಿದು ಉಷ್ಣಾಂಶ ಮಾಪನ ಸೇರಿ ಹಲವು ಕೆಲಸಗಳನ್ನು ಮಾಡಲಿದೆ. 4ಮೀ. ಎತ್ತರದ ಇನ್ನೊಂದು ಲ್ಯಾಂಡರ್ ಚಂದ್ರನ ಮೇಲಿಳಿಯಲಿದೆ ಈ ಲ್ಯಾಂಡರ್‌ಗಳನ್ನು ಚಂದ್ರನ ಮೇಲೆ ಇಳಿಸಲು ಖಾಸಗಿ ಕಂಪನಿಗೆ ನಾಸಾ ಅಂದಾಜು ರೂ.850 ಕೋಟಿ ಪಾವತಿಸಿತ್ತು.

**ಆಧಾರ:**ಕನ್ನಡ ಪ್ರಭ, ದಿನಾಂಕ:03.03.2025

## 4. ಮೋದಿಗೆ ಮಾರಿಷಸ್ ಶ್ರೇಷ್ಠ ಗೌರವ

ಮಾರಿಷಸ್ ಪ್ರವಾಸದಲ್ಲಿರುವ ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಗೆ ಮಾರಿಷಸ್ ಪ್ರಧಾನಿ ನವಿನ್ ಚಂದ್ರ ರಾಮಗೂಲಂ ಅವರು ತಮ್ಮ ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಡಿ ಗ್ರ್ಯಾಂಡ್ ನೀಡುವುದಾಗಿ ಘೋಷಿಸಿದ್ದಾರೆ. ಭಾರತ ಮತ್ತು ಮಾರಿಷಸ್ ಸಂಬಂಧ ಬಲಪಡಿಸುವಲ್ಲಿ ಕೊಡುಗೆ ನೀಡಿದವರಿಗಾಗಿ ನೀಡುವ ಈ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ, ಐದನೇ ವಿದೇಶಿ ಪ್ರಜೆ ಎನ್ನುವ ಹೆಗ್ಗಳಿಕೆಗೆ ಮೋದಿ ಪಾತ್ರರಾಗಿದ್ದಾರೆ. ಇದು ನರೇಂದ್ರ ಮೋದಿಯವರಿಗೆ ವಿದೇಶವೊಂದು ನೀಡುತ್ತಿರುವ 21ನೇ ಅಂತಾರಾಷ್ಟ್ರೀಯ ಪ್ರಶಸ್ತಿಯಾಗಿದೆ.

ಮಾರಿಷಸ್ ಪ್ರಧಾನಿ ನವೀನ್ ರಾಮಗೂಲಂ ಹಾಗೂ ಅವರ ಪತ್ನಿ ವೀಣಾ ಅವರಿಗೆ ಪ್ರಧಾನ ನರೇಂದ್ರ ಮೋದಿ ಅವರು ಭಾರತದ ಸಾಗರೋತ್ತರ ನಾಗರಿಕತ್ವ (ಒಸಿಐ) ಕಾರ್ಡ್ ನೀಡಿದ್ದಾರೆ. ಮಾರಿಷಸ್‌ನೊಂದಿಗಿನ ದ್ವಿಪಕ್ಷೀಯ ಸಂಬಂಧ ಮತ್ತು ಅಲ್ಲಿರುವ ಭಾರತೀಯರ ಪ್ರತಿ ಭಾರತದ ಬದ್ಧತೆಯ ಪ್ರತೀಕವಾಗಿ ಒಸಿಐ ಕಾರ್ಡ್ ನೀಡಲಾಗಿದೆ. ಮೋದಿ ಅವರಿಂದ ಒಸಿಐ ಕಾರ್ಡ್ ಸ್ವೀಕರಿಸಿದ ರಾಮ ಗೂಲಂ, 'ನನಗೆ ಹಾಗೂ ನನ್ನ ಹೆಂಡತಿಗೆ ಅಚ್ಚರಿಯಾಗಿದೆ" ಎಂದು ಸಂತಸ ವ್ಯಕ್ತಪಡಿಸಿದರು.

ಎರಡು ದಿನಗಳ ಮಾರಿಷಸ್ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿಯವರು ಮಾರಿಷಸ್ ಅಧ್ಯಕ್ಷ ಧರಮ್ ಗೋಕುಲ್ ಅವರನ್ನು ಭೇಟಿಯಾಗಿ ಮಹಾಕುಂಭ ಮೇಳದ ಪವಿತ್ರ ಗಂಗಾಜಲವನ್ನು ಉಡುಗೊರೆಯಾಗಿ ನೀಡಿದ್ದಾರೆ. ಅಲ್ಲದೆ, ಅವರ ಪತ್ನಿಗೆ ಬನಾರಸಿ ಸೀರೆ ಕಾಣಿಕೆ ನೀಡಿದ್ದಾರೆ. ಮಾರಿಷಸ್ ಅಧ್ಯಕ್ಷರನ್ನು ಭೇಟಿ ಮಾಡಿದ ಮೋದಿ ದ್ವಿಪಕ್ಷೀಯ ಮಾತುಕತೆ ನಡೆಸಿದರು ಹಾಗೂ ಎರಡೂ ದೇಶಗಳ ಬಾಂಧವ್ಯ ವರ್ಧನೆಗೆ ಬದ್ಧತೆ ವ್ಯಕ್ತಪಡಿಸಿದರು ಈ ವೇಳೆ ಅಧ್ಯಕ್ಷ ದಂಪತಿಗೆ ಗಂಗಾಜಲ ಹಾಗೂ ಬನಾರಸಿ ಸೀರೆ ಸೇರಿ ಹಲವು ಕಾಣಿಕೆ ನೀಡಿದರು.

'ಮಾರಿಷಸ್ ಮಿನಿ ಇಂಡಿಯಾ ಇದ್ದಂತೆ, ಅದು ಕೇವಲ ನಮ್ಮ ಪಾಲುದಾರ ದೇಶವಲ್ಲ, ಭಾರತದ ಪರಿವಾರದ ಭಾಗ ಇದು ಭಾರತ ಹಾಗೂ ಅಭಿವೃದ್ಧಿಶೀಲ ದೇಶಗಳ ಮಧ್ಯದ ಕೊಂಡಿ' ಎಂದು ನರೇಂದ್ರ ಮೋದಿ ಹೇಳಿದ್ದಾರೆ.

ಮಾರಿಷಸ್ ಪ್ರವಾಸಕ್ಕೆ ತೆರಳಿರುವ ಮೋದಿ, ಭಾರತ ಮೂಲದವರೊಂದಿಗಿನ ಸಮುದಾಯ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಪ್ರಧಾನಿ ನವೀನ್ ಚಂದ್ರ ರಾಮಗೂಲಂ, ಅವರ ಮಡದಿ ಹಾಗೂ ಸಚಿವರ ಸಮ್ಮುಖದಲ್ಲಿ ಮಾತನಾಡಿದ ಅವರು, 'ಮಾರಿಷಸ್ ನಮ್ಮ ಪರಿವಾರದ ಭಾಗವಾಗಿದೆ. ಎರಡೂ ದೇಶಗಳ ನಡುವಿನ ಸಂಬಂಧವು ಇತಿಹಾಸ, ಪರಂಪರೆ ಮತ್ತು ಮಾನವ ಆತ್ಮದಲ್ಲಿ ಆಳವಾಗಿ ಬೇರೂರಿದೆ' ಎಂದರು. ಅಂತೆಯೇ, ನಾನು ಮೊದಲ ಬಾರಿ ಪ್ರಧಾನಿ ಆಗಿದ್ದಾಗ 2015ರಲ್ಲಿ ಸಾಗರ್ (ಪ್ರದೇಶದಲ್ಲಿ ಎಲ್ಲರಿಗೂ ಭದ್ರತೆ ಮತ್ತು ಬೆಳವಣಿಗೆ) ಯೋಜನೆಯನ್ನು ಘೋಷಿಸಿದ್ದೆ. ಮಾರಿಷಸ್ ಇಂದಿಗೂ ಇದರ ಪ್ರಮುಖ ಕೇಂದ್ರ ಬಿಂದುವಾಗಿದೆ ಎಂದು ಮೋದಿ ಹರ್ಷ ವ್ಯಕ್ತಪಡಿಸಿದರು. 2 ದಿನಗಳ ಮಾರಿಷಸ್ ಪ್ರವಾಸದಲ್ಲಿರುವ ಮೋದಿಯವರು ರಾಷ್ಟ್ರೀಯ ದಿನದ ಮುಖ್ಯ ಅತಿಥಿಯಾಗಲಿದ್ದಾರೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:12.03.2025

## 5. ಮಹಾಸಾಗರ ಯೋಜನೆಗೆ ಪ್ರಧಾನಿ ಮೋದಿ ಚಾಲನೆ

ಭಾರತಕ್ಕೆ ದಕ್ಷಿಣ ದಿಕ್ಕಿನಲ್ಲಿ ಕಡಲ ಭಾಗದಲ್ಲಿ ರಕ್ಷಣಾ ಕಾರ್ಯಕ್ಕೆ ಮಹತ್ವವೆನಿಸಿರುವ ದೂರದೃಷ್ಟಿಯ, ವಿಶಾಲ ತಳಹದಿಯ 'ಮಹಾಸಾಗರ್' ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು 'ಮಿನಿ ಭಾರತ' ಎಂದೇ ಕರೆಸಿಕೊಳ್ಳುವ ಮಾರಿಷಸ್‌ನಲ್ಲಿ ಚಾಲನೆ ನೀಡಿದರು. ಭಾರತ ಮೂಲದವರೇ

ಶೇ.75 ರಷ್ಟು ಜನರು ನೆಲೆಸಿರುವ ಕಾರಣ ದ್ವೀಪ ರಾಷ್ಟ್ರ ಮಾರಿಷಸ್ ಮಿನಿ ಭಾರತ ಎಂಬ ವಿಶೇಷಣ ಬಳಕೆಯಾಗುತ್ತದೆ.

ಭಾರತ ದೇಶಕ್ಕೆ ಹಿಂದೂ ಮಹಾಸಾಗರ ಭಾಗದಲ್ಲಿ ಚೀನಾ ನೌಕಾಪಡೆಯಿಂದ ಎದುರಾಗಬಲ್ಲ ಸಂಭಾವ್ಯ ಅಪಾಯ ಗಮನದಲ್ಲಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ 'ಗ್ಲೋಬಲ್ ಸೌತ್' (ದಕ್ಷಿಣ ಗೋಲ) ವಿಚಾರಕ್ಕೆ ಬಹಳ ಒತ್ತು ನೀಡುತ್ತಿದ್ದಾರೆ. ಅದರದೇ ಭಾಗವಾಗಿ ಭಾರತಕ್ಕೆ ದಕ್ಷಿಣ ದಿಶೆಯಲ್ಲಿರುವ ಮಾರಿಷಸ್‌ನಲ್ಲಿಯೇ 'ಮಹಾಸಾಗರ್ ಯೋಜನೆ'ಗೆ ಚಾಲನೆ ನೀಡಿದ್ದಾರೆ. ಈ ಯೋಜನೆ ಹಿಂದೂ ಮಹಾಸಾಗರ ಭಾಗದಲ್ಲಿ ಭಾರತದ ರಕ್ಷಣೆಗೆ ಸದಾ ಒದಗಲಿದೆ ಎಂದೇ ಪ್ರಧಾನಿ ಮೋದಿ ಇದಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ ಎನ್ನಲಾಗಿದೆ.

'ಸಾಗರ್' ಎಂಬ ಚಿಂತನೆ ಹತ್ತು ವರ್ಷ ಹಿಂದೆಯೇ ರೂಪುಗೊಂಡಿತ್ತು. ಅದರ 'ವಿಸ್ತೃತ ಯೋಜನೆಯೇ ಈ 'ಮಹಾಸಾಗರ್' ಎಂದು ಪ್ರಧಾನಿ ಮೋದಿ ಯೋಜನೆಗೆ ಚಾಲನೆ ನೀಡಿದ ಸಂದರ್ಭ ವಿವರಿಸಿದರು. ದಕ್ಷಿಣ ಗೋಲದಲ್ಲಿನ ದೇಶಗಳು ಪರಸ್ಪರ ರಕ್ಷಣೆಗೆ ಕೈಜೋಡಿಸಬೇಕೆಂಬುದೇ 'ಮಹಾಸಾಗರ್' ಯೋಜನೆಯ ಉದ್ದೇಶವಾಗಿದೆ. ಮಹಾಸಾಗರ್ ಯೋಜನೆಯಡಿ ಭಾರತ–ಮಾರಿಷಸ್ ಸೇರಿದಂತೆ ಈ ಭಾಗದಲ್ಲಿನ ಎಲ್ಲಾ ದೇಶಗಳು ಪರಸ್ಪರರ ನೆರವಿಗೆ ಬರಲಿವೆ, ಅಭಿವೃದ್ಧಿಗೆ ಸಹಕರಿಸಲಿವೆ ಎಂದರು.

ಮಾರಿಷಸ್‌ನ ಬೆಳವಣಿಗೆಯಿಂದ ಭಾರತ ಪ್ರಯೋಜನ ಪಡೆಯಬೇಕೆಂದು ಬಯಸುವೆ ಎಂದು ಪ್ರಧಾನಿ ನರೇಂದ್ರ ಮೋದಿ ಪೋರ್ಟ್ ಲೂಯಿಸ್‌ನಲ್ಲಿರುವ ಭಾರತೀಯ ಸಮುದಾಯದೆದುರು ಹೇಳಿದರು. 10 ವರ್ಷ ಹಿಂದೆ ಇದೇ ದಿನ ಮಾರಿಷಸ್‌ಗೆ ಬಂದಿದ್ದೆ. ಈ ಬಾರಿ ಹೋಳಿ ಹಬ್ಬಕ್ಕೆ ಇಲ್ಲಿಂದ ಬಣ್ಣಗಳನ್ನು ಭಾರತಕ್ಕೆ ಕೊಂಡೊಯ್ಯುತ್ತೇನೆ ಎಂದರು.

ಮಾರಿಷಸ್‌ಗೆ ಬಂದಾಗಲೆಲ್ಲಾ ಇಲ್ಲಿರುವವರೆಲ್ಲ ನನ್ನ ಸ್ವಂತದವರು ಎಂಬಂತೆಯೇ ಭಾಸವಾಗುತ್ತದೆ. ಏಕೆಂದರೆ ಮಾರಿಷಸ್ ಮಿನಿ ಭಾರತವಿದ್ದಂತೆ. ಎರಡೂ ದೇಶಗಳ ಜನರು ಒಂದೇ ಕುಟುಂಬದವರಂತೆ. ಇಲ್ಲಿನ ಗಾಳಿ, ಮಣ್ಣು, ನೀರಿನಲ್ಲಿ ಆತ್ಮೀಯ ಭಾವವಿದೆ. ನಮ್ಮ ಪೂರ್ವಜರ ರಕ್ತ–ಬೆವರು ಇಲ್ಲಿನ ಮಣ್ಣಿನಲ್ಲಿ ಬೆರೆತಿದೆ ಎಂದರು.

ಭಾರತ–ಮಾರಿಷಸ್ ನಡುವೆ ದ್ವಿಪಕ್ಷೀಯ ಮಾತುಕತೆ ವೇಳೆ ಮಹತ್ವದ 8 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲದೇ, ಮಾರಿಷಸ್ ಸಂಸತ್ ಭವನದ ನಿರ್ಮಾಣವನ್ನು ಉಡುಗೊರೆ ರೂಪದಲ್ಲಿ ಮಾಡಿಕೊಡುವುದಾಗಿ ಭಾರತ ಘೋಷಿಸಿದೆ. ಮಾರಿಷಸ್ ಸಾರ್ವಜನಿಕ ಸಂಚಾರಕ್ಕೆ ಮೆಟ್ರೊ ಎಕ್ಸ್‌ಪ್ರೆಸ್, ಸುಪ್ರೀಂ ಕೋರ್ಟ್ ಕಟ್ಟಡ ನಿರ್ಮಾಣ, ಇಎನ್‌ಟಿ ಆಸ್ಪತ್ರೆ ನಿರ್ಮಾಣ, ಕಡಿಮೆ ದರದಲ್ಲಿ ಉತ್ತಮ ಸೌಲಭ್ಯದ ಮನೆಗಳ ನಿರ್ಮಾಣ, ಮಾರಿಷಸ್‌ನಲ್ಲಿ ವ್ಯಾಪಾರ ವಹಿವಾಟು ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ನೆರವಾಗಲು ಯುಪಿಐ ತಂತ್ರಾಂಶದ ನೆರವು ಮತ್ತು ರುಪೇ ಕಾರ್ಡ್ ಸವಲತ್ತು ಒದಗಿಸುವುದೂ, ಉಭಯ ದೇಶಗಳ ನಡುವಿನ ವ್ಯಾಪಾರ ವಹಿವಾಟನ್ನು ಎರಡೂ ದೇಶಗಳ ಕರೆನ್ಸಿಯಲ್ಲೇ ನಡೆಸುವುದು ಸೇರಿದಂತೆ 8 ಒಪ್ಪಂದಗಳಿಗೆ ಎರಡೂ ದೇಶಗಳು ಅಂಕಿತ ಹಾಕಿವೆ. ಅಲ್ಲದೇ, 100 ಕಿ.ಮೀ.ಗಳಷ್ಟು ಉದ್ದ ನೀರು ಸರಬರಾಜು ಕೊಳವೆ ಮಾರ್ಗ ರಚನೆ ಸೇರಿದಂತೆ ಇನ್ನೂ ಹಲವು ಅಭಿವೃದ್ಧಿ ಕಾಮಗಾರಿಗಳಲ್ಲಿ ಮಾರಿಷಸ್‌ಗೆ ಭಾರತ ಅಗತ್ಯ ನೆರವು ನೀಡಲಿದೆ ಎಂದೂ ಪ್ರಧಾನಿ ಮೋದಿ ಭರವಸೆ ನೀಡಿದರು.

**ಆಧಾರ:**ವಿಜಯವಾಣಿ, ದಿನಾಂಕ:13.03.2025

## 6. **ಭೂಮಿಗೆ ಮರಳಿದ ಸುನಿತಾ, ವಿಲ್ಮೋರ್**

ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ (ಐಎಎಸ್) ಒಂಬತ್ತು ತಿಂಗಳು ಕಳೆದ ನಾಸಾದ ಗಗನಯಾನಿಗಳಾದ ಭಾರತ ಮೂಲದ ಸುನಿತಾ ವಿಲಿಯಮ್, ಮತ್ತು ಅಮೆರಿಕದ ಬುಚ್ ವಿಲ್ಮೋರ್ ಅವರು ಭೂಮಿಗೆ ಮರಳಿದ್ದಾರೆ. ಇದರೊಂದಿಗೆ ಈ ಇಬ್ಬರ 286 ದಿನಗಳ ಗಗನ ಪಯಣದ ಸಾಹಸಗಾಥೆಯು ಸುಖಾಂತ್ಯಗೊಂಡಿದೆ. ಅಮೆರಿಕ ಮತ್ತು ಭಾರತದಲ್ಲಿ ಮನೆ ಮಾಡಿದ್ದ ಕಳವಳವು ಮರೆಯಾಗಿದೆ.

ಕಳೆದ ಜೂನ್‌ನಲ್ಲಿ ಐಎಸ್‌ಎಸ್‌ಗೆ ತೆರಳಿದ್ದ ಸುನಿತಾ, ಮತ್ತು ಬುಚ್ ಅವರನ್ನು ಹೊತ್ತ ಸ್ಪೇಸ್ ಎಕ್ಸ್ ಕೋಶವು ಫ್ಲಾರಿಡಾ ಪ್ಯಾನ್‌ಹ್ಯಾಂಡಲ್ ಕಡಲಿನ ನೀರಿನ ಮೇಲೆ (ಭಾರತೀಯ ಕಾಲಮಾನ) ನಿಧಾನವಾಗಿ ಇಳಿಯಿತು.

ಬೋಯಿಂಗ್ ಸಂಸ್ಥೆಯ ಸ್ಟಾರ್‌ಲೈನರ್ ಎಂಬ ಗಗನನನೌಕೆಯಲ್ಲಿ ಈ ಇಬ್ಬರು ಐಎಸ್‌ಎಸ್‌ಗೆ ಹೋಗಿದ್ದರು. ಆದರೆ, ಸ್ಟಾರ್‌ಲೈನರ್‌ನ ಪ್ರೊಪಲ್ಶನ್ ವ್ಯವಸ್ಥೆಯಲ್ಲಿ (ಮುಂದಕ್ಕೆ 1 ನೂಕುವ ವ್ಯವಸ್ಥೆ) ಸಮಸ್ಯೆ ಕಾಣಿಸಿಕೊಂಡಿತ್ತು. ಹಾಗಾಗಿ, ಗಗನಯಾನಿಗಳನ್ನು ನಿಗದಿತ ಎಂಟು ದಿನಗಳಲ್ಲಿ ವಾಪಸ್ ಕರೆಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಈಗ, ಸ್ಪೇಸ್ ಎಕ್ಸ್‌ನ 'ಡ್ರಾಗನ್' ಬಾಹ್ಯಾಕಾಶ ಕೋಶದಲ್ಲಿ ಸುನಿತಾ ಮತ್ತು ಬುಚ್ ಅವರನ್ನು ಭೂಮಿಗೆ ಕರೆತರಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:20.03.2025

# ಭಾಗ–9

# ಪ್ರಮುಖ ಲೇಖನಗಳು

## 1. ಸಭಾಪತಿ, ಸಭಾಧ್ಯಕ್ಷರಿಗೆ ಇದೆ ಸರ್ವೋಚ್ಚ ಅಧಿಕಾರಿ

ದೇಶದ ದೊಡ್ಡ ರಾಜ್ಯ ಉತ್ತರ ಪ್ರದೇಶದಲ್ಲಿ 1965ರಲ್ಲಿ ನಡೆದ ಘಟನೆ ಇದು. ಅಲ್ಲಿಯ ಶಾಸಕ ನಾರಸಿಂಗ್ ನಾರಾಯಣ ಪಾಂಡೆ ಅವರು ಅವ್ಯವಹಾರವೆಸಗಿದ್ದಾರೆಂದು ಗೋರಖಪುರ ನಿವಾಸಿ ಕೇಶವ್ ಸಿಂಗ್ ಎಂಬುವವರು ಕರಪತ್ರ ಮುದ್ರಿಸಿ ಹಂಚಿದ್ದರು. ನಾರಸಿಂಗ್ ಅವರು ಕೇಶವ್ ಸೀಮಗ್ ವಿರುದ್ಧ ಸದನದ ಮುಂದೆ ಹಾಜರುಪಡಿಸಿದಾಗ ಅವರು ಯಾವುದೇ ಸ್ಪಷ್ಟ ಉತ್ತರ ನೀಡಲಿಲ್ಲ. ಆಗ ಸಭಾಧ್ಯಕ್ಷರು ಕೇಶವ್ ಸಿಂಗ್ ಅವರಿಗೆ 7 ದಿನಗಳ ಜೈಲುವಾಸಕ್ಕೆ ಆದೇಶಿಸಿದರು.

ಈ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿದ ಅಲಹಾಬಾದ್ ಉಚ್ಚ ನ್ಯಾಯಾಲಯ ಕೇಶವ್‌ಸಿಂಗ್ ಅವರನ್ನು ಜಾಮೀನು ಮೇಲೆ ಬಿಡುಗಡೆ ಮಾಡಿತು. ಆಗ, ಉತ್ತರ ಪ್ರದೇಶ ವಿಧಾನಸಭೆಯು ನಿರ್ಣಯವೊಂದನ್ನು ಅಂಗೀಕರಿಸಿ ಜಾಮೀನು ಮಂಜೂರು ಮಾಡಿದ ಇಬ್ಬರು ನ್ಯಾಯಾಧೀಶರು ಹಾಗೂ ಅರ್ಜಿದಾರ ಪರ ವಕೀಲರನ್ನು ಬಂಧಿಸಿ ಸದನದ ಮುಂದೆ ಹಾಜರುಪಡಿಸುವಂತೆ ಆದೇಶಿಸಿತು. ಈ ನಿರ್ಣಯವನ್ನು ರದುಪಡಿಸುವಂತೆ ನ್ಯಾಯಾಧೀಶರು ಉತ್ತರ ಪ್ರದೇಶ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದರು. ಹೀಗೆ ಈ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡು ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಂಘರ್ಷದ ಹಾದಿ ಹಿಡಿದಿರುವುದನ್ನು ಮನಗಂಡ ಅಂದಿನ ಮುಖ್ಯಮಂತ್ರಿಯವರು ಪ್ರಕರಣವನ್ನು ಪ್ರಧಾನಿಯವರ ಗಮನಕ್ಕೆ ತಂದರು. ಬಳಿಕ ಸರ್ವೋಚ್ಚ ನ್ಯಾಯಾಲಯ ರಚಿಸಿದ 7 ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠವು ಸುದೀರ್ಘವಾದ ತೀರ್ಪನ್ನು ನೀಡಿ ಶಾಸಕಾಂಗ–ನ್ಯಾಯಾಂಗದ ಪರಿಮಿತಗಳನ್ನು ಸ್ಪಷ್ಟಪಡಿಸಿತು. ನ್ಯಾಯಾಧೀಶರು ಹಾಗೂ ಕಕ್ಷಿದಾರರ ವಕೀಲರು ಸದನದ ಮುಮದೆ ಹಾಜರಾಗಬೇಕಿಲ್ಲ ಹಾಗೂ ಕೇಶವ್ ಸಿಂಗ್ ಅವರು ಸದನದಿಂದ ನೀಡಲಾಗಿರುವ ಶಿಕ್ಷೆಯನ್ನು ಅನುಭವಿಸಬೇಕು ಎಂದು ತೀರ್ಪು ನೀಡಿತು.

ಇನ್ನೊಂದು ಪ್ರಕರಣ ಕರ್ನಾಟಕ ವಿಧಾನ ಪರಿಷತ್‌ಗೆ ಸಂಬಂಧಿಸಿದ್ದು, 1978ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದ ಎ.ಕೆ. ಸುಬ್ಬಯ್ಯ ಅವರು ಸದನದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಅಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಇಬ್ಬರು ಪರಿಷತ್ ಸದಸ್ಯರ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅಂದು ಸದನದಲ್ಲಿ ನಡೆದ ಕಲಾಪದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ವಿಧಾನ ಪರಿಷತ್ ಸಭಾಪತಿಯವರಿಗೆ ನಿರ್ದೇಶನ ನೀಡಬೇಕೆಂದು ಅರ್ಜಿಯಲ್ಲಿ ಅವರು ಕೋರಿದ್ದರು. ಆದರೆ, 'ಸದನದ ನಡವಳಿಕೆಯನ್ನು ಯಾರೂ ಪ್ರಶ್ನಿಸುವಂತಿಲ್ಲ ಹಾಗೂ ನ್ಯಾಯಲಯವು ಮಧ್ಯ ಪ್ರವೇಶಿಸುವಂತಿಲ್ಲ. ಸದನದ ದಾಖಲೆಗಳನ್ನು ತರಿಸಲು ಆದೇಶಿಸಬೇಕೆಂದು ಕೋರಿರುವುದು ನಮ್ಮ ವ್ಯಾಪ್ತಿಗೆ ಮೀರಿದ ವಿಷಯ' ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಅರ್ಜಿಯನ್ನು ತಿರಸ್ಕರಿಸಿತು.

2018 ವಿಧಾನಸಭೆ ಚುನಾವಣೆಯಲ್ಲಿ ಸ್ಪಷ್ಟಬಹುಮತ ಇಲ್ಲದಿದ್ದರೂ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡು ಕರ್ನಾಟಕದಲ್ಲಿ ಸರ್ಕಾರ ರಚನೆ ಮಾಡಿದವು. 2019ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ 17 ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ರಾಜೀನಾಮೆ ನೀಡಿದ ಎಲ್ಲ ಶಾಸಕರನ್ನು ಅಂದಿನ ವಿಧಾನ ಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್ ಅಮಾನತು ಮಾಡಿದರು. ರಾಜೀನಾಮೆ ನೀಡಿದ ಶಾಸಕರು ಈ ಅಮಾನತು ಆದೇಶವನ್ನು ಪ್ರಶ್ನಿಸಿ ಸುಪ್ರಿಂ ಕೋರ್ಟ್ ಮೆಟ್ಟಿಲೇರಿದರು. ಆದರೆ, ಸರ್ವೋಚ್ಚ ನ್ಯಾಯಾಲಯವು ಸಭಾಧ್ಯಕ್ಷರ ನಿರ್ಣಯವನ್ನು ಎತ್ತಿಹಿಡಿಯಿತು.

ಈ ಪ್ರಕರಣಗಳು ಸಾಂವಿಧಾನಿಕ ಹುದ್ದೆಯಾಗಿರುವ ವಿಧಾನ ಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸಭಾಪತಿಗಳು ಸರ್ವೋಚ್ಚ ಅಧಿಕಾರ ಹೊಂದಿರುವುದನ್ನು ಎತ್ತಿ ತೋರಿಸುತ್ತದೆ. ಹೀಗೆ ಲೋಕಸಭೆ ಅಧ್ಯಕ್ಷರು, ದೇಶದ ವಿವಿಧ ರಾಜ್ಯಗಳ ವಿಧಾನ ಪರಿಷತ್‌ಗಳ ಸಭಾಪತಿಗಳು ಅಥವಾ ವಿಧಾನ

ಸಭೆಗಳ ಸಭಾಧ್ಯಕ್ಷರ ತೀರ್ಪುಗಳನ್ನು ಕಾಲಕಾಲಕ್ಕೆ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲವು ಮಾನ್ಯ ಮಾಡಿದ 30ಕ್ಕೂ ಹೆಚ್ಚು ಪ್ರಕರಣಗಳಿವೆ. ಸಂವಿಧಾನದ ಪರಿಚ್ಛೇದ 212/1 ಪ್ರಕಾರ ಇಂಥ ಸಾಂವಿಧಾನಿಕ ಹುದ್ದೆಯಲ್ಲಿರುವ ಆದೇಶವನ್ನು ಪ್ರಶ್ನಿಸುವಂತಿಲ್ಲ ಎಂದು ಹೇಳಲಾಗಿದೆ.

2024ರ ಡಿಸೆಂಬರ್ 19ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಘಟಿಸಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪ್ರಕರಣವು ಸದನದ ಸಾರ್ವಭೌಮತ್ವ ಹಾಗೂ ಸಭಾಪತಿಗೆ ನಿಹಿತವಾಗಿರುವ ಅಧಿಕಾರವನ್ನು ಚರ್ಚೆಗೆ ತಂದಿದೆ. ಈ ಪ್ರಕರಣ ರಾಷ್ಟ್ರಮಟ್ಟದಲ್ಲೂ ಚರ್ಚೆಗೆ ಕಾರಣವಾಗಿದೆ. ವಿಧಾನ ಸಭಾಧ್ಯಕ್ಷ ಹಾಗೂ ಸಭಾಪತಿಗಳ ಅಧಿಕಾರದ ಕುರಿತು ಬಿಹಾರದ ಪಟ್ನಾದಲ್ಲಿ ಇತ್ತೀಚಿಗೆ ಆಯೋಜಿಸಿದ್ದ ವಿಚಾರ ಸಂಕಿರ್ಣಕ್ಕೆ ಕರ್ನಾಟಕದ ಪ್ರಕರಣವೇ ಪ್ರೇರಣೆಯಾಗಿತ್ತು.

ಬೆಳಗಾವಿ ಪ್ರಕರಣದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ತೆಗೆದುಕೊಂಡ ನಿರ್ಧಾರಗಳು ರಾಜ್ಯ ಸರ್ಕಾರಗಳು ಇಕ್ಕಟ್ಟಿಗೆ ಸಿಲುಕಿಸಿದೆ. ಸತತ 8 ಬಾರಿ ವಿಧಾನ ಪರಿಷತ್ ಸದಸ್ಯರಾಗಿರುವ ಹೊರಟ್ಟಿಯವರು ಈ ಪ್ರಕರಣದಲ್ಲಿ ತಮ್ಮ ಅಗಾಧ ಅನುಭವವನ್ನು ಓರೆಗೆ ಹಚ್ಚಿದ್ದಾರೆ. ಸದನದಲ್ಲಿನ ಆಗು–ಹೋಗುಗಳಿಗೆ ಸಭಾಪತಿಯೇ ಸರ್ವೋಚ್ಚ ಎಂಬುದನ್ನು ತೋರಿಸಿದ್ದಾರೆ. ಈ ಪ್ರಕರಣ ನ್ಯಾಯಾಲಯ ಮೆಟ್ಟಲೇರಲಿಲ್ಲ. ಆದರೆ, ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ. ಹೀಗೆ ಮಾಡುವ ಮೂಲಕ ರಾಜ್ಯ ಸರ್ಕಾರ ಶಾಸಕಾಂಗಕ್ಕೆ ಮತ್ತು ಸಭಾಪತಿಯವರಿಗೆ ಪ್ರದತ್ತವಾಗಿರುವ ವಿಶೇಷ ಅಧಿಕಾರಕ್ಕೆ ಚ್ಯುತಿ ಬರುವಂತೆ ನಡೆದುಕೊಂಡಿದೆ ಹಾಗೂ ಸಾಂವಿಧಾನಿಕ ಘರ್ಷಣೆಗೆ ಅವಕಾಶ ಮಾಡಿಕೊಡುತ್ತಿದೆ ಎಂದು ಈಗಾಗಲೇ ಸಭಾಪತಿಯವರು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರಿಗೆ ಬರೆದಿರುವ ಪತ್ರದಲ್ಲಿ ಉಲ್ಲೆಖೀಸಿದ್ದಾರೆ. 'ಡಿ.19ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ' ಎಂದು ಗೃಹ ಸಚಿವರು ಉಲ್ಲೇಖೀಸಿರುವುದೇ ತಪ್ಪು ಎಂದು ಹೇಳಲಾಗುತ್ತಿದೆ. ಸದನದ ಪ್ರತಿಯೊಂದು ನಡವಳಿಕೆಯು ಸಭಾಪತಿ, ಸಭಾಧ್ಯಕ್ಷರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸದನದಲ್ಲಿ ಸದಸ್ಯರ ದುರ್ನಡತೆಗಾಗಿ ಅವರನ್ನು ಶಿಕ್ಷಿಸುವ ಅಧಿಕಾರ ಸದನಕ್ಕಿದೆ. ಸದಸ್ಯ ಅನುಚಿತವಾಗಿ ವರ್ತಿಸಿದ್ದಾರೆಯೇ ಅಥವಾ ಸದಸ್ಯರಿಗೆ ತಕ್ಕದಲ್ಲದ ರೀತಿಯಲ್ಲಿ ವರ್ತಿಸಿದ್ದಾರೆಯೇ ಎಂಬುದನ್ನು ನಿರ್ಧರಿಸುವ ಪ್ರತಿಯೊಂದು ಪ್ರಕರಣವು ಸದನದ ಅಧಿಕಾರದ ವ್ಯಾಪ್ತಿಯೊಳಗೆ ಬರುತ್ತದೆ. ಇದೀಗ ಎಂಎಲ್‌ಸಿ ಸಿ.ಟಿರವಿ–ಸಚಿವೆ ಲಕ್ಷ್ಮಿ ಹೆಬಾಳ್ಕರ್ ಪ್ರಕರಣವನ್ನು ಸಿಐಡಿಗೆ ವಹಿಸುವ ಮೂಲಕ ಶಾಸಕಾಂಗ–ಕಾರ್ಯಾಂಗ ನಡುವಿನ ಸಂಘರ್ಷ ಸೃಷ್ಟಿಯಾಗಿದೆ.

ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಸಭಾಪತಿ ಹೊರಟ್ಟಿಯವರು ಸದನವನ್ನು ಮುಂದೂಡಿದ ಬಳಿಕ ಸಿ.ಟಿ.ರವಿ–ಲಕ್ಷ್ಮಿ ಹೆಬ್ಬಾಳ್ಕರ್ ಪ್ರಕರಣ ನಡೆದಿರುವುದು. ಸದನ ಮುಂದೂಡಿದ ತಕ್ಷಣವೇ ಸಿಸಿ ಟಿವಿ. ಕ್ಯಾಮೆರಾ, ಕಲಾಪ ವರದಿಗಾರಿಕೆ ಎಲ್ಲವೂ ಸ್ಥಗಿತಗೊಳ್ಳುತ್ತದೆ. ಇದರಿಂದ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಅಪಮಾನಿಸಿದ್ದಾರೆ ಎನ್ನಲಾದ ಸಿ.ಟಿ. ರವಿ ಹೇಳಿಕೆಗೆ ಯಾವುದೇ ಸಾಕ್ಷ್ಯಾಧಾರಗಳು, ದಾಖಲೆಗಳು ಸಿಕ್ಕಿಲ್ಲ. ಸದನ ನಡೆದಾಗ ಸದಸ್ಯರಿಂದ ಆಕ್ಷೇಪಾರ್ಹ ಹೇಳಿಕೆಗಳು ಬಂದಲ್ಲಿ ಕಡತದಿಂದ ತೆಗೆಯಲು ಹೇಳಿ ಪ್ರಕರಣವನ್ನು ಇತ್ಯರ್ಥ ಪಡಿಸಬಹುದಾಗಿತ್ತು. ಇಲ್ಲವೆ ಕೆಲ ದಿನಗಳ ಕಾಲದ ಅವಧಿಗೆ ಸಂಬಂಧಪಟ್ಟವರಿಗೆ ಸದನದ ಕಾರ್ಯಕಲಾಪದಿಂದ ಅಮಾನತು ಮಾಡಬಹುದಿತ್ತು. ಆದರೆ, ಘಟನೆ ನಡೆದಿರುವುದು ಅಧಿವೇಶನದ ಕೊನೆಯ ದಿನ. ಇದೀಗ ಖಾಸಗಿಯಾಗಿ ಲಭ್ಯವಿರುವ ರೆಕಾರ್ಡಿಂಗ್ ಆಧಾರವಾಗಿದೆ. ಅದೀಗ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ಪರೀಕ್ಷೆಗೆ ಒಳಪಡಬೇಕು.

ಪ್ರಕರಣವನ್ನು ಸಿಐಡಿಗೆ ವಹಿಸಿದ ಬಳಿಕ ಸ್ಥಳ ಪಂಚನಾಮೆ ನಡೆಸಲು ಸಭಾಪತಿಯವರು ಅವಕಾಶ ನೀಡಿಲ್ಲ. ಯಾವ ರೀತಿ ಪಂಚನಾಮೆ ನಡೆಸುತ್ತೀರಿ? ಎಂದು ಅವರು ರಾಜ್ಯ ಸರ್ಕಾರಕ್ಕೆ ವಿವರ ಕೇಳಿದ್ದಾರೆ. ಸಿ.ಟಿ.ರವಿ ಬಂಧನವು ಪ್ರಶ್ನಾರ್ಹವಾಗಿದೆ. ಸಭಾಪತಿಯವರ ಅನುಮತಿ ಪಡೆಯದೆ ಸದನದೊಳಗೆ ಸಿವಿಲ್ ಅಥವಾ ಕ್ರಿಮಿನಲ್ ಸ್ವರೂಪದ ಕಾನೂನು ಕ್ರಮ ಜರುಗಿಸಲು ಬರುವುದಿಲ್ಲ. ಈ ಪ್ರಕರಣದಲ್ಲಿ ಸಿ.ಟಿ.ರವಿ ಅವರ ಬಂಧನದ ನಂತರವಷ್ಟೇ ಪೊಲೀಸರು ಸಭಾಪತಿಯವರ ಗಮನಕ್ಕೆ ತಂದಿದ್ದಾರೆ. ಒಟ್ಟಾರೆ ಈ ಪ್ರಕರಣವು ಸಭಾಪತಿಯವರ ಸರ್ವೋಚ್ಚ ಅಧಿಕಾರ ವ್ಯಾಪ್ತಿಗೆ ಸವಾಲೊಡ್ಡುತ್ತಿದೆ. ರಾಜ್ಯ ಸರ್ಕಾರಕ್ಕೂ ನುಂಗಲಾಗದ ಬಿಸಿತುಪ್ಪವಾಗಿದೆ. ಸಭಾಪತಿಯವರ ಅಧಿಕಾರವೇ ಸರ್ವೋಚ್ಚ ಎಂಬುದನ್ನು ನಿರೂಪಿಸಲು ಹೊರಟ್ಟಿಯವರ ವಿಶಾಲ ಅನುಭವ ಸಾಕಾಗಬಹುದೇ? ಕಾದು ನೋಡಬೇಕು.

**ಲೇಖಕರು: ಸಂತೋಷ ವೈದ್ಯ**

**ಆಧಾರ:**ವಿಜಯವಾಣಿ, ದಿನಾಂಕ:25.01.2025

## 2. ಭಾರತೀಯ ಸಂವಿಧಾನ 75 ವರ್ಷಗಳ ಮಹಾಯಾನ

ಪ್ರತಿವರ್ಷ ಜನವರಿ 26ರಂದು ಭಾರತೀಯರು ಸಂಭ್ರಮದಿಂದ ಆಚರಿಸುವ ಹಬ್ಬ ಗಣರಾಜ್ಯೋತ್ಸವ ಭಾರತದ ಆತ್ಮಸಮಾನ ಮತ್ತು ಅಭಿಮಾನದ ಉತ್ಸವ ಇದು ನವದೆಹಲಿಯ ಕರ್ತವ್ಯಪಥದಲ್ಲಿ ಈ ಉತ್ಸವ ಎಷ್ಟು ಅದ್ದೂರಿಯಾಗಿ ನಡೆಯುತ್ತದೆ ಎಂದರೆ, ಜಗತ್ತಿನ ಕಣ್ಣುಗಳೆಲ್ಲ ಇದರ ಮೇಲೇ ನೆಟ್ಟಿರುತ್ತವೆ.

75 ವರ್ಷಗಳ ಹಿಂದೆ ಈ ದಿನ ಭಾರತದ ನೇತಾರರು ನವೋದಿತ ಭಾರತದ ಸಂವಿಧಾನವನ್ನು ಅಂಗೀಕರಿಸಿ ಭಾರತದ ಒಕ್ಕೂಟವನ್ನು ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಗಣರಾಜ್ಯ ಎಂದು ಸಾರಿದ್ದರು. ಈ ದಿನವನ್ನು ಆಚರಿಸುವ ಸಂಭ್ರಮವೇ ಗಣರಾಜ್ಯೋತ್ಸವ.

ಇಂದು ಜಗತ್ತಿನ ಪ್ರಮುಖ ಸಂವಿಧಾನಗಳಲ್ಲಿ ಹೆಮ್ಮೆಯ ಸ್ಥಾನ ಪಡೆದಿರುವ ಭಾರತದ ಸಂವಿಧಾನ ಜಗತ್ತಿನ ಅತ್ಯಂತ ಸುದೀರ್ಘ, ವಿಸ್ತೃತ, ಪರಿಪೂರ್ಣ ಮತ್ತು ನ್ಯಾಯಸಮ್ಮತ ಸಂವಿಧಾನಗಳಲ್ಲಿ ಒಂದಾಗಿದೆ. ಕಾಲಾಂತರದಲ್ಲಿ ಅದೆಷ್ಟೋ ಆಕ್ರಮಣ ಮತ್ತು ಬದಲಾವಣೆಗಳನ್ನು ಎದುರಿಸಿ ಸುದೃಢವಾಗಿ ನಿಂತಿರುವ ಸಂವಿಧಾನ ಇದು. 76ನೆಯ ಗಣರಾಜ್ಯೋತ್ಸವದ ಪರ್ವದಲ್ಲಿ ಈ ಸಂವಿಧಾನ ರಚನೆಯ ಇತಿಹಾಸ ಮತ್ತು 75 ವರ್ಷಗಳಲ್ಲಿ ಇದು ಕಂಡಿರುವ ಬದಲಾವಣೆಗಳ ಮೇಲೆ ಬೆಳಕು ಚೆಲ್ಲುವ ಲೇಖನವಿದು.

'ಭಾರತದ ಸಂವಿಧಾನ ಬರೇ ಒಂದು ವಕೀಲರ ದಸ್ತಾವೇಜು ಅಲ್ಲ, ಇದು ಬದುಕಿನ ವಾಹನ, ಇದರ ಚೈತನ್ಯ ಯಾವತ್ತೂ ಆಯಾ ಕಾಲದ ಚೈತನ್ಯವಾಗಿರುತ್ತದೆ' – ಎಂದಿದ್ದರು ಭಾರತೀಯ ಸಂವಿಧಾನದ ರೂವಾರಿ ಡಾ। ಬಿ.ಆರ್. ಅಂಬೇಡ್ಕರ್.

ಭಾರತದ ಸಂವಿಧಾನ ಜಗತ್ತಿನಲ್ಲೇ ಅಗ್ರಮಾನ್ಯ ಸಂವಿಧಾನಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯದ ಧ್ಯೇಯಗಳನ್ನು ಪ್ರತಿಪಾದಿಸುವ ಈ ಸಂವಿಧಾನ ಜಗತ್ತಿಗೇ ದಾರಿದೀವಿಗೆಯಾಗಿದೆ. ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾವಣೆ, ತಿದ್ದುಪಡಿಗಳನ್ನು ಕಾಣುತ್ತಿದ್ದರೂ ಮೂಲಭೂತ ಸ್ವರೂಪವನ್ನು ಉಳಿಸಿಕೊಂಡು ಭಾರತೀಯತ್ವವನ್ನು ಮೆರೆಯುತ್ತಿದೆ.

ಇದೀಗ 75 ವರ್ಷ ತುಂಬುತ್ತಿರುವ ಭಾರತದ ಸಂವಿಧಾನ ಇತಿಹಾಸದ ಹೊರಳುಗಳಲ್ಲಿ ಹಲವು ಏಳುಬೀಳುಗಳನ್ನು ನೋಡಿಯೂ ಭಾರತದ ಅದಮ್ಯ ಸುಭದ್ರ ಕೋಟೆಯಾಗಿ ಉಳಿದುಕೊಂಡಿದೆ. ಭಾರತದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಭದ್ರ ಬುನಾದಿಯಾಗಿ ಭಾರತೀಯರ ಶಕ್ತಿಸೆಲೆಯಾಗಿದೆ.

ಅಂಬೇಡ್ಕರ್ ಹೇಳಿದಂತೆ ಇದು ಬದುಕಿನ ವಾಹನ, ಭಾರತೀಯರ ಚೈತನ್ಯ. ಈ ವಾಹನದ 75 ವರ್ಷಗಳ ಮಹಾಯಾನದ ಕಥೆ ಇಲ್ಲಿದೆ.

## 'ಡೊಮಿನಿಯನ್'ನಿಂದ 'ಗಣರಾಜ್ಯ'

ಸ್ವಾತಂತ್ರ್ಯದ ಬಳಿಕ ಭಾರತಕ್ಕೆ 'ಡೊಮಿನಿಯನ್' ಎಂಬ ಸ್ಥಾನ ನೀಡಲಾಗಿತ್ತು. ಇದರ ಪ್ರಕಾರ ಭಾರತ ಬ್ರಿಟಿಷ್ ಕಾಮನ್‌ವೆಲ್ತ್‌ಗೆ ಸೇರಿದ ಒಂದು ಸ್ವಾಧಿಕಾರ ಕ್ಷೇತ್ರವಾಗಿತ್ತು. ಸ್ವಾತಂತ್ರ್ಯ ದೊರೆತ ಬಳಿಕವೂ ಬ್ರಿಟಿಷ್ ಆಡಳಿತದ ಕಾಯ್ದೆಗಳು, ಸರಕಾರದ ವಿಧಿನಿಯಮಗಳು ಮುಂದುವರಿದಿದ್ದವು.

ಈ ಹಣೆಪಟ್ಟಿ ಅಳಿಸಿದ್ದು ಭಾರತದ ಸಂವಿಧಾನ ಜಾರಿಗೆ ಬಂದ ಬಳಿಕವೇ. ಸ್ವತಂತ್ರ ಭಾರತದ ಸಂವಿಧಾನ ರಚನೆಯ ಕಾರ್ಯ ಪೂರ್ಣವಾದದ್ದು 1949ರಲ್ಲಿ. ಆ ವರ್ಷದ ನವೆಂಬರ್ 26ರಂದು ಭಾರತದ ಸಂವಿಧಾನ ಸಭೆ ನೂತನ ಸಂವಿಧಾನವನ್ನು ಅಂಗೀಕರಿಸಿತ್ತು. ಇದು ಭಾರತದ ಸಂವಿಧಾನವಾಗಿ ಜಾರಿಗೆ ಬಂದದ್ದು 1950ರ ಜನವರಿ 26ರಂದು.

ಸಂವಿಧಾನ ಜಾರಿಗೆ ಬಂದ ಬಳಿಕ ಭಾರತ ಡೊಮಿನಿಯನ್ ಸ್ಥಾನವನ್ನು ಅಳಿಸಿಹಾಕಿ ಅಧಿಕೃತವಾಗಿ ಸ್ವತಂತ್ರ ಸಾರ್ವಭೌಮ ಗಣರಾಜ್ಯ ರಾಷ್ಟ್ರವಾಯಿತು. ಇದರ ಜೊತೆಗೆ 1947ರ ಭಾರತದ ಸ್ವಾತಂತ್ರ್ಯ ಕಾಯ್ದೆ, 1935ರ ಭಾರತದ ಆಡಳಿತ ಕಾಯ್ದೆಗಳು ಉಚ್ಚಾಟನೆಯಾದವು.

ನೂತನ ಸಂವಿಧಾನದ ತಳಹದಿಯಲ್ಲಿ ಭಾರತ ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವಾದ ದಿನವನ್ನು ನಾವು ಪ್ರತಿವರ್ಷ ಭಾರತದ ಗಣರಾಜ್ಯೋತ್ಸವವಾಗಿ ಆಚರಿಸುತ್ತೇವೆ. ಆದರೆ, ಜನವರಿ 26ರ ಉತ್ಸವಕ್ಕೆ ಇನ್ನೂ ಹಳೆಯ ಇತಿಹಾಸ ಇದೆ...

## ಸಂವಿಧಾನದ ಹಿನ್ನೆಲೆ:

ಭಾರತದ ಸಂವಿಧಾನದ ಕಲ್ಪನೆ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲೇ ಕುಡಿಯೊಡೆದಿತ್ತು. 1926ರಲ್ಲಿ ಲಕ್ನದಲ್ಲಿ ನಡೆದಿದ್ದ ಸರ್ವಪಕ್ಷಗಳ ಮಹಾಸಭೆ ಭಾರತದ ಸಂವಿಧಾನವನ್ನು ರಚಿಸಲು ಒಂದು ಸಮಿತಿಯನ್ನು ರಚಿಸಿತ್ತು. ಇದಕ್ಕೆ 'ನೆಹರೂ ರಿಪೋರ್ಟ್' ಎಂದು ಹೆಸರಿದೆ.

1929ರ ಡಿಸೆಂಬರ್‌ನಲ್ಲಿ ನಡೆದ ಲಾಹೋರ್ ಅಧಿವೇಶನದಲ್ಲಿ ಭಾರತೀಯ ಕಾಂಗ್ರೆಸ್ 'ಪೂರ್ಣ ಸ್ವರಾಜ್ಯ'ದ ಘೋಷಣೆ ಮಾಡಿತ್ತು. ಇದರ ಪ್ರಕಾರ ಜನವರಿ 26ನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸುವ ಕರೆ ನೀಡಲಾಗಿತ್ತು. 1930ರಲ್ಲಿ ಮೊತ್ತಮೊದಲ ಬಾರಿಗೆ ಜನವರಿ 26ರಂದು ಸಾಂಕೇತಿಕವಾಗಿ ಸ್ವರಾಜ್ಯೋತ್ಸವ ಆಚರಿಸಲಾಗಿತ್ತು. ಬಳಿಕ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಗುವ ತನಕ ಜನವರಿ 26ರಂದು ಭಾರತೀಯರು ಸಾಂಕೇತಿಕ ಸ್ವಾತಂತ್ರ್ಯೋತ್ಸವ ಆಚರಿಸುತ್ತಿದ್ದರು. ನೂತನ ಸಂವಿಧಾನದ ಕಾರ್ಯಾರಂಭಕ್ಕೆ ಇದೇ ದಿನವನ್ನು ಆರಿಸಲಾಗಿತ್ತು.

## ಸಂವಿಧಾನ ಸಭೆ:

ನೂತನ ಸಂವಿಧಾನ ರಚನೆಯಾದದ್ದು ಮಹಾಯುದ್ಧದ ಬಳಿಕ ಬ್ರಿಟಿಷರು ರೂಪಿಸಿದ್ದ ಸಾಂವಿಧಾನಿಕ ಸಭೆಯಲ್ಲಿ. ಇಂಥ ಒಂದು ಸಾಂವಿಧಾನಿಕ ಸಭೆಗಾಗಿ ಭಾರತೀಯರು 1939ರಿಂದ ಆಗ್ರಹಿಸುತ್ತಿದ್ದರು. ಇದು ನೆರವೇರಿದ್ದು 1946ರಲ್ಲಿ ಬ್ರಿಟಿಷ್ ಭಾರತದ 296 ಭಾರತೀಯ ಪ್ರತಿನಿಧಿಗಳು ಸೇರಿ ಈ ಸಂವಿಧಾನ ಸಭೆಯಲ್ಲಿ ಭಾಗವಹಿಸಿದ್ದರು. ಇದನ್ನೇ ಇಂದು 'ಸಂವಿಧಾನ ಸಂಸತ್' ಎಂದು ಕರೆಯಲಾಗುತ್ತದೆ. ಈ ಸಂಸತ್‌ನಲ್ಲಿ ಅಖಂಡ ಭಾರತದ ಪ್ರತಿನಿಧಿಗಳು ಇದ್ದರು. ಆದರೆ, ಮಹಮ್ಮದ್ ಅಲಿ ಜಿನ್ನಾ ಮತ್ತು ಸಂಸ್ಥಾನಗಳ ಪ್ರತಿನಿಧಿಗಳು ಇದರ ಅಧಿವೇಶನದಲ್ಲಿ ಭಾಗವಹಿಸಲು ನಿರಾಕರಿಸಿದ್ದರು.

ಸಂವಿಧಾನ ರಚನೆಯ ಕಾರ್ಯ ಅದಾಗಲೇ ಆರಂಭವಾಗಿತ್ತು. ಮಹಾಯುದ್ಧದ ಬಳಿಕ ಭಾರತಕ್ಕೆ ಸ್ವಾತಂತ್ರ್ಯ ಕೊಡುವುದು ಅನಿವಾರ್ಯ ಎಂದು ತಿಳಿದಾಗ ಬ್ರಿಟಿಷ್ ಸರಕಾರ 1946ರಲ್ಲಿ ಭಾರತೀಯ ಸಂವಿಧಾನ ರಚನೆಯ ಕಾರ್ಯವನ್ನು ಖ್ಯಾತ ನ್ಯಾಯಾಂಗ ತಜ್ಞ ಸರ್ ಬೆನಗಲ್ ನರಸಿಂಗರಾವ್ ಅವರಿಗೆ ನೀಡಿತ್ತು. ಅವರು ದೇಶ–ವಿದೇಶಗಳ ನ್ಯಾಯಾಂಗ ಮತ್ತು ಸಂವಿಧಾನ ತಜ್ಞರೊಡನೆ ಸಮಾಲೋಚನೆ ನಡೆಸಿ ಸಂವಿಧಾನದ ಕರಡನ್ನು ತಯಾರಿಸುತ್ತಿದ್ದರು.

1946ರ ಡಿಸೆಂಬರ್ 11ರಂದು ಡಾ। ರಾಜೇಂದ್ರ ಪ್ರಸಾದ್ ಅವರನ್ನು ಸಂವಿಧಾನ ಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. 1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ಸಿಗುತ್ತಲೇ ಡಾ। ಭೀಮರಾವ್ ಅಂಬೇಡ್ಕರ್ ಅವರನ್ನು ಭಾರತ ಸರಕಾರದ ಮೊದಲ ಕಾನೂನು ಸಚಿವರನ್ನಾಗಿ ಹಾಗೂ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ನ್ಯಾಯಾಂಗ ತಜ್ಞರ ಸಲಹೆಯಂತೆ ಬಿ.ಆರ್. ಅಂಬೇಡ್ಕರ ನೇತೃತ್ವದಲ್ಲಿ 299 ಸದಸ್ಯರ ಸಂವಿಧಾನ ಸಭೆಗೆ ಸಂವಿಧಾನವನ್ನು ರೂಪಿಸಲು ಎರಡು ವರ್ಷ 11 ತಿಂಗಳು ಮತ್ತು 17 ದಿನಗಳು ಹಿಡಿದಿದ್ದವು. ಈ ನಡುವೆ ಸಂವಿಧಾನದ ಕರಡಿನ ಕುರಿತು ಚರ್ಚೆಗೆ 114 ದಿನಗಳು ಮೀಸಲಾಗಿದ್ದವು.

ಕರಡು ಸಂವಿಧಾನದ ಚರ್ಚೆಯಲ್ಲಿ ಒಟ್ಟು 7,635 ಪ್ರಸ್ತಾವನೆಗಳು ಬಂದಿದ್ದವು. ಇವುಗಳಲ್ಲಿ 2,473 ಮಾರ್ಪಾಡುಗಳನ್ನು ಸಂವಿಧಾನ ಸಭೆ ಪರಿಶೀಲಿಸಿ, ಮತಗಣನೆ ಮಾಡಲಾಗಿತ್ತು.

ಸಂವಿಧಾನದ ಮೂಲ ಕರಡು ಪ್ರತಿಯಲ್ಲಿ ಎಂಟು ಅನುಚ್ಛೇದ (ಷೆಡ್ಯೂಲ್)ಗಳಲ್ಲಿ 316 ವಿಧಿ (ಆರ್ಟಿಕಲ್)ಗಳಿದ್ದವು. ಸಂವಿಧಾನ ಸಭೆ ಇದನ್ನು ತಿದ್ದಿ, ಪರಿಷ್ಕರಿಸಿದ ಬಳಿಕ 1950ರಲ್ಲಿ ಜಾರಿಗೆ ಬಂದಾಗ ಅದರಲ್ಲಿ ಎಂಟು ಅನುಚ್ಛೇದಗಳು, 22 ಭಾಗಗಳಲ್ಲಿ ಒಟ್ಟು 395 ವಿಧಿನಿಯಮಗಳಿದ್ದವು.

**ಜಾಗತಿಕ ಅದ್ಭುತ!**

ಭಾರತದ ಸಂವಿಧಾನ ಒಂದು ಜಾಗತಿಕ ಅದ್ಭುತವೇ ಆಗಿದೆ. ಜಗತ್ತಿನ ಅತ್ಯಂತ ದೀರ್ಘ ಲಿಖಿತ ಸಂವಿಧಾನ ಇದು. ಇದರಲ್ಲಿ 1,45,000 ಶಬ್ದಗಳಿವೆ. ಇದರ ಹೋಲಿಕೆಯಲ್ಲಿ ಅಮೇರಿಕಾದ ಸಂವಿಧಾನದಲ್ಲಿರುವುದು 4,400 ಶಬ್ದಗಳು ಮಾತ್ರ.

1950ರಲ್ಲಿ ಜಾರಿಗೆ ಬಂದ ಬಳಿಕ ಮುಂದಿನ 75 ವರ್ಷಗಳಲ್ಲಿ ಕಾಲದ ಅಗತ್ಯಕ್ಕೆ ತಕ್ಕಂತೆ ಈ ಸಂವಿಧಾನದಲ್ಲಿ ತಿದ್ದುಪಡಿಗಳಾದವು. ಇಂದು ಸಂವಿಧಾನದಲ್ಲಿ 448 ವಿಧಿಗಳಿವೆ.

ಸಂವಿಧಾನ ತಜ್ಞರ ಪ್ರಕಾರ ಭಾರತದ ಸಂವಿಧಾನ ಒಂದು ಜೀವಂತ ಅಧ್ಯಾಯ ಭಾರತದ ಗಣರಾಜ್ಯದ ಅಗತ್ಯಗಳು, ಬದಲಾಗುತ್ತಿರುವ ಪರಿಸ್ಥಿತಿ ಮತ್ತು ವಿಚಾರಗಳಿಗೆ ಅನುಗುಣವಾಗಿ ಭಾರತದ ಸಂವಿಧಾನ ಸ್ಪಂದಿಸುತ್ತದೆ, ತಿದ್ದುಪಡಿಗಳ ಮೂಲಕ ಬದಲಾವಣೆಗಳನ್ನು ಪಡೆಯುತ್ತಿದೆ.

ಸಂವಿಧಾನ ತಿದ್ದುಪಡಿಗೆ ಸಂಸತ್ತಿನ ಎರಡೂ ಮನೆಗಳಲ್ಲಿ ಮೂರನೆಯ ಎರಡು ಪಾಲು ಬಹುಮತ ಬೇಕಾಗುತ್ತದೆ. ಹೀಗಿದ್ದರೂ ಭಾರತದ ಸಂವಿಧಾನ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಬಾರಿ ಬದಲಾವಣೆಗಳನ್ನು ಕಂಡಿದೆ.

**ಸಂವಿಧಾನದ ತಿದ್ದುಪಡಿ:**

ಜಗತ್ತಿನ ಎಲ್ಲ ದೇಶಗಳಿಗೂ ಒಂದಲ್ಲ ಒಂದು ವಿಧದ ಸಂವಿಧಾನ ಇರಬೇಕು. ಯಾವುದೇ ಆಡಳಿತವನ್ನು ನಿಯಮಬದ್ಧವಾಗಿ ನಡೆಸಲು, ಕಾಯ್ದೆಗಳನ್ನು ರೂಪಿಸಲು ಮತ್ತು ಜಾರಿಗೆ ತರಲು

ಸಂವಿಧಾನದ ಅಗತ್ಯವಿದೆ. ದೇಶ ಎದುರಿಸಬಹುದಾದ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ನಿಯಮಾವಳಿಗಳು ಇದ್ದೇ ಇರಬೇಕು.

ಕಾಲಾಂತರದಲ್ಲಿ ಸಮಸ್ಯೆಗಳ ಸ್ವರೂಪ ಬದಲಾಗುತ್ತದೆ, ಸಾಮಾಜಿಕ ಬದಲಾವಣೆಗಳ ಜೊತೆಗೇ ಕಾಯ್ದೆಗಳು ಹಳೆಯದಾಗುತ್ತವೆ. ಇಂಥ ಸಂದರ್ಭದಲ್ಲಿ ಕಾನೂನು ಮತ್ತು ನಿಯಮಾವಳಿಗಳನ್ನು ಬದಲಾಯಿಸಲು ಸಂವಿಧಾನದಲ್ಲಿ ತಿದ್ದುಪಡಿ ನಡೆಸಬೇಕಾಗುತ್ತದೆ.

ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಸಂಪೂರ್ಣ ಹಕ್ಕು ಇರಬಹುದು. ಆದರೆ, ರಾಜಕೀಯ ಮತ್ತು ಸಾಮಾಜಿಕ ವಿಚಾರಗಳು ಇದರ ವಿರುದ್ಧವಾಗಿರಬಹುದು. ಯಾವುದೇ ತಿದ್ದುಪಡಿಯ ವಿರುದ್ಧ ರಾಜಕೀಯ ಪಕ್ಷಗಳು ವಿರೋಧ ವ್ಯಕ್ತಪಡಿಸಿ, ಸಾರ್ವಜನಿಕ ಸಂಚಲನ ನಡೆಸಬಹುದು. ನ್ಯಾಯಾಲಯಗಳಲ್ಲಿ ತಿದ್ದುಪಡಿಯ ವಿರುದ್ಧ ಖಟ್ಲೆ ಹೂಡಬಹುದು.

ಸಂವಿಧಾನದ ತಿದ್ದುಪಡಿಯಲ್ಲಿ ಭಾರತದ ನ್ಯಾಯಾಂಗ ಕೂಡ ಮಹತ್ವದ ಪಾತ್ರ ವಹಿಸುತ್ತದೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ಹಕ್ಕು ಸಂಸತ್ತಿಗೆ ಇದೆ. ಆದರೆ, ಈ ತಿದ್ದುಪಡಿ ನ್ಯಾಯಸಮ್ಮತವೆ ಎಂದು ಪರಿಶೀಲಿಸುವ ಹಕ್ಕು ನ್ಯಾಯಾಂಗಕ್ಕಿದೆ. ಸರಕಾರ ಜಾರಿಗೆ ತರುವ ತಿದ್ದುಪಡಿಗಳ ಮಾನ್ಯತೆಯ ಬಗ್ಗೆ ನ್ಯಾಯಾಂಗ ನಿರ್ಧರಿಸಬಹುದು.

## ತಿದ್ದುಪಡಿಯ ಪ್ರಕ್ರಿಯೆ:

ಸಂವಿಧಾನದ ತಿದ್ದುಪಡಿ ಹೆಚ್ಚು ಕ್ಲಿಷ್ಟವಾಗಿರಬಾರದು, ಅಗತ್ಯ ಬಿದ್ದಾಗ ಭಾರತದ ಸಂಸತ್ತಿಗೆ ಇದರ ವಿಧಿ, ನಿಯಮಾವಳಿಗಳನ್ನು ಸುಲಭವಾಗಿ ಬದಲಾಯಿಸಲು ಸಾಧ್ಯವಾಗಬೇಕು ಎಂಬುದು ಭಾರತದ ಸಂವಿಧಾನವನ್ನು ರೂಪಿಸಿದವರ ವಿಚಾರವಾಗಿತ್ತು.

'ಸಂವಿಧಾನ ಸದೃಢವಾಗಿರಬೇಕು, ಸಾಧ್ಯವಾದಷ್ಟು ಶಾಶ್ವತವಾಗಿರಬೇಕು ಎಂದು ನಮ್ಮ ಬಯಕೆ. ಆದರೆ, ಸಂವಿಧಾನಗಳಲ್ಲಿ ಶಾಶ್ವತ ಎನ್ನುವುದು ಯಾವುದೂ ಇಲ್ಲ. ಹೀಗಾಗಿ ಇದರಲ್ಲಿ ಹೊಂದಾಣಿಕೆಯ ಸಾಧ್ಯತೆ ಕೂಡ ಇರಬೇಕು. ಸಂವಿಧಾನವನ್ನು ಶಾಶ್ವತ ಮತ್ತು ಅಭೇದ್ಯವಾಗಿ ಮಾಡಿದರೆ, ದೇಶದ ಪ್ರಗತಿಯನ್ನು ತಡೆಹಿಡಿದಂತೆ. ನಾವು ಒಂದು ಭಾರೀ ಬದಲಾವಣೆಯ ಯುಗದಲ್ಲಿದ್ದೇವೆ. ನಾವು ಈ ದಿನ ನಿರ್ಧರಿಸಿದ್ದು ನಾಳೆಗೆ ಹೊಂದಲಿಕ್ಕಿಲ್ಲ. ಹೀಗಾಗಿ ಸಂವಿಧಾನದಲ್ಲಿ ಆಗತ್ಯದ ತಿದ್ದುಪಡಿ ಮಾಡಲು ವಿಧಾಯಕ ಸಭೆಗೆ ಸಾಕಷ್ಟು ಅಧಿಕಾರ ಇರಬೇಕು' ಎಂಬುದು ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರ ವಿಚಾರವಾಗಿತ್ತು. ಈ ವಿಚಾರವನ್ನು ಸಂವಿಧಾನ ಸಭೆಯ ಅಧಿಕಾಂಶ ಸದಸ್ಯರು ಒಪ್ಪಿಕೊಂಡಿದ್ದರು.

ಎಲ್ಲರೂ ಈ ವಾದವನ್ನು ಒಪ್ಪಿಕೊಂಡಿರಲಿಲ್ಲ. 'ಸಂವಿಧಾನ ಬದಲಾವಣೆಗೆ ಸಾಕಷ್ಟು ಕಟ್ಟುಪಾಡುಗಳು ಇರಬೇಕು, ಇಲ್ಲದಿದ್ದರೆ ದುಡುಕಿನ ಬದಲಾವಣೆಗಳು ಸಂವಿಧಾನದ ಸ್ವರೂಪವನ್ನೇ ಕೆಡಿಸಬಹುದು ಎಂದು ಎಚ್.ವಿ. ಕಾಮತ್ ಮುಂತಾದ ಕೆಲವು ಸದಸ್ಯರು ನೆಹರೂ ಅವರ ಸೂಚನೆಯನ್ನು ವಿರೋಧಿಸಿದ್ದರು.

'ಸಂವಿಧಾನದಲ್ಲಿ ಬರೆದಿರುವ ನಿಯಮಗಳ ಪ್ರಕಾರ ಇದನ್ನು ಬದಲಾಯಿಸುವ ಪ್ರಕ್ರಿಯೆ ಸರಳವಾಗಿಯೇ ಇದೆ. ಅಮೆರಿಕಾ ಮತ್ತು ಆಸ್ಟ್ರೇಲಿಯಾದಲ್ಲಿ ಸಾಂವಿಧಾನಿಕ ತಿದ್ದುಪಡಿಯ ನಿಯಮಗಳ ಮುಂದೆ ನಮ್ಮ ನಿಯಮಗಳು ತೀರಾ ಸರಳವಾಗಿವೆ. ಹೆಚ್ಚಿನ ಸಂದರ್ಭಗಳಲ್ಲಿ ತಿದ್ದುಪಡಿಗೆ ಸಾಧಾರಣ ಬಹುಮತ ಮಾತ್ರ ಸಾಕು, ವಿಶೇಷ ಸಂದರ್ಭಗಳಲ್ಲಿ ಮಾತ್ರ ಮೂರನೆಯ ಎರಡು ಬಹುಮತ ಅನಿವಾರ್ಯವಾಗುತ್ತದೆ. ತೀರಾ ಕಡಿಮೆ ಸಂದರ್ಭಗಳಲ್ಲಿ ರಾಜ್ಯ ಸರಕಾರಗಳ ಸಮ್ಮತಿ ಕೂಡ ಇದರೊಡನೆ

ಸೇರಬೇಕಾಗುತ್ತದೆ. ಈ ನಿಯಮಗಳನ್ನು ಇನ್ನಷ್ಟು ಸಡಿಲಿಸುವ, ಸುಲಭ ಸಾಧ್ಯವಾಗಿ ಮಾಡುವ ವಿಚಾರ ಅವಿವೇಕತನ' ಎಂದು ಡಾ। ಅಂಬೇಡ್ಕರ್ ವಾದಿಸಿದ್ದರು.

ವಿಷಯದ ಆಧಾರದಲ್ಲಿ ಭಾರತದ ಸಂವಿಧಾನದ ತಿದ್ದುಪಡಿಗಳ ಪ್ರಕ್ರಿಯೆ ಸರಳವಾಗಿದೆ ಅಥವಾ ಕ್ಲಿಷ್ಟವಾಗಿದೆ. ಹೀಗಾಗಿ ಸಂವಿಧಾನದ ತಿದ್ದುಪಡಿಯ ಕಾರ್ಯ ಹೆಚ್ಚು ಜಟಿಲವಾಗಿಲ್ಲ, ತೀರಾ ಸಡಿಲವಾಗಿಯೂ ಇಲ್ಲ.

ಸಂವಿಧಾನದ ತಿದ್ದುಪಡಿಗಳಲ್ಲಿ ಮೂರು ವಿಧಗಳಿವೆ. ಕೆಲವು ತಿದ್ದುಪಡಿಗಳನ್ನು ಸಾಧಾರಣ ಬಹುಮತದಲ್ಲಿ ಜಾರಿಗೆ ತರಬಹುದು, ಇನ್ನು ಕೆಲವು ತಿದ್ದುಪಡಿಗಳಿಗೆ 368ನೆಯ ವಿಧಿಯ ಅನ್ವಯ ವಿಶೇಷ ಬಹುಮತದ ಅಗತ್ಯವಿದೆ.

**ಸಾಧಾರಣ ಬಹುಮತ :**

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಾಧಾರಣ ಬಹುಮತದ ಬಲದಲ್ಲಿ ಅಂಗೀಕರಿಸಲು ಸಾಧ್ಯವಿರುವ ತಿದ್ದುಪಡಿ ಎಂದರೆ, ಪೌರತ್ವದ ನಿಯಮಗಳು, ಯಾವುದೇ ಶಾಸಕಾಂಗ ಪರಿಷತ್ತಿನ ರಚನೆ ಅಥವಾ ಬರಖಾಸ್ತು, ಪಾರ್ಲಿಮೆಂಟ್ ವ್ಯವಹಾರದ ನಿಯಮಗಳು, ರಾಜ್ಯಗಳ ಹೆಸರು ಮತ್ತು ಗಡಿರೇಖೆಯ ಬದಲಾವಣೆ. ಇವುಗಳನ್ನು ಸಂಸತ್ತಿನಲ್ಲಿ ಸಾಧಾರಣ ಬಹುಮತದ ಆಧಾರದಲ್ಲಿ ಜಾರಿಗೆ ತರಬಹುದು.

**ವಿಶೇಷ ಬಹುಮತ :** ಕೆಲವು ತಿದ್ದುಪಡಿಗಳನ್ನು ರಾಜ್ಯಸಭೆ ಮತ್ತು ಲೋಕಸಭೆಗಳು ನಿಗದಿತ 'ವಿಶೇಷ ಬಹುಮತ'ದಿಂದ ಅಂಗೀಕರಿಸಿದರೆ, ಮಾತ್ರ ಕಾರ್ಯಗತವಾಗುತ್ತವೆ. ಹೀಗಾಗಿ ಈ ತಿದ್ದುಪಡಿಗಳನ್ನು ಜಾರಿಗೆ ತರುವುದು ಕಷ್ಟಸಾಧ್ಯ.

ಇದರಲ್ಲಿ ಎರಡು ನಿಯಮಗಳಿವೆ. ಮೊದಲನೆಯದಾಗಿ, ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಇದು ಮೂರನೆಯ ಎರಡು ಬಹುಮತದಿಂದ ಮಂಜೂರಾಗಬೇಕು, ಎರಡನೆಯದಾಗಿ ಸಭೆಯಲ್ಲಿ ಹಾಜರಿರುವ ಸದಸ್ಯರ ಶೇ.50ರಷ್ಟು ಮತ ಇದರ ಪರವಾಗಿ ಬಿದ್ದಿರಬೇಕು.

ಸಾರ್ವಜನಿಕರ ಮೂಲಭೂತ ಹಕ್ಕುಗಳ ಬದಲಾವಣೆ ಮತ್ತು ಪ್ರಜೆಗಳ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ನಿಯಮಾವಳಿಯಲ್ಲಿ ತಿದ್ದುಪಡಿ ಮುಂತಾದ ಪ್ರಕ್ರಿಯೆಗೆ ಇಂಥ ವಿಶೇಷ ಬಹುಮತ ಅಗತ್ಯ ಇದೆ.

**ವಿಶೇಷ ಬಹುಮತ ಮತ್ತು ರಾಜ್ಯಗಳ ಅಂಗೀಕಾರ:**

ಮೂರನೆಯ ವಿಧದ ಈ ತಿದ್ದುಪಡಿ ಎರಡೂ ಸಭೆಗಳಲ್ಲಿ ನಿಗದಿತ ವಿಶೇಷ ಬಹುಮತದಲ್ಲಿ ಮಂಜೂರಾಗುವುದು ಮಾತ್ರವೇ ಅಲ್ಲ, ಭಾರತದ ಅರ್ಧದಷ್ಟು ರಾಜ್ಯ ಶಾಸನ ಸಭೆಗಳಲ್ಲೂ ಸ್ವೀಕೃತವಾಗಬೇಕು. ರಾಜ್ಯ ಮತ್ತು ಕೇಂದ್ರಗಳ ನಡುವಿನ ಅಧಿಕಾರ ವ್ಯಾಪ್ತಿಯಲ್ಲಿ ಬದಲಾವಣೆ, ಭಾರತದ ರಾಷ್ಟ್ರಪತಿಯ ಚುನಾವಣೆ ಇತ್ಯಾದಿ ವಿಧಿಗಳ ಬದಲಾವಣೆಗೆ ಇಂಥ ಕಟ್ಟುಪಾಡುಗಳಿವೆ.

ಇಷ್ಟೆಲ್ಲ ಕಟ್ಟುಪಾಡುಗಳ ನಡುವೆಯೂ 1950ರಲ್ಲಿ ಜಾರಿಗೆ ಬಂದ ಬಳಿಕ ಭಾರತದ ಸಂವಿಧಾನದಲ್ಲಿ ಈ ತನಕ 106 ತಿದ್ದುಪಡಿಗಳಾಗಿವೆ ಎನ್ನುವುದು ಒಂದು ವಿಶೇಷ ಇವುಗಳಲ್ಲಿ ಕೆಲವು ತಿದ್ದುಪಡಿಗಳು ಆಯಾ ಕಾಲದ ಅಗತ್ಯಗಳಾಗಿದ್ದವು. ಇನ್ನೂ ಕೆಲವು ತಿದ್ದುಪಡಿಗಳು ರಾಷ್ಟ್ರನಾಯಕರು ತಮ್ಮ ಗದ್ದುಗೆ ಉಳಿಸಿಕೊಳ್ಳಲು ನಡೆಸಿದ ಡೊಂಬರಾಟಗಳಾಗಿದ್ದವು.

## ಭಾರತದ ಸಂವಿಧಾನ ಕಂಡ ಕೆಲವು ಐತಿಹಾಸಿಕ ತಿದ್ದುಪಡಿಗಳು ಹೀಗಿವೆ

❖ **ಮೊತ್ತಮೊದಲ ತಿದ್ದುಪಡಿ**

1951ರಲ್ಲಿ ಜಾರಿಯಾದ ಪ್ರಪ್ರಥಮ ತಿದ್ದುಪಡಿಯಲ್ಲಿ ಭೂ ಸುಧಾರಣೆ ಮತ್ತು ವಾಕ್ ಸ್ವಾತಂತ್ರ್ಯಗಳ ಬಗ್ಗೆ ಬದಲಾವಣೆ ತರಲಾಗಿತ್ತು.

ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಮತ್ತು ನೈತಿಕತೆಯನ್ನು ಕಾಪಾಡಲು ವಾಕ್ ಸ್ವಾತಂತ್ರ್ಯದ ಮೇಲೆ ಕಡಿವಾಣ ಹೇರಲಾಗಿತ್ತು. ಹಿಂದುಳಿದ ವರ್ಗದ ಜನರ ಹಕ್ಕುಗಳ ರಕ್ಷಣೆಗೆ ನಿಯಮಾವಳಿಗಳನ್ನು ರೂಪಿಸಲಾಗಿತ್ತು.

❖ **ಏಳನೆಯ ತಿದ್ದುಪಡಿ, 1956 :**

ಬ್ರಿಟಿಷ್ ಆಡಳಿತ ಕಾಲದಲ್ಲಿ ರಾಜ್ಯಗಳಿಗೆ ಎ, ಬಿ, ಸಿ, ಡಿ ದರ್ಜೆಗಳನ್ನು ನೀಡಲಾಗಿತ್ತು. ಸಂವಿಧಾನದ ಏಳನೆಯ ತಿದ್ದುಪಡಿಯ ಮೂಲಕ ನೆಹರೂ ಸರಕಾರ ಈ ದರ್ಜೆಗಳನ್ನು ರದ್ದುಗೊಳಿಸಿತ್ತು.

ಈ ತಿದ್ದುಪಡಿಯ ಮೂಲಕ ಭಾಷೆಗಳ ಆಧಾರದಲ್ಲಿ ರಾಜ್ಯಗಳ ಗಡಿಗಳ ಪುನಾರಚನೆ ಕೂಡ ನಡೆದಿತ್ತು. ವಿಶೇಷ ಕೇಂದ್ರಾಡಳಿತ ಪ್ರದೇಶಗಳು ಅಸ್ತಿತ್ವಕ್ಕೆ ಬಂದದ್ದು ಈ ತಿದ್ದುಪಡಿಯ ಹಿನ್ನೆಲೆಯಲ್ಲಿ.

❖ **ಒಂಬತ್ತನೆಯ ತಿದ್ದುಪಡಿ,** 1960:

ಪಾಕಿಸ್ತಾನದೊಡನೆ ಗಡಿ ಭಾಗದ ಹಳ್ಳಿಗಳ ಕೊಡು–ಕೊಳ್ಳುವಿಕೆಯ ಮಾತುಕತೆ ಅಂತಿಮಗೊಳಿಸಿದ ಬಳಿಕ ಸಂವಿಧಾನ ಈ ತಿದ್ದುಪಡಿಯ ಮೂಲಕ ಭಾರತದ ಸರಹದ್ದಿನ ನಿರ್ಣಯವಾಗಿತ್ತು.

❖ **12ನೆಯ ತಿದ್ದುಪಡಿ, 1962:**

ಗೋವಾ, ದಮನ್ ಮತ್ತು ದಿಯು ಪ್ರದೇಶಗಳನ್ನು ಪೋರ್ಚುಗೀಸ್ ಆಳ್ವಿಕೆಯಿಂದ ಮುಕ್ತಗೊಳಿಸಿದ ಬಳಿಕ ಅವುಗಳನ್ನು ಸಂವಿಧಾನದ 12ನೆಯ ತಿದ್ದುಪಡಿಯ ಮೂಲಕ ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಭಾರತದ ಒಕ್ಕೂಟದೊಡನೆ ಸೇರಿಸಲಾಗಿತ್ತು.

❖ **19ನೆಯ ತಿದ್ದುಪಡಿ, 1966 :**

ಹಿಂದೆ ಚುನಾವಣೆಯ ಬಗ್ಗೆ ತಕರಾರುಗಳನ್ನು ಚುನಾವಣಾ ನ್ಯಾಯ ಮಂಡಳಿ (ಇಲೆಕ್ಷನ್ ಟ್ರಿಬ್ಯೂನಲ್) ಸ್ವೀಕರಿಸುತ್ತಿತ್ತು. 19ನೆಯ ತಿದ್ದುಪಡಿಯಲ್ಲಿ ಈ ನ್ಯಾಯ ಮಂಡಳಿಗಳನ್ನು ರದ್ದುಪಡಿಸಿ, ಚುನಾವಣೆಯ ತಕರಾರುಗಳ ವಿಚಾರಣೆಯನ್ನು ಹೈಕೋರ್ಟ್ ನಡೆಸುವಂತೆ ಮಾಡಲಾಗಿತ್ತು.

## ಇಂದಿರಾ ಸರಕಾರ ಮತ್ತು ಸಂವಿಧಾನ

ಸಂವಿಧಾನದಲ್ಲಿ ಅಗತ್ಯಕ್ಕೆ ತಕ್ಕಂತೆ ತಿದ್ದುಪಡಿ ತರುವ ಹಕ್ಕು ಸಂಸತ್ತಿಗೆ ಇರಬೇಕು ಎಂದು ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಆರಂಭದಲ್ಲೇ ವಾದಿಸಿದ್ದರು. ಸಂವಿಧಾನದಲ್ಲಿ ಗರಿಷ್ಠ ಸಂಖ್ಯೆಯ ತಿದ್ದುಪಡಿಗಳು ಜಾರಿಯಾದದ್ದು 1971ರಿಂದ 1976ರ ನಡುವಿನ ಅವಧಿಯಲ್ಲಿ ನೆಹರೂ ಪುತ್ರಿ ಇಂದಿರಾಗಾಂಧಿಯವರ ಅಧಿಕಾರಾವಧಿಯಲ್ಲಿ.

ಈ ಆರು ವರ್ಷಗಳಲ್ಲಿ ಒಟ್ಟು 19 ತಿದ್ದುಪಡಿಗಳನ್ನು ಮಾಡಲಾಗಿತ್ತು. ಈ ತಿದ್ದುಪಡಿಗಳ ಮೂಲಕ ಸಂವಿಧಾನದಲ್ಲಿ ವ್ಯಾಪಕ ಬದಲಾವಣೆ ತರಲಾದದ್ದು ಮಾತ್ರವೇ ಅಲ್ಲ, ಅದರ ಮೂಲ ಸ್ವರೂಪದಲ್ಲೂ ಮಾರ್ಪಾಟು ತರುವ ಪ್ರಯತ್ನ ನಡೆದಿತ್ತು.

### ❖ 24ನೆಯ ತಿದ್ದುಪಡಿ, 1971:

ನವೆಂಬರ್ 5ರಲ್ಲಿ ಜಾರಿಯಾದ ಈ ತಿದ್ದುಪಡಿ ಸಂವಿಧಾನದ 13 ಮತ್ತು 368ನೆಯ ವಿಧಿಗಳನ್ನು ಬದಲಾಯಿಸಿತ್ತು. ಸಂವಿಧಾನದಲ್ಲಿ ಬದಲಾವಣೆ ತರುವ ಮೂಲಕ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸುವ ಅಧಿಕಾರವನ್ನು ಸಂಸತ್ತಿಗೆ ನೀಡಿತ್ತು ಈ ತಿದ್ದುಪಡಿ.

ಸಂವಿಧಾನದ ಯಾವುದೇ ತಿದ್ದುಪಡಿ ಜಾರಿಯಾಗಲು ಭಾರತದ ರಾಷ್ಟ್ರಪತಿಯವರ ಅಂಗೀಕಾರ ಸಿಗಬೇಕು ಎಂಬ ನಿಯಮವನ್ನು ಈ ತಿದ್ದುಪಡಿಯಲ್ಲಿ ವಿಧಿಸಲಾಗಿತ್ತು.

### ❖ 25ನೆಯ ತಿದ್ದುಪಡಿ, 1971:

ಈ ತಿದ್ದುಪಡಿ '31ಸಿ' ಎಂಬ ಹೊಸ ವಿಧಿಯ ಮೂಲಕ ಸಾರ್ವಜನಿಕರಿಗೆ ಆಸ್ತಿಪಾಸ್ತಿಗಳ ಹಕ್ಕನ್ನು ಕಡಿತಗೊಳಿಸಿತ್ತು. ಸರಕಾರ ಯಾವುದೇ ಖಾಸಗಿ ಆಸ್ತಿಯನ್ನು ಸೂಕ್ತ ಪರಿಹಾರ ನೀಡಿ ವಶಪಡಿಸಿಕೊಳ್ಳಬಹುದು. ಇದನ್ನು ನ್ಯಾಯಾಂಗದಲ್ಲಿ ಪ್ರಶ್ನಿಸುವಂತಿಲ್ಲ ಎಂದು ಈ ತಿದ್ದುಪಡಿ ಹೇಳಿತ್ತು.

ಆದರೆ, ಕೇರಳ ಸರಕಾರದ ವಿರುದ್ಧ ಎಡನೀರು ಮಠಾಧೀಶರಾಗಿದ್ದ ಶ್ರೀ ಕೇಶವಾನಂದ ಭಾರತಿ ಅವರು ಹೂಡಿದ್ದ ಖಟ್ಲೆಯ ತೀರ್ಪು ನೀಡುತ್ತ ಸುಪ್ರೀಂ ಕೋರ್ಟ್ ನ್ಯಾಯಾಂಗದ ಪರಿಶೀಲನೆಯ ಹಕ್ಕನ್ನು ಮರಳಿಸಿತ್ತು. ಸುಪ್ರೀಂ ಕೋರ್ಟ್ ಮೊತ್ತಮೊದಲ ಬಾರಿಗೆ ಸಂವಿಧಾನದ ಮೂಲ ರಚನೆಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದು ಈ ಐತಿಹಾಸಿಕ ತೀರ್ಪಿನಲ್ಲಿ.

### ❖ 26ನೆಯ ತಿದ್ದುಪಡಿ, 1971:

ಈ ತಿದ್ದುಪಡಿಯ ಮೂಲಕ ಆಗಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಡಿಸೆಂಬರ್ 28ರಂದು ರಾತ್ರಿ ಹಗಲಾಗುವುದರ ಒಳಗೆ ಬ್ರಿಟಿಷ್ ಕಾಲದ ಸಂಸ್ಥಾನಗಳ ಮಾಜಿ ರಾಜರುಗಳಿಗೆ ಮತ್ತು ಅವರ ವಂಶಜರಿಗೆ ಸಿಗುತ್ತಿದ್ದ ಖಾಸಗಿ ವರ್ಷಾಶನ (ಪ್ರಿವೀ ಪರ್ಸ್)ವನ್ನು ರದ್ದುಗೊಳಿಸಿದ್ದರು. ದೇಶ-ವಿದೇಶಗಳಲ್ಲಿ ಸುದ್ದಿಯಾಗಿದ್ದ ಈ ತಿದ್ದುಪಡಿ ಇಂದಿರಾಗಾಂಧಿಯವರಿಗೆ 'ಅಯರ್ನ್ ಲೇಡಿ' ಎಂಬ ಬಿರುದು ನೀಡಿತ್ತು.

ಕೆಲವು ವೈಯಕ್ತಿಕ ಸಂದರ್ಭಗಳಲ್ಲಿ 1947ಕ್ಕೆ ಮೊದಲು ಆಡಳಿತ ನಡೆಸುತ್ತಿದ್ದ ವ್ಯಕ್ತಿಗಳಿಗೆ ಅವರ ಜೀವಮಾನದ ತನಕ ಖಾಸಗಿ ವರ್ಷಾಶನ ಮುಂದುವರಿಸಲಾಗಿತ್ತು. ಉದಾಹರಣೆಗೆ ತಿರುವಾಂಕೂರಿನ ಮಾಜಿ ಮಹಾರಾಣಿ ಪೂರದಂ ತಿರುನಾಳ್ ಸೇತು ಲಕ್ಷ್ಮೀಬಾಯಿಯವರ ವರ್ಷಾಶನವನ್ನು 1985ರಲ್ಲಿ ಅವರ ಮೃತ್ಯುವಿನ ತನಕ ಮುಂದುವರಿಸಲಾಗಿತ್ತು.

### ❖ 29ನೆಯ ತಿದ್ದುಪಡಿ, 1972:

1972ರ ಜೂನ್‌ನಲ್ಲಿ ಈ ಸಾಂವಿಧಾನಿಕ ತಿದ್ದುಪಡಿ ಕೇರಳದ ಭೂ ಸುಧಾರಣಾ ಕಾಯ್ದೆಯನ್ನು ಸಂವಿಧಾನದ ಒಂಬತ್ತನೆಯ ಅನುಚ್ಛೇದಕ್ಕೆ ಸೇರಿಸಿತ್ತು.

### ❖ 31ನೆಯ ತಿದ್ದುಪಡಿ, 1973 :

ಈ ತಿದ್ದುಪಡಿ ಲೋಕಸಭೆಯ ಸ್ಥಾನಗಳ ಸಂಖ್ಯೆಯನ್ನು 525ರಿಂದ 545ಕ್ಕೆ ಏರಿಸಿತ್ತು. ಈಶಾನ್ಯ ಭಾರತದಲ್ಲಿ ಹೊಸದಾಗಿ ರಚನೆಯಾಗಿದ್ದ ರಾಜ್ಯಗಳ ನಡುವೆ ಈ ಹೆಚ್ಚುವರಿ ಸ್ಥಾನಗಳನ್ನು ಹಂಚಲಾಗಿತ್ತು.

### ❖ 32ನೆಯ ತಿದ್ದುಪಡಿ, 1974 :

ಆಂಧ್ರಪ್ರದೇಶ ರಾಜ್ಯದಲ್ಲಿ ತೆಲಂಗಾಣ ಮತ್ತು ಆಂಧ್ರದ ಪ್ರಾದೇಶಿಕ ಹಕ್ಕುಗಳ ರಕ್ಷಣೆಗಾಗಿ ಈ ತಿದ್ದುಪಡಿಯನ್ನು ತರಲಾಗಿತ್ತು. ಈ ತಿದ್ದುಪಡಿಯ ಕೆಲವು ಅಂಶಗಳು ಸಂವಿಧಾನದ ಮೂಲರೂಪಕ್ಕೆ ವಿರುದ್ಧವಾಗಿವೆ ಎಂದು ಸರ್ವೋಚ್ಚ ನ್ಯಾಯಾಲಯ 1987ರ ತೀರ್ಪಿನಲ್ಲಿ ಹೇಳಿತ್ತು.

### ❖ 35ನೆಯ ತಿದ್ದುಪಡಿ, 1975 :

1975ರ ಎಪ್ರಿಲ್‌ನಲ್ಲಿ ಭಾರತದ ಜೊತೆಗೆ ಹೊಸದಾಗಿ ಸೇರಿಕೊಂಡ ಸಿಕ್ಕಿಂ ರಾಜ್ಯವನ್ನು ಭಾರತೀಯ ಒಕ್ಕೂಟದೊಡನೆ ಸೇರಿಸಿಕೊಳ್ಳುವ ನಿಯಮಾವಳಿಗಳನ್ನು ಅನುಚ್ಚೇದ 10ರಲ್ಲಿ ವಿಧಿ 2ಎಯ ಮೂಲಕ ಸೇರಿಸಲಾಗಿತ್ತು. ಇದೇ ವರ್ಷ 36ನೆಯ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಸಿಕ್ಕಿಂ ಭಾರತೀಯ ಒಕ್ಕೂಟದ ಒಂದು ರಾಜ್ಯವಾಯಿತು.

### ನ್ಯಾಯಾಂಗದ ವಿರುದ್ಧ ಸಂಸತ್ ತಾಕಲಾಟ:

ಭಾರತೀಯರು ಸಂವಿಧಾನದ ತಿದ್ದುಪಡಿಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಹಕ್ಕನ್ನು ಸಂವಿಧಾನ ನೀಡಿತ್ತು. ಈ ಹಕ್ಕನ್ನು ಭಾರತ ಸರಕಾರ ವಿರೋಧಿಸುತ್ತಿತ್ತು. ಇದರಿಂದಾಗಿ ನ್ಯಾಯಾಲಯ ಮತ್ತು ಸಂಸತ್ ನಡುವೆ ತಾಕಲಾಟ ಆರಂಭವಾಗಿತ್ತು.

1967ರ ಗೋಲಕ್ ನಾಥ್ ಖಟ್ಲೆಯಲ್ಲಿ ಐತಿಹಾಸಿಕ ತೀರ್ಪು ನೀಡುತ್ತ, 'ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಬದಲಾವಣೆ ತರುವಂಥ ಯಾವುದೇ ತಿದ್ದುಪಡಿಗಳನ್ನು ತರುವ ಅಧಿಕಾರ ಸಂಸತ್ತಿಗಿಲ್ಲ' ಎಂದು ಸಾರಿತ್ತು ಸುಪ್ರೀಂ ಕೋರ್ಟ್. ಈ ತೀರ್ಪನ್ನು ಅನೂರ್ಜಿತಗೊಳಿಸುವ ಸಲುವಾಗಿ ಇಂದಿರಾಗಾಂಧಿ ಸರಕಾರ 1971ರಲ್ಲಿ ಸಂವಿಧಾನದಲ್ಲಿ 24ನೆಯ ತಿದ್ದುಪಡಿಯನ್ನು ಜಾರಿಗೆ ತಂದಿತ್ತು.

1971ರಲ್ಲಿ ಮಾಜಿ ರಾಜರಿಗೆ ಸಿಗುತ್ತಿದ್ದ ವರ್ಷಾಶನವನ್ನು ರದ್ದುಗೊಳಿಸಲು ಇಂದಿರಾ ಸರಕಾರ ಹೊಡಿಸಿದ್ದ ಕಾನೂನನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿತ್ತು. ಇದರ ಬೆನ್ನಿಗೇ ಇಂದಿರಾ ಸರಕಾರ ಸಂವಿಧಾನದ 26ನೆಯ ತಿದ್ದುಪಡಿಯನ್ನು ಜಾರಿಗೆ ತಂದಿತ್ತು.

ಸಂಸತ್ತಿಗೆ ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸುವ ಹಕ್ಕನ್ನು ಸುಪ್ರೀಂ ಕೋರ್ಟ್ ಕಾಸರಗೋಡಿನ ಎಡನೀರು ಮಠಾಧೀಶರಾಗಿದ್ದ ಶ್ರೀ ಕೇಶವಾನಂದ ಭಾರತಿ ಖಟ್ಲೆಯಲ್ಲಿ ಪ್ರಶ್ನಿಸಿತ್ತು. ಈ ತೀರ್ಪು ಸಂವಿಧಾನದ 24ನೆಯ ತಿದ್ದುಪಡಿಗೆ ಸವಾಲು ಎಸೆದಿತ್ತು.

ಈ ತೀರ್ಪಿನಲ್ಲಿ ಸರಕಾರದ ವಿರುದ್ಧ ಮತ ನೀಡಿದ್ದ ನ್ಯಾಯಾಧೀಶರ ಸೇವಾ ಹಿರಿತನವನ್ನು ಇಂದಿರಾಗಾಂಧಿ ಸರಕಾರ ಕಡೆಗಣಿಸಿ ಸರಕಾರದ ಪರವಾಗಿ ಮತ ಹಾಕಿದ್ದ ನ್ಯಾಯಾಧೀಶ ಎ.ಎನ್. ರೇಯವರನ್ನು ಚೀಫ್ ಜಸ್ಟೀಸ್ ಆಗಿ ನೇಮಿಸಿತ್ತು. ಇದರ ವಿರುದ್ಧ ಪತ್ರಿಕೆಗಳು ಮತ್ತು ರಾಜಕೀಯ ವಿರೋಧಿಗಳು ಆಕ್ರೋಶ ತೋರಿಸಿದ್ದರು. ಈ ಆಕ್ರೋಶ ದೊಡ್ಡದಾಗಿ ಬೆಳೆದು ಇಂದಿರಾ ನೇತೃತ್ವದಲ್ಲಿ ಸರಕಾರದ ಸರ್ವಾಧಿಕಾರಿ ನೀತಿಗಳ ವಿರುದ್ಧ ಜಯಪ್ರಕಾಶ್ ನಾರಾಯಣ್ ಅವರ ದೇಶವ್ಯಾಪಿ ಆಂದೋಲನ ಆರಂಭವಾಗಿತ್ತು.

## ಸಂವಿಧಾನ ಕರಾಳ ಅಧ್ಯಾಯ ತುರ್ತು ಪರಿಸ್ಥಿತಿ!

'ಈ ವಿನೂತನ ಸಂವಿಧಾನದ ಅಳವಡಿಕೆಯಲ್ಲಿ ಏನಾದರೂ ಕೆಟ್ಟದಾದರೆ ಅದಕ್ಕೆ ಕಾರಣ ಇದು ಕೆಟ್ಟ ಸಂವಿಧಾನ ಎಂದಲ್ಲ, ಮನುಷ್ಯರ ದುಷ್ಟತನವೇ ಇದಕ್ಕೆ ಕಾರಣವಾಗುತ್ತದೆ' ಎಂದಿದ್ದರು ಅಂಬೇಡ್ಕರ್. ಭಾರತೀಯರಿಗೆ ಈ ಮಾತಿನ ದೃಷ್ಟಾಂತ ಸಿಕ್ಕಿದ್ದು 1975ರಲ್ಲಿ.

1971ರ ಲೋಕಸಭಾ ಚುನಾವಣೆಯಲ್ಲಿ ವಾರಣಾಸಿಯ ರಾಜಮನೆತನಕ್ಕೆ ಸೇರಿದ್ದ ರಾಜ್ ನಾರಾಯಣ್ ಇಂದಿರಾಗಾಂಧಿಯವರ ವಿರುದ್ಧ ರಾಯ್‌ಬರೇಲಿ ಕ್ಷೇತ್ರದಲ್ಲಿ ಕಣಕ್ಕಿಳಿದು ಸೋತಿದ್ದರು. ಈ ಚುನಾವಣೆಯಲ್ಲಿ ಮೋಸ ನಡೆದಿದೆ, ಇಂದಿರಾಗಾಂಧಿಯವರು ಚುನಾವಣಾ ಪ್ರಚಾರದಲ್ಲಿ ರಾಜ್ಯ ಸರಕಾರದ ಸಿಬ್ಬಂದಿಗಳನ್ನು ಮತ್ತು ಸವಲತ್ತುಗಳನ್ನು ಬಳಸಿದ್ದರು ಎಂದು ಆರೋಪಿಸಿ ರಾಜ್‌ನಾರಾಯಣ್ ಅಲಹಾಬಾದ್ ನ್ಯಾಯಾಲಯದಲ್ಲಿ ಖಟ್ಲೆ ಹೂಡಿದ್ದರು. ಇದರ ವಿಚಾರಣೆ 1975ರಲ್ಲಿ ನಡೆದಿತ್ತು.

ಸ್ವತಂತ್ರ ಭಾರತದ ಇತಿಹಾಸದಲ್ಲೇ ಮೊತ್ತಮೊದಲ ಬಾರಿಗೆ ಭಾರತದ ಪ್ರಧಾನಮಂತ್ರಿ ನ್ಯಾಯಾಲಯದ ಕಟಕಟೆಯಲ್ಲಿ ನಿಂತು ಐದು ಗಂಟೆಗಳ ಕಾಲ ವಕೀಲರ ಸವಾಲುಗಳಿಗೆ ಉತ್ತರಿಸಬೇಕಾಗಿ ಬಂದಿತ್ತು.

ಜೂನ್ 12ರಂದು ಅಲಹಾಬಾದ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಜಗಮೋಹನ್ ಲಾಲ್ ಸಿನ್ಹಾ ರಾಯ್‌ಬರೇಲಿ ಲೋಕಸಭಾ ಚುನಾವಣೆಯಲ್ಲಿ ಅವ್ಯವಹಾರ ನಡೆದಿದೆ, ಮೂಲಭೂತ ವಿಚಾರವನ್ನೇ ಅಳಿಸಿಹಾಕಿತ್ತು ಎಮರ್ಜೆನ್ಸಿ.

1975ರ ಜೂನ್ 25ರಂದು ಜಾರಿಗೆ ಬಂದ ತುರ್ತು ಪರಿಸ್ಥಿತಿ 21 ತಿಂಗಳ ಕಾಲ ಮುಂದುವರಿಯಿತು. 1977ರ ಮಾರ್ಚ್ 21ರಂದು ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸುವ ತನಕ ಇದು ಭಾರತದ ಸಂವಿಧಾನವನ್ನೇ ಒತ್ತೆಯಾಗಿರಿಸಿತ್ತು!

ಎಮರ್ಜೆನ್ಸಿಯ ನಡುವೆ ಭಾರತೀಯ. ಸಂವಿಧಾನದ ಮೂಲ ಸ್ವರೂಪವನ್ನೇ ಬದಲಾಯಿಸುವ ಹಲವು ತಿದ್ದುಪಡಿಗಳು ಜಾರಿಯಾದವು.

### ❖ 38ನೆಯ ತಿದ್ದುಪಡಿ, 1975:

ಸರಕಾರ 1975ರ ಆಗಸ್ಟ್‌ನಲ್ಲಿ ಈ ತಿದ್ದುಪಡಿಯ ಮೂಲಕ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಸುಗ್ರೀವಾಜ್ಞೆ ಹೊರಡಿಸುವ ಶಕ್ತಿಗಳನ್ನು ಹೆಚ್ಚಿಸಿತು.

### ❖ 39ನೆಯ ತಿದ್ದುಪಡಿ, 1975:

1975ರಲ್ಲಿ ಅಲಹಾಬಾದ್ ಹೈಕೋರ್ಟ್ ತೀರ್ಪಿನ ಕಾರಣದಿಂದ ಇಂದಿರಾಗಾಂಧಿಯವರ ಪಟ್ಟ ಅಭದ್ರವಾಗಿತ್ತು. ಈ ತೀರ್ಪನ್ನು ರದ್ದುಗೊಳಿಸುವ ಪ್ರಯತ್ನದಲ್ಲಿ ಇಂದಿರಾ ಸರಕಾರ 39ನೆಯ ತಿದ್ದುಪಡಿಯ ಮೂಲಕ ಪ್ರಧಾನಮಂತ್ರಿಯ ಹುದ್ದೆಯನ್ನು ನ್ಯಾಯಾಂಗದ ತನಿಖೆಯ ವ್ಯಾಪ್ತಿಯಿಂದ ಹೊರಗಿರಿಸಿತ್ತು. ಈ ತಿದ್ದುಪಡಿಯ ಪ್ರಕಾರ ಚುನಾವಣೆಯಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿರಲಿ, ದೇಶದ ರಾಷ್ಟ್ರಪತಿ, ಉಪರಾಷ್ಟ್ರಪತಿ, ಲೋಕಸಭೆಯ ಸ್ಪೀಕರ್ ಮತ್ತು ಪ್ರಧಾನಮಂತ್ರಿಯ ಹುದ್ದೆಯಲ್ಲಿರುವ ವ್ಯಕ್ತಿಗಳ ಮೇಲೆ ಯಾವುದೇ ಖಟ್ಲೆ ನಡೆಸುವಂತಿಲ್ಲ.

ಮುಂದೆ ಸುಪ್ರೀಂ ಕೋರ್ಟ್ ಈ ತಿದ್ದುಪಡಿ ಸಂವಿಧಾನದ ಮೂಲ ರೂಪದ ಉಲ್ಲಂಘನೆ ಎಂದು ಸಾರಿ ಇದರ ಕಲಂಗಳನ್ನು ರದ್ದುಪಡಿಸಿತು.

### ❖ 41ನೆಯ ತಿದ್ದುಪಡಿ, 1976:

316ನೆಯ ವಿಧಿಯಲ್ಲಿ ಬದಲಾವಣೆ ತಂದಿದ್ದ ಈ ತಿದ್ದುಪಡಿಯ ಮೂಲಕ 'ಜಾಯಿಂಟ್ ಪಬ್ಲಿಕ್ ಸರ್ವೀಸ್ ಕಮಿಷನ್' ಮತ್ತು 'ಸ್ಟೇಟ್ ಪಬ್ಲಿಕ್ ಸರ್ವೀಸ್ ಕಮಿಷನ್'ನ ಅಧ್ಯಕ್ಷರು ಮತ್ತು ಸದಸ್ಯರ ನಿವೃತ್ತಿಯ ವಯೋಮಾನವನ್ನು 60ರಿಂದ 62ಕ್ಕೆ ಏರಿಸಲಾಯಿತು.

ಪ್ರಧಾನಮಂತ್ರಿ, ರಾಜ್ಯಪಾಲ ಮತ್ತು ರಾಷ್ಟ್ರಪತಿಯವರು ಸೇವೆಯಿಂದ ನಿವೃತ್ತರಾದ ಬಳಿಕವೂ ಅವರ ಮೇಲೆ ಯಾವುದೇ ಖಟ್ಲೆ ಹೂಡುವಂತಿಲ್ಲ ಎಂದು ಈ ತಿದ್ದುಪಡಿ ನಿಗದಿಪಡಿಸಿತು. ಆದರೆ, ಮುಂದೆ ಸುಪ್ರೀಂ ಕೋರ್ಟ್ ಈ ತಿದ್ದುಪಡಿಗೆ ಕತ್ತರಿ ಹಾಕಿತು.

❖ **42ನೆಯ ತಿದ್ದುಪಡಿ, 1976:**

ತುರ್ತು ಪರಿಸ್ಥಿತಿಯ ಆರಂಭದಲ್ಲಿ ಇಂದಿರಾಗಾಂಧಿಯವರ ಸರಕಾರ ತಂದಿದ್ದ 42ನೆಯ ತಿದ್ದುಪಡಿ ಸಂವಿಧಾನದಲ್ಲಿ ವ್ಯಾಪಕ ಮಾರ್ಪಾಟುಗಳನ್ನು ತಂದಿತು. ಹೀಗಾಗಿ ಇದನ್ನು 'ಮಿನಿ ಸಂವಿಧಾನ' ಎಂದೇ ಕರೆಯಲಾಯಿತು.

ಭಾರತದ ಆಡಳಿತದಲ್ಲಿ ಐತಿಹಾಸಿಕ ಬದಲಾವಣೆಗಳನ್ನು ತಂದಿದ್ದ ತಿದ್ದುಪಡಿ ಇದಾಗಿತ್ತು. ಈ ತಿದ್ದುಪಡಿಯಲ್ಲಿ ಸಂವಿಧಾನದ 41 ವಿಧಿಗಳನ್ನು ಬದಲಾಯಿಸಲಾಗಿತ್ತು, 13 ವಿಧಿಗಳನ್ನು ಹೊಸದಾಗಿ ಸೇರಿಸಲಾಗಿತ್ತು. ಏಳನೆಯ ಅನುಚ್ಛೇದವನ್ನೇ ಬದಲಾಯಿಸಲಾಗಿತ್ತು.

ಭಾರತೀಯ ಸಂವಿಧಾನದ ಪೀಠಿಕೆಯಲ್ಲಿ ಸೋಷಯಲಿಸ್ಟ್ (ಸಮಾಜವಾದಿ) ಮತ್ತು ಸೆಕ್ಯೂಲರ್ (ಜಾತ್ಯತೀತ) ಎಂಬ ಶಬ್ದಗಳನ್ನು ಸೇರಿಸಿದ್ದು ಈ ತಿದ್ದುಪಡಿಯ ಒಂದು ಅಂಶವಾಗಿತ್ತು.

ಈ ತಿದ್ದುಪಡಿಯ ಮೂಲಕ ನ್ಯಾಯಾಂಗದ ಶಕ್ತಿಯನ್ನು ಕಡಿತಗೊಳಿಸಿ ಕೇಂದ್ರ ಸರಕಾರದ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಲಾಯಿತು.

ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸಿದ್ದು ಮಾತ್ರವೇ ಅಲ್ಲ, ಈ ತಿದ್ದುಪಡಿ ಪ್ರಜೆಗಳ ಮೂಲಭೂತ ಕರ್ತವ್ಯಗಳನ್ನು ಕೂಡ ನಿಗದಿಪಡಿಸಿತು. ಇಷ್ಟೇ ಅಲ್ಲದೆ, ಸಂವಿಧಾನ ತಿದ್ದುಪಡಿಯ ಮೇಲೆ ನ್ಯಾಯಾಂಗದ ಪರಿಶೀಲನೆಯ ಹಕ್ಕುಗಳನ್ನು ಕಡಿತಗೊಳಿಸಿತು.

❖ **43ನೆಯ ತಿದ್ದುಪಡಿ, 1978 :** ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಜರ್ಝರಿತವಾಗಿದ್ದ ಭಾರತದ ಸಂವಿಧಾನಕ್ಕೆ ಕಾಯಕಲ್ಪ ಸಿಕ್ಕಿದ್ದು 1977ರ ಚುನಾವಣೆಯ ಬಳಿಕ.

42ನೆಯ ತಿದ್ದುಪಡಿಯ ಮೂಲಕ ಜಾರಿಗೆ ಬಂದಿದ್ದ ಸ್ವಾತಂತ್ರ್ಯ ವಿರೋಧಿ ನಿಯಮಗಳನ್ನು 1978ರಲ್ಲಿ ತುರ್ತು ಪರಿಸ್ಥಿತಿಯ ಅವಧಿ ಮುಗಿದು ಅಧಿಕಾರಕ್ಕೆ ಬಂದಿದ್ದ ಮೊರಾರ್ಜಿ ದೇಸಾಯಿ ಸರಕಾರ 43ನೆಯ ಮತ್ತು 44ನೆಯ ತಿದ್ದುಪಡಿಗಳ ಮೂಲಕ ಅಳಿಸಿಹಾಕಿತ್ತು.

❖ **52ನೆಯ ತಿದ್ದುಪಡಿ, 1985 :**

ಈ ತಿದ್ದುಪಡಿ ಪಕ್ಷಾಂತರ ವಿರೋಧಿ ಮಸೂದೆ ಎಂದು ಪ್ರಸಿದ್ಧವಾಗಿದೆ. ಇದರ ಪ್ರಕಾರ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ನೆಗೆಯುವ ಚುನಾಯಿತ ರಾಜಕಾರಣಿಯನ್ನು ಲೋಕಸಭೆ ಅಥವಾ ವಿಧಾನಸಭೆಯಿಂದ ಉಚ್ಚಾಟಿಸಬಹುದು.

❖ **61ನೆಯ ತಿದ್ದುಪಡಿ, 1989 :**

ಭಾರತದ ಮತದಾರರ ಕನಿಷ್ಠ ವಯೋಮಿತಿಯನ್ನು 21ರಿಂದ 18ಕ್ಕೆ ಇಳಿಸಿತು ಈ ತಿದ್ದುಪಡಿ.

❖ **71ನೆಯ ತಿದ್ದುಪಡಿ, 1992:**

ಈ ತಿದ್ದುಪಡಿಯ ಮೂಲಕ ಕೊಂಕಣಿ, ಮಣಿಪುರಿ ಮತ್ತು ನೇಪಾಳಿ ಭಾಷೆಗಳಿಗೆ ಭಾರತದ ಸಂವಿಧಾನದಲ್ಲಿ ಅಧಿಕೃತ ಭಾಷೆಯ ಸ್ಥಾನ ಮಾನ ಸಿಕ್ಕಿತು.

### ❖ 73 ಮತ್ತು 74ನೆಯ ತಿದ್ದುಪಡಿ, 1992:

ಪ್ರಜಾಪ್ರಭುತ್ವದ ಬೇರುಗಳನ್ನು ಬಲಪಡಿಸಲು ಈ ತಿದ್ದುಪಡಿಯನ್ನು ತರಲಾಯಿತು. ಇದರಲ್ಲಿ ಸ್ಥಳೀಯ ಚುನಾಯಿತ ಮಂಡಳಿಗಳಿಗೆ ಮತ್ತು ಪಂಚಾಯತ್ ರಾಜ್‌ನ ಸಮಿತಿಗಳಿಗೆ ಸಾಂವಿಧಾನಿಕ ಅಂತಸ್ತನ್ನು ನೀಡಲಾಯಿತು. ಅಧಿಕಾರದ ವಿಕೇಂದ್ರೀಕರಣ ಮಾಡಲು ಮತ್ತು ಸ್ಥಳೀಯ ಆಡಳಿತಗಳಲ್ಲಿ ಜನರನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿಸಲು ಈ ತಿದ್ದುಪಡಿಯನ್ನು ತರಲಾಯಿತು.

## ಇತ್ತೀಚಿನ ತಿದ್ದುಪಡಿಗಳು

### ❖ 100ನೆಯ ತಿದ್ದುಪಡಿ, 2015:

ಸಂವಿಧಾನದ 100ನೆಯ ತಿದ್ದುಪಡಿ ಭಾರತದ ಸಂವಿಧಾನದ ಪ್ರಪ್ರಥಮ ಅನುಚ್ಛೇದದಲ್ಲಿ ಬದಲಾವಣೆ ತಂದಿತ್ತು. ಈ ತಿದ್ದುಪಡಿಯ ಕಾರಣದಿಂದ ಬಾಂಗ್ಲಾದೇಶ ಮತ್ತು ಭಾರತದ ನಡುವೆ ಪರಸ್ಪರ ಇರುವ 162 ಆವೃತ ಪ್ರದೇಶಗಳ ವಿನಿಮಯ ನಡೆದಿತ್ತು. 1974ರಲ್ಲಿ ಬಾಂಗ್ಲಾದೇಶ ಮತ್ತು ಭಾರತದ ನಡುವೆ ನಡೆದಿದ್ದ ಭೂ ಒಪ್ಪ[ಂದದ(ಲ್ಯಾಂಡ್ ಬೌಂಡರಿ ಎಗ್ರಿಮೆಂಟ್) ಆಧಾರದಲ್ಲಿ ಈ ವಿನಿಮಯ ನಡೆದಿತ್ತು.

### ❖ 101ನೆಯ ತಿದ್ದುಪಡಿ, 2016:

ಭಾರತದಲ್ಲಿ ಜಿಎಸ್‌ಟಿ ಎಂಬ ತೆರಿಗೆಯ ನಿಯಮಾವಳಿಯನ್ನು ತಂದ ತಿದ್ದುಪಡಿ ಇದು. ಈ ತಿದ್ದುಪಡಿಯಲ್ಲಿ ಭಾರತದ ಸಂವಿಧಾನದ ಆರನೆಯ ಮತ್ತು ಏಳನೆಯ ಅನುಚ್ಛೇದಗಳಲ್ಲಿ ವ್ಯಾಪಕ ಬದಲಾವಣೆಗಳನ್ನು ತರಲಾಯಿತು.

ಈ ತಿದ್ದುಪಡಿಯ ಮೂಲಕ ಭಾರತ ಸರಕಾರ 'ಗೂಡ್ಸ್ ಅಂಡ್ ಸರ್ವೀಸಸ್' (ಸರಕು ಮತ್ತು ಸೇವೆ) ಕಾಯ್ದೆಯನ್ನು ಜಾರಿಗೆ ತಂದಿತು. ಇದರ ಪ್ರಕಾರ ಭಾರತಾದ್ಯಂತ ಎಲ್ಲ ತೆರಿಗೆಗಳನ್ನು ಒಂದೇ ಛತ್ರದ ಕೆಳಗೆ ತರಲಾಯಿತು. ಇದರ ಫಲವಾಗಿ ಭಾರತದ ಸಂವಿಧಾನದಲ್ಲಿ ತೆರಿಗೆ ಸಂಬಂಧಿತ ಹಳೆಯ ವಿಧಿಗಳನ್ನು ರದ್ದುಪಡಿಸಿ ಹೊಸದಾಗಿ 246ಎ, 269ಎ ಮತ್ತು 279ಎ ಎಂಬ ನೂತನ ವಿಧಿಗಳನ್ನು ಅಳವಡಿಸಲಾಯಿತು. ಈ ತಿದ್ದುಪಡಿಯ ಬಳಿಕ ಜಿಎಸ್‌ಟಿ ಕೌನ್ಸಿಲ್ ಸ್ಥಾಪನೆಯಾಯಿತು.

### ❖ 102ನೆಯ ತಿದ್ದುಪಡಿ, 2016:

ಸಂವಿಧಾನದ 338 ಮತ್ತು 366ರ ವಿಧಿಗಳನ್ನು ಬದಲಾಯಿಸಿದ್ದ ಈ ತಿದ್ದುಪಡಿಯಲ್ಲಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಮಿತಿ (ಎನ್‌ಸಿಬಿಸಿ – 'ನ್ಯಾಷನಲ್ ಕಮಿಷನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್')ಗೆ ಸಾಂವಿಧಾನಿಕ ಸ್ಥಾನ–ಮಾನ ನೀಡಲಾಯಿತು.

### ❖ 103ನೆಯ ತಿದ್ದುಪಡಿ, 2018:

ಈ ತಿದ್ದುಪಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10 ಮೀಸಲಾತಿ ನೀಡಲಾಯಿತು. ಇದಕ್ಕಾಗಿ ಸಂವಿಧಾನದ 15 ಮತ್ತು 16ನೆಯ ವಿಧಿಗಳನ್ನು ಬದಲಾಯಿಸಲಾಯಿತು.

### ❖ 104ನೆಯ ತಿದ್ದುಪಡಿ, 2020:

ಈ ತಿದ್ದುಪಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿಯನ್ನು ಮುಂದುವರಿಸಲಾಯಿತು. ಸಂಸತ್ತಿನಲ್ಲಿ 'ಆಂಗ್ಲೋ ಇಂಡಿಯನ್' ಸಮುದಾಯಕ್ಕೆ ನೀಡಲಾಗಿದ್ದ ಮೀಸಲಾತಿಯನ್ನು ಈ ತಿದ್ದುಪಡಿಯ ಮೂಲಕ ತೆಗೆದುಹಾಕಲಾಯಿತು.

### ❖ 105ನೆಯ ತಿದ್ದುಪಡಿ, 2021:

ಈ ತಿದ್ದುಪಡಿ ರಾಜ್ಯಗಳಿಗೆ ತಮ್ಮದೇ ಓಬಿಸಿ(ಅದರ್ ಬ್ಯಾಕ್‌ವರ್ಡ್ ಕ್ಲಾಸಸ್)ಯಾದಿಯನ್ನು ತಯಾರಿಸುವ ಮತ್ತು ಬದಲಾಯಿಸುವ ಹಕ್ಕನ್ನು ನೀಡಿತು. ಈ ತಿದ್ದುಪಡಿಯ ಬಲದಿಂದ ರಾಜ್ಯಗಳು ತಮ್ಮಲ್ಲಿನ ಯಾವುದೇ ಸಮುದಾಯವನ್ನು ಹಿಂದುಳಿದ ವರ್ಗಗಳ ಮೀಸಲಾತಿಗಾಗಿ ಸೇರಿಸಿಕೊಳ್ಳಬಹುದು.

## ಸುದೃಢ, ಚಿರಾಯು ಸಂವಿಧಾನ

ಜಗತ್ತಿನ ಅತ್ಯಂತ ದೀರ್ಘ ಮತ್ತು ಬೃಹತ್ ಸಂವಿಧಾನ ಎಂಬ ಕೀರ್ತಿ ಭಾರತದ ಸಂವಿಧಾನಕ್ಕೆ ಸಲ್ಲುತ್ತದೆ. ಇದರ ಜೊತೆಗೇ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಬಾರಿ ತಿದ್ದುಪಡಿಯಾಗಿರುವ ಸಂವಿಧಾನ ಕೂಡ ಇದಾಗಿದೆ.

ಇದಕ್ಕೆ ಕಾರಣ ಇಲ್ಲದಿಲ್ಲ. ಭಾರತದ ಸಂವಿಧಾನ ಒಂದು ಜೀವಂತ ಸಂವಿಧಾನ. ಇದರಲ್ಲಿ ಬೆಳವಣಿಗೆಗೆ ಸದಾ ಅವಕಾಶ ಇರುತ್ತದೆ. ಇದಕ್ಕೇ ಈ ಸಂವಿಧಾನ ಕಾಲದ ಅಗತ್ಯಕ್ಕೆ ತಕ್ಕಂತೆ ತಿದ್ದುಪಡಿ ಕಾಣುತ್ತದೆ.

ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಕಳೆದ ಶತಮಾನದ ನಡುವೆ ಹಲವು ಬಾರಿ ಸಂವಿಧಾನಗಳೇ ಪೂರ್ತಿ ಬದಲಾಗಿವೆ, ಉಚ್ಚಾಟನೆಯಾಗಿವೆ. ನಮ್ಮ ನೆರೆಹೊರೆಯ ದೇಶಗಳಲ್ಲಿ ಸಾಮಾಜಿಕ ಕ್ರಾಂತಿ, ಮಿಲಿಟರಿ ಅಧಿಕಾರಗಳ ಕಾರಣದಿಂದ ಸಂವಿಧಾನಗಳನ್ನು ಕಿತ್ತೊಗೆದು, ಹೊಸ ಅಧಿಕಾರವರ್ಗಕ್ಕೆ ತಕ್ಕಂತೆ ವಿನೂತನ ಸಂವಿಧಾನಗಳನ್ನು ಬರೆಯಲಾಗಿದೆ. ಕೇವಲ 53 ವರ್ಷಗಳ ಹಿಂದೆ ಹುಟ್ಟಿಕೊಂಡಿದ್ದ ಬಾಂಗ್ಲಾ ದೇಶ ಇದೀಗ ಹೊಸ ಸಂವಿಧಾನ ರಚಿಸಲು ಮುಂದಾಗಿದೆ. ಭಾರತದ ಜೊತೆಗೇ ಹುಟ್ಟಿಕೊಂಡಿದ್ದ ಪಾಕಿಸ್ತಾನ ಸಂವಿಧಾನ ರಚಿಸಲು 25 ವರ್ಷ ತೆಗೆದುಕೊಂಡಿತು. ಅಲ್ಲಿ ಕಾಲಕಾಲಕ್ಕೆ ಅಧಿಕಾರ ಕೈಗೆತ್ತಿಕೊಳ್ಳುವ ಮಿಲಿಟರಿ ಸರಕಾರಗಳು ತಮ್ಮವೇ ಸಂವಿಧಾನ ಬರೆಯಲು ಆರಂಭಿಸುತ್ತವೆ.

ಇದಕ್ಕೆ ವಿರುದ್ಧವಾಗಿ ಸಾಕಷ್ಟು ತಿದ್ದುಪಡಿ, ಮಾರ್ಪಾಟುಗಳ ನಡುವೆಯೂ ಭಾರತೀಯ ಸಂವಿಧಾನ ಸುಭದ್ರವಾಗಿ ಉಳಿದುಕೊಂಡಿದೆ. ಇದು ಕಾಲದ ಬದಲಾವಣೆಗಳಿಗೆ ಸ್ಪಂದಿಸುವ ಕಾರಣವೇ ಸುಸ್ಥಿರ, ಸದೃಢವಾಗಿದೆ.

‘ಸಂವಿಧಾನ ಯಾವ ಸಂದರ್ಭದಲ್ಲೂ ಕಾರ್ಯಸಾಧ್ಯವಾಗಿರುತ್ತದೆ, ಅದು ಬದಲಾವಣೆಗೆ ಹೊಂದಿಕೊಳ್ಳುತ್ತದೆ. ಶಾಂತಿ ಕಾಲದಲ್ಲೂ ಸರಿ, ಯುದ್ಧ ಕಾಲದಲ್ಲೂ ಸರಿ, ದೇಶವನ್ನು ಒಂದಾಗಿ ಹಿಡಿದಿಟ್ಟುಕೊಳ್ಳಲು ಶಕ್ತಿಶಾಲಿಯಾಗಿರುತ್ತದೆ’ ಎಂದಿದ್ದರು ಡಾ। ಬಿ.ಆರ್.ಅಂಬೇಡ್ಕರ್. ಅವರ ಮಾತುಗಳನ್ನು ಸ್ವತಂತ್ರ ಭಾರತದ ಇತಿಹಾಸದುದ್ದಕ್ಕೂ ಮತ್ತೆ ಮತ್ತೆ ಪ್ರಮಾಣೀಕರಿಸಿದೆ ಸಶಕ್ತ, ಸುಭದ್ರ ಭಾರತ ಸಂವಿಧಾನ.

## ಭಾರತದ ಮೌಲ್ಯಗಳ ಶ್ರೀಮಂತ ಸಂವಿಧಾನ

ಭಾರತದ ಸಂವಿಧಾನದ ರಚನಾಕಾರರು ಬ್ರಿಟಿಷ್ ಕಾಲದ ಕಾಯ್ದೆ–ಕಾನೂನುಗಳನ್ನು ಮಾತ್ರವಲ್ಲದೆ, ಜಗತ್ತಿನ ಹಲವು ದೇಶಗಳ ಸಂವಿಧಾನದ ಅಧ್ಯಯನ ಮಾಡಿ ಅವುಗಳ ಉತ್ತಮ ಅಂಶಗಳಿಂದ ಪ್ರೇರಣೆ ಪಡೆದಿದ್ದರು. ಈ ಸಂವಿಧಾನಗಳ ಇತಿಹಾಸ ಪ್ರಮಾಣಿತ ವ್ಯಾವಹಾರಿಕತೆಯ ಜೊತೆಗೆ ಭಾರತೀಯತ್ವ ಮತ್ತು ಭಾರತೀಯ ಪರಂಪರೆಯ ಮೌಲ್ಯಗಳು ಸೇರಿಕೊಂಡು ಭಾರತದ ಸಂವಿಧಾನ ಶ್ರೀಮಂತವಾಗಿತ್ತು.

1935ರಲ್ಲಿ ರಚನೆಯಾಗಿದ್ದ 'ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್‌ನಿಂದ ಸಂಯುಕ್ತ ರಾಷ್ಟ್ರದ ಸಿದ್ಧಾಂತವನ್ನು ಸ್ವೀಕರಿಸಲಾಗಿತ್ತು. ರಾಜ್ಯಗಳಿಗೆ ರಾಜ್ಯಪಾಲರ ನೇಮಕಾತಿ, ನ್ಯಾಯಾಂಗದ ರಚನೆ, ಲೋಕಸೇವಾ/ಸಾರ್ವಜನಿಕ ಸೇವಾ ಆಯೋಗ (ಪಬ್ಲಿಕ್ ಸರ್ವೀಸ್ ಕಮಿಷನ್), ತುರ್ತು ಪರಿಸ್ಥಿತಿಯ ನಿಯಮಗಳು, ಆಡಳಿತದ ಸ್ಥೂಲ ನಿಯಮಾವಳಿಗಳನ್ನು ಈ ಕಾಯ್ದೆಯಿಂದ ಬಳುವಳಿಯಾಗಿ ಪಡೆಯಲಾಗಿತ್ತು.

ರಾಜ್ಯ ಮತ್ತು ಒಕ್ಕೂಟ ಸರಕಾರ ಎರಡಕ್ಕೂ ಅಧಿಕಾರ ನೀಡಿರುವ ವಿಷಯಗಳ ಏಕಕಾಲಿಕ ಪಟ್ಟಿ, ವಾಣಿಜ್ಯದ ಸ್ವಾತಂತ್ರ್ಯ, ರಾಜ್ಯಸಭೆ ಮತ್ತು ಲೋಕಸಭೆಗಳ ಜಂಟಿ ಅಧಿವೇಶನದ ನಿಯಮಾವಳಿಗಳು ಆಸ್ಟ್ರೇಲಿಯಾದ ಸಂವಿಧಾನದಿಂದ ಸ್ವೀಕೃತವಾದವು

ಸಶಕ್ತ ಒಕ್ಕೂಟ ಸರಕಾರ, ಕೇಂದ್ರ ಸರಕಾರಕ್ಕೆ ರಾಜ್ಯಪಾಲರನ್ನು ನೇಮಿಸುವ ಅಧಿಕಾರ ಈ ಅಂಶಗಳನ್ನು ಕೆನಡಾದ ಸಂವಿಧಾನದಿಂದ ಸ್ವೀಕರಿಸಲಾಗಿತ್ತು. ರಾಜ್ಯಸಭೆಗೆ ಸದಸ್ಯರ ನೇಮಕಾತಿ, ದೇಶದ ಅಧ್ಯಕ್ಷರ ಆಯ್ಕೆಯ ವಿಧಿ ವಿಧಾನಗಳನ್ನು ಐರ್ಲೆಂಡ್‌ನ ಸಂವಿಧಾನದಿಂದ ಸ್ವೀಕರಿಸಲಾಗಿತ್ತು.

ಪಾರ್ಲಿಮೆಂಟ್ ಸರಕಾರ, ಕಾನೂನಿನ ಅಧಿಕಾರ, ಕ್ಯಾಬಿನೆಟ್ ಪದ್ಧತಿ ಇತ್ಯಾದಿ ವಿಚಾರಗಳನ್ನು ಯುನೈಟೆಡ್ ಕಿಂಗ್‌ಡಮ್ ಸಂವಿಧಾನದಿಂದ ಸ್ವೀಕರಿಸಲಾಗಿತ್ತು.

ಸಂವಿಧಾನದ ಪೀಠಿಕೆಯಲ್ಲಿ ಬರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯದ ಧ್ಯೇಯಗಳು ಸೋವಿಯೆತ್ ರಷ್ಯಾದ ಸಂವಿಧಾನದಿಂದ ಬಂದಿದ್ದವು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ವಿಚಾರಗಳು ಫ್ರಾನ್ಸ್‌ನ ಸಂವಿಧಾನದಿಂದ ಬಂದಿದ್ದವು.

ಜನತೆಯ ಮೂಲಭೂತ ಹಕ್ಕುಗಳು, ನ್ಯಾಯಾಂಗದ ಸ್ವಾತಂತ್ರ್ಯ, ಉಪಾಧ್ಯಕ್ಷ ಪದವಿ ಇತ್ಯಾದಿ ಅಂಶಗಳನ್ನು ಅಮೆರಿಕಾ ಸಂವಿಧಾನದಿಂದ ಬಳುವಳಿಯಾಗಿ ಪಡೆಯಲಾಗಿತ್ತು.

ಸಂವಿಧಾನದ ತಿದ್ದುಪಡಿಯ ಕಾರ್ಯಾಚರಣೆ, ರಾಜ್ಯಸಭೆಗೆ ಸದಸ್ಯರ ಆಯ್ಕೆಯ ಕಾರ್ಯವಿಧಾನವನ್ನು ದಕ್ಷಿಣ ಆಫ್ರಿಕಾದ ಸಂವಿಧಾನದಿಂದ ಪಡೆಯಲಾಗಿತ್ತು.

ತುರ್ತುಪರಿಸ್ಥಿತಿಯಲ್ಲಿ ಸಾರ್ವಜನಿಕರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ನಿಯಮಾವಳಿಯನ್ನು ಜರ್ಮನಿಯ ಸಂವಿಧಾನದಿಂದ ಎರವಲು ಪಡೆಯಲಾಗಿತ್ತು!

ಭಾರತದ ಸಂವಿಧಾನದಲ್ಲಿ ಇವೆಲ್ಲ ವಿಚಾರಗಳನ್ನು ಭಾರತೀಯತ್ವಕ್ಕೆ ಹೊಂದುವಂತೆ ಪರಿಷ್ಕರಿಸಿ ಬಳಸಲಾಗಿತ್ತು. ಹೀಗಾಗಿ ಭಾರತದ ಸಂವಿಧಾನ ಜಗತ್ತಿನಲ್ಲೇ ಅತ್ಯಂತ ಸವಿವರ, ಸಂಪೂರ್ಣ ಮತ್ತು ಶ್ರೀಮಂತ ಸಂವಿಧಾನವಾಗಿದೆ.

**ಆಧಾರ:**ತರಂಗ, ದಿನಾಂಕ:30.01.2025

## 3. Navigating the Al career landscape

As technology advances at a A breathtaking pace, Artificial Intelligence (AI) has positioned itself as a pivotal force, revolutionising how we live, work, and winteract with the world around us. Predictions reveal that by 2027, the global Al market is expected to escalate to a staggering 407 billion, indicating a future ripe with growth and possibilities. For students eyeing the global stage, embarking on a career

in Al opens myriad opportunities and offers a chance to lead in the wave of technological progress.

The narrative surrounding Al often veers towards the apprehension of job displacement, with fears of machines edging out human roles. Yet, a closer look at the statistics presents a different.story.

A report by the World Economic Forum projects a nuanced future. While Almay lead to the phasing out of 85 million jobs by 2025, it simultaneously paves the way for creating 97 million new roles across varied sectors. This forecast not only alleviates fears but alsohigh lights the dynamic nature of Al in generating new job landscapes.

Career opportunities in Al are flourishing both in India andabroad. In India, with its burgeoning tech and fintech industry and strong emphasis on digital innovation, graduatescan find ample opportunities in leading IT firms, thriving startups, leading banks and other financial services institutions, and research institutions focused on Aland machine learning (ML). Roles such as Al developers, data analysts, and Al system designers are in high demand, reflecting the nation's push towards becoming a digital powerhouse.

Internationally, opportunities expand with tech giants, innovative startups, and prestigious universities in countries like the USA, Canada, the UK, and Germany, which are actively seeking Al professionals. These roles range from research scientists and Al engineers to specialists in niche areas of Al, such as natural language processing and computer vision.

The global demand for Al expertise means students with the right skills and knowledge can look forward to dynamic career paths, contributing to cutting-edge advancements and solving complex challenges worldwide, Here are some essential guidelines for students aspiring to build a global career in AL.

Al encompasses creating computer systems that perform tasks requiring human intelli gence, suchas learning, decision making, and problem solving. Al is divided into narrow Al, aimed at specific tasks like facial recognition, and general Al, with capabilities spanningarny intellectual task a human can perform. It is being applied across various sectors, transforming operations and spurring innovation.

For instance, in healthcare, Al advances diagnostics and patient care, in finance, it is used for lending, trading and fraud detec tion, in manufacturing, it enhances production and design; agriculture benefits from Al in crop monitoring and

automation, the automotive industry sees applications in self driving technology, and in education, Al offers personalised learning and automates administrative tasks.

The future of Al is poised to unleash transformative changes across multiple fields, heralding innovations such as Al-driven personalized healthcare, which utilizes ge netic, environmental, and lifestyle data for advanced predictive medicine. Integrating Al with quantum.computing, known as Quannum Al, promises to significantly enhance processing power, enabling breakthroughs in cryptography to climate modelling.

Al's role in environmental conservation is also expanding, with its data analysis prowess improving climate prediction and species monitoring efforts. Research into a Al powered neural interfaces is underway to elevate the interaction between humans and computers.

The development of self driving vehicles seeks to redefine urban mobility, offering safer and more efficient Al guided transportation solutions. About 10% of vehicles are expected to be self driving by 2030 as the market for these continues to grow. In space exploration, Al-equipped NASA rovers demonstrate the potential for autonomous extraterrestrial research.

A deep understanding of computer science, mathematics, and statistics lays the ground work for a successful career in AI. Beyond the traditional BE and BTech degrees, many prestigious universities across India now offer specialized BSc degrees in Al and data science. Institutions such as the Indian Institutes of Technology (IITs) and National Institutes of Technology (NITs) are at the forefront, offering robust programmes designed to equip students with the necessary skills and knowledge to excel in AL.

Pursuing a Master's or PhDin Alor closely related fields can open doors to advanced research and career opportunities. Indian universities now offer world class PG courses in Aland data science. For students looking beyond India's borders, universities in the USA, Canada, UK, and Germany, such as MIT, Stanford, University of Toronto, and Imperial College London, are the most sought-after destinations. Many Indian and foreign institutions offer scholarships and assistantships, making advanced studies more accessible.

In addition to formal education, online learning platforms like Coursera, UnStop, Unacademy, edX, and Udacity offer courses designed by leading universities and technology companies, adding a significant edge to your resume.

Al is a vast field with several specialisations, such as machine learning, deep learning, computer vision, natural language processing, and robotics. Each area has its challenges and requires a unique skill set. After gaining a foundational understanding, explore these areas through projects, online courses, and research to find which aligns with your passion and career goals.

Staying updated with the latest in Al by reading research papers and journals and engaging with platforms like arXiv and Medium enriches your understanding and keeps you at the forefront of technological advancements.

However, theoretical knowledge alone is insufficient, gaining practical experience through internships, personal projects, contributions to open source Al projects, and participation in competitions and hackathons is crucial. Forthose inclined towards academia, getting involved in research ear nearly, seeking research assistantships, collaborating with professors, and publishing papers are vital steps to advancing the career and profile.

Join Al related professional organisations such as the Association for the Advancement of Artificial Intelligence (AAAI) or the Insti-tute of Electrical and Electronics Engineers (IEEE), which offer networking opportunities and conference access. Leverage platforms like LinkedIn to connect with industry professionals.

Al and ML groups on Reddit, GitHub, and other forums help you stay updated with the latest in the field. Attend international conferences such as Neur IPS, ICML, and CVPR to network with professionals, learn about ongoingresearch, and explore job opportunities.

To excel in a global Al career, embracing the diversity of the international environment is key, including understanding and adapting to various cultures for effective collaboration.

Ethical considerations take centrestage as Al's impact on life widens, making understanding and advocating for responsible Al practices crucial. While English dominates the global tech scene, learning additional languages can offer advantages, particularly for roles targeting specific regions.

The future of Al hinges not just on technological advancements but on their innovative and ethical application worldwide. Embracing this journey positions you to shape the future of Al potentially.

**Author:**Naganagouda S J

**Courtesy**: Deccan Herald, date:25.03.2025

## 4. ಜನಪ್ರತಿನಿಧಿಗಳೆಂದರೆ ಹೀಗಿರಬೇಕು

ಜನಪ್ರತಿನಿಧಿಗಳೇ ಜನತಂತ್ರ ಪದ್ಧತಿಯ ಕಳಸ: ಈ ಪ್ರತಿನಿಧಿಗಳ ವರ್ತನೆ ಕಳಸದ ಕೀರ್ತಿಯೂ ಆಗಬಹುದು ಇಲ್ಲವೇ ಅಪಕೀರ್ತಿಯೂ ಅಂಟಿಕೊಳ್ಳಬಹುದು. ಏಕೆಂದರೆ, ಮುಂದಿನ ದಾರಿ ಕಾಣದ ಜನಸಮೂಹಕ್ಕೆ ಬೆಳಕು ತೋರುವವರೇ ಪ್ರತಿನಿಧಿಗಳು, ಹೀಗಾಗಿ ಪ್ರತಿನಿಧಿಗಳ ಜವಾಬ್ದಾರಿ ಹಾಗೂ ಕರ್ತವ್ಯ ಯಾವತ್ತಿಗೂ ನಿರ್ಣಾಯಕ, ಇನ್ನು ಚುನಾಯಿತ ಪ್ರತಿನಿಧಿಗಳಾದರಂತೂ ಸರಿಯೇ ಸರಿ. ಜನಸಮೂಹ ಒಪ್ಪಿಸುವ ಇಲ್ಲವೇ ಮೆಚ್ಚಿಸುವ ರೀತಿಯಲ್ಲಿ ಜನಪ್ರತಿನಿಧಿ ಕೆಲಸ ಮಾಡಲು ಹೋಗಬಾರದು. ಸಮಾಜದ ಕಷ್ಟಕೋಟಲೆಗಳ ಅರಿತು ವ್ಯಕ್ತಿಗತ ಸಂಕಟಗಳ ಬದಲು ಸಾಮೂಹಿಕ ಸಂಕಟಗಳನ್ನು ಗುರುತಿಸಿ ಅದೇ ನೆಲೆಯಲ್ಲಿಯೇ ಪರಿಹಾರ ಕ್ರಮ ರೂಪಿಸಲು ಹೆಜ್ಜೆ ಹಾಕುವುದು ನಿಜವಾದ ಅರ್ಥದಲ್ಲಿ ಜನಪ್ರತಿನಿಧಿಯ ಕರ್ತವ್ಯ ಬದಲಾದ ದಿನಮಾನದಲ್ಲಿ ಸಾಮೂಹಿಕ ಸಂಕಟಗಳನ್ನು ಬದಿಗೊತ್ತಿ ವ್ಯಕ್ತಿಗತ ಸಂಕಟಗಳ ನಿವಾರಣೆ ಕಡೆ ಗಮನಹರಿಸಲು ಮುಂದಾಗಿರುವುದೇ ಈಗಿನ ಜನತಂತ್ರ ಪದ್ಧತಿಗೆ ಅಂಟುತ್ತಿರುವ ಮೂಲವ್ಯಾಧಿ.

ಇದು ಕೇವಲ ಭಾರತದ ಅಥವಾ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರುವ ಕಥಾನಕವಲ್ಲ. ವಿಶ್ವದೆಲ್ಲೆಡೆ ಚಾಲ್ತಿಯಲ್ಲಿರುವ ಒಂದು ರೀತಿ ನೀತಿ. ಸೇವಾ ನಿಷ್ಠೆಯ ದಾರಿಯಲ್ಲಿ ಸಾಗಿ ಪ್ರತಿನಿಧಿಯಾಗುವುದು ಒಂದು ಕಾಲದ ಪವಿತ್ರ ಮಂತ್ರವಾಗಿತ್ತು. ಆದರೆ, ಈಗ ವ್ಯಕ್ತಿಗತ ಹಮ್ಮುಬಿಮ್ಮಿನ ನಿಷ್ಠೆಯ ದಾರಿಯಲ್ಲಿ ಸಾಗಿ ಪ್ರತಿನಿಧಿಯಾಗುವುದು ಈಗಿನ ತಂತ್ರ ವಸ್ತುಸ್ಥಿತಿ ಹೀಗಿರುವಾಗ ರಾಜಕಾರಣದ ಗುಣಮಟ್ಟದ ಇಳಿಮುಖಕ್ಕೆ ಕಾರಣವಾಗುತ್ತಿರುವ ಈ ಬೆಳವಣಿಗೆಗೆ ತಡೆಯೊಡ್ಡಿ ಹೊಸ ಪರಂಪರೆ ಸೃಷ್ಟಿಗೆ ಮುಂದಾಗುವುದು ಸಮಾಜದ ಕೈಯ್ಯಲ್ಲೇ ಇದೆ. ಎಂಬುದು ಒಂದು ಲೋಕದ ಮಾತು. ಏಕೆಂದರೆ, ಸಮಾಜ ಯಾವತ್ತಿಗೂ ಕೂಡಾ ನಾಯಕನ ಮೂಲಕ ನಡೆಯುವ ಒಂದು ವ್ಯವಸ್ಥೆ, ಸಮಾಜವೇ ಇದರ ಸುಧಾರಣೆ ಮಾಡಬೇಕಾದರೆ ಸಮಾಜದ ನಾಯಕತ್ವ ವಹಿಸಿಕೊಂಡವರು ಇದರ ನಾಯಕತ್ವ ವಹಿಸಿಕೊಳ್ಳಬೇಕಾಗುತ್ತದೆ. ಆದರೆ, ಇಂತಹ ನಾಯಕತ್ವದಲ್ಲಿರುವವರು ರಾಜಕಾರಣದಿಂದ ದೂರ ಉಳಿಯುವಾಗ ಚುನಾವಣೆ ಸಂದರ್ಭದಲ್ಲಿ ಗಲ್ಲಾ ಪೆಟ್ಟಿಗೆ ರಾಜಕಾರಣದ ಶೂರರೆನಿಸಿರು ಕೆಲವರು ಪರಿಸ್ಥಿತಿಯನ್ನು ತಮ್ಮ ಲಾಭಕ್ಕೆ ತಿರುಗಿಸಿಕೊಳ್ಳುವ ಪರಿಣಾಮವೇ ಈಗಿನ ದುಸ್ಥಿತಿಗೆ ಮೂಲ. ಹೀಗಿರುವಾಗ ಇದರ ಸುಧಾರಣೆಗೆ ಬಹು ಹಂತದ ಸ್ವಯಂಪ್ರೇರಣೆಯ ಆಂದೋಲನಗಳು ಆರಂಭವಾಗಬೇಕು. ಈಗಿನ ದುಸ್ಥಿತಿಯ ನಿವಾರಣೆಗೆ ನನ್ನ ಪಾತ್ರವೇನು ಎಂಬ ಅಂಶವನ್ನು ವೈಯಕ್ತಿಕ ನೆಲೆಗಟ್ಟಿನಲ್ಲಿ ಆಲೋಚಿಸುವ ಪ್ರವೃತ್ತಿ ಪ್ರತಿಯೊಬ್ಬರಿಗೂ ಬರುವಂತೆ ಮಾಡುವುದೇ ಈ ಆಂದೋಲನದ ಪ್ರಧಾನ ಪಾತ, ಈ ವೈಯಕ್ತಿಕ ಆಲೋಚನೆಗಳು ಸಂಘಟಿತ ರೀತಿಯಲ್ಲಿ ಸಾಮೂಹಿಕವಾಗಿ ಬಹಿರಂಗ ನಿಲುವು ಕಂಡುಕೊಂಡಾಗ ನಿರೀಕ್ಷೆಗೂ ಮೀರಿದ ಸುಧಾರಣೆಗಳು ಆಗುವುದು ಖಂಡಿತ. ನಿಜ ಹೇಳಬೇಕೆಂದರೆ ಮಾದರಿ ಎನ್ನಿಸುವ ಜನಪ್ರತಿನಿಧಿಗಳು ಸೃಷ್ಟಿಯಾಗುವ ಸಂಕ್ರಮಣ ಕಾಲವೇ ಇದು. ಇಂತಹ ಕಾಲದ ಸೃಷ್ಟಿಗೆ ಪರಿಸ್ಥಿತಿ ಮಾಯಬೇಕು ಎನ್ನುವುದಕ್ಕಿಂತ ಪರಿಸ್ಥಿತಿ ಬರುವುದನ್ನು ಕಾಯಬೇಕು ಅಷ್ಟೇ.

ಹಿಂದೆಯೂ ಕೂಡಾ ಪ್ರೊ. ಎನ್.ಜಿ.ರಂಗ ಎಂಬ ಆಂಧ್ರಪ್ರದೇಶದ ಗುಂಟೂರಿನಲ್ಲಿ ಸಂಸದರೊಬ್ಬರಿದ್ದರು. ಜನರ ಕಷ್ಟಸುಖಗಳನ್ನು ವೈಚಾರಿಕ ಕಣ್ಣಿನಲ್ಲಿ ಸರ್ಕಾರದ ಮುಂದಿಡುವಾಗ ಅವರಿಗೆ ರಾಜಕೀಯ ಹಂಗು ಗುಂಗು ಇರುತ್ತಿರಲಿಲ್ಲ. ಸಾರ್ವಜನಿಕ ಹಿತದೃಷ್ಟಿಯ ಸಲುವಾಗಿಯೇ ಕಾಂಗ್ರೆಸ್ ಪಕ್ಷಕ್ಕೆ ಏಳು ಬಾರಿ ರಾಜೀನಾಮೆ ನೀಡಿ ಮತ್ತೆ ಮತ್ತೆ ಸೇರ್ಪಡೆಯಾಗಿ ತಮ್ಮ ವೈಚಾರಿಕತೆಯನ್ನು ಮೆರೆದ ಧೀಮಂತರು. ಇಂತಹವರ ಸಾಲಿಗೆ ಕರ್ನಾಟಕದ ಟಿ.ಆರ್. ಶಾಮಣ್ಣ, ವಿ.ಎಸ್. ಕೃಷ್ಣಯ್ಯರ್, ಪಿ. ರಾಮ್‌ದೇವ್, ಶಾಂತವೇರಿ ಗೋಪಾಲಗೌಡ, ನಿಜಲಿಂಗಪ್ಪ, ಕಡಿದಾಳ್ ಮುಂಜಪ್ಪ, ಬಿ.ಡಿ. ಜತ್ತಿ, ದಿನಕರ ದೇಸಾಯಿ, ದೇವರಾಜ ಅರಸು, ರಾಮಕೃಷ್ಣ ಹೆಗಡೆ ಮೊದಲಾದವರಿದ್ದಾರೆ. ರಾಷ್ಟ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್, ವಾಜಪೇಯಿ, ನೆಹರೂ ಅವರಿಂದ ಹಿಡಿದು ರಾಮ್ ಮನೋಹರ್ ಲೋಹಿಯಾ, ಇಂದ್ರಜಿತ್ ಗುಪ್ತಾ, ಮಾವಳಂಕರ್, ಕಾಮರಾಜ್ ಮೊದಲಾದ ಆದರ್ಶ ಪುರುಷರ ವ್ಯಕ್ತಿತ್ವವೂ ಕೂಡಾ ಒಂದು ಹೆಜ್ಜೆ

ಗುರುತು. 21ನೆಯ ಶತಮಾನದ ಆರಂಭದ ನಂತರ ಇಂತಹ ಆದರ್ಶ ಪುರುಷರ ಗುರುತಿಸುವ ಕಾಯಕಕ್ಕೆ ಕೈಹಾಕಿದರೆ. ಅದು ತಿರುಗುಬಾಣವಾಗುವ ಅಪಾಯವೇ ಹೆಚ್ಚು.

ಈಗಿನ ಸಂಸತ್ ಅಥವಾ ಶಾಸನಸಭೆಯ ಕಲಾಪದ ಹೆಗ್ಗುರುತೆಂದರೆ ಮಾರಾಮಾರಿ. ಕಿತ್ತಾಟ, ಕೂಗಾಟ ಕಡೆಗೆ ಬಹಿಷ್ಕಾರ. ಇಂತಹ ವಾತಾವರಣದ ನಡುವೆ ಜನಕಲ್ಯಾಣಕ್ಕೆ ಸಂಬಂಧಿಸಿದ ಶಾಸನರಚನೆಯ ಮಹತ್ವದ ಕಲಾಪ ಅಂದುಕೊಂಡಂತೆ ನಡೆಯುವುದು ಸಾಧ್ಯವಾದರೂ ಎಲ್ಲಿದೆ? ಸಾವಿರಾರು ಕೋಟಿ ರೂಪಾಯಿ ಮೊತ್ತದ ಹಣಕಾಸಿನ ವಿಧೇಯಕಗಳು ಗದ್ದಲದ " ನಡುವೆ ಅಂಗೀಕಾರ ಮುದ್ರೆ ಪಡೆಯುತ್ತಿರುವುದು ಜನತಂತ್ರಕ್ಕೆ ತಟ್ಟಿರುವ ಒಂದು ಶಾಪ. ಇಂತಹ ಶಾಪಗಳ ನಿವಾರಣೆಗೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಆಲೋಚಿಸಿ ನಂತರ ಅವುಗಳನ್ನು ಬಹಿರಂಗ ನಿಲುವಾಗಿ ಪರಿವರ್ತಿಸಿಕೊಳ್ಳುವ ಕೌಶಲ್ಯ ಜನಕ್ಕೆ ಇರುವಂತೆ ಮಾಡುವುದೇ ಈಗಿನ ದೊಡ್ಡ ಸವಾಲು.

ಜನಪ್ರತಿನಿಧಿಯಾಗಲು ನಾಯಕತ್ವದ ಗುಣ ನಿರ್ಣಾಯಕ, ಇದು ಪಿತ್ರಾರ್ಜಿತವಾಗಿ ಬರುವಂತದ್ದಲ್ಲ. ಜನರ ಮೂಲಕ ಹಾಗೂ ಅವರ ವಿಶ್ವಾಸದಿಂದಲೇ ಅರಳುವಂತದ್ದು. ಜನರಲ್ಲಿ ಒಬ್ಬರಾಗಿ ಕಂಡುಕೊಂಡಾಗ ಮಾತ್ರ ನಾಯಕತ್ವದ ಲಕ್ಷಣಗಳು ಚಿಗುರೊಡೆದು ಕಾಲಾನುಕ್ರಮದಲ್ಲಿ ಅದು ಅರಳುವುದೇ ಜನತಂತ್ರದ ಕೌಶಲ್ಯ ಆಗಲೇ ಮಾದರಿ ಜನಪ್ರತಿನಿಧಿಯ ಅವತಾರವೆತ್ತುವ ಕಾಲ. ಇಂತಹ ಮಹತ್ಕಾಲಕ್ಕಾಗಿ ಜನ ಕಾಯುತ್ತಿರುವುದು ಈಗಿನ ಸ್ಥಿತಿ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:24.03.2025

## 5. ಪಂಚಾಯತ್ ವ್ಯವಸ್ಥೆಗೆ ಶಕ್ತಿ ತುಂಬಿದ ಹಣಕಾಸು ಆಯೋಗ

ಭಾರತದ ಹಣಕಾಸು ಆಯೋಗವು ಕೇಂದ್ರ ಸರಕಾರ ಮತ್ತು ರಾಜ್ಯಗಳ ನಡುವಿನ ಆರ್ಥಿಕ ಸಂಪನ್ಮೂಲಗಳ ವಿತರಣೆಯನ್ನು ನಿರ್ಧರಿಸುವ ಜವಾಬ್ದಾರಿಯುತ ಸಾಂವಿಧಾನಿಕ ಸಂಸ್ಥೆಯಾಗಿದೆ. 2019ರ ನವೆಂಬರ್‌ನಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ನೇಮಿಸಿದ 17ನೇ ಹಣಕಾಸು ಆಯೋಗವು ದೇಶದ ಆರ್ಥಿಕ ಆರೋಗ್ಯವನ್ನು ನಿರ್ಣಯಿಸುವ ಮತ್ತು ಫೆಡರಲ್ ಆಡಳಿತವನ್ನು ಬೆಂಬಲಿಸಲು ಸಂಪನ್ಮೂಲಗಳ ಸಮಾನ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಕಾರ್ಯವನ್ನು ಹೊಂದಿದೆ.

ಹಣಕಾಸು ಆಯೋಗವು ಸಂವಿಧಾನದ 280ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿಗಳಿಂದ ರಚಿಸಲ್ಪಟ್ಟ ಒಂದು ಸಾಂವಿಧಾನಿಕ ಸಂಸ್ಥೆಯಾಗಿದೆ. ಇದು ಪ್ರತಿ 5ನೇ ವರ್ಷಕ್ಕೊಮ್ಮೆ ಅಥವಾ ರಾಷ್ಟ್ರಪತಿಗಳು ಅಗತ್ಯವೆಂದು ಭಾವಿಸಿದರೆ, ಅವಧಿಪೂರ್ವದಲ್ಲೂ ರಚಿಸಲಾಗುವ ಅರೆ–ನ್ಯಾಯಾಂಗ ಸಂಸ್ಥೆಯಾಗಿದೆ.

ಇದು ಅಧ್ಯಕ್ಷರು ಮತ್ತು ರಾಷ್ಟ್ರಪತಿಗಳಿಂದ ನೇಮಕಗೊಳ್ಳುವ 4 ಇತರ ಸದಸ್ಯರನ್ನು ಒಳಗೊಂಡಿದೆ. ಅವರು ಮರು ನೇಮಕಾತಿಗೆ ಅರ್ಹರಾಗಿರುತ್ತಾರೆ. ಸಂವಿಧಾನದಲ್ಲಿ ಒದಗಿಸಲಾದ ಸದಸ್ಯರ ಅರ್ಹತೆಗಳನ್ನು ಸಂಸತ್ತು ನಿರ್ಧರಿಸುತ್ತದೆಯಾದ್ದರಿಂದ, ಅದಕ್ಕೆ ಅನುಗುಣವಾಗಿ, ಸಂಸತ್ತು ಈ ಕೆಳಗಿನ ವಿಶೇಷಣಗಳನ್ನು ನಿರ್ದಿಷ್ಟಪಡಿಸಿದೆ:

ಅಧ್ಯಕ್ಷರು ಸಾರ್ವಜನಿಕ ವ್ಯವಹಾರಗಳಲ್ಲಿ ಅನುಭವ ಹೊಂದಿರುವ ವ್ಯಕ್ತಿಯಾಗಿರಬೇಕು. ಜೊತೆಗೆ, ಸದಸ್ಯರನ್ನು ಈ ಕೆಳಗಿನ ಅನುಭವ ಹೊಂದಿರುವ ಕ್ಷೇತ್ರದಿಂದ ಆಯ್ಕೆ ಮಾಡಬೇಕೆಂಬ ಸಹಜ ನಿಯಮಗಳನ್ನು ಮಾಡಲಾಗಿದ್ದು, (ಅ) ಹೈಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾಗಿರುವ ಒಬ್ಬರು. (ಆ) ಸರಕಾರದ ಹಣಕಾಸು ಮತ್ತು ಖಾತೆಗಳ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ವ್ಯಕ್ತಿ. (ಇ) ಹಣಕಾಸು ವಿಷಯಗಳು ಮತ್ತು ಆಡಳಿತದಲ್ಲಿ ವ್ಯಾಪಕ ಅನುಭವ ಹೊಂದಿರುವ ವ್ಯಕ್ತಿ. (ಈ) ಅರ್ಥಶಾಸ್ತ್ರದ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ವ್ಯಕ್ತಿಗಳು ಸೇರಿದಂತೆ ಈ ಆಯೋಗದ ತಂಡ ರಚನೆಯಾಗುತ್ತದೆ. "

1951ರಲ್ಲಿ ಕೆ.ಸಿ.ನಿಯೋಗಿ ನೇತೃತ್ವದಲ್ಲಿ ರಚನೆಯಾದ ಮೊದಲ ಹಣಕಾಸು ಆಯೋಗವು ಕೇಂದ್ರ ಮತ್ತು ರಾಜ್ಯಗಳ ನಡುವೆ ವಿಂಗಡಿಸಲಾದ ತೆರಿಗೆಗಳ ನಿವ್ವಳ ಆದಾಯದ ವಿತರಣೆಯ ಕುರಿತು ಶಿಫಾರಸು ಇದರ ಪ್ರಾಥಮಿಕ ಕಾರ್ಯವಾಗಿತ್ತು, ಜೊತೆಗೆ ರಾಜ್ಯಗಳಿಗೆ ಅನುದಾನ–ಸಹಾಯವನ್ನು ನಿಯಂತ್ರಿಸುವ ತತ್ವಗಳನ್ನು ಸಹ ನೀಡುವುದಾಗಿತ್ತು. ಇದಾಗಿ, ಪ್ರತಿ 5 ವರ್ಷಕ್ಕೊಮ್ಮೆಯಂತೆ, ಇಲ್ಲಿಯವರೆಗೆ 17 ಹಣಕಾಸು ಆಯೋಗಗಳು ರಚನೆಯಾಗಿವೆ.

ಹೀಗೆ ರಚನೆಯಾದ ಹಣಕಾಸು ಆಯೋಗವು, ಕೇಂದ್ರ ಮತ್ತು ರಾಜ್ಯಗಳ ನಡುವೆ ನಿವ್ವಳ ತೆರಿಗೆ ಆದಾಯದ ವಿತರಣೆ ಮತ್ತು ಅಂತಹ ಆದಾಯದ ಆಯಾ ಪಾಲುಗಳ ರಾಜ್ಯಗಳ ನಡುವೆ ಹಂಚಿಕೆ ಕುರಿತು ಶಿಫಾರಸುಗಳು, ಕೇಂದ್ರದಿಂದ ರಾಜ್ಯಗಳಿಗೆ ಅನುದಾನ–ಸಹಾಯವನ್ನು ನಿಯಂತ್ರಿಸುವ ತತ್ವಗಳು, ರಾಜ್ಯದಲ್ಲಿನ ಪಂಚಾಯತ್‌ಗಳು ಮತ್ತು ಪುರಸಭೆಗಳ ಸಂಪನ್ಮೂಲಗಳನ್ನು ಪೂರೈಸಲು ರಾಜ್ಯದ ಕ್ರೋಢೀಕೃತ ನಿಧಿಯನ್ನು ಹೆಚ್ಚಿಸಲು ಅಗತ್ಯವಿರುವ ಕ್ರಮಗಳು ಸೇರಿದಂತೆ ಅದರದೇ ಆದ ವಿಶೇಷತೆಗಳನ್ನು ಒಳಗೊಂಡ ಶಿಫಾರಸುಗಳ ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸುತ್ತದೆ, ಅವರು ಅದನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಇಡುತ್ತಾರೆ.

ಹಾಗೆಯೇ, ರಾಜ್ಯ ಹಣಕಾಸು ಆಯೋಗ ಎಂಬ ಸಂಸ್ಥೆ ರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 1992ರಲ್ಲಿ 73ನೇ ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಗಳ ಅಡಿಯಲ್ಲಿ ರಾಜ್ಯ ಹಣಕಾಸು ಆಯೋಗವನ್ನು ಸ್ಥಾಪಿಸಲಾಯಿತು. ಇದು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಪುರಸಭೆಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡುವ ಮೂಲಕ ಭಾರತದಲ್ಲಿ ಸ್ಥಳೀಯ ಸ್ವ–ಆಡಳಿತವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಹಣಕಾಸು ಮೌಲ್ಯಮಾಪನ, ಸಂಪನ್ಮೂಲ ಹಂಚಿಕೆ, ಅನುದಾನ ಮತ್ತು ನೆರವು, ವಿಪತ್ತು ನಿರ್ವಹಣೆ, ನೀತಿ ಶಿಫಾರಸು ಇತ್ಯಾದಿಗಳು ಇದರ ಜವಾಬ್ದಾರಿಗಳು.

ಸಂವಿಧಾನದ 243–ಐನೇ ವಿಧಿಯ ಆದೇಶಿಸಿದಂತೆ, ಪ್ರತಿ ಐದು ವರ್ಷಗಳಿಗೊಮ್ಮೆ ರಾಜ್ಯ ಹಣಕಾಸು ಆಯೋಗವನ್ನು ನೇಮಿಸುವ ಜವಾಬ್ದಾರಿಯನ್ನು ಪ್ರತಿ ರಾಜ್ಯದ ರಾಜ್ಯಪಾಲರು ಹೊಂದಿರುತ್ತಾರೆ. ಪ್ರಸ್ತುತದಲ್ಲಿ ಅಧ್ಯಕ್ಷ ಎನ್.ಕೆ.ಸಿಂಗ್. ನೇತೃತ್ವದ 17ನೇ ಹಣಕಾಸು ಆಯೋಗವು 2020 ರಿಂದ 2025 ರವರೆಗಿನ ಅವಧಿಗೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ನಿಧಿಯ ವಿಕೇಂದ್ರೀಕರಣಕ್ಕಾಗಿ ಸೂತ್ರವನ್ನು ಶಿಫಾರಸು ಮಾಡುವ ಕಾರ್ಯವನ್ನು ವಹಿಸಲಾಗಿತ್ತು.

**17ನೇ ಹಣಕಾಸು ಆಯೋಗದ ಶಿಫಾರಸುಗಳ ಕೆಲವು ಪ್ರಮುಖ ಅಂಶಗಳು ಹೀಗಿವೆ:**

1. **ಲಂಬ ವಿಕೇಂದ್ರೀಕರಣ:** 17ನೇ ಹಣಕಾಸು ಆಯೋಗವು ಕೇಂದ್ರ ತೆರಿಗೆಗಳಲ್ಲಿ 41% ಪಾಲನ್ನು ರಾಜ್ಯಗಳಿಗೆ ವರ್ಗಾಯಿಸಲು ಶಿಫಾರಸು ಮಾಡಿದೆ ಮತ್ತು 14ನೇ ಹಣಕಾಸು ಆಯೋಗ ನಿಗದಿಪಡಿಸಿದ ಪಾಲನ್ನು ಕಾಯ್ದುಕೊಳ್ಳುವ ಮೂಲಕ, ಕೇಂದ್ರ ಸರಕಾರದ ಮೇಲೆ ಅತಿಯಾಗಿ ಅವಲಂಬಿತವಾಗದೆ ರಾಜ್ಯಗಳು ತಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಬಹುದೆಂದು ತಿಳಿಸಿದೆ.

2. **ಅಡ್ಡ ವಿಕೇಂದ್ರೀಕರಣ:** ರಾಜ್ಯಗಳ ನಡುವೆ 41% ಸಂಪನ್ಮೂಲಗಳನ್ನು ಹೇಗೆ ವಿಂಗಡಿಸಬೇಕು ಎಂಬುದನ್ನು ಸಮತಲ ವಿಕೇಂದ್ರೀಕರಣ ಸೂತ್ರವು ನಿರ್ಧರಿಸುತ್ತದೆ. 17ನೇ ಆಯೋಗವು ಜನಸಂಖ್ಯೆ, ಆದಾಯದ ಅಂತರ ಮತ್ತು ಹಣಕಾಸಿನ ಸಾಮರ್ಥ್ಯದಂತಹ ಮಾನದಂಡಗಳನ್ನು ಆಧರಿಸಿ ಈ ಹೊಸ ಸೂತ್ರವನ್ನು ಶಿಫಾರಸು ಮಾಡಿದೆ.

3. **ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು:** ಆಯೋಗವು ಐದು ವರ್ಷಗಳ ಅವಧಿಯಲ್ಲಿ (2020–2025) ಸ್ಥಳೀಯ ಸಂಸ್ಥೆಗಳಿಗೆ ರೂ. 60,750 ಕೋಟಿಗಳ ಅನುದಾನ ನೀಡಲು ಶಿಫಾರಸು ಮಾಡಿತು. ಈ ನಿಧಿಗಳ

ಮೂಲಕ ನಗರ, ಗ್ರಾಮೀಣ ಆಡಳಿತವನ್ನು ಬಲಪಡಿಸಲು ಮತ್ತು ನಾಗರಿಕರಿಗೆ ಮೂಲಭೂತ ಸೇವೆಗಳನ್ನು ಒದಗಿಸಲು ತಿಳಿಸಿದೆ.

4. **ಕೆಲವು ರಾಜ್ಯಗಳಿಗೆ ವಿಶೇಷ ಅನುದಾನಗಳು:** ಕಠಿಣ ಭೌಗೋಳಿಕ ಭೂಪ್ರದೇಶ, ದೊಡ್ಡ ಬುಡಕಟ್ಟು ಜನಸಂಖ್ಯೆ ಮತ್ತು ಕಡಿಮೆ ತಲಾ ಆದಾಯದಂತಹ ಸವಾಲುಗಳನ್ನು ಎದುರಿಸುತ್ತಿರುವ ಕೆಲವು ರಾಜ್ಯಗಳಿಗೆ ವಿಶೇಷ ಅನುದಾನಗಳನ್ನು ಆಯೋಗವು ಶಿಫಾರಸು ಮಾಡಿದೆ.

5. **ಕಾರ್ಯಕ್ಷಮತೆ ಆಧಾರಿತ ಅನುದಾನಗಳು:** ವಿಶೇಷವಾಗಿ ಹಣಕಾಸಿನ ಶಿಸ್ತನ್ನು ಸುಧಾರಿಸಲು, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನಗೊಳಿಸಲು ಬದ್ಧವಾಗಿರುವ ರಾಜ್ಯಗಳಿಗೆ ಹಣಕಾಸಿನ ಜವಾಬ್ದಾರಿಯನ್ನು ಉತ್ತೇಜಿಸುವ ಸಲುವಾಗಿ, ಆಯೋಗವು ಕಾರ್ಯಕ್ಷಮತೆ ಆಧಾರಿತ ಅನುದಾನಗಳನ್ನು ಪರಿಚಯಿಸಲು ಶಿಫಾರಸು ಮಾಡಿದೆ.

ಈ ಮೂಲಕ, ಈ ಹಿಂದಿನ ಆಯೋಗಗಳಿಗಿಂತ ಹೆಚ್ಚು ಅಧಿಕಾರ ಮತ್ತು ಹಣಕಾಸು ಅನುದಾನಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ನೀಡಲು ಹೇಳುವ ಮೂಲಕ, ಗ್ರಾಮೀಣ, ಅಭಿವೃದ್ಧಿ, ಅಧಿಕಾರ ವಿಕೇಂದ್ರೀಕರಣಕ್ಕೆ ಹೆಚ್ಚು ಒತ್ತು ನೀಡಿದೆ ಎನ್ನಬಹುದು.

- **ಸಮಾನ ವಿತರಣೆ:** 17ನೇ ಹಣಕಾಸು ಆಯೋಗವು, ಆರ್ಥಿಕವಾಗಿ ದುರ್ಬಲವಾಗಿರುವ, ವಿಶಿಷ್ಟ ಸವಾಲುಗಳನ್ನು ಹೊಂದಿರುವ ರಾಜ್ಯಗಳಿಗೆ ಸಂಪನ್ಮೂಲಗಳ ನ್ಯಾಯಯುತ ಮತ್ತು ಸಮಾನ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿತು. ಸೀಮಿತ ಆರ್ಥಿಕ ಸಂಪನ್ಮೂಲಗಳೊಂದಿಗೆ ಹೆಚ್ಚಾಗಿ ಹೋರಾಡುವ ವಿಶೇಷ ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು ಇದರಲ್ಲಿ ಸೇರಿವೆ.

- **ಹಣಕಾಸಿನ ಜವಾಬ್ದಾರಿಯ ಮೇಲೆ ಗಮನಹರಿಸಿ:** ರಾಜ್ಯಗಳು ಹಣಕಾಸಿನ ಜವಾಬ್ದಾರಿ ಕ್ರಮಗಳಿಗೆ ಬದ್ಧವಾಗಿರುವ ಅಗತ್ಯವನ್ನು ಒತ್ತಿಹೇಳುವ ಮೂಲಕ ಮತ್ತು ಕಾರ್ಯಕ್ಷಮತೆ ಆಧಾರಿತ ಅನುದಾನಗಳನ್ನು ಶಿಫಾರಸು ಮಾಡುವ ಮೂಲಕ, ಆಯೋಗವು ರಾಜ್ಯ ಸರಕಾರಗಳ ಆರ್ಥಿಕ ಆರೋಗ್ಯವನ್ನು ಸುಧಾರಿಸುವ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ಗುರಿಯನ್ನು ತಿಳಿಸಿದೆ.

- **ಸ್ಥಳೀಯ ಸಂಸ್ಥೆಗಳಿಗೆ ಬೆಂಬಲ:** ಸ್ಥಳೀಯ ಸಂಸ್ಥೆಗಳ (ಪಂಚಾಯತ್‌ಗಳು ಮತ್ತು ಪುರಸಭೆಗಳು) ಮೇಲೆ ಆಯೋಗದ ಬೆಂಬಲ ಗಮನಾರ್ಹವಾಗಿದೆ. ವಿಕೇಂದ್ರೀಕೃತ ಸೇವೆಗಳ ವಿತರಣೆ ಮತ್ತು ಸ್ಥಳೀಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಈ ಸಂಸ್ಥೆಗಳಿಗೆ ಅನುದಾನಗಳನ್ನು ಒದಗಿಸುವುದು ಅತ್ಯಗತ್ಯ.

- **ಹೊಸ ಮಾನದಂಡಗಳ ಸೇರ್ಪಡೆ:** ರಾಜ್ಯಗಳ ನಡುವಿನ ಆರ್ಥಿಕ ಅಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳುವ ಆದಾಯದ ಅಂತರದಂತಹ ಹೊಸ ನಿಯತಾಂಕಗಳನ್ನು ಅಪವರ್ತನಗೊಳಿಸುವ ಮೂಲಕ ಆಯೋಗವು ಸಮತಲ ವಿಕೇಂದ್ರೀಕರಣದ ಮಾನದಂಡಗಳನ್ನು ವಿಸ್ತರಿಸಿದೆ.

- **ಸುಸ್ಥಿರತೆಯ ಮೇಲೆ ಗಮನಹರಿಸಿ:** ಹಣಕಾಸಿನ ಜವಾಬ್ದಾರಿ ಸುಸ್ಥಿರತೆಯನ್ನು ಪರಿಸರ ಕಾಳಜಿಗಳೆರಡರಲ್ಲೂ ಖಚಿತಪಡಿಸಿಕೊಳ್ಳುವ ಪ್ರಾಮುಖ್ಯತೆಯನ್ನು ಆಯೋಗವು ಒತ್ತಿಹೇಳಿದೆ. ಹವಾಮಾನ ಬದಲಾವಣೆ ಮತ್ತು ಇತರ ದೀರ್ಘಕಾಲೀನ ಸವಾಲುಗಳನ್ನು ಪರಿಹರಿಸುವ ಅಗತ್ಯವನ್ನು ಅದು ಗುರುತಿಸಿದೆ.

ಇಷ್ಟಾಗಿಯೂ ಕೆಲವು ಅಪವಾದಗಳು, ಟೀಕೆಗಳು ಈ ಆಯೋಗದ ಮೇಲೆ ಬಂದಿದ್ದು, ಜನಸಂಖ್ಯಾವಾರು ವಿತರಣೆ ಮೇಲೆ ಹೆಚ್ಚು ಗಮನಹರಿಸಿದ್ದರಿಂದ, ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದ ರಾಜ್ಯಗಳನ್ನು (ಕೇರಳ, ತಮಿಳುನಾಡು, ಇತ್ಯಾದಿ) ದಂಡಿಸುವಂತೆಯೂ ಮತ್ತು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ರಾಜ್ಯಗಳಿಗೆ ಪರವಾಗಿದೆ ಎಂದು ವಿಮರ್ಶಕರು

ವಾದಿಸುತ್ತಾರೆ, ಹೆಚ್ಚು ಜನಸಂಖ್ಯೆಗಳಿರುವ ರಾಜ್ಯಗಳಲ್ಲಿ ಹಲವು ಅಭಿವೃದ್ಧಿಯಾಗದೇ ಹೆಚ್ಚಿನ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿವೆ. ಇದು ಜನಸಂಖ್ಯಾ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದ ರಾಜ್ಯಗಳಿಗೆ ಅಸಮಾನ ಪರಿಸ್ಥಿತಿಯನ್ನು ಸೃಷ್ಟಿಸಬಹುದು ಎಂಬುದು ಕೆಲವರ ಅಭಿಪ್ರಾಯ."

**ಜೊತೆಗೆ, ಕೆಲವು ರಾಜ್ಯಗಳಿಗೆ ಕಡಿಮೆ ಪಾಲು:** ಕೆಲವು ರಾಜ್ಯಗಳು ಆಯೋಗದ ಶಿಫಾರಸುಗಳಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಿದ್ದರೆ, ಇನ್ನು ಕೆಲವು ರಾಜ್ಯಗಳು ತಮ್ಮ ಪಾಲಿನ ಬಗ್ಗೆ ಅತೃಪ್ತವಾಗಿದೆ. ಉದಾಹರಣೆಗೆ, ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಉತ್ತರ ಮತ್ತು ಬಡ ರಾಜ್ಯಗಳು ತಮ್ಮ ಸಂಪನ್ಮೂಲಗಳ ಪಾಲು ತಮ್ಮ ಅಭಿವೃದ್ಧಿ ಅಗತ್ಯಗಳಿಗೆ ಅನುಗುಣವಾಗಿಲ್ಲ ಎಂದು ದೂರಿವೆ.

**ಉದಯೋನ್ಮುಖ ಸಮಸ್ಯೆಗಳ ಮೇಲೆ ಸೀಮಿತ ಗಮನ:** 17ನೇ ಹಣಕಾಸು ಆಯೋಗವು ಪರಿಸರ ಸುಸ್ಥಿರತೆಯನ್ನು ಪರಿಗಣಿಸಿದ್ದರೂ, ತ್ವರಿತ ನಗರೀಕರಣ, ನಿರುದ್ಯೋಗ ಮತ್ತು ಡಿಜಿಟಲ್ ಆರ್ಥಿಕತೆಗಳ ಏರಿಕೆಯಂತಹ ಉದಯೋನ್ಮುಖ ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳನ್ನು ಪರಿಹರಿಸಲು ಅಗತ್ಯ ಪ್ರಯತ್ನಗಳನ್ನು ಮಾಡದಿದ್ದಕ್ಕಾಗಿ ಟೀಕಿಸಲಾಗಿದೆ.

**ಕೇಂದ್ರ ಅನುದಾನಗಳ ಮೇಲಿನ ಅವಲಂಬನೆ:** ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಗಮನಾರ್ಹ ವರ್ಗಾವಣೆಗಳನ್ನು ಶಿಫಾರಸು ಮಾಡಬೇಕಿತ್ತು ಮತ್ತು ರಾಜ್ಯಗಳು ತಮ್ಮದೇ ಆದ ಆದಾಯದ ಹರಿವುಗಳನ್ನು ಉತ್ಪಾದಿಸಲು ಮತ್ತು ಹೆಚ್ಚು ಸ್ವಾವಲಂಬಿಯಾಗಲು ಆಯೋಗವು, ಪ್ರೋತ್ಸಾಹಿಸುವ ಬದಲು, ಒಕ್ಕೂಟದ ಮೇಲೆ ಆರ್ಥಿಕ ವ್ಯವಸ್ಥೆಯ ಮೇಲೆಯೇ ಅವಲಂಬನೆಯಾಗುವಂತೆ ನಡೆದುಕೊಂಡಿದೆ ಎಂಬಿತ್ಯಾದಿ ಆರೋಪಗಳನ್ನು ಸಹಜವಾಗಿ ಮಾಡಲಾಗಿದೆ. ಇಷ್ಟೆಲ್ಲದರ ನಡುವೆ, 17 ನೇ ಹಣಕಾಸು ಆಯೋಗವು 2020 ರಿಂದ 2025 ರವರೆಗಿನ ಭಾರತದ ಆರ್ಥಿಕ ನೈಜತೆ ಮತ್ತು ಕಾರ್ಯಾತ್ಮಕವನ್ನು ವ್ಯಾಖ್ಯಾನಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ಸಮಾನ ಸಂಪನ್ಮೂಲ ವಿತರಣೆ, ಹಣಕಾಸಿನ ಜವಾಬ್ದಾರಿ ಮತ್ತು ಅನುದಾನಗಳ ಮೇಲಿನ ಆಯೋಗದ ಗಮನವು ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಅದರ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಆದಾಗ್ಯೂ, ಜನಸಂಖ್ಯಾ ಮಾನದಂಡಗಳ ಮೇಲಿನ ಹೆಚ್ಚಿದ ಒತ್ತು ಮತ್ತು ವಿವಿಧ ರಾಜ್ಯಗಳ ಅಗತ್ಯಗಳನ್ನು ಸಮತೋಲನಗೊಳಿಸುವ ಸಂಕೀರ್ಣತೆಯು ಚರ್ಚೆಗೆ ಕಾರಣವಾಗಿದೆ. ಆಯೋಗದ ನಿಜವಾದ ಯಶಸ್ಸು ರಾಜ್ಯಗಳು ಹಂಚಿಕೆಯಾದ ಸಂಪನ್ಮೂಲಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಮತ್ತು ಹಣಕಾಸಿನ ಶಿಸ್ತು, ಸಮಾನ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಯ ದೀರ್ಘಕಾಲೀನ ಉದ್ದೇಶಗಳನ್ನು ಸಾಧಿಸಲಾಗುತ್ತದೆಯೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಇದರಂತೆಯೇ, ಇತರೆ ಪಕ್ಷಗಳು ಅಧಿಕಾರ ಹೊಂದಿರುವ ರಾಜ್ಯ ಸರ್ಕಾರಗಳು ಕೇಂದ್ರದಲ್ಲಿರುವುದು ಅನ್ಯಪಕ್ಷದ ಸರಕಾರವೆಂಬ ಒಂದೇ ಕಾರಣಕ್ಕೆ, ತಪ್ಪು ಮಾಹಿತಿಗಳನ್ನು ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಹೇಗೆಂದರೆ ಹಾಗೆ ಹೇಳಿ ದಾರಿತಪ್ಪಿಸುವುದು, ಸುಳ್ಳು ಜಾಹೀರಾತು ನೀಡುವುದು, ಕಾರ್ಯಾಂಗವನ್ನು ನ್ಯಾಯಾಂಗಕ್ಕೆ ಎಳೆದು ತರುವುದು ಮಾಡುತ್ತ ವೃಥಾ ಬಿಕ್ಕಟ್ಟು ಸೃಷ್ಟಿಸುವ ಬದಲು ಜನಾನುರಾಗಿ ಕೆಲಸಗಳನ್ನು ಮಾಡುತ್ತ ಹೋದಾಗ, ಎಂತಹ ವಿರೋಧಿಗಳನ್ನೂ ಗೆಲ್ಲಬಹುದಲ್ಲವೇ?! ಅಧಿಕಾರದಲ್ಲಿರುವವರು ಯೋಚಿಸಬೇಕು.

**ಲೇಖಕರು: ಗುರುರಾಜ್ ಗಂಟಿಹೊಳೆ**

**ಆಧಾರ:** ವಿಶ್ವವಾಣಿ, ದಿನಾಂಕ:27.03.2025

# ಭಾಗ–10

# ಶ್ರದ್ಧಾಂಜಲಿ

# 1. ಎಂ. ಶ್ರೀನಿವಾಸ್, ವಿಧಾನಸಭೆಯ ಮಾಜಿ ಸದಸ್ಯರು



ವಿಧಾನ ಸಭಾ ಮಾಜಿ ಸದಸ್ಯರು ಹಾಗೂ ಹಿರಿಯ ರಾಜಕಾರಣಿ ಎಂ. ಶ್ರೀನಿವಾಸ್(83) ಅವರು ದಿನಾಂಕ:16.01.2025ರಂದು ನಿಧನರಾದರು.

ಎಂ. ಶ್ರೀನಿವಾಸ್ ಅವರು ದಿನಾಂಕ:30.10.1942ರಂದು ಉತ್ತರಹಳ್ಳಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಅವರು ಕೈಗಾರಿಕೋದ್ಯಮಿಯೂ ಆಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಿಂದ 1983ರಲ್ಲಿ ಮೊದಲನೇ ಬಾರಿಗೆ 7ನೇ ವಿಧಾನಸಭೆಗೆ ಆಯ್ಕೆಯಾಗಿ, ಆನಂತರ 8ನೇ ವಿಧಾನಸಭೆಗೆ ಹಾಗೂ 10ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರಾಯ್ಕೆಗೊಂಡಿದ್ದರು. 1994ರಲ್ಲಿ ನಡೆದ ಚುನಾವಣೆಯಲ್ಲಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಿಂದ 13ನೇ ವಿಧಾನಸಭೆಗೆ ಆಯ್ಕೆಗೊಂಡಿದ್ದರು.

ಒಟ್ಟು 4 ಬಾರಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀಯುತರು 1983 ರಿಂದ 1989ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. 1998ರಲ್ಲಿ ನಡೆದ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೂ ಸಹ ಆಯ್ಕೆಗೊಂಡಿದ್ದರು.

## 2. ಜಯವಾಣಿ ಮಂಚೇಗೌಡ, ವಿಧಾನಸಭೆಯ ಮಾಜಿ ಸದಸ್ಯರು



ವಿಧಾನ ಸಭಾ ಮಾಜಿ ಸದಸ್ಯರು ಹಾಗೂ ಮಹಿಳಾ ರಾಜಕಾರಣಿ ಜಯವಾಣಿ ಮಂಚೇಗೌಡ(91) ಅವರು ದಿನಾಂಕ:03.01.2025ರಂದು ನಿಧನರಾದರು.

ಶ್ರೀಮತಿ ಜಯವಾಣಿ ಮಂಚೇಗೌಡ ಅವರು ತಮ್ಮ ಪತಿಯವರಾದ ಎಂ. ಮಂಚೇಗೌಡ ಅವರ ಅಕಾಲಿಕ ಮರಣದಿಂದ ತೆರವಾದ ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ 7ನೇ ವಿಧಾನಸಭೆಗೆ ಆಯ್ಕೆಗೊಂಡಿದ್ದರು.

## 3. ಪಟೇಲ್ ಶಿವರಾಂ, ವಿಧಾನಪರಿಷತ್ತಿನ ಮಾಜಿ ಸದಸ್ಯರು



ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಿರಿಯ ರಾಜಕಾರಣಿ ಹಾಗೂ ಸಹಕಾರಿ ಕ್ಷೇತ್ರದ ಹಿರಿಯ ದುರೀಣರೆಂದು ಪ್ರಸಿದ್ಧರಾದ ಪಟೇಲ್ ಶಿವರಾಂ(77) ಅವರು ದಿನಾಂಕ:16.01..2025ರಂದು ನಿಧನರಾದರು.

ಪಟೇಲ್ ಶಿವರಾಂ ಅವರು ದಿನಾಂಕ:10.04.1950ರಂದು ಹಾಸನ ಜಿಲ್ಲೆಯ ದೊಡ್ಡಗೇಣಿಗೆರೆ ಗ್ರಾಮದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರು. 2010 ರಿಂದ 2016ರ ಅವಧಿಯಲ್ಲಿ ಹಾಸನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದರು. 1978–83ರ ಅವಧಿಗೆ ದೊಡ್ಡಗೇಣಿಗೇರೆ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ, 1984ರಲ್ಲಿ ಹಾಸನ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾಗಿ, ಹಾಸನ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾಗಿ, ಹಾಸನ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ನವದೆಹಲಿಯ ಕ್ರಿಪ್ಕೋ ಸದಸ್ಯರಾಗಿ ಹಾಗೂ ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಮತ್ತು ಡಿ.ಸಿ.ಸಿ. ಬ್ಯಾಂಕ್ ಹಾಸನ ಇದರ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದರು. ಸಹಕಾರಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಅವರು ರಾಜ್ಯ ಮಟ್ಟದ ಸಹಕಾರ ರತ್ನ ಪ್ರಶಸ್ತಿಗೆ ಭಾಜನರಾಗಿದ್ದರು.

## 4. ಎ.ಎಂ. ಮರಿಯಪ್ಪ, ವಿಧಾನಸಭೆಯ ಮಾಜಿ ಸದಸ್ಯರು

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆ ಮತ್ತು ಪದವಿ ಕಾಲೇಜುಗಳ ಸ್ಥಾಪನೆಗೆ ಕಾರಣೀಕರ್ತರಾದ ಶ್ರೀ ಎ.ಎಂ.ಮರಿಯಪ್ಪ(94) ಅವರು ದಿನಾಂಕ:04.03.2025ರಂದು ನಿಧನರಾದರು.

ಶ್ರೀ ಮರಿಯಪ್ಪ ಎ.ಎಂ. ಅವರು 1931ರ ಏಪ್ರಿಲ್‌ನಲ್ಲಿ ಅರ್ಣೇಶ್ವರ ಗ್ರಾಮದಲ್ಲಿ ಜನಿಸಿದ್ದರು. ಸಮಾಜ ಸೇವೆಯಲ್ಲಿ ಸಕ್ರಿಯವಾಗಿದ್ದ ಶ್ರೀಯುತರು ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆ, ಪದವಿ ಕಾಲೇಜುಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದರು. 1983ರಲ್ಲಿ ನಡೆದ ಚುನಾವಣೆಯಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು 7ನೇ ವಿಧಾನಸಭೆಯನ್ನು ಪ್ರವೇಶಿಸಿದ್ದರು.


## 5. ಖಾಜಿ ಅರಶದ್ ಅಲಿ, ವಿಧಾನಪರಿಷತ್ತಿನ ಮಾಜಿ ಸದಸ್ಯರು



ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಹಿರಿಯ ಪತ್ರಕರ್ತರಾದ ಖಾಜಿ ಅರಶದ್ ಅಲಿ(74) ಅವರು ದಿನಾಂಕ:04.03.2025ರಂದು ನಿಧನರಾದರು.

ಖಾಜಿ ಅರಶದ್ ಅಲಿ ಅವರು ದಿನಾಂಕ:01.06.1951ರಂದು ಬೀದರ್ ಜಿಲ್ಲೆಯ ಬಾಲ್ಕಿಯಲ್ಲಿ ಜನಿಸಿದ್ದರು. ಬಿ.ಎಸ್ಸಿ. ಪದವೀಧರರಾಗಿದ್ದು, ವೃತ್ತಿಯಲ್ಲಿ ಪತ್ರಕರ್ತರಾಗಿದ್ದರು. "ಬೀದರ್ ಕೀ ಅವಾಜ್ ಹಿಂದಿ ಹಾಗೂ ಸುರ್ಖ ಝುಮೀನ್ ಉದರ್ಯ" ದಿನಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. 2004 ರಿಂದ 2006, 2006 ರಿಂದ 2012ರ ಅವಧಿಗೆ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಎರಡು ಬಾರಿ ಚುನಾಯಿತರಾಗಿ ಸೇವೆಯನ್ನು ಸಲ್ಲಸಿದ್ದ ದಿವಂಗತರು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು. ಅವರು ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪ್ರೆಸ್ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

## 6. ಪ್ರೋ.ಎಂ.ಆರ್.ದೊರೆಸ್ವಾಮಿ, ವಿಧಾನಪರಿಷತ್ತಿನ ಮಾಜಿ ಸದಸ್ಯರು



ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ, ಶಿಕ್ಷಣ ತಜ್ಞ ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರಾದ ಎಂ.ಆರ್.ದೊರೆಸ್ವಾಮಿ(88) ಅವರು ದಿನಾಂಕ:06.03.2025ರಂದು ನಿಧನರಾದರು.

ಎಂ.ಆರ್.ದೊರೆಸ್ವಾಮಿ ಅವರು ದಿನಾಂಕ:06.11.1937ರಂದು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ನರ್ರಾವೂರು ಎಂಬ ಹಳ್ಳಿಯಲ್ಲಿ ಜನಿಸಿದ್ದರು. ಅವರು ಮೂಲತಃ ಕೃಷಿ ಕುಟುಂಬದವರಾಗಿದ್ದರು. ಎಂ.ಎ., ಬಿ.ಎಲ್., ಪದವೀಧರರಾಗಿದ್ದ ಅವರು ಬೆಂಗಳೂರಿನ ದಯಾನಂದಸಾಗರ ಸಂಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದ ಅವರ ದೂರದೃಷ್ಟಿಯ ಚಿಂತನೆ ಹೊದಿದ್ದು, ಪಿ.ಇ.ಎಸ್. ಶಿಕ್ಷಣ ಸಂಸ್ಥೆಯನ್ನು ಶಾಲಾ ಹಂತದಿಂದ ವಿಶ್ವವಿದ್ಯಾಲಯದ ಮಟ್ಟಕ್ಕೆ ಕೊಡೊಯ್ಯುವಲ್ಲಿ ಯಶಸ್ವಿಯಾಗುವುದರ ಮೂಲಕ ಶಿಕ್ಷಣೋದ್ಯಮಿಯಾದರು. ಸರ್ಕಾರದ ಶೈಕ್ಷಣಿಕ ಸುಧಾರಣೆಗಳ ಸಲಹೆಗಾರಾಗಿ ಎರಡು ಬಾರಿ ಕಾರ್ಯನಿರ್ವಹಿಸಿದ್ದ ಅವರು ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

2008 ರಿಂದ 2014ರವರೆಗೆ ಕರ್ನಾಟಕ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿದ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ದಿವಂಗತರು ರಾಜ್ಯದ ಶೈಕ್ಷಣಿಕ ಅಭಿವೃದ್ಧಿಗೆ ಅನನ್ಯ ಕೊಡುಗೆ ನೀಡಿರುತ್ತಾರೆ. ಕೆಜಿಯಿಂದ ಪಿಜಿವರೆಗೆ ಎಲ್ಲಾರೀತಿಯ ಶಿಕ್ಷಣ ನೀಡಲು ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಜಾಗತಿಕ ಪ್ರವೃತ್ತಿಗಳ ಬಗ್ಗೆ ಅರಿವು ಮೂಡಿಸಿದ್ದರು. ಶಿಸ್ತು, ಸಂಯಮ, ಪರಿಶ್ರಮ ಮತ್ತು ದಣಿವರಿಯದ ಇವರ ದುಡಿಮೆಯಿಂದಾಗಿ ಶಿಕ್ಷಣ ಕ್ಷೇತ್ರದ ದೊರೆಯಾಗಿದ್ದರು.

ದಿವಂಗತರು ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ನೀಡಿರುವ ಅಪಾರ ಕೊಡುಗೆಗೆ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಯುಎಸ್ ಶಿಕ್ಷಣ ಸಂಸ್ಥೆಯಿಂದ ಫುಲ್ ಬ್ರೈಟ್ ಫಲೋಶಿಪ್ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗಳಲ್ಲದೇ ಇತರ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

## 7. ಬಿ. ಸುಬ್ಬಯ್ಯ ಶೆಟ್ಟಿ, ವಿಧಾನಸಭೆಯ ಮಾಜಿ ಸಚಿವರು



ವಿಧಾನಸಭೆಯ ಮಾಜಿ ಸಚಿವರು ಹಾಗೂ ಗಲ್ವಾನ್ ಸ್ಟ್ರಿಂಗ್‌ನಲ್ಲಿ ಕಾರ್ಯನಿರ್ವಹಿಸಿದ್ದ ಬಿ.ಸುಬ್ಬಯ್ಯ ಶೆಟ್ಟಿ(91) ಅವರು ದಿನಾಂಕ:10.03.2025ರಂದು ನಿಧನರಾದರು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ ಅವರು 4ನೇ ಏಪ್ರಿಲ್, 1934ರಲ್ಲಿ ಮಂಗಳೂರಿನಲ್ಲಿ ಜನಿಸಿದ್ದರು. ಬಿ.ಎಸ್ಸಿ., ಬಿ.ಎಲ್. ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. 1956–65ರ ಅವಧಿಯಲ್ಲಿ ಇಂಡೋ–ಟಿಬೇಟಿಯನ್ ಬಾರ್ಡರ್ ಫೋರ್ಸ್‌ನ ಇಂಟಲಿಜೆನ್ಸ್ ಬ್ಯೂರೋ ಸದಸ್ಯರಾಗಿದ್ದರು. ಗಲ್ವಾನ್ ಹಾರ್ಸ್ ಸ್ಟ್ರಿಂಗ್‌ನಲ್ಲಿ ಕಾರ್ಯನಿರ್ವಹಿಸಿದ್ದ ಅವರು ಚೀನಾ ದೇಶವು ಭಾರತದ ಮೇಲೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ಇಂಡೋ–ಟಿಬೇಟಿಯನ್ ಬಾರ್ಡರ್ ಫೋರ್ಸ್ ಮತ್ತು ಲಡಾಖ್ ಸೆಕ್ಟರ್‌ನಲ್ಲಿ ಸೇವೆ ಸಲ್ಲಿಸಿದ್ದರು. ಇವರು ಪರ್ವತಾರೋಹಿಯಾಗಿದ್ದರು. 1972ರಲ್ಲಿ ನಡೆದ ಚುನಾವಣೆಯಲ್ಲಿ ಸುರತ್ಕಲ್ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು 5ನೇ ವಿಧಾನಸಭೆಯನ್ನು ಪ್ರವೇಶಿಸಿದ್ದ ಶ್ರೀಯುತರು 6ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರಾಯ್ಕೆಗೊಂಡಿದ್ದರು.

ಭೂ ಸುಧಾರಣೆ, ವಾರ್ತಾ ಮತ್ತು ಇಂಧನ ರಾಜ್ಯ ಸಚಿವರಾಗಿ ಹಾಗೂ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಭೂ ಸುಧಾರಣೆ ಮೂಲಕ ಉಳುವವನೇ ಹೊಲದೊಡೆಯ ಕಾನೂನು ಜಾರಿಗೆ ಬಂದಾಗ ಭೂ ಸುಧಾರಣಾ ಸಚಿವರಾಗಿದ್ದರು. ಡಿ. ದೇವರಾಜ ಅರಸು, ಶಾಂತವೇರಿ ಗೋಪಾಲಗೌಡ, ಡಾ॥ ದ.ರಾ. ಬೇಂದ್ರೆ ಪ್ರಶಸ್ತಿಗಳು ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

* * * * *